ಆಡು ಮುಟ್ಟದ ಸೊಪ್ಪಿಲ್ಲ

ನಾಡೋಜ ಡಾ. ವೂಡೇ ಪಿ. ಕೃಷ್ಣ

ಜಾಂಬವ ಎಂ. ಗಂಗಾಧರ್
(ಎಂ. ಗಂಗಾಧರ್)



ಆಡು ಮುಟ್ಟದ ಸ್ಪೊಪ್ಪಿಲ್ಲ

ನಾಡೋಜ ಡಾ. ವೂಡೇ ಪಿ. ಕೃಷ್ಣ

ಆಡು ಮುಟ್ಟದ ಸೊಪ್ಪಿಲ್ಲ

ನಾಡೋಜ ಡಾ. ವೂಡೇ ಪಿ. ಕೃಷ್ಣ

ಜಾಂಬವ ಎಂ. ಗಂಗಾಧರ್
(ಎಂ. ಗಂಗಾಧರ್)
ಎಂ.ಎ. ಜರ್ನಲಿಸಂ, ಡಿಪ್ಲೋಮ ಜರ್ನಲಿಸಂ, ಎಲ್.ಎಲ್.ಬಿ.
ಜಾಂಬವ ಸಾಹಿತಿಗಳು ಹಾಗೂ ಪತ್ರಕರ್ತರು

ಪ್ರಕಾಶಕರು
ಆದಿಜಾಂಬವ ಜಾಗೃತಿ
೫೪, 'ಕೌಸಲ್ಯ ಶಿರಡಿ ನಿವಾಸ'
೪ನೆಯ ಮುಖ್ಯರಸ್ತೆ, ಸರ್ ಎಂ.ವಿ. ನಗರ, ರಾಮಮೂರ್ತಿನಗರ
ಬೆಂಗಳೂರು-೫೬೦೦೧೬. ಮೊಬೈಲ್: ೯೯೦೧೭೫೦೦೦೨
ಇಮೇಲ್: gangadhar.m144@gmail.com

AADU MUTTADA SOPPILLA -Nadoja Dr. Wooday P. Krishna *A Articles on Dr. Wooday P. Krishna Life and Achievements written* by **Jambava M. Gangadhar**, M.A. Journalism, Diploma Journalism, L.L.B., Jambava Literature & Journalist.

Published by **Adi Jambava Jagruti**, # 54, 'Kowsalya Shirdi Nivas', 4th Main, Sir M.V. Nagar, Ramamurthy Nagar, Bengaluru -560016. Mob: 99017 50002; E-mail: gangadharm144@gmail.com

Frist Print	:	2025
©	:	Author
Pages	:	xxii+178=200
Price	:	₹ 200/-
Copies	:	500
Paper used	:	70 GSM N.S. Maplitho
Book Size	:	Demy 1/8
Inner Page Layout	:	Hattiranga Graphics, 9071290931

Printed at :
SATHYASRI PRINTERS PVT. LTD.,
16/1, 2nd Main, 3rd Cross,
Kasturba Nagar, Mysore Road
Bangalore-560 026. Mob: 9342864761

ಅರ್ಪಣೆ

ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ
ಎಲ್ಲಾ ಅಭಿಮಾನಿಗಳ ಬಳಗಕ್ಕೆ
ಈ ಗ್ರಂಥ ಅರ್ಪಣೆ

- ಜಾಂಬವ ಎಂ. ಗಂಗಾಧರ್

[illegible] PUSTAKADA SOPPILLA - Nadoja Dr. Woodey P. Krishna A [illegible] on Dr. Woodey P. Krishna Life and Achievements written by [illegible] M. Gangadhar, M.A. Journalism, Diploma [illegible], LL.B., [illegible] Literature & Journalist.

Published by [illegible] # 54, [illegible] M.V. Nagar, Ramamurthy Nagar, Bengaluru [illegible] Mob: 99017 [illegible] E-mail: gangadharm[illegible]@gmail.com

First Print	:	2025
©	:	Author
Pages	:	[illegible]
Price	:	₹ 200/-
Copies	:	[illegible]
Paper Used	:	70 GSM N.S. Maplitho
Book Size	:	Demy 1/8
[illegible]	:	[illegible] Graphics, [illegible]

Printed at :
[illegible]
[illegible]
[illegible] Nagar, [illegible]
Bangalore-560 [illegible]

ನಾಡೋಜ **ಡಾ. ವೂಡೇ ಪಿ. ಕೃಷ್ಣ ಗ್ರಂಥ ಸಮಿತಿ**

ಜಸ್ಟೀಸ್ ಆರ್. ದೇವದಾಸ್
ಗೌರವ ಅಧ್ಯಕ್ಷರು

ಶ್ರೀ ಎ. ರಾಜೇಶ್
ಹಿರಿಯ ವಕೀಲರು ಹಾಗೂ ಅಧ್ಯಕ್ಷರು

ಹಿರಿಯ ಉಪಾಧ್ಯಕ್ಷರು

ನಾಡೋಜ **ಗೋನಾಳ್ ಭೀಮಪ್ಪ,** ಐ.ಎ.ಎಸ್.(ನಿ.)

ಡಾ. ಎಸ್.ಜಿ. ಸುಶೀಲಮ್ಮ, ಅಧ್ಯಕ್ಷರು, ಸುಮಂಗಲಿ ಸೇವಾಶ್ರಮ

ಪ್ರೊ. ಎಂ. ಚಂದ್ರಮ್ಮ
ಸಾಹಿತಿಗಳು, ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಮಲ್ಲಿಕಾರ್ಜುನ ಕಿಣಕೇರಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರು

ಶ್ರೀ ಜಿ.ಕೆ. ಗೋಖಲೆ, ನಿವೃತ್ತ ಜಿಲ್ಲಾ ನ್ಯಾಯಾಧೀಶರು

ಶ್ರೀ ಜಿ.ಎಸ್. ದಿವಾಕರ್, ಬರಹಗಾರರು

ಉಪಾಧ್ಯಕ್ಷರು

ಶ್ರೀ ಎ. ಅಮೃತ್‌ರಾಜ್, ಬಿ.ಬಿ.ಎಂ.ಪಿ.
ಶ್ರೀ ಟಿ.ಪಿ. ಪ್ರಭಾಕರ್, ವಕೀಲರು
ನಿಶಾನ್ ಜಿ.ಕೆ., ವಕೀಲರು
ಶ್ರೀ ವಿ.ಸಿ. ವಿಷ್ಣು ಪ್ರಸಾದ್, ಉದ್ಯಮಿಗಳು

ಸದಸ್ಯರು

ಶ್ರೀ ಬಾಲಾಜಿ ತಿಮ್ಲಾಪುರ, ಪತ್ರಕರ್ತರು
ಶ್ರೀ ಎಂ. ಮುನಿಯಾಚಾರಿ, ಛಾಯಾಗ್ರಾಹಕ
ಶ್ರೀ ಪಿ.ಜಿ. ಷಡಕ್ಷರಿ ಆರಾಧ್ಯ
ಶ್ರೀ ಶಾಂತಪ್ಪ ಖಾನಹಳ್ಳಿ, ವಕೀಲರು, ಯಾದಗಿರಿ

ಮುನ್ನುಡಿ

ಕೆಲವು ಹೆಸರುಗಳೇ ಹಾಗೆ... ಕಿವಿಯ ಮೇಲೆ ಬಿದ್ದಾಕ್ಷಣ ತಲ್ಲಣವನ್ನುಂಟು ಮಾಡುತ್ತವೆ...! "ವೂಡೇ ಪಿ. ಕೃಷ್ಣ" ಅಂಥದ್ದರಲ್ಲಿ ಒಂದು. ಉಡುಪಿಯ ಶ್ರೀಕೃಷ್ಣನಂತೆ. ಆಗರ್ಭ ಶ್ರೀಮಂತ ಮತ್ತು ಸಜ್ಜನಿಕೆಯ ಕುಟುಂಬದಿಂದ ಹೊರಹೊಮ್ಮಿದ ಅವರದ್ದು ಬಹುಮುಖೀ ವ್ಯಕ್ತಿತ್ವ. ತಿಳಿದೇನೆಂದವರಿಗೂ ಪೂರ್ಣ ತಿಳಿಯದು. ಗಳಿಸಿದ ಶೈಕ್ಷಣಿಕ ಹಾಗೂ ವೃತ್ತಿಪರ ಪದವಿಗಳ ಪಟ್ಟಿ ಬಹು ದೀರ್ಘ.

ಹಲವು ಸಾಮಾಜಿಕ ರಂಗಗಳಲ್ಲಿ ಗೆಲ್ಲುಗಂಬಗಳನ್ನು ನೆಟ್ಟಿರುವ ಅವರು, ಸಂಘ ಸಂಸ್ಥೆಗಳನ್ನು ಹುಟ್ಟುಹಾಕಿ ಪೋಷಿಸುವುದರಲ್ಲಿ ನಿಸ್ಸೀಮರು. ಅವುಗಳ ಆಡಳಿತದ ಕಲೆ ಕರತಲಾಮಲಕ. ಹಾಗಾಗಿಯೇ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳ ಸರಮಾಲೆ. ಅವರ ಖ್ಯಾತಿ ದೇಶದ ಗಡಿಯಾಚೆಯೂ ಹರಡಿದೆ. ಅವೆಲ್ಲಾ ಜವಾಬ್ದಾರಿಯ ಮಟ್ಟವನ್ನು ಎತ್ತರಿಸಿವೆ. ವಿಶೇಷವಾಗಿ ಶಿಕ್ಷಣರಂಗಕ್ಕೆ ನಿರಂತರವಾದ ಅವರ ಕೊಡುಗೆ ಅಮೂಲ್ಯ.

ಕೃಷ್ಣ ಒಬ್ಬ ಪ್ರಖರ ಚಿಂತಕ, ಬಹುಶ್ರುತ ವಾಗ್ಮಿ ಹಾಗೂ ಮನಮುಟ್ಟುವ ಬರಹಗಾರರು. ಸಂವಿಧಾನ ಶಿಲ್ಪಿ ಬಾಬಾಸಾಹೇಬರ ಸಾಮಾಜಿಕ ಕನಸುಗಳನ್ನು

ನನಸಾಗಿಸುತ್ತಿರುವ ಭಗೀರಥ. ಆ ದಿಸೆಯತ್ತ ಅವರದ್ದು ದಾಪುಗಾಲು... ಅಳಿಸಲಾರದ ಹೆಜ್ಜೆ ಗುರುತುಗಳು, ಅನೇಕರಿಗೆ ದಾರಿದೀಪ. ದುರ್ಬಲ ವರ್ಗಗಳ ನೋವಿಗೆ ಮಿಡಿಯುವ ಹೃದಯ. ಬಡವ ಬಲ್ಲಿದ ಎಂಬ ತಾರತಮ್ಯದ ಸೋಂಕಿಲ್ಲ. ದಮನಿತರಿಗೆ ಸಹಾಯ ಹಸ್ತ. ಬರೀ ಹಸ್ತ ಲಾಘವ ಅಲ್ಲ...

ದಟ್ಟ ಮಂದಾನಿಲ ಬೀರುವ ಶ್ರೀಗಂಧದಮರ. ಅವರ ಅಪಾರ ಹಾಗೂ ಅವಿರತ ಸೇವೆಯನ್ನು ಗುರುತಿಸಿ ಸನ್ಮಾನ ಸಮಾರಂಭ. ತಡವಾದರೇನಂತೆ? ಗೌರವ ಪ್ರದಾನದಿಂದ ಶಿಷ್ಟ ಸಮಾಜದ ಹಿರಿಮೆಗೆ ಮತ್ತೊಂದು ಗರಿ; ಅವರ ಕಿರೀಟಕ್ಕಲ್ಲ. ತನ್ನಿಮಿತ್ತ ಈ ಅಭಿನಂದನ ಗ್ರಂಥ.

ಸಂಕಲಿತ ಲೇಖನಗಳು ನಾಡಿನ ಚಿಂತನಶೀಲರದ್ದು, ಭಾವಗಂಗೆ ಗುಪ್ತಗಾಮಿನಿಯಾಗಿ. ಪುಟಪುಟವೂ ಬಂಗಾರ. ಓದದೇ ಇಡಲಾದೀತೆ? ಈ ಮುನ್ನುಡಿಗಾರನಿಗೂ ಒಂದು ಹೆಮ್ಮೆಯ ಗರಿ.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್
ಕರ್ನಾಟಕ ಉಚ್ಚನ್ಯಾಯಾಲಯ

ಗೌರವಾಧ್ಯಕ್ಷರ ಮಾತು

***Born with Golden Spoon* – ವೂಡೇ ಪಿ. ಕೃಷ್ಣರವರು**

"ಇವನಾರವ ಇವನಾರವ ಇವ ನಮ್ಮವ ಇವ ನಮ್ಮವ ಎಂದೆನಿಸಿದಿರಯ್ಯಾ ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯಾ" ಎಂಬ ಬಸವಣ್ಣನವರ ಬೋಧನೆಯಂತೆ ಸರ್ವಜನಾಂಗದವರು ಇವರು ನಮ್ಮವರು. ನಮ್ಮವರು ಎಂಬ ಅರ್ಥಪೂರ್ಣವಾದ ಮಾತು ಇಂದಿನ ಅಭಿನಂದನಾ ಗ್ರಂಥದ ಕಥಾನಾಯಕ, ಗಾಂಧಿವಾದಿ, ಶಿಕ್ಷಣತಜ್ಞ ಮತ್ತು ಸಂವಿಧಾನತಜ್ಞ ನಾಡೋಜ ಡಾ. ವೂಡೇ ಪಿ. ಕೃಷ್ಣರವರು.

ಬೆಳೆಯುವ ಪೈರು ಮೊಳಕೆಯಲ್ಲಿಯೇ ಎಂಬ ಗಾದೆ ಮಾತಿನಂತೆ ವೂಡೇ ಪಿ. ಕೃಷ್ಣರವರು ತುಂಬು ಕುಟುಂಬದ ಸುಶಿಕ್ಷಿತ ಕುಟುಂಬದಿಂದ ಹುಟ್ಟಿ ಬೆಳೆದು. ಚಿಕ್ಕ ವಯಸ್ಸಿನಲ್ಲಿಯೇ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದು ಮುಂದೊಂದು ದಿನ ಮೈಸೂರಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡಲು ಪ್ರೌಢ ಶಾಲೆಗೆ ಸೇರಿದ್ದು ವೂಡೇ ಪಿ. ಕೃಷ್ಣರವರ ಜೀವನದಲ್ಲಿ ತಿರುವು ತಂದ ಕಾಲಘಟ್ಟ, ಹೇಳಿ ಕೇಳಿ ಸಂಸ್ಕಾರ, ಸುಸಂಸ್ಕೃತ ಕುಟುಂಬದಲ್ಲಿ ಹುಟ್ಟಿದ್ದರೂ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಹತ್ತು ಹಲವು ರೀತಿಯ ಸಂಸ್ಕಾರವನ್ನು ಪಡೆದು

ನಂತರ ವೂಡೇ ಪಿ ಕೃಷ್ಣರವರು ಸಮಾಜದಲ್ಲಿ, ಸಮಾಜದ ಮುಖ್ಯವಾಹಿನಿಯಲ್ಲಿ ಒಬ್ಬ ಅಸಾಧರಣ ವ್ಯಕ್ತಿಯಾಗಿ, ಶಕ್ತಿಯಾಗಿ ಜನ ಮಾನಸದಲ್ಲಿ ಗಟ್ಟಿಯಾಗಿ ತಳವೂರಿದ್ದಾರೆ ನಮ್ಮ ವೂಡೇ ಪಿ ಕೃಷ್ಣರವರು.

ಶ್ರೀ ರಾಮಕೃಷ್ಣಶಾಲೆಯಲ್ಲಿ ಪ್ರೌಢ ಶಿಕ್ಷಣವನ್ನು ಮುಗಿಸಿ ಹಂತ ಹಂತವಾಗಿ, ನಿರಂತರವಾಗಿ ಒಂದೊಂದು ಮೆಟ್ಟಲನ್ನು ಹತ್ತುತ್ತ ನಾನಾ ವಿಷಯಗಳಲ್ಲಿ ಪದವಿಗಳನ್ನು ಪಡೆದು, ಯಾವುದೇ ಸರ್ಕಾರದ ವೃತ್ತಿಯನ್ನಾಗಲಿ, ರಾಜಕಾರಣದ ವೃತ್ತಿಯನ್ನಾಗಲಿ ಪಡೆಯುವತ್ತ ಮನಸ್ಸು ಸಾಗಲಿಲ್ಲ, ಒಂದಲ್ಲ ಒಂದು ರೀತಿಯಲ್ಲಿ ಸಮಾಜ ಸೇವೆ, ದೀನದಲಿತರ ಸೇವೆಯನ್ನು ಮಾಡುತ್ತಿದ್ದ ವೂಡೇ ಮನೆತನದ ಕುಟುಂಬ, ಈ ರೀತಿಯ ಹಿನ್ನೆಲೆಯ ಕುಟುಂಬದ ವೂಡೇ ಪಿ ಕೃಷ್ಣರವರು ಇಂದು ಸಮಸಮಾಜದಲ್ಲಿನ ದೀನ ದಲಿತರ, ಹಿಂದುಳಿದವರ, ಶೋಷಿತರ ಹಾಗೂ ತಳಮಟ್ಟದ ಸಮುದಾಯ ಏಳಿಗೆಗಾಗಿ, ಅಭಿವೃದ್ಧಿಗಾಗಿ ಒಂದಲ್ಲ ಒಂದು ರೀತಿಯಲ್ಲಿ ನಿರಂತರವಾಗಿ ದುಡಿಯುತ್ತಿರುವ ಸಾಮಾನ್ಯ ವ್ಯಕ್ತಿಗಳ ಅಸಾಮಾನ್ಯ ವ್ಯಕ್ತಿಯಾಗಿ ಇಂದು ಸರ್ವಜನರ ಮನದೊಳಗೆ ಶಾಶ್ವತವಾಗಿ ಬೇರೂರಿದ್ದಾರೆ ಎಂದು ಹೇಳಿದರೆ ಅದು ಅತೀಶಯೋಕ್ತಿಯಾಗಲಾರದು.

ಇಂದು ವೂಡೇ ಪಿ ಕೃಷ್ಣರವರು ಅಪ್ರತಿಮ ಶಿಕ್ಷಣ ತಜ್ಞರು ಗಾಂಧಿಜಿಯವರ ಆದರ್ಶವನ್ನು ಅವರ ಆಚಾರವಿಚಾರಗಳನ್ನು ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೋರಾಟ, ಶಿಕ್ಷಣ, ಸಂವಿಧಾನದ ಆಶಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇಂದು ಶಿಕ್ಷಣ ತಜ್ಞರಾಗಿಯೂ ಕನ್ನಡ ಭಾಷೆಯ ಬಗ್ಗೆ ಅಸಾಧಾರಣ ಪಾಂಡಿತ್ಯವನ್ನು, ಕನ್ನಡ ನಾಡು, ನುಡಿ, ಜಲ ಇವುಗಳ ಬಗ್ಗೆ ನಿರಂತರವಾಗಿ ಯೋಚಿಸುವ ವೂಡೇ ಪಿ ಕೃಷ್ಣರವರು ಇಂದು ನಮ್ಮಂತಹವರ ಮನಸ್ಸಿನಲ್ಲಿ ಒಬ್ಬ ಧೀಮಂತ ವ್ಯಕ್ತಿಯಾಗಿ ನೆಲೆಯೂರಿದ್ದಾರೆ ಎಂದು ಹೇಳಬೇಕಾಗುತ್ತದೆ.

ಅತಿ ಕಿರಿಯ ವಯಸ್ಸಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಾಗೆಯೇ ಹೆಸರಾಂತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿ ಸುಮಾರು 34 ಶಾಖೆಗಳನ್ನು ವಿವಿಧ ನಗರ, ಜಿಲ್ಲೆ ತಾಲ್ಲೂಕುಗಳಲ್ಲಿದ್ದು ಅದರ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು ಇಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಎಂದರೆ ವೂಡೇ ಪಿ ಕೃಷ್ಣರವರು ಇದ್ದಾರೆ. ಅವರಿಂದ ದೀನ ದಲಿತರ ಮಕ್ಕಳಿಗೆ ಬಡಮಕ್ಕಳಿಗೆ ಏನಾದರೂ ಸಹಾಯವಾಗುತ್ತದೆ ಎಂಬ ಮಾತು ಜನರ ಮನಸ್ಸಿನಲ್ಲಿ ನಿಂತಿದೆ.

ಇದರ ಜೊತೆಗೆ ನೂರಾರು ವಿವಿಧ ರೀತಿಯ ಸಂಘ-ಸಂಸ್ಥೆಗಳಲ್ಲಿ ದುಡಿಯುವುದರ ಜೊತೆಗೆ ವಿವಿಧ ರೀತಿಯ ಸಂಘಟನೆಯ ಪದಾಧಿಕಾರಿಯಾಗಿದ್ದು ತಮ್ಮ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ನಮ್ಮ ವೂಡೇ ಪಿ ಕೃಷ್ಣರವರು.

ಇಂದಿಗೂ ಕೂಡ ವೂಡೇ ಪಿ ಕೃಷ್ಣರವರು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶಿಕ್ಷಕರು ಸ್ವಾಮೀಜಿಗಳ ಜೊತೆ ವಿಚಾರ ವಿನಿಮಯ ಮಾಡಿಕೊಂಡು ನಿರಂತರ ಸಂಪರ್ಕದಲ್ಲಿದ್ದಾರೆ. ಹಾಗೆಯೇ ವಿದ್ಯಾಶಾಲೆಯ ತಮ್ಮ ಸಹಪಾಠಿಗಳೊಂದಿಗೆ ಇಂದಿಗೂ ಸದಾ ಸಂಪರ್ಕದಲ್ಲಿದ್ದಾರೆ. ವಿದ್ಯಾಶಾಲೆಯ ಯಾವುದೇ ರೀತಿಯ ಸಭೆ ಸಮಾರಂಭಗಳಾಗಿರಲಿ, ಹಳೆಯ ವಿದ್ಯಾರ್ಥಿಗಳ ಸಂಘದ ಚಟುವಟಿಕೆಗಳಾಗಿರಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದು ಬಹಳ ವಿಶೇಷವಾಗಿದೆ ಹಾಗೂ ಇವರ ಸಲಹೆ ಸೂಚನೆಗಳನ್ನು ವಿದ್ಯಾಶಾಲೆಯ ಈಗಿನ ವ್ಯವಸ್ಥಾಪಕರು ನಿರಂತರವಾಗಿ ಪಡೆಯುತ್ತಿರುತ್ತಾರೆ.

ಸಕಲ ರೀತಿಯ ಸಂಪತ್ತು, ಸೌಲಭ್ಯ ಇದ್ದರೂ ಡಾ. ವೂಡೇ ಪಿ. ಕೃಷ್ಣರವರು ನೋಡುಗರ ಕಣ್ಣುಗಳಿಗೆ ಒಬ್ಬ ಸಾಧಾರಣ ವ್ಯಕ್ತಿಯಾಗಿಯೇ ಕಾಣುತ್ತಾರೆ. ಇವರ ಉಡುಗೆ ತೊಡುಗೆ, ಇವರ ಮಾತು, ಇವರ ನಡವಳಿಕೆ ಎಲ್ಲವೂ ಆಹ್ಲಾದಕರ ಹಾಗೂ ಆದರ್ಶಪ್ರಾಯ.

ಇಂತಹ ಅಸಾಧಾರಣ ಸಾಧಕರ ಸಾಲಿನಲ್ಲಿ ಮಹಾಸಾಧಕರಾಗಿರುವ ವೂಡೇ ಪಿ. ಕೃಷ್ಣರವರು ನನ್ನ ಆತ್ಮೀಯರಾಗಿರುವುದಕ್ಕೆ ವೈಯಕ್ತಿಕವಾಗಿ ನನಗೆ ತುಂಬಾ ಸಂತೋಷವಾಗಿದೆ ಹಾಗು ಹೆಮ್ಮೆಯೆನಿಸುತ್ತದೆ.

ಹಾಗಾಗಿ, ಈ ಶುಭ ಸಂದರ್ಭದಲ್ಲಿ ನನ್ನ ಬಂಧುಗಳು, ಜಾಂಬವ ಸಾಹಿತಿಗಳು, ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು ಆದ ಜಾಂಬವ ಶ್ರೀ ಎಂ. ಗಂಗಾಧರ ಅವರು ವೂಡೇ ಪಿ. ಕೃಷ್ಣರವರ ಕುರಿತ **'ಆಡು ಮುಟ್ಟದ ಸೊಪ್ಪಿಲ್ಲ- ನಾಡೋಜ ಡಾ. ವೂಡೇ ಪಿ. ಕೃಷ್ಣ'** ಎಂಬ ಕೃತಿಯನ್ನು ರಚಿಸಿ, ಅದನ್ನು ಲೋಕಾರ್ಪಣೆ ಮಾಡಲು ಒಂದು ಸ್ವಾಗತ ಸಮಿತಿಯನ್ನು ಮಾಡಿ ಅದಕ್ಕೆ ನನ್ನನ್ನು ಗೌರವ ಅಧ್ಯಕ್ಷರನ್ನಾಗಿ ಮಾಡಿರುವುದಕ್ಕೆ ನನ್ನ ತುಂಬು ಹೃದಯದ ಧನ್ಯವಾದಗಳು.

ಆರ್. ದೇವದಾಸ್

ನ್ಯಾಯಮೂರ್ತಿಗಳು ಕರ್ನಾಟಕ ಉಚ್ಚನ್ಯಾಯಾಲಯ
ಹಾಗೂ ಗೌರವ ಅಧ್ಯಕ್ಷರು, ವೂಡೇ ಪಿ ಕೃಷ್ಣ ಗ್ರಂಥ ಸಮಿತಿ

ಲೇಖಕರ ಮಾತು

ಇತ್ತೀಚೆಗೆ ಆದಿಜಾಂಬವ ಜಾಗೃತಿ ಪತ್ರಿಕೆಯ ಓದುಗರು, ಅಭಿಮಾನಿಗಳು ಮತ್ತು ಸಾಹಿತಿಗಳೊಬ್ಬರು ಒಂದು ಪುಸ್ತಕದ ಬಿಡುಗಡೆಯ ಸಮಾರಂಭದಲ್ಲಿ ಭೇಟಿಯಾದಾಗ ಅವರು ನನಗೆ ಕೇಳಿದ ಪ್ರಶ್ನೆ ಗಂಗಾಧರ್ ನೀವು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದಿರುವಿರಾ? ನೀನು ಆ ಶಾಲೆಯ ಹಳೆಯ ವಿದ್ಯಾರ್ಥಿಯೇ? ಎಂದು ಕೇಳಿದರು, ಅವರು ಏಕೆ ಕೇಳಿದರು, ಏತಕ್ಕೆ ಕೇಳಿದರು ಎಂದು ತಕ್ಷಣವೇ ನನಗೆ ಅರ್ಥವಾಗಲಿಲ್ಲ. "ಏತಕ್ಕೆ ಸಾರ್ ಆ ರೀತಿ ಕೇಳುತ್ತಿರುವಿರಿ" ಎಂದಾಗ ಅವರು ಹೇಳಿದ್ದು, ಇಲ್ಲ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರ ಕುರಿತಾದ **"ಆಡು ಮುಟ್ಟದ ಸೊಪ್ಪಿಲ್ಲ – ವೂಡೇ ಪಿ. ಕೃಷ್ಣ"** ಎಂಬ ಅಂಕಣವು ನಿರಂತರವಾಗಿ ಬರುತ್ತಿದ್ದು, ತುಂಬಾ ಅದ್ಭುತವಾಗಿ ಮತ್ತು ನಮಗೇ ಗೊತ್ತಿಲ್ಲದ ಅನೇಕ ಮಾಹಿತಿಗಳನ್ನು ವೂಡೇ ಪಿ. ಕೃಷ್ಣರವರ ಅಂಕಣದಲ್ಲಿ ನೀವು ಬರೆಯುತ್ತಿರುವಿರಿ. ಈ ರೀತಿ ನೀವು ಬರೆಯಬೇಕಾದರೆ ಬಹುಶಃ ನೀವೂ ಸಹ ಅವರ ಜೊತೆಯಲ್ಲಿ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದಿರಬೇಕು ಹಾಗೂ ನೀವೂ ಸಹ ಅಲ್ಲಿಯ ಹಳೆಯ ವಿದ್ಯಾರ್ಥಿಯಾಗಿರಬೇಕು ಮತ್ತು ನೀವು ವೂಡೇ ಪಿ. ಕೃಷ್ಣರವರನ್ನು ಬಹಳ ಹತ್ತಿರದಿಂದ ಕಂಡಿರಬಹುದು, ಒಡನಾಟವನ್ನು ಹೊಂದಿರಬಹುದು. ಹೀಗಾಗಿ ಅಂತಹ ಒಬ್ಬ ಮಹಾನ್ ವ್ಯಕ್ತಿಯ ಬಗ್ಗೆ ನಿಮ್ಮಂತಹವರು ಬರೆಯಲು ಸಾಧ್ಯ ಎಂದು ಹೇಳಿದರು. ಈ ಮಾತನ್ನು ಕೇಳಿ ನಾನು ನಗಬೇಕೋ, ಸಂತೋಷಪಡಬೇಕೋ ಗೊತ್ತಿಲ್ಲದೆ ಹೇಳಿದೆ, ಸಾರ್ ನಾವು ಹುಟ್ಟಿ ಬೆಳೆದಿದ್ದು ಮಾಗಡಿರಸ್ತೆ, ಗೋಪಾಲಪುರದ ಒಂದು ಹರಿಜನರ

ಕಾಲೋನಿಯಲ್ಲಿ. ನನ್ನ ಮೊದಲ ಶಿಕ್ಷಣ ಮಾಗಡಿರಸ್ತೆಯಲ್ಲಿರುವ ಕಾರ್ಪೊರೇಷನ್ ಪ್ರೌಢಶಾಲೆಯಲ್ಲಿ. ಅಂದು ನನಗೆ ಕನ್ನಡದ ಶಿಕ್ಷಕರಾಗಿದ್ದವರು ಮತ್ತು ಇಂದು ಬರವಣಿಗೆಯಲ್ಲಿ ಏನಾದರೂ ತಪ್ಪು-ಒಪ್ಪುಗಳನ್ನು ಬರೆಯುತ್ತಿರಬೇಕಾದರೆ ಮತ್ತು ಕನ್ನಡದ ಬಗ್ಗೆ ಅಲ್ಪಸ್ವಲ್ಪ ಅಭಿಮಾನ ಬಂದಿದ್ದರೆ ಅದು ನನ್ನ ಗುರುಗಳಾದ ಶ್ರೀ ಕೋಣಂದೂರು ಲಿಂಗಪ್ಪ ಅವರಿಗೆ ಸಲ್ಲಬೇಕು. ನಂತರ ನನ್ನ ಶಿಕ್ಷಣವನ್ನು ಮುಗಿಸಿ ವೃತ್ತಿ, ಮದುವೆ, ಮಕ್ಕಳು ಹೀಗೆ ಜೀವನ ಸಾಗಿಸುತ್ತಿರುವಾಗ 1990ರ ವರ್ಷದಲ್ಲಿ ವೃತ್ತಿಯ ಜೊತೆಗೆ ಪ್ರವೃತ್ತಿಯನ್ನಾಗಿ ಬರವಣಿಗೆಯನ್ನು ರೂಢಿಸಿಕೊಂಡು ಸಣ್ಣಪುಟ್ಟ ಪತ್ರಿಕೆಗಳಿಗೆ ಸಣ್ಣಪುಟ್ಟ ಲೇಖನಗಳನ್ನು ಬರೆಯುತ್ತಿದ್ದೆ. ಇದೇ ಸಂದರ್ಭಧಲ್ಲಿ ನಾನು ಏಕೆ ನಮ್ಮ ಆದಿಜಾಂಬವ ಸಮುದಾಯಕ್ಕೆ ಒಂದು ಪತ್ರಿಕೆಯನ್ನು ಮಾಡಬಾರದು ಎಂದು ಯೋಚಿಸಿ ಅವರಿವರ ಮಾರ್ಗದರ್ಶನ, ಸಹಕಾರ, ಪ್ರೋತ್ಸಾಹದಿಂದ 1996ರಲ್ಲಿ 'ಆದಿಜಾಂಬವ ಜಾಗೃತಿ ಪತ್ರಿಕೆ'ಯನ್ನು ಪ್ರಾರಂಭಿಸಿದೆ. ಈ ಪತ್ರಿಕೆಯನ್ನು ಪ್ರಾರಂಭಿಸಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸರ್ವ ರೀತಿಯಲ್ಲೂ ನನಗೆ ಸಹಕರಿಸುತ್ತಾ ಒಂದು ಪತ್ರಿಕೆ ಹೇಗಿರಬೇಕು, ಹೇಗೆ ಪ್ರಾರಂಭ ಮಾಡಬೇಕು ಎಂಬುದನ್ನು ತಿದ್ದಿ ಹೇಳಿ ಪೂರ್ಣಪ್ರಮಾಣವಾಗಿ ನಾನು ಇಂದು ಒಂದು ತಳಮಟ್ಟದ ಆದಿಜಾಂಬವ ಜನಾಂಗದ ಹೆಸರಿನ ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕನಾಗಿ ಇಂದು ನಿಮ್ಮೊಂದಿಗೆ ನಿಂತು ನನ್ನ ಪ್ರೀತಿಯ ಮಾತುಗಳನ್ನು ಆನಂದದಿಂದ ಕೇಳುತ್ತಿರುವುದಕ್ಕೆ ಮೂಲ ಕಾರಣ ಖ್ಯಾತ ಸಾಹಿತಿಗಳು, ಹಿರಿಯ ಪತ್ರಕರ್ತರು ಮತ್ತು ಕನ್ನಡ ಪರ ಹೋರಾಟಗಾರರೂ ಆದ ಶ್ರೀ ಜಾಣಗೆರೆ ವೆಂಕಟರಾಮಯ್ಯರವರು ಸಾರ್. ನಾನು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಯೂ ಅಲ್ಲ, ಹಳೆಯ ವಿದ್ಯಾರ್ಥಿಯೂ ಅಲ್ಲ ಸಾರ್ ಎಂದು ಅವರಿಗೆ ಹೇಳಿದಾಗ ನನ್ನ ಈ ಸಣ್ಣ ಕಥೆಯನ್ನು ಕೇಳಿ ಸಂತೋಷದಿಂದ ತನ್ನ ತಲೆಯ ಮೇಲೆ ಅವರ ಬಲಗೈಯನ್ನು ಇಟ್ಟು ಒಳ್ಳೆಯದಾಗಲೀ, ಒಬ್ಬ ಮಹಾನ್ ಸಾಧಕ, ಗಾಂಧೀವಾದಿ, ಶಿಕ್ಷಣತಜ್ಞ ನಾಡೋಜ ವೂಡೇ ಪಿ. ಕೃಷ್ಣರವರ ಬಗ್ಗೆ ಪುಸ್ತಕಗಳನ್ನು ಬರೆಯಲು, ಅವರ ಕುರಿತು ಲೇಖನಗಳನ್ನು ಬರೆಯಲು ನಾನು ಕಂಡಂತೆ ಎಷ್ಟೋ ಜನ ಸಾಹಿತಿಗಳು, ಬರಹಗಾರರು, ಪತ್ರಕರ್ತರು ನಾ ಮುಂದೆ, ನೀ ಮುಂದೆ ಎಂದು ಕಾಯುತ್ತಿರುತ್ತಾರೆ. ಆದರೆ ಅದು ಅಷ್ಟು ಸುಲಭದ ಕೆಲಸವಲ್ಲ. ಏಕೆಂದರೆ ಒಬ್ಬ ಸಾಧಕನ ಬಗ್ಗೆ ನಾವು ಏನೇ ಬರೆಯಬೇಕಾದರೂ ನಾವು ಸಾಧಕನ ಒಳಗೆ ಪೂರ್ಣಪ್ರಮಾಣವಾಗಿ ಪ್ರವೇಶಿಸಿದಾಗ ಮಾತ್ರ ಅವರ ಬಗ್ಗೆ ಬರೆಯಬಹುದು. ಆ ಕೆಲಸವನ್ನು ನೀವು ಮಾಡಿದ್ದೀರಿ, ಬೇರೆ ಯಾರೇ ಮಾಡಿದ್ದರೂ ಅದು ಒಂದು ರೀತಿಯಲ್ಲಿರುತ್ತಿತ್ತು. ಆದರೆ ನಿಮ್ಮಂತಹವರು ವೂಡೇ

ಪಿ. ಕೃಷ್ಣರವರ ಬಗ್ಗೆ ಪುಸ್ತಕ ಬರೆದಿರುವುದು ಸಾಮಾನ್ಯ ಸಂಗತಿಯಲ್ಲ ಎಂದು ಹೇಳಿ ಮತ್ತೆ ಆಶೀರ್ವದಿಸಿದರು.

ನಿಜ ಹೇಳಬೇಕೆಂದರೆ ವೂಡೇ ಪಿ. ಕೃಷ್ಣರವರ ಒಡನಾಟವಾಗಲೀ, ಅವರನ್ನು ಹತ್ತಿರದಿಂದ ಭೇಟಿ ಮಾಡುವುದಾಗಲೀ ಯಾವತ್ತೂ ಇರಲಿಲ್ಲ. ಆದರೆ ಅವರನ್ನು ನಾನು ಸಭೆ ಸಮಾರಂಭಗಳಲ್ಲಿ, ಪತ್ರಿಕೆಗಳಲ್ಲಿ ಅವರ ಹೆಸರನ್ನು ಕೇಳಿ ಬಹುಶಃ ಇವರ್ಯಾರೋ ಕನ್ನಡ ಚಳುವಳಿಯ ಹೋರಾಟಗಾರರಾಗಿರಬಹುದು ಅಥವಾ ಯಾವುದೋ ಕನ್ನಡ ಸಂಘದ ಅಧ್ಯಕ್ಷರೋ, ಪ್ರಧಾನ ಕಾರ್ಯದರ್ಶಿಯೋ ಆಗಿರಬಹುದು ಎಂದುಕೊಂಡು ಸುಮ್ಮನಿರುತ್ತಿದ್ದೆ. ಆದರೂ ಇವರ ಬಗ್ಗೆ ನನಗೆ ಯಾವಾಗಲೂ ಒಂದು ಅನುಮಾನ ಕಾಡುತ್ತಿತ್ತು. ಏಕೆಂದರೆ ಪ್ರತಿದಿನ ಯಾವುದೇ ಕನ್ನಡ ಪರ ಸಮಾರಂಭಗಳು, ಪುಸ್ತಕ ಬಿಡುಗಡೆಯ ಸಮಾರಂಭಗಳು, ಸಾಧಕರಿಗೆ ಸನ್ಮಾನ ಸಮಾರಂಭಗಳು ಯಾವುದೇ ಸಾಂಸ್ಕೃತಿಕ ಸಮಾರಂಭಗಳು ನಡೆದರೂ ಅಲ್ಲಿ ವೂಡೇ ಪಿ. ಕೃಷ್ಣರವರು ವೇದಿಕೆಯ ಮೇಲೆ ಇರುತ್ತಿದ್ದರು, ಕಾಣುತ್ತಿದ್ದರು. ಅಷ್ಟೇ ಅಲ್ಲದೆ ಕನ್ನಡದ ಅನೇಕ ದಿನಪತ್ರಿಕೆಗಳಲ್ಲಿ ವೂಡೇ ಪಿ. ಕೃಷ್ಣರವರ ಹೆಸರು ಇರುತ್ತಿತ್ತು. ಕೆಲವೊಮ್ಮೆ ಅವರ ಭಾಷಣದ ಮಾತುಗಳು ಇರುತ್ತಿದ್ದವು. ಕೆಲವೊಮ್ಮೆ ದೀನದಲಿತರ ಬಗ್ಗೆ ಅವರ ಅಂತರಾಳದ ಮಾತುಗಳು ಇರುತ್ತಿತ್ತು. ಇವೆಲ್ಲವನ್ನೂ ನಾನು ಗಮನಿಸುತ್ತಾ ದಿನೇದಿನೇ ನಾನು ವೂಡೇ ಪಿ. ಕೃಷ್ಣರವರ ಹತ್ತಿರದ ವ್ಯಕ್ತಿಯಾಗಿ ಅವರೊಂದಿಗೆ ಕಳೆದ ಕೆಲವು ವರ್ಷಗಳಿಂದ ನಾನೂ ಸಹ ವೂಡೇ ಪಿ. ಕೃಷ್ಣರವರ ಅಭಿಮಾನಿಯಾಗಿ, ಅವರನ್ನೂ ಅವರ ಕೆಲಸಕಾರ್ಯಗಳನ್ನೂ ಅವರಿಗಿರುವ ದೀನದಲಿತರ ಬಗೆಗಿನ ಕಾಳಜಿಯನ್ನು ಗಮನಿಸುತ್ತಾ ಇರುತ್ತಿರುವಾಗ ಏತಕ್ಕೆ ಇಂತಹ ಒಬ್ಬ ಅಸಾಮಾನ್ಯ ವ್ಯಕ್ತಿಯ ಬಗ್ಗೆ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಅವರ ಕುರಿತಾದ ಒಂದು ಅಂಕಣವನ್ನು ಪ್ರಾರಂಭಿಸಬಾರದು ಎಂದು ತಿಳಿದು ಬಹಳ ಸಂಕೋಚದಿಂದ ಮತ್ತು ಭಯದಿಂದ "ಆಡುಮುಟ್ಟದ ಸೊಪ್ಪಿಲ್ಲ – ನಾಡೋಜ ಡಾ. ವೂಡೇ ಪಿ. ಕೃಷ್ಣ" ಎಂಬ ಹೆಸರಿನಲ್ಲಿ ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಬರೆಯುತ್ತಾ ರಾಜ್ಯ, ದೇಶ ವಿದೇಶಗಳಲ್ಲಿರುವ ಓದುಗರು ಸಹ ವೂಡೇ ಪಿ. ಕೃಷ್ಣರವರ ಅಂಕಣವನ್ನು ಓದಿ ಮೆಚ್ಚಿದ್ದೂ ಉಂಟು.

ಹೀಗಾಗಿ, ಅನೇಕ ನನ್ನ ಹಿತೈಷಿಗಳು, ಸಾಹಿತಿಗಳು, ಪತ್ರಕರ್ತರು, ನನ್ನ ಆತ್ಮೀಯ ಓದುಗ ಬಳಗದವರು ಹೇಳಿದ ಹಾಗೆ ಏತಕ್ಕೆ ವೂಡೇ ಪಿ. ಕೃಷ್ಣರವರ "ಆಡುಮುಟ್ಟದ ಸೊಪ್ಪಿಲ್ಲ – ನಾಡೋಜ ಡಾ.ವೂಡೇ ಪಿ. ಕೃಷ್ಣ"ರವರ ಅಂಕಣವನ್ನು ಒಂದು ಗ್ರಂಥವನ್ನಾಗಿ ಪ್ರಕಟಿಸಿ ಲೋಕಾರ್ಪಣೆ ಮಾಡಬಾರದು ಎಂದು ಸಲಹೆ

ಇತ್ತಾಗ ನನಗೂ ಇವರ ಸಲಹೆ, ಸೂಚನೆ ಸರಿ ಎಂದೆನಿಸಿ ಇಂತಹ ಒಬ್ಬ ಮಹಾ ಸಾಧಕನ ಬಗ್ಗೆ ನನಗೆ ತಿಳಿದಿರುವ ಮಟ್ಟಿಗೆ ಬರೆದು ಇಂದು "ಆಡು ಮುಟ್ಟದ ಸೊಪ್ಪಿಲ್ಲ – ನಾಡೋಜ ಡಾ. ವೂಡೇ ಪಿ. ಕೃಷ್ಣ" ಎಂಬ ಕೃತಿಯನ್ನು ಲೋಕಾರ್ಪಣೆ ಮಾಡುತ್ತಿದ್ದು, ನನಗೆ ಗೊತ್ತಿಲ್ಲ ನಾನು ಇನ್ನೂ ಬರವಣಿಗೆಯ ಲೋಕದಲ್ಲಿ ತೆವಳುತ್ತಾ ತೆವಳುತ್ತಾ ಅಂಬೆಗಾಲಿಡುತ್ತಿದ್ದು, ಬರವಣಿಗೆ ಗೊತ್ತಿದ್ದು ಗೊತ್ತಿಲ್ಲದೆಯೇ ಈ ಒಂದು ಕಷ್ಟಸಾಧ್ಯವಾದ ಕೆಲಸಕ್ಕೆ ನನ್ನನ್ನು ನಾನು ತೊಡಗಿಸಿಕೊಂಡು ಇಂದು ಈ ಕೃತಿ ಲೋಕಾರ್ಪಣೆಗೊಳ್ಳುತ್ತಿದೆ.

ಹೂವಿನಿಂದ ನಾರು ಸ್ವರ್ಗಕ್ಕೆ ಹೋದಂತೆ, ಈ ಮಾತು ನನಗೆ ಅನ್ವಯಿಸಬಹುದಲ್ಲವೆ!

ಮರೆಯಲಾಗದ ಮಹನೀಯರು

ನಾಡೋಜ ಡಾ. ವೂಡೇ ಪಿ. ಕೃಷ್ಣರವರ ಕುರಿತಾದ ಕೃತಿಯನ್ನು ಅಂಕಣ ರೂಪದಲ್ಲಿ ಬರೆದು, ಲೋಕಾರ್ಪಣೆಗೊಳ್ಳುವ ಈ ಸಂದರ್ಭದಲ್ಲಿ ನನ್ನ ಬರವಣಿಗೆಯನ್ನು ನನ್ನ ಪತ್ರಿಕೆಯ ಕೆಲಸವನ್ನು ನಿರಂತರವಾಗಿ ಮೆಚ್ಚಿ ನೀವು ತುಂಬಾ ಚೆನ್ನಾಗಿ ಬರೆಯುತ್ತೀರಾ ಯಾವುದೇ ಕಾರಣಕ್ಕೂ ಪತ್ರಿಕೆಯ ಕೆಲಸವನ್ನು ನಿಲ್ಲಿಸಬೇಡಿ, ನೀವು ಆದಿಜಾಂಬ ಸಮುದಾಯಕ್ಕೆ ಆದಿಜಾಂಬವರ ಹೆಸರಿನಲ್ಲಿಯೇ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ಕಳೆದ ಮೂವತ್ತು ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬರುತ್ತಿರುವಿರಿ, ಜೊತೆಗೆ ಕೆಲವಾರು ಪುಸ್ತಕಗಳನ್ನೂ ಬರೆದಿರುತ್ತೀರಿ, ಈ ಬರವಣಿಗೆಯನ್ನು ಹೀಗೆಯೇ ಮುಂದುವರೆಸಿ ಎಂದು ಸದಾ ಪ್ರೋತ್ಸಾಹಿಸುತ್ತಾ ಬರುತ್ತಿರುವ ನನ್ನ ಕನ್ನಡ ಪಂಡಿತರೂ ಗುರುಗಳೂ ಮಾರ್ಗದರ್ಶಕರೂ ಆದ ಶ್ರೀ ಕೋಣಂದೂರು ಲಿಂಗಪ್ಪರವರು, ಪತ್ರಿಕಾ ಮಾಧ್ಯಮಕ್ಕೆ ನಾನು ಬರಲು ಮೂಲಕಾರಣ ಸಾಹಿತಿಗಳು, ಹಿರಿಯ ಪತ್ರಕರ್ತರು ಮತ್ತು ಕನ್ನಡಪರ ಹೋರಾಟಗಾರರಾದ ಶ್ರೀ ಜಾಣಗೆರೆ ವೆಂಕಟರಾಮಯ್ಯರವರು, ನೀನು ತುಂಬಾ ಚೆನ್ನಾಗಿ ಬರಿತ್ತೀಯ ಹೀಗೆ ಬರೆಯುತ್ತಿರು ಎಂದು ಸದಾ ನನ್ನನ್ನು ಪ್ರೋತ್ಸಾಹಿಸುತ್ತಿದ್ದ ದಿ. ಟಿ.ಪಿ. ಪ್ರಸನ್ನ ಕುಮಾರ್‌ರವರು, ಪ್ರತಿ ಹಂತದಲ್ಲೂ ನನ್ನ ಎಲ್ಲಾ ರೀತಿಯ ಬರವಣಿಗೆಯನ್ನು ಓದಿ, ವಿಮರ್ಶೆ ಮಾಡಿ ಸರಿ ತಪ್ಪುಗಳನ್ನು ಹೇಳಿ ತಿದ್ದುವ ಕೆಲಸವನ್ನು ಮಾಡುತ್ತಿರುವ ಹಿರಿಯ ಪತ್ರಕರ್ತರು, ರಾಜ್ಯ ಪ್ರಗತಿ ಪತ್ರಿಕೆಯ ಸಂಪಾದಕರು ಆದ ರು. ಬಸಪ್ಪರವರು. ಸದಾ ನಾನು ನೆನೆಯುವ ಪ್ರಗತಿಪರ ಚಿಂತಕರು, ಬಂಡಾಯ ಸಾಹಿತಿಗಳಾದ ದಿ. ಚಂದ್ರಶೇಖರ ಪಾಟೀಲರು (ಚಂಪಾ), ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದಿ. ಡಾ. ಯು.ಆರ್. ಅನಂತಮೂರ್ತಿರವರು.

ಹಾಗೆಯೇ ಆತ್ಮೀಯರಾದ ಪ್ರಗತಿಪರ ಚಿಂತಕರು, ಬಂಡಾಯ ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪರವರು, ಡಾ. ಬಂಜಗೆರೆ ಜಯಪ್ರಕಾಶ್‌ರವರು, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ಡಾ. ಎಚ್.ಎಲ್. ಪುಷ್ಪಾರವರು, ಶ್ರೀಮತಿ ಇಂದಿರಾಕೃಷ್ಣಪ್ಪರವರು, ಪ್ರೊ. ಎಂ. ಚಂದ್ರಮ್ಮರವರು, ಆದಿಜಾಂಬವ ಜಾಗೃತಿ ಪತ್ರಿಕೆಯ ಅಂಕಣಕಾರ್ತಿ ಮತ್ತು ಲೇಖಕಿಯೂ ಆದ ಶ್ರೀಮತಿ ಮಾ.ನ. ನಾಗರತ್ನ (ನಿವೃ)ರವರು ಹಾಗೂ ಸಾಹಿತಿಗಳಾದ ಶ್ರೀ ಪಡಶೆಟ್ಟಿರವರು.

ನಿವೃತ್ತ ನ್ಯಾಯಮೂರ್ತಿಗಳಾದ ಜಸ್ಟೀಸ್ ಎಂ. ರಾಮಕೃಷ್ಣ, ಮುಖ್ಯ ನ್ಯಾ. (ನಿ.), ಸಿ.ಆರ್. ಕುಮಾರಸ್ವಾಮಿಗಳು, ಜಸ್ಟೀಸ್ ಕೃಷ್ಣ ಎಸ್. ದೀಕ್ಷಿತ್‌ರವರು, ಜಸ್ಟೀಸ್ ಆರ್. ದೇವದಾಸ್‌ರವರು, ಜಸ್ಟೀಸ್ ನರೇಂದ್ರ ಪ್ರಸಾದ್‌ರವರು, ಜಸ್ಟೀಸ್ ವಿಜಯಕುಮಾರ್ ಪಾಟೀಲ್‌ರವರು, ಶ್ರೀ ಗೋನಾಳ್ ಭೀಮಪ್ಪರವರು, ಎಂ. ಲಕ್ಷ್ಮೀನಾರಾಯಣ್‌ರವರು ಐ.ಎ.ಎಸ್.(ನಿ.), ಶ್ರೀ ರಾಜೇಂದ್ರಕುಮಾರ್, ಜಿಲ್ಲಾ ನ್ಯಾಯಾದೀಶರು, ಬಿ.ಬಿ.ಎಂ.ಪಿ. ಅಧಿಕಾರಿಗಳ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಶ್ರೀ ಎ. ಅಮೃತ್‌ರಾಜ್‌ರವರು, ಚಿಂತನೆಯ ಚಿಗುರು ಆರ್. ರಂಗಸ್ವಾಮಿ ಮತ್ತು ಶ್ರೀಮತಿ ಮಂಜುಳಾ ರಂಗಸ್ವಾಮಿ, ಪ್ರೊ. ಎಂ.ಆರ್. ಕೃಷ್ಣಪ್ಪ, ಡಾ. ಜಿ.ಕೆ. ವೆಂಕಟೇಶ್, ಮಾಜಿ ಶಾಸಕರಾದ ಶ್ರೀ ಪಿಳ್ಳೆ ಮುನಿಶಾಮಪ್ಪ, ವಕೀಲರಾದ ಶ್ರೀ ರಮೇಶ್ ಕೆ.ಆರ್.ಪುರಂ, ಶಾಂತಪ್ಪ ಖಾನಹಳ್ಳಿ ಯಾದಗಿರಿ, ಯಮುನಪ್ಪ ಗಿರಿಜಾಲಿ, ಭಾರತೀಯ ರಿಸರ್ವ್ ಬ್ಯಾಂಕಿನ ನಿವೃತ್ತಿ ಹಿರಿಯ ಅಧಿಕಾರಿಗಳಾದ ಸು.ನಿಂ. ಕರ್ಜಗಿ, ಡಾ. ಹನುಮಂತರಾಜು, ಉದ್ಯಮಿ ಶ್ರೀ ಬಳ್ಳಕೆರೆ ನಾಗರಾಜ್ ಚಿಕ್ಕಮಗಳೂರು, ಪತ್ರಕರ್ತರಾದ ಶ್ರೀ ಆರ್. ನರಸಿಂಹಮೂರ್ತಿ, ಸಂಗೀತ ಗಾಯಕ ಸಂತವಾಣಿ ಸುಧಾಕರ್, ಛಾಯಾಗ್ರಾಹರಾದ ಶ್ರೀ ಕೆ. ಸಿದ್ದಲಿಂಗಯ್ಯ, ಎಂ. ಮುನಿಯಾಚಾರಿ, ಪ್ರೊ. ನಾರಾಯಣಸ್ವಾಮಿ ಜಿಕೆವಿಕೆ, ಜಾಂಬವ ಕೋಗಿಲೆ ಕರಿಯಪ್ಪ ಮಾಸ್ತರ್, ರಾಯಚೂರು, ಹಿರಿಯ ಲೇಖಕಿ ಡಾ. ಕೆ.ವಿ. ರಾಜೇಶ್ವರಿರವರು.

ಸುಮಂಗಲಿ ಸೇವಾಶ್ರಮದ ಅಧ್ಯಕ್ಷರಾದ ಡಾ. ಎಸ್.ಜಿ. ಸುಶೀಲ ಮತ್ತು ಅವರ ಆಶ್ರಮದ ಸದಸ್ಯರು, ಲೇಖಕಿ, ಮಂಥಣಿ ಮಾಸಪತ್ರಿಕೆಯ ಸಂಪಾದಕಿಯಾದ ಶ್ರೀಮತಿ ಸುನಂದ ರು. ಬಸಪ್ಪರವರು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಹಿರಿಯ ಉಪ ಸಂಪಾದಕರಾದ ಶ್ರೀ ಮಹಮದ್ ಸೋಹೆಬ್‌ಶೇಕ್ ನನ್ನೊಂದಿಗೆ ಸದಾ ಇರುವುದು ಸಂತೋಷದ ದಿನಗಳು.

ನನ್ನ ಬರವಣಿಗೆಯ ಎಲ್ಲಾ ರೀತಿಯಲ್ಲಿಯೂ ಸ್ಫೂರ್ತಿ ತುಂಬುತ್ತಿರುವ ನನ್ನ ಪತ್ನಿ ಶ್ರೀಮತಿ ಜೆ. ಕೌಸಲ್ಯ, ಮಕ್ಕಳಾದ ಹಿರಿಯ ಪತ್ರಕರ್ತ ನಿಖಿಲ್ ಜಿ.ಕೆ. ವಕೀಲರಾದ ನಿಶಾನ್ ಜಿ.ಕೆ., ಸೊಸೆಯಂದಿರಾದ ಶ್ರೀಮತಿ ಕಾವ್ಯ ನಿಖಿಲ್, ಲೆಕ್ಕ ಪರಿಶೋಧಕರು, ಶ್ರೀಮತಿ ತನುಶ್ರೀ ನಿಶಾನ್, ವಕೀಲರು, ಮೊಮ್ಮಗಳಾದ ಕು. ಈರಾ ನಿಖಿಲ್ ಇವರೆಲ್ಲರ ಸಹಕಾರ, ಪ್ರೀತಿ, ವಿಶ್ವಾಸಗಳಿಗೆ ಸದಾ ನಾನು ಅವರಿಗೆ ನನ್ನ ಪ್ರೀತಿಯ ಅಪ್ಪುಗೆ.

ವಿಶೇಷವಾಗಿ ಶ್ರೀ ಎ. ರಾಜೇಶ್, ಹಿರಿಯ ವಕೀಲರು, ಆದಿಜಾಂಬವ ಜಾಗೃತಿ ಪತ್ರಿಕೆಯ ಪೋಷಕರು ಹಾಗೂ ಶ್ರೀ ಆದಿನಾರಾಯಣಾಚಾರ್ ಇವರ ಪತ್ನಿ ಶ್ರೀಮತಿ ಸುನಂದಮ್ಮ, ಶ್ರೀ ವೀರನಾರಾಯಣಾಚಾರ್ ಇವರ ಪತ್ನಿ ಶ್ರೀಮತಿ ವೇದಾಂಬ ಇವರಿಗೆ ಪ್ರೀತಿಯ ನಮನಗಳು.

ಮುಖವಾಣಿ

ಯಾವುದೇ ಒಂದು ಕೃತಿ ಪರಿಪೂರ್ಣವಾಗಬೇಕಾದರೆ ಅದನ್ನು ಓದುಗರು ಒಪ್ಪಿ, ಅಪ್ಪಬೇಕಾದರೆ ಕೃತಿಯ ಒಳಗಿನ ಬರವಣಿಗೆ ಎಷ್ಟು ಮುಖ್ಯವೋ ಅದೇರೀತಿ ಕೃತಿಗೆ ಮುನ್ನುಡಿ ಮತ್ತು ಬೆನ್ನುಡಿ ಬಹಳ ಪ್ರಮುಖವಾದ ಅಂಶವಾಗಿರುತ್ತದೆ.

ಹೀಗಾಗಿ "ಆಡು ಮುಟ್ಟದ ಸೊಪ್ಪಿಲ್ಲ – ನಾಡೋಜ ಡಾ. ವೂಡೇ ಪಿ. ಕೃಷ್ಣ" ಎಂಬ ಕೃತಿಗೆ ಬಹಳ ಅಪರೂಪವಾಗಿ, ವಿಶೇಷವಾಗಿ ಮುನ್ನುಡಿಯನ್ನು ಬರೆದಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಗೌರವಾನ್ವಿತ ಶ್ರೀ ಕೃಷ್ಣ ಎಸ್. ದೀಕ್ಷಿತ್‌ರವರಿಗೆ ತುಂಬು ಹೃದಯದ ಅಭಿನಂದನೆಗಳು.

ಅದೇರೀತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು ಇವರು ಈ ಕೃತಿಗೆ ಬೆನ್ನುಡಿಯನ್ನು ಬರೆದು ಕೃತಿಯ ಮೆರುಗನ್ನು ಹೆಚ್ಚಿಸಲು ಪ್ರಮುಖ ರೂವಾರಿಯಾಗಿರುತ್ತಾರೆ. ಇವರಿಗೂ ನನ್ನ ಮನದಾಳದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಜಾಂಬವ ಎಂ. ಗಂಗಾಧರ್

ಪರಿವಿಡಿ

	ಮುನ್ನುಡಿ: **ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್**	ix
	ಗೌರವಾಧ್ಯಕ್ಷರ ಮಾತು : **ನ್ಯಾಯಮೂರ್ತಿ ಆರ್. ದೇವದಾಸ್**	xi
	ಲೇಖಕರ ಮಾತು: **ಜಾಂಬವ ಎಂ. ಗಂಗಾಧರ್**	xiv
1.	"ಸರ್ವೇ ಜನಾಃ ಸುಖಿನೋ ಭವಂತು"	1
2.	ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳ ಒಡೆಯ	6
3.	ಆಡು ಮುಟ್ಟದ ಸೊಪ್ಪಿಲ್ಲ	11
4.	ವೂಡೇ ಪಿ. ಅವರ ಅಂಬೇಡ್ಕರ್ ಚಿಂತನೆ	19
5.	"ಸಮ ಸಮಾಜದ ಮುಖ್ಯವಾಹಿನಿ"	32
6.	"ಮಾಧ್ಯಮಗಳಲ್ಲಿ ವೂಡೇ ಪಿ."	38
7.	ದೇಶ ವಿದೇಶಗಳಲ್ಲಿ ವೂಡೇ ಪಿ. ಹೆಜ್ಜೆಗುರುತು	43
8.	ವೂಡೇಪಿ ಸಾಧನೆ ಸಾಮಾನ್ಯವಾದುದಲ್ಲ	48
9.	ದಿನವೆಲ್ಲಾ ಗಾಂಧೀಜಿಯವರ ನೆನಪು	54
10.	"ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷನಾಗಿರುವುದು ನನ್ನ ಅದೃಷ್ಟ, ಪುಣ್ಯ"	60
11.	"ಕೊಟ್ಟವರಿಗೆ ಹಿಂದಿರುಗಿಸಿದ್ದು"	66
12.	"ಸಾಹಿತ್ಯ ಲೋಕಕ್ಕೆ ಒಂದು ಗೌರವ"	72
13.	"ಟಿಕೆಟ್ ನೀಡದಿರಲು ಮನವಿ"	78
14.	"ಸಂವಿಧಾನಕ್ಕೆ ಯಾವ ಚ್ಯುತಿಯೂ ಇಲ್ಲ"	80

15. ವೂಡೇ ಪಿ. ಅವರ ಪತ್ನಿ ಶ್ರೀಮತಿ ಸವಿತಾ 87

16. "ವೂಡೇ ಪ್ರತಿಷ್ಠಾನದ ಸ್ಥಾಪನೆ" 93

17. ಪ್ರಶಸ್ತಿಗಳ ಸಾಲುಸಾಲು 99

18. ಜನ್ಮದಿನದ ಶುಭಾಶಯಗಳು 103

19. ಅವರಿವರು ಕಂಡಂತೆ ವೂಡೇ ಪಿ. 108

20. ಅವರಿವರ ಮನದಾಳದ ಮಾತು 114

21. "ಜ್ಞಾನ ದೇಗುಲದ ಸತ್ಯವಂತ" 120

22. ಬಹುಮುಖೀ ಪ್ರಜ್ಞಾಶಾಲಿ 125

23. ಸಂದರ್ಶನಗಳು

"ಲೋಕಮಿತ್ರರಾದ ನಮ್ಮ ಯಜಮಾನರು" 130

– **ಜಾಂಬವ ಎಂ. ಗಂಗಾಧರ**

ಸಂಘೇಶಕ್ತಿ ಕಲೌಯುಗೇ : ವೂಡೇ ಪಿ. 135

– **ಜಾಂಬವ ಎಂ. ಗಂಗಾಧರ**

ಅನುಬಂಧಗಳು

1. ನಮ್ಮ ಕಾಲದ ಸವ್ಯಸಾಚಿ 146

– **ರು. ಬಸಪ್ಪ**

2. ಅಜಾತಶತ್ರು ಡಾ॥ ವೂಡೇ ಪಿ.ಕೃಷ್ಣ 151

– **ಮಾ.ನ. ನಾಗರತ್ನ (ನಿವೃ)**

3. ವಿದ್ವತ್ತಿನ ಶಿಖರ – ವಿನಯ ಸಾಗರ 156

– **ಬಿ.ಎಸ್. ದಿವಾಕರ, ವಿ.ಸಿ. ವಿಷ್ಣು ಪ್ರಸಾದ**

4. ಸರಳತೆಯ ಮಹಾ ರೂಪಕ 160

– **ಡಾ. ಸತ್ಯಮಂಗಲ ಮಹಾದೇವ**

5. ಜೀವನ ವಿವರ: **ಡಾ. ವೂಡೇ ಪಿ. ಕೃಷ್ಣ** 166

"ಸರ್ವೇ ಜನಾಃ ಸುಖಿನೋ ಭವಂತು"

ಸಮಾಜದಲ್ಲಿ ಪ್ರತಿಯೊಬ್ಬರು, ಪ್ರತಿಯೊಂದು ಸಮುದಾಯವು ಅವರವರ ಭಾವನೆಗೆ ತಕ್ಕಂತೆ ಬಾಳಬೇಕು. ಬದುಕಬೇಕು, ನಾವು ಯಾವುದೇ ವರ್ಗದವರಾಗಿರಲೀ ಭಾರತದ ನೆಲವನ್ನು, ಡಾ.ಅಂಬೇಡ್ಕರ್‌ರವರು ಕೊಟ್ಟಿರುವ ಸಂವಿಧಾನವನ್ನು ಪ್ರೀತಿಸಬೇಕು, ಗೌರವಿಸಬೇಕು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಆದರ್ಶವನ್ನು ತತ್ವವನ್ನು ನಾವು ಪಾಲಿಸಬೇಕು, ಹೀಗಾಗಿ ಎಲ್ಲರೂ ಚೆನ್ನಾಗಿರಬೇಕು, ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ಒಬ್ಬ ಅಪ್ಪಟ ದಕ್ಷ ಆಡಳಿತಗಾರ ನಾಡೋಜ ವೂಡೇ ಪಿ. ಕೃಷ್ಣರವರು. ಇವರ ಮುಂದೆ ನಾವುಗಳು ಒಂದ್ಹತ್ತು ನಿಮಿಷ ಕುಳಿತು ಲೋಕರೂಢಿಯಾಗಿ ಏನಾದರೂ ಮಾತನಾಡಿದರೆ, ಕೇಳಿದರೆ ಅದಕ್ಕೆ ಅವರು ಬಹಳ ಕರಾರುವಾಕ್ಕಾಗಿ ನಮ್ಮ ಪ್ರಶ್ನೆಗಳಿಗೆ

ನಿಖರವಾದ ಉತ್ತರವನ್ನು ನಗುನಗುತ್ತಲೆ ಕೊಡುತ್ತಾ, ನಮ್ಮಲ್ಲಿ ಒಬ್ಬರಾಗಿ ಬಿಡುತ್ತಾರೆ. ವೂಡೇ ಪಿ. ಕೃಷ್ಣರವರು ಎಷ್ಟೇ ಪದವಿಗಳನ್ನು ಪಡೆದಿದ್ದರೂ, ಎಷ್ಟೋ ಸಂಘಸಂಸ್ಥೆಗಳಲ್ಲಿ ದುಡಿಯುತ್ತಿದ್ದರೂ, ಅವರು ಪ್ರತಿಯೊಬ್ಬ ಮನುಷ್ಯರಲ್ಲೂ ಒಂದಾಗಿ ಬಿಡುವ ಸರಳ ಸಜ್ಜನಿಕೆಯ ವ್ಯಕ್ತಿ ಎಂದು ಹೇಳಬೇಕಾಗುತ್ತದೆ.

ನಾಡೋಜ ವೂಡೇ ಪಿ. ಕೃಷ್ಣರವರು ಒಬ್ಬ ದಕ್ಷ ಆಡಳಿತಗಾರರು ಮಾತ್ರವಲ್ಲ; ಏನು ಮಾತನಾಡುತ್ತೇವೆಯೋ ಅದರಂತೆ ನಡೆದುಕೊಳ್ಳುವ ಒಬ್ಬ ಸಜ್ಜನ ವ್ಯಕ್ತಿ. ಒಬ್ಬ ಆಡಳಿತಗಾರರಾಗಿ ಕೃಷ್ಣ ಅವರ ಯಶಸ್ಸು ನಿಂತಿರುವುದು ಅವರು ತೆಗೆದುಕೊಳ್ಳುವ ಖಚಿತ ನಿರ್ಧಾರಗಳ ಮೇಲೆ. ಅವರು ಕಾರ್ಯ ನಿರ್ವಹಿಸುವ ಕಾರ್ಯಶೈಲಿಯನ್ನು ಗಮನಿಸಿದರೆ, ಅವರು ಯಾವುದೇ ವಿಚಾರವಾಗಿದ್ದರೂ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೆ, ಕ್ಷಣಾರ್ಧದಲ್ಲಿ ಅದಕ್ಕೊಂದು ಪರಿಹಾರವನ್ನು ತೆಗೆದುಕೊಳ್ಳುವ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ. ಈ ನಿಟ್ಟಿನಲ್ಲಿ ವೂಡೇ. ಪಿ. ಕೃಷ್ಣರವರನ್ನು ಪ್ರತಿಯೊಬ್ಬರು ಇಷ್ಟಪಡುವ ವ್ಯಕ್ತಿಯಾಗುತ್ತಾರೆ, ತಮ್ಮ ಸರಳ ಮತ್ತು ನಿಖರ ಮಾತುಗಳಿಂದ ಒಂದು ಕೆಲಸ ಮುಗಿಸಿ ಮತ್ತೊಂದು ಕೆಲಸಕ್ಕೆ ಹಾಜರಾಗುತ್ತಾರೆ. ಕೆಲವೊಮ್ಮೆ ಒಂದೇ ಬಾರಿ ತಮ್ಮನ್ನು ಕಾಣಲು ಬರುವ ಪ್ರತಿಯೊಬ್ಬರ ಕೆಲಸವನ್ನು ಕಡಿಮೆ ಸಮಯದಲ್ಲಿಯೇ ಮುಗಿಸುತ್ತಾರೆ. ಇದನ್ನು ನಮ್ಮಂತವರು ನೋಡಿದಾಗ ಕೃಷ್ಣರವರು ಒಳ್ಳೆಯ ಆಡಳಿತಗಾರರು, ಇದಕ್ಕೆ ಒಳ್ಳೆಯ ಉದಾಹರಣೆಗೆ ಎಂದರೆ ಪ್ರತಿಷ್ಠಿತ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳನ್ನು ಇವರು ಕಟ್ಟುತ್ತಿರುವ ರೀತಿ. ಸಂಶಯದ ಸಂದರ್ಭದಲ್ಲಿ ಅವುಗಳನ್ನು ನಿವಾರಿಸುವ, ವಿವಾದದ ಸಂದರ್ಭದಲ್ಲಿ ವಿವೇಕದಿಂದ ವರ್ತಿಸುವ, ಉದ್ವೇಗದ ಸಂದರ್ಭದಲ್ಲಿ ಸಂಯಮ ವಹಿಸುವ ಲೋಕಪ್ರಜ್ಞೆ ಇವರಿಗಿದೆ. ಎಷ್ಟೇ ದೊಡ್ಡವರಿರಲಿ, ಚಿಕ್ಕವರಿರಲಿ ಭೇಟಿಗೆ ಸಮಯವನ್ನು ನೀಡಿದರೆ, ಭೇಟಿ ನೀಡಿದ ಸಮಯಕ್ಕೆ ಸರಿಯಾಗಿ ಭೇಟಿ ಮಾಡಿ ಅವರ ಕಷ್ಟಸುಖಗಳನ್ನು ಕುಂದು ಕೊರತೆಗಳನ್ನು ನಿವಾರಿಸುವ ಕೆಲಸವನ್ನು ಮಾಡಿ ಮುಗಿಸುತ್ತಾರೆ. ಒಂದು ವೇಳೆ ಬೇಟಿಗೆ ಸಮಯ ಕೊಟ್ಟು, ಬೇರೆ ಯಾವುದಾದರೂ ಕೆಲಸ ಕಾರ್ಯಗಳ ಒತ್ತಡದ ನಿಮಿತ್ತ ಭೇಟಿಮಾಡಲು ಸಮಯವಿಲ್ಲದಾಗ ಸುಮ್ಮನೆ ಮರೆತುಬಿಡದೆ, ಅವರಿಗೆ ಫೋನುಮಾಡಿ ತಿಳಿಸಿ, ಮತ್ತೊಮ್ಮೆ ಬೇರೆ ಸಮಯವನ್ನು ನಿಗದಿಪಡಿಸುತ್ತಾರೆ. ಇಂತಹ ಗುಣ ಇಂದು ನಾವು ಕಾಣುವುದು ಬಹಳ ಅಪರೂಪ. ಆದರೆ ವೂಡೇ ಪಿ.ಕೃಷ್ಣರವರಲ್ಲಿ ಈ ಗುಣವನ್ನು ಕಾಣಬಹುದು, ಮತ್ತೊಂದು ದೃಷ್ಟಿಕೋನದಲ್ಲಿ ಹೇಳುವುದಾದರೆ ಒಬ್ಬ ಗಾಂಧಿವಾದಿಗೆ ಮಾತ್ರ ಈ ರೀತಿಯ ಕಾರ್ಯವೈಖರಿ ಸಾಧ್ಯ. ಹಾಗೇಯೇ ವೂಡೇ ಪಿ. ಕೃಷ್ಣರವರ ಈ ಕಾರ್ಯವೈಖರಿ

ಇತರರಿಗೆ ಒಂದು ಮಾದರಿ ಅನ್ನೋಣವೆ? ಖಂಡಿತವಾಗಿ ನಮ್ಮಂತಹ ಲಕ್ಷಾಂತರ ಜನರಿಗೆ ವೂಡೇ ಪಿ. ಕೃಷ್ಣರವರು ಒಂದು ಮಾದರಿಯೇ ಸರಿ.

ಗಾಂಧಿವಾದಿ ಕೃಷ್ಣರವರ ಮತ್ತೊಂದು ಬಹುದೊಡ್ಡ ಗುಣವೆಂದರೆ ಅವರಿವರ ಹೆಸರನ್ನು ಹೇಳಿಕೊಂಡು ಅವರಿವರ ಪರಿಚಯದವರ ಹೆಸರನ್ನು ಹೇಳಿಕೊಂಡು ಇವರ ಹತ್ತಿರ ಯಾವುದಾದರು ಕೆಲಸಕ್ಕೆ ಬಂದಾಗ ಬಂದ ದಾರಿಗೆ ಸುಂಕವಿಲ್ಲದಂತೆ ಸಾಗಹಾಕುವ ಸ್ವಭಾವ ಇವರದು. ಎಷ್ಟೇ ಆಗಲೀ ಗಾಂಧಿವಾದಿಯಲ್ಲವೆ ವೂಡೇ. ಪಿ. ಕೃಷ್ಣರವರು ಬೇರೆಯವರನ್ನು ಮಾತನಾಡಿಸುವಾಗ ಅವರನ್ನು ನೋಯಿಸುವುದಿಲ್ಲ. ಅಧಿಕಾರದಲ್ಲಿದ್ದೇವೆ ಎಂಬ ದರ್ಪವಾಗಲೀ, ನಾನು ಎಂಬುದು ಯಾವತ್ತು ಅವರನ್ನು ಆವರಿಸಿಲ್ಲ, ಎಂಥದೆ ಸಮಸ್ಯೆಗಳನ್ನು ಹೊತ್ತು ಬಂದವರಿಗೆ ಇವರೆಂದೂ ಬಗೆಹರಿಸದೆ, ಸಲಹೆಯನ್ನು ಕೊಡದೆ ಕಳುಹಿಸುವುದಿಲ್ಲ, ಇಂತಹ ಸ್ವಚ್ಛಮನಸ್ಸಿನ ಒಡೆಯ ವೂಡೇ.ಪಿ.ಕೃಷ್ಣರವರು.

ಎಷ್ಟೋ ಭಾರಿ ಚರ್ಚೆಯ ಬಿಸಿಯನ್ನು ಕಡಿಮೆಯಾಗಿಸಿ ಅದಕ್ಕೆ ಒಂದು ಸಾತ್ವಿಕ ರೂಪ ನೀಡಿ ಮುಂದುವರಿಸಿ ಪರಿಹಾರವೆಂಬಂತೆ ಬೇರೊಂದು ಸೂತ್ರವನ್ನು ಮಂಡಿಸುತ್ತಾ ಅದಕ್ಕೂ ಸಹ ಒಂದೊಳ್ಳೆಯ ಪರಿಹಾರ, ಸಲಹೆಗಳನ್ನು ಕೊಡುವ ಅಪರೂಪದ ಗುಣವನ್ನು ಸಹ ಹೊಂದಿದ್ದು ಇದು ಇವರ ನಾಯಕತ್ವದ ಗುಣವನ್ನು ಬಹಳ ವಿಶೇಷವಾಗಿ ತೋರಿಸುತ್ತದೆ. ಆಡಳಿತದ ಸಂದರ್ಭದಲ್ಲಿ ಸದಾ ಶುದ್ಧವಾದ, ಶುಭ್ರವಾದ ಮನಃಸ್ಥಿತಿಯನ್ನು ಹೊಂದಿರುತ್ತಾರೆ, ಗಾಂಧೀಜಿಯವರ ಆದರ್ಶಗಳು, ತಂದೆಯವರ ಗುರುತನದ ಮಾತುಗಳಲ್ಲಿನ ನೈತಿಕ ಶಿಸ್ತು, ಸಾರ್ವಜನಿಕ ಕೆಲಸಗಳಲ್ಲಿ ವಹಿಸುವ ಆಸ್ಥೆ, ರಾಮಕೃಷ್ಣಾಶ್ರಮದ ಮುನಿವರ್ಯರ ನೈತಿಕ ಗುಣ ಅವರಲ್ಲಿ ಹೆಚ್ಚಾಗಿ ಅಡಕವಾಗಿವೆ, ಈ ಗುಣಗಳೇ ಇಂದು ವೂಡೇ ಪಿ. ಕೃಷ್ಣರವರು ಬಹಳ ಎತ್ತರವಾಗಿ ಕಾಣಲು ಸಾಧ್ಯವಾಗಿದೆ.

ಶಿಕ್ಷಣ ಕ್ರಾಂತಿಯ ಹರಿಕಾರ ವೂಡೇ ಪಿ. ಕೃಷ್ಣ

ಅಂದು ಇಬ್ಬರು ಅಕ್ಷರಸ್ಥ ಮಹಿಳೆಯರು ಬಡ ಮತ್ತು ಮಧ್ಯಮ ವರ್ಗದವರಿಗೆ ಶಿಕ್ಷಣ ಕಲ್ಪಿಸಿ ಕೊಡಬೇಕೆಂಬ ಉದ್ದೇಶ ಇಟ್ಟುಕೊಂಡು ರೂಪಿಸಿದ ಸಂಸ್ಥೆಯೇ ಇಂದಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ. ಆರಂಭದಲ್ಲಿ ಕೇವಲ ಎರಡು ಕೊಠಡಿಯಲ್ಲಿ 20 ವಿದ್ಯಾರ್ಥಿಗಳೊಂದಿಗೆ ಆರಂಭವಾದ ಶಿಕ್ಷಣ ಸಂಸ್ಥೆಯಲ್ಲಿಂದು, ನಲವತ್ತು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟನ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಕಳೆದ

ಎರಡು ದಶಕಗಳಿಂದ ವೂಡೇ ಪಿ. ಕೃಷ್ಣರವರು ಕಾರ್ಯ ನಿರ್ವಹಿಸುತ್ತಿದ್ದು ಟ್ರಸ್ಟಿನ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ.

ವೂಡೇ ಪಿ. ಕೃಷ್ಣರವರ ಆಶಯದಂತೆ ಕಡಿಮೆ ಶುಲ್ಕದೊಂದಿಗೆ ಗುಣಮಟ್ಟದ ಶಿಕ್ಷಣಗಳ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಹೆಸರಾಗಿದೆ, ಬಡ, ಮಧ್ಯಮ ವರ್ಗದ ಅದೆಷ್ಟೋ ವಿದ್ಯಾರ್ಥಿಗಳಿಗೆ ದಾರಿ ತೋರುತ್ತಿರುವ ಶಿಕ್ಷಣ ಸಂಸ್ಥೆಯ ಹಿಂದಿನ ಶಕ್ತಿ ವೂಡೇ ಪಿ. ಕೃಷ್ಣರವರು ಕಳೆದ ಎರಡು ದಶಕಗಳ ಕಾಲದಿಂದ ಸಂಸ್ಥೆಯನ್ನು ಮುನ್ನಡಿಸಿ ಇಂದು ಬೃಹತ್ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಿದ ಕೀರ್ತಿ ಇವರದಾಗಿದೆ.

ಬೆಂಗಳೂರಿನ ಹೃದಯ ಭಾಗವಾದ ಶೇಷಾದ್ರಿಪುರಂನಲ್ಲಿ ಆನಂದಮ್ಮ ಮತ್ತು ಸೀತಮ್ಮ ಎಂಬ ಇಬ್ಬರು ಮಹಿಳೆಯರು ಸೇರಿ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ ಅನ್ನು 1930ರಲ್ಲಿ ಆರಂಭಿಸಿದರು. ಆ ವೇಳೆ ಎರಡು ಕೊಠಡಿ ಯಲ್ಲಿ 20 ಮಕ್ಕಳೊಂದಿಗೆ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಆನಂತರ ಮೈಸೂರಿನ ಮಹಾರಾಜರು ಎರಡೂವರೆ (2.5) ಎಕರೆ ಪ್ರದೇಶವನ್ನು ಟ್ರಸ್ಟ್‌ನ ಹೆಸರಿಗೆ ಬರೆದುಕೊಟ್ಟರು, ಕಾಲಕ್ರಮೇಣ ಶಿಕ್ಷಣ ಸಂಸ್ಥೆಯು ತನ್ನ ವಿಸ್ತರಣಾ ಕಾರ್ಯವನ್ನು ಆರಂಭಿಸಿತು, ಇದರ ಪರಿಣಾಮ ಬೆಂಗಳೂರಿನಲ್ಲಿ ಮಾತ್ರವಲ್ಲ ಮಂಡ್ಯ ಮೈಸೂರು, ತುಮಕೂರು ಜಿಲ್ಲೆಗಳಲ್ಲೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಸಾಧ್ಯವಾಯಿತು.

ಎಲ್‌ಕೆಜಿಯಿಂದ ಹಿಡಿದು ಪಿಎಚ್.ಡಿ.ವರೆಗೆ ವ್ಯಾಸಂಗಕ್ಕೆ ಸೌಲಭ್ಯ ಕಲ್ಪಿಸುವ ಶಿಕ್ಷಣ ಸಂಸ್ಥೆಯಾಗಿ ಬೆಳೆದಿದೆ. ಶಿಕ್ಷಣ ಸಂಸ್ಥೆಯು ಸಾಮಾನ್ಯ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಾ ಬಂದಿದ್ದು, ಮುಂದಿನ ದಿನಗಳಲ್ಲಿ ಎಂಜಿನಿಯರಿಂಗ್ ಕೋರ್ಸ್ ಆರಂಭಿಸುವ ದೂರದೃಷ್ಟಿಯನ್ನು ಇಟ್ಟುಕೊಂಡಿದೆ. 2001 ರಿಂದ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿಯಾಗಿ ಸಂಸ್ಥೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಾ ಬರುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದಿರುವ ವೂಡೇ ಪಿ ಕೃಷ್ಣ ಅವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ರೂವಾರಿ ಕೂಡ ಹೌದು.

ಕಡಿಮೆ ಬೆಲೆ ಆಧುನಿಕ ಶಿಕ್ಷಣ

ಬಡ ಮತ್ತು ಮಧ್ಯಮ ವರ್ಗದವರ ಮಕ್ಕಳಿಗೆ ಕಡಿಮೆ ಬಜೆಟ್‌ನಲ್ಲಿ ಶಿಕ್ಷಣವನ್ನು ಕಲ್ಪಿಸಿ ಕೊಡಬೇಕೆಂಬ ಉದ್ದೇಶದಿಂದ ಸಂಸ್ಥೆಯು ಕಾಲೇಜನ್ನು

ಮುನ್ನಡೆಸುತ್ತಿದೆ. ಇಲ್ಲಿ ಇತರೆ ಖಾಸಗಿ ಕಾಲೇಜುಗಳಂತೆಯೆ ಪಿಯುಸಿ ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಜೆಇಇ ನೀಟ್, ಸಿಇಟಿ ಕೋಚಿಂಗ್ ನೀಡಲಾಗುತ್ತಿದೆ. ಇದು ಕಡ್ಡಾಯವೇನಲ್ಲ, ಆಸಕ್ತರು ಮಾತ್ರ ಪಡೆಯಬಹುದು. ಇದರ ಜೋತೆಗೆ ಡಾ. ಬಿ.ಆರ್ ಅಂಬೇಡ್ಕರ್, ಬಸವ, ವಿವೇಕಾನಂದ, ಗಾಂಧಿಜೀ ಇವರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು ತೆರೆದು ಪದವಿ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣವನ್ನು ನೀಡಲಾಗುತ್ತಿದೆ.

ಈ ರೀತಿ ವೂಡೇ ಪಿ ಕೃಷ್ಣರವರು ಒಂದಿಲ್ಲೊಂದು ರೀತಿಯಲ್ಲಿ, ತಮ್ಮನ್ನು ತಾವು ಸಮಾಜದ ಅಭಿವೃದ್ಧಿಯಲ್ಲಿ ಪರಿಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳ ಒಡೆಯ

ಮನುಷ್ಯನಿಗೆ ಹಣ, ಅಂತಸ್ತು, ಅಧಿಕಾರ ಇದ್ದರೆ ಅಂತಹ ವ್ಯಕ್ತಿಗಳು ಸಾಮಾನ್ಯವಾಗಿ ನೆಲದ ಮೇಲೆ ನಡೆದಾಡುವುದಿಲ್ಲ. ಅವರು ಯಾವಾಗಲೂ ಆಕಾಶದಲ್ಲೇ ತೇಲುತ್ತಿರುತ್ತಾರೆ. ಆದರೆ ನಮ್ಮ ವೂಡೇಪಿರವರು ತನ್ನ ಬದುಕಿನಲ್ಲಿ ಜೀವನದಲ್ಲಿ ಈ ರೀತಿಯ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಯನ್ನು ಸಮಾನಾಂತರವಾಗಿ ಅಳವಡಿಸಿ ಕೊಂಡಿರುತ್ತಾರೆ. ಕ್ರಿಯಾಶೀಲತೆ, ಆದರ್ಶ, ಚಿಂತನೆ, ಶುದ್ಧ ಆಚಾರ, ವಿಚಾರ, ಸಾಮಾಜಿಕ ಕಳಕಳಿ, ನುಡಿದಂತೆ ನಡೆಯುವ ಪ್ರಾಮಾಣಿಕ ಮಾತು, ನಿಮಯ ಬದ್ಧ ಶಿಸ್ತುಬದ್ದ ಸದ್ಗುಣ ಗಳು ಎಲ್ಲವೂ ಒಂದೆಡೆ ಸೇರಿ ವೂಡೇಪಿರವರನ್ನು ಇಂದು ಈ ಎತ್ತರ ಮಟ್ಟಕ್ಕೆ ಕೊಂಡೊಯ್ದಿದೆ. ಅದಕ್ಕೆ ನನ್ನಂತಹ ಒಬ್ಬ ಬರಹಗಾರನಾಗಿ ಹೇಳೋದೋ ವೂಡೇಪಿರವರಿಗೆ ವೂಡೇಪಿರವರೇ ಸಾಟಿ, ನಾನು ಸೂಕ್ಷ್ಮವಾಗಿ ಗಮನಿಸಿದಂತೆ, ಯಾರೇ ಆಗಲಿ ವೂಡೇ ಪಿ. ಕೃಷ್ಣರವರನ್ನು ಭೇಟಿಯಾಗಿ

ಅವರೊಂದಿಗೆ ಕುಳಿತು ಒಂದ್ಹತ್ತು ನಿಮಿಷಗಳು ಅವರೊಂದಿಗೆ ಮಾತನಾಡಿದರೆ ಆ ಸ್ನೇಹ ಅಲ್ಲಿಗೆ ಮುಗಿಯುವುದಿಲ್ಲ, ಬದಲಾಗಿ ಬಹಳ ಗಟ್ಟಿಯಾಗುತ್ತಾ ಹೋಗುತ್ತದೆ. ಹೀಗಾಗಿಯೇ, ಇಂದು ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವೂಡೇಪಿರವರನ್ನು ಅಪ್ಪುವ ಪ್ರೀತಿಸುವ ಅಭಿಮಾನಿಗಳ ದಂಡೇ ಇದೆ. ಅಂತಹ ದಂಡುಗಳಲ್ಲಿ ನಾನು ಒಬ್ಬ ಎಂದು ಹೇಳಿಕೊಳ್ಳಲು ಬಹಳ ಹೆಮ್ಮೆಯಾಗುತ್ತದೆ. ಹಾಗೆಯೇ ನಾನೇನು ವೂಡೇಪಿಯವರನ್ನು ಅನೇಕ ವರ್ಷಗಳಿಂದ ನೋಡಿದವನಲ್ಲ. ಅವರೊಂದಿಗೆ ಹತ್ತಿರವಾಗಿ ಇದ್ದವನಲ್ಲ. ಯಾವುದೋ ಒಂದು ಅನಿರೀಕ್ಷಿತ ಸಂದರ್ಭದಲ್ಲಿ ಅವರನ್ನು ಶೇಷಾದ್ರಿಪುರಂ ಕಾಲೇಜಿಗೆ ಹೋಗಿ ಅವರ ಆಪ್ತ ಸಹಾಯಕರ ಹತ್ತಿರ ನನ್ನ ಪರಿಚಯವನ್ನು ನನ್ನ ಹೆಸರು, ನಾನು ಇಂತಹವನು ಸಂಕ್ಷಿಪ್ತವಾಗಿ ಪರಿಚಯವನ್ನು ಹೇಳಿದಾಗ ಆಪ್ತ ಸಹಾಯಕರು ಒಂದೈದು ನಿಮಿಷದಲ್ಲೇ ಬಂದು ನನ್ನನ್ನು ವೂಡೇಪಿ ಕೃಷ್ಣರವರ ಕೊಠಡಿಗೆ ಕರೆದುಕೊಂಡು ಹೋದರು. ಸರಿ ನಾನು ಅವರ ಕೊಠಡಿಗೆ ಹೋದೊಡನೆ ಎಷ್ಟು ಗೌರವದಿಂದ ನನ್ನನ್ನು ಬರಮಾಡಿಕೊಂಡರು.

ಅದನ್ನು ನಾನು ನನ್ನ ಪದಗಳಲ್ಲಿ ಬರೆಯಲು ವರ್ಣಿಸಲು ಸಾಧ್ಯವಿಲ್ಲ, ಒಳಗೆ ಹೋದೊಡನೆ ಮೊದಲು ನನ್ನ ಟೇಬಲ್ಲಿಗೆ ಒಂದು ಲೋಟ ನೀರು, ಒಂದು ಲೋಟ ಕಾಫಿ ತಂದಿಟ್ಟರು. ನನಗೆ ಆಶ್ಚರ್ಯ ಇದೇನಪ್ಪ, ನಂಟರಿಷ್ಟರು ಬಂದು ಬಳಗದವರು ಒಡಹುಟ್ಟಿದವರು ಅಥವಾ ಉನ್ನತ ವ್ಯಕ್ತಿಗಳ ಮನೆಗಳಿಗೆ ಹೋದರೆ ಒಳಗೆ ಬನ್ನಿ ಕುಳಿತುಕೊಳ್ಳಿ ಎನ್ನುವುದಿಲ್ಲ, ನೀರು ಮತ್ತು ಕಾಫಿ, ಟೀ ಅನ್ನು ಮೊದಲೇ ಕೊಡುವುದಿಲ್ಲ ಆದರೆ, ಒಂದು ಪ್ರತಿಷ್ಠಿತ ವಿದ್ಯಾಸಂಸ್ಥೆಯ ಮುಖ್ಯಸ್ಥರು ನನ್ನಂತಹ ಒಬ್ಬ ಸಾಮಾನ್ಯ ವ್ಯಕ್ತಿಗೆ ಇಷ್ಟೊಂದು ಪ್ರೀತಿಯನ್ನು ತೋರಿಸುತ್ತಿದ್ದಾರೆ ಎಂದು ಒಂದು ರೀತಿಯಲ್ಲಿ ನನಗೆ ತಳಮಳವಾಗುವುದರ ಜೊತೆಗೆ ನನ್ನನ್ನು ನಾನು ನಂಬಲಿಲ್ಲ. ಏಕೆಂದರೆ ನನ್ನ ಮತ್ತು ಅವರ ಭೇಟಿ ಅದೇ ಮೊದಲಾಗಿತ್ತು. ಆದರೆ ಅಲ್ಲಿ ನನಗೆ ಕಂಡದ್ದು ಅದು ಮೊದಲ ಭೇಟಿ ಅನ್ನಿಸಲಿಲ್ಲ. ಎಷ್ಟೋ ವರ್ಷಗಳಿಂದ ಅವರೊಂದಿಗೆ ಅವರ ಒಡನಾಟವನ್ನು ಹೊಂದಿದ್ದೇನೆ ಎಂಬ ಭಾವನೆ ವ್ಯಕ್ತ ವಾಗಿದ್ದು, ಇಂತಹ ಅವಕಾಶವನ್ನು ನಾನು ಎಂದು ಕಳೆದುಕೊಳ್ಳಬಾರದು ಎಂದು, ಒಂದು ಪಕ್ಷಿ ತನ್ನ ಮರಿಯನ್ನು ಹೇಗೆ ಬಹಳ ಜೋಪಾನವಾಗಿ ತನ್ನ ಮಡಿಲಲ್ಲಿ ಇಟ್ಟುಕೊಂಡು ಕಾಪಾಡುತ್ತದೋ ಹಾಗೆ ನಾನು ಸಹ ವೂಡೇಪಿ ಕೃಷ್ಣರವರ ಸಾಂಗತ್ಯ, ಸಂಬಂಧವನ್ನು ಬಹಳ ಜೋಪಾನವಾಗಿ ಕಾಪಾಡಿಕೊಳ್ಳಬೇಕೆಂಬುದು ನನ್ನ ಇಚ್ಛೆ. ಅದಕ್ಕಾಗಿಯೇ ನಾನು ಕಳೆದ ಸಂಚಿಕೆಯಲ್ಲಿ ಬರೆದಿರುವಂತೆ ಪತ್ರಿಕಾರಂಗ ಮತ್ತು ಬರವಣಿಗೆಯ ಲೋಕದಲ್ಲಿ ಅಂಬೆಗಾಲು ಇಡುತ್ತಿರುವ ನನಗೆ ಇನ್ನಷ್ಟು ಬರೆಯಲು

ದೀನದಲಿತರಿಗೆ ಸೇವೆ ಮಾಡಲು ವೂಡೇ ಪಿ. ಕೃಷ್ಣರವರ ಮಾರ್ಗದರ್ಶನ, ಅವರ ಸಲಹೆ ಸೂಚನೆ ನನಗೆ ಸದಾಬೇಕು, ಬೇಕೇ ಬೇಕು. ನನ್ನಂತಹವನು ಅವರ ಸಾಂಗತ್ಯವನ್ನು ಬಯಸುವುದು ತುಂಬಾ ಕಷ್ಟದ ಕೆಲಸ ಅಂದುಕೊಂಡಿದ್ದು ಇದೆ. ಅದರೆ ಇದಕ್ಕೆ ವಿರುದ್ಧವಾಗಿ ವೂಡೇಪಿರವರು ಒಂದು ಹೆಜ್ಜೆ ಮುಂದೆ ಹೋಗಿ ಯಾವೊಬ್ಬ ಸ್ನೆಹಿತರನ್ನು ಅಷ್ಟು ಸುಲಭವಾಗಿ ಇವರು ಕಳೆದುಕೊಳ್ಳುವುದಿಲ್ಲ. ತಾವು ಉನ್ನತ ಸ್ಥಾನದಲ್ಲಿದ್ದರೂ ಪ್ರತಿಯೊಬ್ಬರೊಂದಿಗೂ ಸಹಜವಾಗಿಯೇ ನಡೆದುಕೊಳ್ಳುತ್ತಾರೆ. ಇವರ ಗುಣಕ್ಕೆ ನನ್ನಂತಹವನು ವೂಡೇ ಪಿ.ರವರ ಸ್ನೇಹವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಡಲು ಇಷ್ಟ ಪಡುವುದಿಲ್ಲ. ಇದು ಹೀಗೆ ಮುಂದುವರೆಯಲಿ ಎಂದು ನನ್ನ ಅಂತರಾಳ ಮತ್ತು ಮನದಾಳದಿಂದ ನನಗೆ ನಾನು ಹೇಳಿಕೊಳ್ಳುತ್ತೇನೆ.

ಇನ್ನೂ ಅಂದಿನ ದಿನ ನಡೆದ ಘಟನೆ. ನನ್ನ ಟೇಬಲ್ಲಿಗೆ ಒಂದು ಲೋಟ ನೀರು ಹಾಗೂ ಕಾಫೀ ತಂದಿಟ್ಟರು. ಕಾಫೀ ಕುಡಿರಿ ಗಂಗಾಧರ್, ನಮ್ಮಲ್ಲಿ ಕಾಫೀ ಚೆನ್ನಾಗಿರುತ್ತದೆ ಎಂದು ಹೇಳಿದಾಗ ಇದೇನಪ್ಪ ಇಂತಹ ಒಬ್ಬ ದೊಡ್ಡ ವ್ಯಕ್ತಿ ನನಗೆ ಕಾಫೀ ಕುಡೀರಿ ಗಂಗಾಧರ್ ಎಂದು ಎಷ್ಟೊಂದು ಪ್ರೀತಿಯಿಂದ ಹೇಳುತ್ತಾರೆ. ಅಬ್ಬಾ ನನಗೊಂದು ಹೊಸ ಅನುಭವ ಏಕೆಂದರೆ ಉನ್ನತ ಶ್ರೇಣಿಯ ಸರ್ಕಾರದ ಅಧಿಕಾರಿಗಳ ಮನೆಗೂ, ದೊಡ್ಡ ದೊಡ್ಡ ರಾಜಕಾರಣಿಗಳ ಮನೆಗೆ ಅಥವಾ ಹತ್ತಿರದ ನೆಂಟರಿಷ್ಟರ ಮನೆಗೆ ಯಾವುದೋ ಕೆಲಸಕಾರ್ಯಗಳಿಗೆ ಹೋದರೆ ಒಂದು ಗಂಟೆ ನಾವು ಅಲ್ಲಿ ಖಾಲಿ ಇರುವ ಜಾಗದಲ್ಲಿ ಕುಳಿತು, ನಮಗೆ ಅದೃಷ್ಟವಿದ್ದರೆ ಆ ಮನೆಯ ಅಡುಗೆ ಕೆಲಸದವನೋ ಅಥವಾ ಮನೆಯ ಕೆಲಸದವರೋ ಬಂದು ಒಂದು ಲೋಟ ಕಾಫಿಯನ್ನು ಒಂದು ತಟ್ಟೆಯಲ್ಲಿಟ್ಟುಕೊಂಡು ಬೇಕಾಬಿಟ್ಟಿ ಕೊಟ್ಟು ಹೋಗುವ ಅನುಭವ ನನ್ನ ಜೀವನದಲ್ಲಿ ಸಾಕಷ್ಟು ಸಂದರ್ಭಗಳಲ್ಲಿ ಆಗಿರುವುದುಂಟು. ಆದರೆ ಕೃಷ್ಣರವರ ಕಛೇರಿಯಲ್ಲಿನ ಆ ಪ್ರೀತಿಯ ಆಮಂತ್ರಣ ಅಲ್ಲಿ ಅಂದು ಸವಿದ ಕಾಫೀ ವೂಡೇಪಿ ಕೃಷ್ಣರವರು ಹೇಳಿದಂತೆ ಕಾಫೀ ಚೆನ್ನಾಗಿದೆ ಕುಡಿಯಿರಿ ಗಂಗಾಧರ್ ಎನ್ನುವ ಮಾತು ಸರ್ವಕಾಲಕ್ಕೂ ಆಪ್ಯಾಯಮಾನವಾಗಿ ಕಾಣುತ್ತದೆ. ನನಗಂತೂ ಈ ಸಂದರ್ಭವನ್ನು ವರ್ಣಿಸಲು ಸಾಧ್ಯವಿಲ್ಲ, ಈ ಘಟನೆ ನನ್ನ ಜೀವನದಲ್ಲಿ ಮತ್ತು ನನ್ನ ನಿರಂತರ ಬರವಣಿಗೆಗೆ ಸ್ಫೂರ್ತಿಯಾಗಲಿದೆ ಅಂದುಕೊಂಡಿದ್ದೇನೆ.

ದಾನ ದಾನಗಳಲ್ಲಿ ಶ್ರೇಷ್ಠವಾದ ದಾನ ವಿದ್ಯಾದಾನ ಅದರ ಜೊತೆಗೆ ಒಬ್ಬ ವಿದ್ಯಾರ್ಥಿ ಶಿಕ್ಷಣವನ್ನು ಪಡೆಯಬೇಕಾದರೆ ಹಣದ ನೆರವು ಸಹ ಅತಿಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಹಣವಿಲ್ಲದೆ ಯಾರು ಶಿಕ್ಷಣವನ್ನು ಪಡೆಯಲು ಸಾಧ್ಯವಿಲ್ಲ.

ಆದರೆ ನನ್ನ ಜೀವನದಲ್ಲಿ ನಡೆದ ಒಂದು ಘಟನೆ ಅದು ವೂಡೇಪಿರವರ ಕಛೇರಿಯಲ್ಲಿ ನಡೆದಿದ್ದು ಬಹುಶಃ ಇದು ಅನೇಕರಿಗೆ ಸಾಮಾನ್ಯವಾಗಿರಬಹುದು. ಆದರೆ ನನಗೆ ಮಾತ್ರ ಅದು ಬಹಳ ಎತ್ತರ, ಮೌಲ್ಯ, ಅದಕ್ಕೆ ಬೆಲೆ ಕಟ್ಟಲು ಸಾದ್ಯವಿಲ್ಲ, ಅಂತಹದು ಅದೇ ನನ್ನ ಟೇಬಲ್ ಮೇಲೆ ಕಾಫಿ, ಒಂದು ಲೋಟ ನೀರು ಕುಡಿದ ನಂತರ ವೂಡೇಪಿ ಕೃಷ್ಣರವರ ಹತ್ತಿರ ಒಂದು ಮನವಿಯನ್ನು ಮಾಡುತ್ತಾ "ಸಾರ್ ನಿಮ್ಮ ಸಂಸ್ಥೆಯಲ್ಲಿ ಒಂದು ಹೆಣ್ಣು ಮಗು ವ್ಯಾಸಂಗ ಮಾಡುತ್ತಿದೆ. ಅವರು ತುಂಬಾ ಬಡತನದವರು, ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾ ಮಕ್ಕಳನ್ನು ಕಷ್ಟಪಟ್ಟು ಓದಿಸುತ್ತಿದ್ದಾರೆ. ಈ ಬಾರಿ ಶಾಲೆಯ ಫೀಸ್‌ಅನ್ನು ಕಟ್ಟಲು ಸಾಧ್ಯವಾಗುತ್ತಿಲ್ಲ. ತಾವುಗಳು ಅನ್ಯತಾ ಭಾವಿಸದೆ ಆ ಬಡ ವಿದ್ಯಾರ್ಥಿಗೆ ಏನಾದರೂ ಸ್ವಲ್ಪ ಸಹಾಯ ಮಾಡಿ ಎಂದು ಹೇಳಿದೆ, ನನ್ನ ಮಾತಿಗೆ ತಡಮಾಡದೆ ಕ್ಷಣ ಮಾತ್ರದಲ್ಲಿ ಕಾಲೇಜಿನ ಮುಖ್ಯಸ್ಥರನ್ನು ಕರೆಸಿ ಆ ವಿದ್ಯಾರ್ಥಿಯ ಫೀಸ್‌ನಲ್ಲಿ ಇಂತಿಷ್ಟು ಹಣವನ್ನು ತೆಗೆದುಕೊಳ್ಳಬೇಡಿ, ಎಂದು ಹೇಳಿದ್ದು ಒಂದು ನನ್ನ ಜೀವನದಲ್ಲಿ ಅಪರೂಪದ ಘಟನೆ. ಏಕೆಂದರೆ ನಾನು ಅದೇ ಕಷ್ಟದಲ್ಲಿ ಓದಿ ಇಂದು ಈ ರೀತಿ ಇದ್ದೇನೆ. ವೂಡೇಪಿ ಕೃಷ್ಣರವರು ಎಂತಹ ಹೃದಯವಂತಿಕೆ ಅನ್ನುವುದಕ್ಕಿಂತ ಹೃದಯ ಶ್ರೀಮಂತಿಕೆ ಎಂದು ಹೇಳಬಹುದು. ಅಂದು ಆ ವಿದ್ಯಾರ್ಥಿಗೆ ವಾರ್ಷಿಕ ಫೀಸ್‌ನ ವಿಚಾರದಲ್ಲಿ ನೆರವು ನೀಡಿದ್ದಕ್ಕೆ ಇಂದು ಆ ವಿದ್ಯಾರ್ಥಿನಿ ಪದವಿ ಮುಗಿಯುವ ಹಂತಕ್ಕೆ ಬಂದಿದೆ.

ಇಲ್ಲಿ ಏತಕ್ಕೆ ಆ ಹೆಣ್ಣು ಮಕ್ಕಳಿಗೆ ವೂಡೇ ಪಿ. ಅವರು ಶಿಕ್ಷಣವನ್ನು ಮುಂದುವರೆಸಲು ಶಾಲೆಯ ಫೀಸಿನ ಹಣವನ್ನು ಕಮ್ಮಿ ತೆಗೆದುಕೊಳ್ಳುವಂತೆ ಶಿಫಾರಸ್ಸು ಮಾಡಿದರು ಎಂದರೆ ಬಹುಶಃ ಅಂದು ಅವರು ಸಹಾಯ ಮಾಡಿರದಿದ್ದರೆ ಆ ಹೆಣ್ಣು ಮಗುವಿನ ಶಿಕ್ಷಣ ಅಲ್ಲಿಗೆ ನಿಲ್ಲುವ ಅಥವಾ ಮುಕ್ತಾಯವಾಗುವ ಹಂತಕ್ಕೆ ಬಂದು ತಲುಪುತ್ತಿತ್ತೇನೋ. ಆದರೆ ಇಂದು ನಾನು ಆ ವಿದ್ಯಾರ್ಥಿಯ ಪರವಾಗಿ ವೂಡೇಪಿರವರಿಗೆ ಸದಾ ಕೃತಜ್ಞನಾಗಿರುತ್ತೇನೆ.

ಇಂದಿನ ಕಾಲದಲ್ಲಿ ವೂಡೇಪಿ ಕೃಷ್ಣರಂತಹವರು ದೀನ ದಲಿತರ ಬಗ್ಗೆ ಅವರ ಶಿಕ್ಷಣದ ಬಗ್ಗೆ ಅವರಿಗೆ ಇರುವ ಕಾಳಜಿಯನ್ನು ನೋಡಿದಾಗ ಇಂದಲ್ಲ ನಾಳೆ ವಿಶ್ವ ಮಾನವ ಕವಿ ಕುವೆಂಪುರವರ ನಂತರದ ಸಾಲಿನಲ್ಲಿ ವೂಡೇಪಿ ಕೃಷ್ಣರವರು ವಿಶ್ವದಾದ್ಯಂತ ಹೆಸರು ಗಳಿಸಲಿ, ಏಕೆಂದರೆ ತನ್ನ ಜೀವನದಲ್ಲಿ, ಮಹಾತ್ಮ ಗಾಂಧೀಜಿಯವರ ಆದರ್ಶ, ಮೌಲ್ಯ, ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿದ್ದಾರೆ. ಮತ್ತೊಂದು ಕಡೆ ಡಾ. ಬಿ.ಆರ್. ಅಂಬೇಡ್ಕರ್ ಅವರಂತೆ

ದೀನದಲಿತರು, ಹಿಂದುಳಿದವರು, ಶೋಷಿಸಿತರು ಮೊದಲು ಶಿಕ್ಷಣವನ್ನು ಪಡೆಯಬೇಕು, ಶಿಕ್ಷಣವನ್ನು ಪಡೆದಾಗ ತಮ್ಮ ಕುಟುಂಬ, ಸಂಸಾರ, ರಾಜ, ದೇಶ ನಂತರ ವಿಶ್ವವು ಅಭಿವೃದ್ಧಿಯಾಗುತ್ತದೆ ಎಂಬ ಸಂದೇಶದಂತೆ ವೂಡೇ ಪಿ. ಕೃಷ್ಣರವರು ಸುದೀರ್ಘ ವರ್ಷಗಳಿಂದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾಗಿ ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡುತ್ತಾ ಅದರಲ್ಲೂ ಕಡುಬಡವರಿಗೆ, ದೀನ ದಲಿತರಿಗೆ ಹಿಂದುಳಿದವರಿಗೆ ಮತ್ತು ಶೋಷಿತ ಸಮುದಾಯದವರಿಗೆ ಯಾವ ಯಾವ ರೀತಿ ಸಹಾಯ ಮಾಡಬೇಕೋ ಆ ರೀತಿಯ ಸಹಾಯವನ್ನು ಎಲೆಮರೆಯ ಕಾಯಿಯಂತೆ ಯಾರಿಗೂ ಕಾಣದಂತೆ ತನ್ನ ಪಾಡಿಗೆ ತಾನಾಯಿತು ತನ್ನ ಕೆಲಸವಾಯಿತು ಎಂಬಂತೆ ಕೆಲಸ ಮಾಡುತ್ತಿರುವ ಮತ್ತು ತನ್ನಲ್ಲಿ ಅಗಾಧವಾದ ಇಚ್ಛಾಶಕ್ತಿ, ಜ್ಞಾನಶಕ್ತಿ, ಮತ್ತು ಕ್ರಿಯಾಶಕ್ತಿಗಳನ್ನು ಅಳವಡಿಸಿಕೊಂಡಿರುವ ಏಕೈಕ ಒಡೆಯ ನಮ್ಮ ವೂಡೇಪಿ ಕೃಷ್ಣ ಸಾರ್.



ಆಡು ಮುಟ್ಟದ ಸೊಪ್ಪಿಲ್ಲ

– 1 –

ನಾನು ಡಾ. ವೂಡೇ ಪಿ. ಕೃಷ್ಣರವರ ಬಗ್ಗೆ ಬರೆಯುತ್ತಾ ಒಂದು ವಿಚಾರವನ್ನು ಪತ್ರಿಕೆಗಳಲ್ಲಿ ಬರವಣಿಗೆಯ ಮೂಲಕ ತಿಳಿಸಿದ್ದೆ, ವೂಡೇ ಪಿ. ಕೃಷ್ಣರವರು ಹೇಳಿ ಕೇಳಿ ನನಗೆ ಅಂತಹ ಹಳೆಯ, ಅಥವಾ ಹತ್ತಾರು ವರ್ಷಗಳಿಂದ ಪರಿಚಯವಿಲ್ಲದವರು. ನಾನು ಅವರ ಪರಿಚಯಕ್ಕಿಂತ, ಅವರ ಸಾಂಗತ್ಯಕ್ಕಿಂತ, ದೂರದಿಂದ ಇದ್ದು ಆ ಹತ್ತು ಹಲವು ರೀತಿಯ ಮಾಹಿತಿಗಳನ್ನು, ಅವರ ಕುಟುಂಬದ ಹಿನ್ನೆಲೆಯನ್ನು, ಅವರ ಶಿಕ್ಷಣ, ನಡವಳಿಕೆ, ಮಾತು, ನಡೆದು ಬಂದ ದಾರಿ, ಅವರಿಗಿರುವ ಸಮಾಜ ಪರಿವರ್ತನೆಯ ಚಿಂತನೆಗಳನ್ನು ತಿಳಿದುಕೊಂಡಿದ್ದೇನೆ. ಕೃಷ್ಣ ಅವರು ದೀನ ದಲಿತರ ಬಗ್ಗೆ ಅಪಾರವಾದ

ಕಾಳಜಿ ಹೊಂದಿರುವ ಮಧ್ಯಮ ವಯಸ್ಸಿನಲ್ಲಿಯೇ ಸಮಾಜದ, ಸಮಾಜದ ಮುಖ್ಯವಾಹಿನಿಯಲ್ಲಿ ಬಹಳ ಬಹಳ ಎತ್ತರವಾಗಿ ಎದ್ದು ಕಾಣುತ್ತಾರೆ. ತನ್ನ ಜೀವನವನ್ನು ಸರ್ವ ಜನಾಂಗದ ಜಾಗೃತಿಗಾಗಿಯೇ ಅರ್ಪಿಸಿದ ವ್ಯಕ್ತಿ ನಾಡೋಜ ಡಾ. ವೂಡೇ ಪಿ. ಕೃಷ್ಣ.

ನಾಡೋಜ ಡಾ. ವೂಡೇ ಪಿ. ಕೃಷ್ಣರವರ ಕುಟುಂಬದ ಹಿನ್ನೆಲೆಯ ಬಗ್ಗೆ ಒಂದಷ್ಟು ಮಾಹಿತಿ ಇಲ್ಲಿದೆ:

ಆಗ ರಾಜಧಾನಿ ಬೆಂಗಳೂರಿನಲ್ಲಿ ಅನೇಕ ಕುಟುಂಬಗಳು ಇದ್ದವು. ಬೆಂಗಳೂರಿನ ಪ್ರತಿಷ್ಠಿತ ವೂಡೇ ಎಂಬ ಕುಟುಂಬದಲ್ಲಿ ಗೌರವಾನ್ವಿತ ದಿ. ಡಬ್ಲ್ಯು. ಹೆಚ್. ಪುಟ್ಟಯ್ಯ ಹಾಗೂ ದಿ. ದೊಡ್ಡಮ್ಮ ಇವರ ಮಗನಾಗಿ ತಾ. 1ನೆಯ ಫೆಬ್ರವರಿ 1963ರಲ್ಲಿ ಜನಿಸುತ್ತಾರೆ. ಇವರ ತಂದೆ ತಾಯಿ ಬಗ್ಗೆ ತಿಳಿದುಕೊಳ್ಳುವುದಕ್ಕಿಂತ ಮೊದಲು ಇವರ ತಾತ ದಿ. ಡಬ್ಲ್ಯು. ಹೆಚ್. ಹನುಮಂತಪ್ಪ (ಸೀನಿಯರ್), ಇವರು ದೊಡ್ಡ ಉದ್ಯಮಿಗಳು, ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಒಬ್ಬ ನಿಷ್ಠಾವಂತ, ಪ್ರಾಮಾಣಿಕ ಸಮಾಜ ಸೇವಕರು, ಹಾಗೂ ದೀನ ದಲಿತರ ಬಗ್ಗೆ ಅಪಾರವಾದ ಕಾಳಜಿಯುಳ್ಳವರಾಗಿದ್ದರು.

ಆ ಕಾಲದಲ್ಲೇ ತುಂಬು ಕುಟುಂಬದಲ್ಲಿ ಹುಟ್ಟಿದ ವೂಡೇ ಪಿ. ಕೃಷ್ಣರವರು ತನ್ನ ವಿದ್ಯಾರ್ಥಿ ದಿಸೆಯಲ್ಲಿಯೇ ಸ್ಥಿತಪ್ರಜ್ಞ ಮನಸ್ಸಿನ, ನಿರ್ಮಲವಾದ ಮನಸ್ಸಿನ ಒಬ್ಬ ಸೌಮ್ಯ ಸ್ವಭಾವದ ವ್ಯಕ್ತಿಯಾಗಿದ್ದರು. ಯಾವುದಕ್ಕೂ ಕೊರತೆಯಿಲ್ಲದ ಜೀವನ, ಅದರೆ ಸಮಾಜದಲ್ಲಿನ ಆಗುಹೋಗುಗಳ ಬಗ್ಗೆ, ದೀನ ದಲಿತರ, ಶೋಷಿತರ, ಹಿಂದುಳಿದವರ ಬಡತನವನ್ನು ಹತ್ತಿರದಿಂದ ನಿರಂತರವಾಗಿ ನೋಡುತ್ತಾ, ತಮ್ಮನ್ನು ತಾನು ಆ ಸಾಲಿಗೆ ಹೋಲಿಸಿಕೊಳ್ಳುತ್ತಾ ದಿನೇದಿನೇ ಪ್ರತಿ ಹಂತದಲ್ಲೂ ಹಲಸಿನ ಕಾಯಿ ಹೇಗೆ ಬಿಸಿಲಿಗೆ ಮಾಗುತ್ತಾ, ಮಾಗುತ್ತಾ ನಂತರ ರುಚಿಯಾದ ಹಲಸಿನ ತೊಳೆಯಾಗುತ್ತದೋ ಆ ರೀತಿ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಪರಿಪೂರ್ಣವಾದ ವ್ಯಕ್ತಿಯಾಗಿ ಇಂದು ಸರ್ವಜನಾಂಗದ ಪ್ರೀತಿಯ ವ್ಯಕ್ತಿಯಾಗಿ, ಅಬಲರಿಗೆ ಸಬಲರಾಗಿ ಸದಾ ಸಮಾಜದ ಕೈಂಕರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿರುವ ಸಮಾಜದ ಚಿಂತಕರಾಗಿ ನಮ್ಮ ಮುಂದೆ ಬಹಳ ಬಹಳ ಎತ್ತರವಾಗಿ ನಿಲ್ಲುತ್ತಾರೆ. ಇಂತಹ ವ್ಯಕ್ತಿ ಬಾಲ್ಯದಲ್ಲಿ ಶಿಕ್ಷಣವನ್ನು ಹೇಗೆ, ಯಾವ ರೀತಿ ಪಡೆದರು ಎಂಬುದರ ಬಗ್ಗೆ ಸ್ವಲ್ಪ ಹಿಂದಕ್ಕೆ ಹೋಗಿ ನೋಡಿದರೆ ನಮಗೆ ಆಶ್ಚರ್ಯವಾಗಬಹುದು.

ಬೆಂಗಳೂರಿನ ಪ್ರತಿಷ್ಠಿತ ಪೂರ್ಣಪ್ರಜ್ಞ ಶಾಲೆಯಲ್ಲಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ, ನಂತರ ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸ

ಮಾಡಿದರು. ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಪದವಿಯ ನಂತರ ಸ್ನಾತಕೋತ್ತರ ಪದವಿ ಎಂ. ಎಸ್, ಆನಂತರ ಎಲ್.ಎಲ್.ಬಿ., ಪದವಿ, ತುಂಬಾ ಕಷ್ಟದ ಪದವಿ ಎಂ.ಎಲ್. ಪದವಿಯನ್ನೂ ಪಡೆಯುತ್ತಾರೆ. ಇಷ್ಟಕ್ಕೆ ಸುಮ್ಮನಾಗದ ಕೃಷ್ಣರವರು ಓದಬೇಕು, ಏನಾದರೂ ಕಲಿಯಬೇಕು ಎಂಬ ಹುಮ್ಮನಸ್ಸಿನಿಂದ ಸಮಾಜಶಾಸ್ತ್ರದಲ್ಲಿ ಎಂ. ಎ ಪದವಿಯನ್ನು ಪಡೆಯುತ್ತಾರೆ. ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ, ನಂತರ ಪಿಎಚ್.ಡಿ. ಪದವಿಯನ್ನೂ ಪಡೆಯುತ್ತಾರೆ. ಇಷ್ಟೆಲ್ಲಾ ಓದಿ ಪದವಿಗಳನ್ನು ಪಡೆದಿದ್ದರು. ಇವರ ಕುಟುಂಬದ ಹಿನ್ನೆಲೆಯನ್ನು ಗಮನಿಸಿದಾಗ ಕೃಷ್ಣರವರು ಯಾವುದಾದರೂ ಉನ್ನತ ಹುದ್ದೆಗೆ ಹೋಗಬಹುದಿತ್ತು. ಆದರೆ ಇವರು ತಮ್ಮ ಪದವಿಗಳ ಜೊತೆಗೆ ಯಾವಾಗಲೂ ಓದುತ್ತಿರಬೇಕು, ಹಾಗಾದರೆ ಅದಕ್ಕೆ ಸೂಕ್ತವಾದ ಹೊಂದಾಣಿಕೆ ಎಂದರೆ ಮಕ್ಕಳಿಗೆ ಪಾಠಮಾಡುವುದು, ಇದರ ಅರ್ಥ ಕೆಲವು ವರ್ಷಗಳ ಕಾಲ ಬಿ.ಎಂ.ಎಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನವನ್ನು ಆರಂಭಿಸುತ್ತಾರೆ. ಜೊತೆಗೆ ಭಾರತ ಸರ್ಕಾರದ ಅನುಮೋದಿತ ವ್ಯಾಲ್ಯುಯರ್ ಹಾಗೂ ಟೆಕ್ನಿಕಲ್ ಆರ್ಚಿಟ್ರೇಟ್ ಆಗಿ ಮೂವತ್ತು ವರ್ಷಕ್ಕಿಂತ ಹೆಚ್ಚಿನ ಸೇವೆಯನ್ನು ಸಲ್ಲಿಸಿರುತ್ತಾರೆ. ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ ರಾಜ್ಯಸಚಿವ ದರ್ಜೆಯಲ್ಲಿ 2009 ರಿಂದ 2011ರ ವರೆಗೆ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರಮಟ್ಟದಲ್ಲಿ ಭಾರತೀಯ ಇಂಜಿನಿಯರಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಯಲ್ಲಿ ವಿವಿಧ ರೀತಿಯ ಸೇವೆಯನ್ನು ಸಲ್ಲಿಸಿರುತ್ತಾರೆ. ಮತ್ತು ಇಂಜಿನಿಯರಿಂಗ್ ವಿಷಯಗಳ ಸಂಬಂಧಪಟ್ಟಂತೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಅನೇಕ ವಿಚಾರಗೋಷ್ಠಿ ಸಮ್ಮೇಳನ, ಕಾರ್ಯಾಗಾರಗಳ ಸಂಘಟನೆ, ಪ್ರಬಂಧಗಳ ಮಂಡನೆ ಹಾಗೂ, 2012 ರಲ್ಲಿ ನದಿಯಂತೆ ನೆನಪು (ಆತ್ಮಕಥನ), ಬೆಳಕ್ಕಿಸಾಲು, ವ್ಯಕ್ತಿ ಚಿತ್ರಗಳು ಕೃತಿಗಳನ್ನು ರಚಿಸಿರುತ್ತಾರೆ.

ಇಷ್ಟೆಲ್ಲಾ ಸಾಧನೆಯ ಜೊತೆಗೆ ಹತ್ತು ಹಲವು ರೀತಿಯ ಗೌರವವುಳ್ಳ ಸ್ಥಾನಮಾನಗಳನ್ನು ಅಲಂಕರಿಸಿರುತ್ತಾರೆ. ಅವುಗಳಲ್ಲಿ ಮುಖ್ಯವಾದವುಗಳು: ಸದಸ್ಯರು, ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರ, ಗೌರವ ಪ್ರಧಾನ ಕಾರ್ಯದರ್ಶಿಗಳು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ರಾಷ್ಟ್ರೀಯ ಕಾರ್ಯಕಾರಣಿ ಸದಸ್ಯರು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ನವದೆಹಲಿ, ಅಧ್ಯಕ್ಷರು ಕರ್ನಾಟಕ ರಾಜ್ಯ ಕೇಂದ್ರ ಭಾರತೀಯ ಇಂಜಿನಿಯರಗಳ ಸಂಸ್ಥೆ, ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ, ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕೋಶಾಧ್ಯಕ್ಷರು, ಭಾರತ ಸೇವಾದಳ ಕೇಂದ್ರ ಸಮಿತಿ, ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರು, ಭಾರತೀಯ ಕ್ಷಯ ರೋಗ ಸಂಸ್ಥೆ, ನವದೆಹಲಿ, ಆಡಳಿತ

ಮಂಡಳಿ ಸದಸ್ಯರು, ಇಂಜಿನಿಯರಿಂಗ್ ಸ್ಟಾಫ್ ಕಾಲೇಜು ಆಫ್ ಇಂಡಿಯಾ, ಹೈದರಾಬಾದ್, ಉಪಾಧ್ಯಕ್ಷರು, ವ್ಯಾಲ್ಯುಯರ್ ಸಂಸ್ಥೆ ಬೆಂಗಳೂರು, ಅಧ್ಯಕ್ಷರು, ಕರ್ನಾಟಕ ರಾಜ್ಯ ಕೇಂದ್ರ, ಭಾರತೀಯ ಅರ್ಕಿಟೇಕ್ಚರ್‌ಗಳ ಸಂಸ್ಥೆ, ಅಧ್ಯಕ್ಷರು, ಯೂತ್ ಹಾಸ್ಟೆಲ್, ಅಧ್ಯಕ್ಷರು, ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘ ಅಧ್ಯಕ್ಷರು, ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘ, ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಉತ್ಪಾದನಾ ಇಂಜಿನಿಯರಿಂಗ್‌ಗಳ ಸಂಸ್ಥೆ, ವ್ಯವಸ್ಥಾಪಕ ಧರ್ಮದರ್ಶಿಗಳು, ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ಟ್ರಸ್ಟ್, ವ್ಯವಸ್ಥಾಪಕ ನಿರ್ದೇಶಕರು, ನೆಹರುನಗರ ಸಹಕಾರಿ ಬ್ಯಾಂಕ್ ನಿಯಮಿತ, ಅಧ್ಯಕ್ಷರು, ಸದಾಶಿವನಗರ ವಿದ್ಯಾಸಂಸ್ಥೆಗಳು– ಹೀಗೆ ವೂಡೇ ಪಿ. ಅವರು ಯಾವ ಯಾವ ಸಂಸ್ಥೆಗಳಲ್ಲಿ ದುಡಿಯುತ್ತಿದ್ದಾರೆ ಎಂದು ಈ ಒಂದೇ ಅಂಕಣದಲ್ಲಿ ಹೇಳಲು ತುಂಬಾ ಕಷ್ಟವಾಗುತ್ತದೆ, ಏಕೆಂದರೆ ಹಲವಾರು ಸಂಸ್ಥೆಗಳಲ್ಲಿ ಈ ಮಹನೀಯರು ದುಡಿಯುತ್ತಿದ್ದಾರೆ.

– 2 –

ಹೇಳಿ ಕೇಳಿ ಕೃಷ್ಣರವರು ಹುಟ್ಟಿ ಬೆಳೆದಿದ್ದು ಅವಿಭಕ್ತ ಕುಟುಂಬದಲ್ಲಿ, ಅಜ್ಜಿ, ತಾತ, ಚಿಕ್ಕಪ್ಪ, ದೊಡಪ್ಪ, ಸಹೋದರರು, ಸಹೋದರಿಯರು, ಮಕ್ಕಳು, ಮೊಮ್ಮಕ್ಕಳು ಹೀಗೆ ಅನೇಕರು ಇದ್ದ ಒಂದು ಉನ್ನತ ಸಂಸ್ಕಾರವುಳ್ಳಂತಹ ಕುಟುಂಬದಲ್ಲಿ ಕೃಷ್ಣರವರು ಇದ್ದು ಕುಟುಂಬದ ಪ್ರತಿಯೊಬ್ಬರ ಮಾರ್ಗದರ್ಶನ, ಆದರ್ಶಗಳನ್ನು ಸಂಸ್ಕಾರಗಳನ್ನು ಹಂತ ಹಂತವಾಗಿ ಕಲಿತು ಇಂದು ಸರ್ವಜನರ ಪಾಲಿಗೆ ಒಬ್ಬ ಉತ್ತಮರಲ್ಲಿ ಬಹಳ ಎತ್ತರದ ವ್ಯಕ್ತಿಯಾಗಿರುವುದಕ್ಕೆ ಕೃಷ್ಣರವರ ತಾಯಿಯ ಹಾರೈಕೆ, ವಾತ್ಸಲ್ಯ, ಪ್ರೀತಿಗಳಿದ್ದವು. ಮೊದಲೆ ಕೃಷ್ಣರವರ ಕುಟುಂಬವು ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಿಂದ ಬಂದಿದ್ದು ಶ್ರೀಯುತರ ರಕ್ತದಲ್ಲಿ ರಾಷ್ಟ್ರಭಕ್ತಿ, ದೇಶಭಕ್ತಿ, ಸಾಮಾಜಿಕ ಬದ್ಧತೆ, ಪರೋಪಕಾರ ಮುಂತಾದ ಗುಣಗಳು ಕೃಷ್ಣರವರ ನರನಾಡಿನಲ್ಲಿಯೂ ಸದಾ ಗಟ್ಟಿಯಾಗಿ ಮೈದಾಳಿವೆ. ಕೃಷ್ಣರವರ ಜೀವನದಲ್ಲಿ ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಗಾಂಧೀಜಿ, ಅಂಬೇಡ್ಕರ್ ಹೀಗೆ ಹತ್ತು ಹಲವಾರು ಮಹಿನೀಯರ ಆದರ್ಶಗಳನ್ನು ಪಾಲಿಸಿಕೊಂಡು ಬರುತ್ತಿರುವುದಕ್ಕೆ ಸಾಕ್ಷಿ. ಪ್ರತಿಯೊಬ್ಬರ ಕಷ್ಟಸುಖಗಳಲ್ಲಿ ಸ್ಪಂದಿಸುವ ಸದಾ ತನ್ನ ಬದುಕು, ಜೀವನವನ್ನು ಪಾರದರ್ಶಕವಾಗಿ, ಯಾವುದೇ ರೀತಿಯ ಕಪ್ಪುಚುಕ್ಕೆ ಇಲ್ಲದೆ ನಡೆಸಿಕೊಂಡು ಮುನ್ನಡೆಯುತ್ತಿರುವ ವೂಡೇ ಪಿ. ಕೃಷ್ಣರವರು, ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿ.

ವೂಡೇ ಪಿ. ಕೃಷ್ಣರವರು ಮೈಸೂರಿನ ಪ್ರತಿಷ್ಠಿತ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಯಾಗಿ ತಮ್ಮ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಮುಗಿಸುತ್ತಾರೆ. ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿಚಾರವಾಗಿ ಒಂದೊಂದು ಮಾತು ಹೇಳಬೇಕೆಂದರೆ, ಈ ವಿದ್ಯಾಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಿ ಬಂದವರಲ್ಲಿ ಶೇಕಡಾ ನೂರರಷ್ಟು ವಿದ್ಯಾರ್ಥಿಗಳು ಅಲ್ಲಿಂದ ಬರುವಾಗಲೇ ಸಂಸ್ಕೃತರಾಗಿ, ಒಳ್ಳೆಯ ವಿಚಾರವಂತರಾಗಿ, ಬುದ್ಧಿವಂತರಾಗಿ ಇದರ ಜೊತೆಗೆ ಪ್ರೌಢಶಾಲಾ ವಿದ್ಯಾಭ್ಯಾಸದ ನಂತರ ವಿವಿಧ ರೀತಿಯ ಉನ್ನತ ಶಿಕ್ಷಣವನ್ನು ಪಡೆದ ಅತ್ಯಂತ ಉನ್ನತ ಸ್ಥಾನವನ್ನು, ಉನ್ನತ ಹುದ್ದೆಯನ್ನು ಅಲಂಕರಿಸಿರುವ ಎಷ್ಟೋ ಉದಾಹರಣೆಗಳಿವೆ, ಇವುಗಳಲ್ಲಿ ಐಎಎಸ್, ಕೆಎಎಸ್, ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳು. ವಿವಿಧ ದೇಶಗಳಲ್ಲಿ ವಿವಿಧ ರೀತಿಯ ಉನ್ನತ ಹುದ್ದೆಯನ್ನು ಹೊಂದಿರುತ್ತಾರೆ. ಈ ಸಾಲಿನಲ್ಲಿ ನಮ್ಮ ವೂಡೇ ಪಿ. ಕೃಷ್ಣರವರು ಸಹ ಉನ್ನತ ಸ್ಥಾನದಲ್ಲಿ, ಮೊದಲ ಸಾಲಿನಲ್ಲಿಯೇ ನಿಲ್ಲುತ್ತಾರೆ.

ಹೀಗಾಗಿ, ಕೃಷ್ಣರವರು ಶ್ರೀ ರಾಮಕೃಷ್ಣ ವಿದ್ಯಾಶಾಲೆಯಿಂದ ಶಿಕ್ಷಣ ಮುಗಿಸಿ ಹೊರಬರುವಾಗಲೇ ಅಗಾಧವಾದ ಜ್ಞಾನವನ್ನು ಜೊತೆಗೆ ಒಳ್ಳೆಯ ಸಂಸ್ಕಾರವನ್ನು, ಶ್ರೀ ರಾಮಕೃಷ್ಣ ಪರಮಹಂಸರ ಹಾಗೂ ಸ್ವಾಮಿ ವಿವೇಕಾನಂದ ಆದರ್ಶಗಳನ್ನು, ತತ್ವಗಳನ್ನು ತಮ್ಮ ಬದುಕಿನಲ್ಲಿ, ಜೀವನದಲ್ಲಿ ಅಳಪಡಿಸಿಕೊಂಡು ಯಾವಾಗಲು ಒಳ್ಳೆಯದನ್ನೇ ಯೋಚಿಸು, ಒಳ್ಳೆಯದನ್ನೇ ಮಾಡು ಎಂಬ ದಾರಿಯಲ್ಲಿ ಸದಾ ನಡೆಯುವ, ನಡೆಯುತ್ತಿರುವ ನಾಡೋಜ ಕೃಷ್ಣರವರು ವಿವೇಕಾನಂದರ ಸಮಗ್ರ ಸಾಹಿತ್ಯ ಮಾಹಿತಿಯನ್ನು ಸಮಗ್ರವಾಗಿ ಓದಿ ಪ್ರಭಾವಿತರಾದವರು ವಿವೇಕಾನಂದರ ಆದರ್ಶವನ್ನು ತಮ್ಮ ಜೀವನದಲ್ಲಿ ನಿರಂತರವಾಗಿ, ಶಾಶ್ವತವಾಗಿ ಅಳವಡಿಸಿಕೊಂಡು ಸೋಜಿಗದ ವ್ಯಕ್ತಿಯಾಗಿ ಕಾಣುತ್ತಾರೆ.

ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿನ ಇವರ ವಿದ್ಯಾಭ್ಯಾಸ ಬದುಕಿಗೆ ಬೆಳಕು ನೀಡಿತು. ನನ್ನ ತಾಯಿಯೇ ನನಗೆ ಮೊದಲ ಗುರು ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವಾಗ ಒಮ್ಮೆ ರೈಲ್ವೆ ನಿಲ್ದಾಣದಲ್ಲಿ ನಡೆದು ಹೋಗುತ್ತಿದ್ದಾಗ ನಡೆದ ಈ ಒಂದು ಅಪರೂಪದ ಘಟನೆ ಇಲ್ಲಿದೆ; "ಒಂದು ದಿನ ಮಧ್ಯಾಹ್ನ ವೃದ್ಧ ದಂಪತಿಗಳು ರೈಲ್ವೆ ಸ್ಟೇಷನ್‌ನಲ್ಲಿ ತಮ್ಮ ಭಾರವಾದ ಲಗೇಜನ್ನು ಸಾಗಿಸಲು ತುಂಬಾ ಕಷ್ಟಪಡುತ್ತಿದ್ದರು, ಯಾರು ಅವರ ಕಡೆ ಅಷ್ಟಾಗಿ ಗಮನಕೊಡಲಿಲ್ಲ. ಆದರೆ, ಪಕ್ಕದಲ್ಲೆ ಹೋಗುತ್ತಿದ್ದ ಕೃಷ್ಣರವರು ತಕ್ಷಣವೇ ಆ ವೃದ್ಧ ದಂಪತಿಗಳ

ಕಷ್ಟವನ್ನು ನೋಡಿ ಅವರ ಹತ್ತಿರ ಹೋಗಿ ಅವರ ಬಳಿ ಇದ್ದ ಭಾರವಾದ ಎಲ್ಲಾ ಲಗೇಜುಗಳನ್ನು (ವಸ್ತುಗಳನ್ನು) ತನ್ನ ಎರಡು ಕೈಗಳಿಂದ ಹಿಡಿದುಕೊಂಡು ಆ ವೃದ್ಧ ದಂಪತಿಗಳನ್ನು ಕರೆದುಕೊಂಡು ಹೋಗಿ ಮೊದಲು ಅವರನ್ನು ಬೋಗಿಗೆ ಹತ್ತಿಸಿ ನಂತರ ಅವರ ಭಾರವಾದ ಲಗೇಜನ್ನು ಅವರು ಕೂತಿದ್ದ ಸ್ಥಳಕ್ಕೆ ಕೊಂಡೊಯ್ದು ಜೋಪಾನವಾಗಿಟ್ಟು ಬರಲು ಮುಂದಾದಾಗ ಆ ವೃದ್ಧ ದಂಪತಿಗಳು ಈ ಹುಡುಗ ಕೂಲಿ ಕೆಲಸ ಮಾಡುತ್ತಿರಬಹುದು ಎಂದು ಭಾವಿಸಿ ಕೂಲಿಯ ಸ್ವಲ್ಪ ಹಣವನ್ನು ಕೊಡಲು ಮುಂದೆ ಬಂದರು, ಆಗ ಕೃಷ್ಣರವರು ನಗುತ್ತಲೆ ಹೇಳಿದರು ನೋಡಿ ನಾನು ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ವಿದ್ಯಾರ್ಥಿಯಾಗಿದ್ದೇನೆ. ನನಗೆ ಯಾವುದೇ ರೀತಿಯ ಹಣ ಬೇಕಾಗಿಲ್ಲ ಎಂದು ವಿನಮ್ರವಾಗಿ ಹೇಳಿದರು. ಕೃಷ್ಣರವರು ಸುಸಂಸ್ಕೃತ, ಆಚಾರ ವಿಚಾರ ಇರುವ ಕುಟುಂಬದಲ್ಲಿ ಜನಿಸಿರುತ್ತಾರೆ, ಇದೊಂದು ಸಣ್ಣ ನಿರ್ದೇಶನ ತಾನು ಮಾಡಿದ ಕೆಲಸ ಶ್ರೇಷ್ಠದ್ದು ಎಂಬುದಕ್ಕಿಂತ ಪರರಿಗೆ ಅದರಲ್ಲೂ ದುರ್ಬಲರಿಗೆ ಏನಾದರೂ ಅನುಕೂಲವಾಗುತ್ತದೆಯೆ ಎಂದು ಚಿಂತಿಸುವವರಿವರು.

ಅದ್ಭುತವಾದ ಜ್ಞಾಪಕಶಕ್ತಿ, ನಿರರ್ಗಳ ವಾಕ್ ಕೌಶಲ್ಯಗಳು, ಚುರುಕುತನ ಇವರಿಗೆ ಬಾಲ್ಯದಿಂದಲೇ ಒಲಿದು ಬಂದಿರುವ ಬಹುದೊಡ್ಡ ಸಂಪತ್ತು. ಪ್ರಸ್ತುತ ಸಮಾಜದಲ್ಲಿ ಅನೇಕರು ಎಷ್ಟು ಆಸ್ತಿ ಮಾಡಬೇಕು, ಎಷ್ಟು ಹಣ ಸಂಪಾದಿಸಬೇಕು, ಎಷ್ಟು ವಜ್ರ ವೈಢೂರ್ಯ ಸಂಪಾದಿಸಬೇಕು, ಹಾಗೇಯೆ ನಮ್ಮ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ನಮ್ಮ ಸಂಬಂಧಿಗಳು ಚೆನ್ನಾಗಿರಲಿ ಎಂದು ಅತೀಯಾದ ಆಸೆಪಡುವ ಈ ಕಾಲದಲ್ಲಿ ಇಂತಹವರ ನಡುವೆ ಇಂತಹ ವೂಡೇ ಪಿ. ಕೃಷ್ಣರವರು ನಿಃಸ್ವಾರ್ಥಿಯಾಗಿ ಎಲ್ಲವೂ ಇದ್ದರೂ ಏನೂ ಇಲ್ಲದ ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಇಂದು ನಮ್ಮ ನಡುವೆ ಇರುವ ಒಬ್ಬ ಅಸಾಮಾನ್ಯ ವ್ಯಕ್ತಿ ಎಂದರೆ ಅದು ವೂಡೇ ಪಿ. ಕೃಷ್ಣರವರು. ಹಾಗೇಯೇ ಕಷ್ಟದಲ್ಲಿರುವವರನ್ನು ಗುರ್ತಿಸಿ ಅವರ ಕಷ್ಟದಲ್ಲಿ ತಾನು ಭಾಗಿಯಾಗಿ ಎಲೆಮರೆಯ ಕಾಯಿಯಂತೆ ನಿರಂತರವಾಗಿ ದುಡಿಯುತ್ತಿರುವ ಮಹಾನ್ ವ್ಯಕ್ತಿ ನಮ್ಮ ವೂಡೇ ಪಿ. ಕೃಷ್ಣರವರು. ಒಮ್ಮೆ ಇವರ ಹತ್ತಿರ ನಿಂತು ತದೇಕ ಚಿತ್ತದಿಂದ ಇವರ ಮುಖವನ್ನು ನೋಡಿದಾಗ ಸದಾ ಮಂದಸ್ಮಿತ ನಗುವಿನ ಸದಾ ಹಸನ್ಮುಖಿಯಾಗಿರುವ ಕೃಷ್ಣರವರು ಇತಿಹಾಸದ ಪುಟದಲ್ಲಿರುವ ಸಾಧಕರ ಸಾಲಿನ ಮಹಾಪುರುಷರಂತೆ ನೆನಪಾಗುತ್ತಾರೆ. ವೂಡೇ ಪಿ. ಕೃಷ್ಣರವರು ಸದಾ ನಿರಂತರ ಅಧ್ಯಯನ ಮೂಲಕ ಅಪಾರವಾದ ಜ್ಞಾನವನ್ನು ಸಂಪಾದಿಸಿರುತ್ತಾರೆ. ಸಭೆ ಸಮಾರಂಭಗಳಲ್ಲಿ, ಅಥವಾ ಇನ್ನಾವುದೇ ಸಂದರ್ಭದಲ್ಲಿ

ಯಾವುದೇ ವಿಷಯಗಳಾಗಿರಬಹುದು, ಆ ವಿಚಾರದ ಬಗ್ಗೆ ಗಂಟೆಗಟ್ಟಲೆ ಮಾತನಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಇವರಲ್ಲಿ ಮತ್ತೊಂದು ವಿಶೇಷ ಗುಣವೆಂದರೆ, ಯಾವುದೇ ಕಾರಣಕ್ಕೂ ಯಾವುದೇ ಸಂದರ್ಭದಲ್ಲಿ ಆಗಲೀ ಯಾರನ್ನೂ ದ್ವೇಷಿಸುವುದಿಲ್ಲ, ಯಾರ ಬಗ್ಗೆಯು ಕೆಟ್ಟದಾಗಿ, ಕೆಟ್ಟ ನುಡಿಗಳನ್ನು ಆಡುವುದಿಲ್ಲ, ಮಾತನಾಡುವುದಿಲ್ಲ. ಯಾರ ಬಗ್ಗೆಯೂ ಅಸೂಯೆ ಪಡೆಯುವುದಿಲ್ಲ, ಅದರಲ್ಲೂ ಯುವ ಪೀಳಿಗೆಯ ಬಗ್ಗೆ ಇವರಿಗೆ ತುಂಬ ಭರವಸೆ ಇದೆ.

ಇವರು ಇಂಜಿನಿಯರಿಂಗ್ ಮಾಡಲು ಬೆಂಗಳೂರು ವಿಶ್ವವಿದ್ಯಾಲಯದ ತಾಂತ್ರಿಕ ಮಹಾವಿದ್ಯಾಲಯಕ್ಕೆ ಸೇರಿದರು. ವಿದ್ಯಾರ್ಥಿ ಚಳವಳಿಯಲ್ಲಿಯೂ ಇವರು ಮುಂಚೂಣಿಯಲ್ಲಿದ್ದರು. ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದಾಗಲೇ ಗೋಕಾಕ್ ಚಳುವಳಿಯ ಪ್ರಭಾವಕ್ಕೊಳಗಾಗಿ ತಾವೇ ಸ್ಥಾಪಿಸಿದ ಕಾಲೇಜು ಕನ್ನಡ ಸಂಘದ ಮೂಲಕ ಧರಣಿ ಕುಳಿತು ಬಂಧಿತರಾಗಿದ್ದರು. ತಾಂತ್ರಿಕ ವಿದ್ಯಾರ್ಥಿಗಳನ್ನೆಲ್ಲ ಒಂದೆಡೆ ಸೇರಿಸಿ ಪೋಸ್ಟರ್‌ಗಳನ್ನು, ಬ್ಯಾನರ್‌ಗಳನ್ನು ತಯಾರಿಸಿ ಅವುಗಳನ್ನು ವಾಹನಗಳ ಮೇಲೆ ಅಂಟಿಸಿದ್ದು ವಿಶೇಷ, ಹಾಗೆಯೇ ಇಂಜಿನಿಯರಿಂಗ್ ವಿದ್ಯಾರ್ಥಿಗಳನ್ನೆಲ್ಲಾ ಸೇರಿಸಿ ವಿವಿಧ ರೀತಿಯ ಕನ್ನಡ ಕಾರ್ಯಕ್ರಮಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮುಂದಾಳತ್ವದಲ್ಲಿ ನಡೆಸುತ್ತಿದ್ದರು. ಒಮ್ಮೆ ಕೃಷ್ಣರವರ ತಂದೆಗೆ ಒಂದು ರೀತಿಯ ಆತಂಕ ಶುರುವಾಗಿ ಮಗ ಈ ರೀತಿಯ ಹೋರಾಟದಲ್ಲಿ ತೊಡಗಿದರೆ ಶಿಕ್ಷಣಕ್ಕೆ ಎಲ್ಲಿ ತೊಂದರೆಯಾಗುತ್ತದೋ ಎಂಬ ಆತಂಕಕ್ಕೀಡಾಗಿದ್ದರು.

ಕೃಷ್ಣರವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವಿ ಮುಗಿಸಿ, ಮತ್ತೆ ಇದೇ ಮೆಕ್ಯಾನಿಕಲ್ ಇಂಜಿನಿಯರ್‌ನಲ್ಲಿ ಸಂಶೋಧನೆ ಮಾಡಿ ಸ್ನಾತಕೋತ್ತರ ಪದವಿ ಪಡೆದರು. ಆದರೆ ಈ ರೀತಿ ಇಂಜಿನಿಯರ್ ಪದವಿ ಪಡೆದಿದ್ದರೂ ಕೆಲಸ ನಿರ್ವಹಿಸಿದ್ದು ಮಾತ್ರ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ. ಶಿಕ್ಷಣ ಮತ್ತು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

"ನಿನಗೆ ಏನು ಇಷ್ಟವೋ, ಏನು ಓದಬೇಕೋ ಅದನ್ನು ಮಾಡು" ಎಂಬ ತಂದೆಯ ಆಶಯದ ಹಾಗೆಯೇ ಕಾನೂನು ಪದವಿಯನ್ನು ಓದಬೇಕೆಂಬ ತುಡಿತ, ಎಲ್.ಎಲ್.ಬಿ. ಮತ್ತು ಎಂ.ಲ್. ಕಾನೂನು ಪದವಿಯನ್ನು ಪಡೆದ ನಂತರವೂ ಇವರ ಓದುವ ದಾಹ ಹಿಂಗಿರಲಿಲ್ಲ. ಈ ಓದಿನ ದಾಹ ಸ್ವಲ್ಪವಾದರೂ ಹಿಂಗಲಿ ಎಂದು ಮತ್ತೆ ಎಂ.ಎ. ಸ್ನಾತಕೋತ್ತರ ಪದವಿಗೆ ಸೇರಿ ಸಮಾಜಶಾಸ್ತ್ರದಲ್ಲಿ ಪದವಿಯನ್ನು ಪಡೆದರು. ಇದಾದ ನಂತರ ಬಹಳ ವಿಶೇಷವಾದ ಮತ್ತು

ಕಠಿಣವಾದ ಪತ್ರಿಕೋದ್ಯಮದಲಿ ಡಿಪ್ಲೋಮಾ ಪದವಿಯನ್ನು, ಮ್ಯಾನೇಜ್‌ಮೆಂಟ್ ವಿಷಯದಲ್ಲಿ ಪಿ.ಹೆಚ್.ಡಿ ಪದವಿ ಗಳಿಸಿದರೂ, ಈಗಲೂ ಕೃಷ್ಣರವರು ನಮಗೆಲ್ಲರಿಗೂ ವಿದ್ಯಾರ್ಥಿಯಾಗಿಯೇ ಕಾಣುತ್ತಾರೆ.

ವಿಶೇಷವೆಂದರೆ ಯುವಕರಾಗಿದ್ದಾಗ ಇಂಜಿನಿಯರಿಂಗ್ ಪದವಿ ಮುಗಿಸಿ, ನಂತರ ಕಾನೂನು ಪದವಿಯನ್ನು ಪಡೆಯಲು ಶೇಷಾದ್ರಿಪುರಂ ಲಾ ಕಾಲೇಜಿಗೆ ಸೇರಲು ಬಂದಾಗ ಅಲ್ಲಿ ಪ್ರವೇಶ ಸಿಗದೆ, ಸೀಟುಗಳು ಭರ್ತಿಯಾಗಿದ್ದ ಕಾರಣ ಹಾವನೂರು ಲಾ ಕಾಲೇಜಿನಲ್ಲಿ ಕಾನೂನು ಪದವಿಯನ್ನು ಮುಗಿಸಿದರು. ಹಾವನೂರು ಕಾಲೇಜಿನಲ್ಲಿ ಕಾನೂನು ಪದವಿ ಪಡೆದ ವ್ಯಕ್ತಿ ಮುಂದೊಂದು ದಿನ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುವ ಒಡೆಯರಾಗುತ್ತಾರೆ ಎಂದರೆ ಇದು ಸಾಧನೆಯ ಮೇರು ಪರ್ವತವೆನ್ನಬಹುದಲ್ಲವೆ?

ವೂಡೇ ಪಿ. ಅವರ ಅಂಬೇಡ್ಕರ್ ಚಿಂತನೆ

ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೇ ಜನ್ಮ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಅಂಬೇಡ್ಕರ್‌ರವರ ಬಗ್ಗೆ ಒಂದು ಪುಟ್ಟ ಲೇಖನವನ್ನು ಯಾವುದಾದರೂ ಒಂದು ಪುಟದಲ್ಲಿ ಬರೆಯಬೇಕೆಂದು ಕಳೆದ ಎರಡು ಮೂರು ದಿನಗಳಿಂದ ಯೋಚಿಸುತ್ತ ನನ್ನ ಮೂರನೆಯ ಮಹಡಿಯ ಪುಸ್ತಕ ಮನೆಯಲ್ಲಿ ಕುಳಿತು ಕೆಲವಾರು ಹಳೆಯ ಪುಸ್ತಕಗಳನ್ನು, ಕೆಲವು ಹಳೆಯ ಪತ್ರಿಕೆಗಳನ್ನು ತಿರುಚಿ ಹಾಕುತ್ತಾ ಕುಳಿತಿರುವಾಗ ನನ್ನ ಟೇಬಲಿನ ಮೇಲೆ ಕೆಲವು ಮುಖ್ಯವಾದ, ಮತ್ತು ಕೆಲವು ಮುಖ್ಯ ಸಾಹಿತಿಗಳ, ಪತ್ರಕರ್ತರ ಪುಸ್ತಕಗಳ ಇದ್ದವು, ಅವುಗಳ ಕಡೆ ಒಮ್ಮೆ ಕಣ್ಣಾಡಿಸಿದೆ, ಅಷ್ಟು ಪುಸ್ತಕದ

ನಡುವೆ ನಾಡೋಜ ಡಾ. ವೂಡೇ ಪಿ. ಕೃಷ್ಣ ರವರು ಬರೆದಿರುವ 'ಅಂಬೇಡ್ಕರ್ ಅನುಸಂಧಾನ' ಎಂಬ ಒಂದು ಪುಟ್ಟ ಕಿರು ಹೊತ್ತಗೆಯ ಪುಸ್ತಕವು ಇತ್ತು. ಬಹಳ ಗಂಭೀರವಾಗಿ ಆ ಕಿರು ಹೊತ್ತಗೆಯ ಪುಸ್ತಕವನ್ನು ನಾನು ತದೇಕ ಚಿತ್ತದಿಂದ ಟೇಬಲಿನ ಮೇಲಿದ್ದ ಪುಸ್ತಕವನ್ನು ನೋಡುತ್ತಿದ್ದರೆ ಆ ಪುಸ್ತಕದ ಮುಖಪುಟದಲ್ಲಿದ್ದ ಅಂಬೇಡ್ಕರ್‌ರವರ ಮುಖಪುಟದ ಫೋಟೋವು ಸಹ ನನ್ನನ್ನು ನೋಡುತ್ತಿರುವಂತೆ ಭಾಸವಾಯಿತು, ಆ ಕಿರುಹೊತ್ತಗೆಯ ಮೊದಲ ಮುಖಪುಟದ ಕೆಳಗೆ ಬರೆದಿದ್ದವರ ಹೆಸರು ನಾಡೋಜ ಡಾ. ವೂಡೇ ಪಿ. ಕೃಷ್ಣ ಎಂಬ ಹೆಸರಿತ್ತು, ಯಾವಾಗ ಈ ಕಿರು ಹೊತ್ತಗೆಯನ್ನು ನನ್ನ ಪುಸ್ತಕದ ರೂಮಿನಲ್ಲಿ ಕಂಡೆನೋ ಓ ಈ ಸಾರಿ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಏತಕ್ಕೆ ಡಾ. ವೂಡೇ ಪಿ. ರವರ ಅಂಕಣವನ್ನು ಹೇಗೂ ಬರೆಯಬೇಕು, ಜೊತೆಗೆ ನನಗೆ ವೂಡೇ ಪಿ. ರವರ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿಯ ಬರೆಯುತ್ತಿದ್ದೇನೆ ನನ್ನ ಬರವಣಿಗೆಯನ್ನು ಯಾವುದೋ ಲೋಕಕ್ಕೆ ಕರೆದುಕೊಂಡು ಹೋಗುವುದರ ಜೊತೆಗೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿಯೂ ಸಹ ಓದುಗ ಅಭಿಮಾನಿಗಳು ಸಹ ಮೆಚ್ಚಿ ಮೆಚ್ಚಿ ವೂಡೇ ಪಿ. ರವರ ಅಂಕಣವನ್ನು ಓದುತ್ತಿದ್ದಾರೆ, ಈ ರೀತಿಯ ಪ್ರೀತಿ, ವಾತ್ಸಲ್ಯದ ನಡುವೆ, ಈ ಸಂಚಿಕೆಯಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ವೂಡೇ ಪಿ. ಕೃಷ್ಣರವರ ಅಂಕಣದಲ್ಲಿ ಈ ಬಾರಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನದ ಅಂಗವಾಗಿ, ಆಡುಮುಟ್ಟದ ಸೊಪ್ಪಿಲ್ಲದ ಅಂಕಣದ ಕೇಂದ್ರ ಬಿಂದು, ಕೇಂದ್ರ ಆಕರ್ಷಣೆ ಡಾ. ವೂಡೇ ಪಿ. ಕೃಷ್ಣರವರ ಮುಖಾಂತರ ನಾವು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯ ಬಳಗವು ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನದ ಶುಭಾಶಯಗಳನ್ನು ಈ ಮೂಲ ನಾಡಿನ, ರಾಜ್ಯ, ಅಂತಾರಾಷ್ಟ್ರದಲ್ಲಿರುವ ಪ್ರತಿಯೊಬ್ಬರಿಗೆ ಅಂಬೇಡ್ಕರ್ ಜನ್ಮದಿನ ಶುಭಾಶಯಗಳನ್ನು ಅರ್ಪಿಸುತ್ತಿದ್ದೇನೆ.

ಕಳೆದ ಕೆಲವು ವರ್ಷಗಳ ಹಿಂದೆ ಅಂದರೆ ನಾವುಗಳು ಪ್ರೌಢಶಾಲೆಯಲ್ಲಿ ಎಂಟನೆಯ ತರಗತಿ, ಒಂಬತ್ತು ತರಗತಿಯನ್ನು ಓದುವಾಗ ನಮಗೆ ಚೆನ್ನಾಗಿ ಗೊತ್ತಿದದ್ದು 1947ರ ಸ್ವತಂತ್ರ ದಿನ, ಜನವರಿ 26ರ ಗಣರಾಜ್ಯೋತ್ಸವದ ದಿನ, ಉಳಿದಂತೆ ಬೇಸಗೆಯಲ್ಲಿ ಬರುವ ಯುಗಾದಿ, ವಸಂತ ಮಾಸದಲ್ಲಿ ಬರುವ ದಸರಾ ಹಬ್ಬ ಮತ್ತು ಡಿಸೆಂಬರ್‌ನಲ್ಲಿ ಬರುವ ಕ್ರಿಸ್‌ಮಸ್ ಹಬ್ಬ ಇವಷ್ಟು ಹಬ್ಬಗಳು ಮತ್ತು ರಾಷ್ಟ್ರೀಯ ಹಬ್ಬಗಳು ಮಾತ್ರ ನಮಗೆ ನೆನಪಿರುತ್ತಿದ್ದವು ಮತ್ತು ಅಂದು ಶಾಲೆಯಲ್ಲಿಯೂ ಸಹ ಮಹಾತ್ಮ ಗಾಂಧಿ, ನೆಹರು, ಸರದಾರ್ ವಲ್ಲಬಾಯಿ ಪಟೇಲ್, ಸ್ವಾಮಿವಿವೇಕಾನಂದ, ಇಂತಹವರ ಕುರಿತು ಅಪರೂಪಕ್ಕೆ ಶಿಕ್ಷಕರು

ಸಮಯ ಸಿಕ್ಕಾಗ ಸ್ವಲ್ಪ ಹೊತ್ತು ಮಾತನಾಡುತ್ತಿದ್ದರು, ಆದರೆ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಡಾ. ಬಾಬು ಜಗಜೀವನರಾಮ್ ಅವರ ಬಗ್ಗೆ ಅಷ್ಟಾಗಿ ಆ ದಿನಗಳಲ್ಲಿ ಯಾರು, ಯಾವ ಸಂದರ್ಭದಲ್ಲಿಯೂ ಅಷ್ಟಾಗಿ ಮಾತನಾಡುತ್ತಿರಲಿಲ್ಲ, ಹೀಗೆಯೇ ಮುಂದುವರೆದು 1980 ರಿಂದ 85ರ ಹೊತ್ತಿಗೆ ಮತ್ತು ಯಾವಾಗ ಪ್ರೋ. ಬಿ. ಕೃಷ್ಣಪ್ಪರವರು ದಲಿತ ಸಂಘರ್ಷ ಸಮಿತಿಯನ್ನು ಪ್ರಾರಂಭಿಸಿದರೋ ಆ ಕಾಲಘಟ್ಟದಲ್ಲಿ ರಾಜ್ಯದಲ್ಲಿದ್ದ ದಲಿತರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮತ್ತು ದಲಿತರು ರಾಜಕೀಯದ ಅಧಿಕಾರವನ್ನು ಪಡೆಯಬೇಕು ಎಂಬ ನಿಟ್ಟಿನಲ್ಲಿ ಅಂದು ದಲಿತ ಸಂಘರ್ಷನ ಸಮಿತಿ ಪ್ರಾರಂಭವಾಯಿತೋ ಅಂದಿನಿಂದ ಡಾ. ಬಿ.ಆರ್. ಅಂಬೇಡ್ಕರ್‌ರವರ ವ್ಯಕ್ತಿತ್ವ ಮತ್ತು ಅವರು ಬರೆದಿದ್ದ ಬಹಳ ಅಪರೂಪದ ಸಂವಿಧಾನಕ್ಕೆ ಒಂದು ಹೊಸ ರೂಪ, ಹೊಸ ಆಯಾಮ ಮತ್ತು ಒಂದು ಹೊಸ ಅಂದೋಲನ ಸಿಕ್ಕಿತೋ ಅಂದಿನಿಂದ ಡಾ. ಬಿ.ಆರ್. ಅಂಬೇಡ್ಕರ್‌ರವರ ಹೆಸರು ಕೇವಲ ಕರ್ನಾಟಕ ರಾಜ್ಯದಲ್ಲಿ ಅಲ್ಲದೆ ದೇಶದಲ್ಲಿರುವ ಎಲ್ಲಾ ರಾಜ್ಯದಲ್ಲಿ, ಎಲ್ಲಾ ರಾಜಕಾರಣಿಗಳ ಬಾಯಲ್ಲಿ, ಎಲ್ಲಾ ವಿದ್ಯಾರ್ಥಿಗಳ ಬಾಯಲ್ಲಿ ಮಾತೆತ್ತಿದ್ದರೆ ಡಾ.ಬಿ.ಆರ್. ಅಂಬೇಡ್ಕರ್ ಸಂವಿಧಾನ, ಭೀಮಸಂದೇಶ, ಹೀಗೆ ಹತ್ತು ಹಲವು ಹೆಸರಿನಲ್ಲಿ ಪ್ರತಿಯೊಬ್ಬರು ಡಾ. ಬಿ.ಆರ್. ಅಂಬೇಡ್ಕರ್‌ರವರ ಹೆಸರನ್ನು ಹೇಳುತ್ತಾ ಹೇಳುತ್ತಾ ಇಂದು ವಿಶ್ವಮಟ್ಟದಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರವರ ಬಗ್ಗೆ, ಮತ್ತು ಅವರು ಬರೆದಿರುವ ಸಂವಿಧಾನದ ಬಗ್ಗೆ ಹೆಚ್ಚಿನ ಗೌರವ ಬಂದಿರುವುದು ಸಂತೋಷದ ವಿಚಾರ.

ನಾನು ಸಹ ಕಳೆದ 35 ವರ್ಷದಿಂದ ದಲಿತ ಸಂಘಟನೆಗಳು, ದಲಿತ ಹೋರಾಟದ ಸಂಘಟನೆಗಳು, ಅಂಬೇಡ್ಕರ್‌ರವರ ವಿಚಾರ ವೇದಿಕೆಗಳು ಹೀಗೆ ಹತ್ತು ಹಲವು ವಿವಿಧ ರೀತಿಯ ಸಂಘಟನೆಗಳೇ ತೊಡಗಿಸಿಕೊಂಡು ಬಹಳ ಹತ್ತಿರದಿಂದ ಕಂಡದ್ದು ಏನೆಂದರೆ ಕೆಲವೊಮ್ಮೆ ನಮ್ಮ ನಮ್ಮ ಸ್ವಾರ್ಥಕೋಸ್ಕರ ನಮ್ಮ ನಮ್ಮನ್ನು ವೈಭವೀಕರಿಸುವುದಕ್ಕೋಸ್ಕರ ಸಭೆ ಸಮಾರಂಭಗಳಲ್ಲಿ, ಪತ್ರಿಕಾ ಪೋಸ್ಟ್‌ಗಳಲ್ಲಿ ಅಂಬೇಡ್ಕರ್‌ರವರ ಬಗ್ಗೆ, ಅವರ ಆದರ್ಶಗಳ ಬಗ್ಗೆ ಅವರಿವರು ನೋಡಲಿ ಎಂದು ಭಾಷಣವನ್ನು ಮಾಡುತ್ತಾರೆಯೇ ಹೊರತು ಅಂತರಾಳದಿಂದ ಮನದಾಳದಿಂದ ಅಂಬೇಡ್ಕರ್‌ರವರ ಸಿದ್ಧಾತಂವನ್ನು, ಅವರ ಆದರ್ಶವನ್ನು, ಅವರು ರಚಿಸಿರುವ ಅಮೂಲ್ಯ ಗ್ರಂಥ ಸಂವಿಧಾನವನ್ನು ದೇಶದ, ರಾಜ್ಯದ ಮತ್ತು ಸಾಮಾನ್ಯ ಒಬ್ಬ ಕೂಲಿ ಕೆಲಸ ಮಾಡುವ ವ್ಯಕ್ತಿಗೂ ಅಂಬೇಡ್ಕರ್ ಮೌಲ್ಯಗಳನ್ನು ತಲುಪಿಸಿ ಅವರಿಗೆ ಬರವಣಿಗೆಯ ಮೂಲಕ ಜಾಗೃತಿ ಮೂಡಿಸುವ ಕೆಲಸಗಳನ್ನು

ಯಾರೂ ಮಾಡುತ್ತಿರಲಿಲ್ಲ. ಒಂದು ವೇಳೆ ಅಂದೇ ಮಾಡಿದಿದ್ದರೆ ಇಂದು ದೇಶದಲ್ಲಿ ಯಾವ ದುಷ್ಟ ಶಕ್ತಿಗಳು, ಯಾವ ರಾಜಕೀಯ ಪಕ್ಷಗಳು ಇಂದು ಸಂವಿಧಾನವನ್ನು ಬದಲಿಸುತ್ತೇವೆ ಎಂಬ ಧೈರ್ಯ ಯಾರಿಗೂ ಬರುತ್ತಿರಲಿಲ್ಲ, ಇದಕ್ಕೆ ಕಾರಣ ನಾವು ಸಂವಿಧಾನದಿಂದ ದೇಶಕ್ಕೆ, ದೇಶದ ಅಭಿವೃದ್ಧಿಗೆ ಪ್ರಜೆಗಳಿಗೆ ಎಷ್ಟು ಒಳ್ಳೆಯದಾಗುತ್ತದೆ, ಏನೆಲ್ಲ ಅನುಕೂಲಾಗುತ್ತಿದೆ ಎಂಬುದರ ಬಗ್ಗೆ ನಾವು ತಿಳಿಸುವಲ್ಲಿ ಎಲ್ಲೋ ಒಂದು ಕಡೆ ವಿಫಲರಾಗಿರುತ್ತೇವೆ.

ಇಂತಹ ಕಾಲಘಟದಲ್ಲಿ ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ದಿನದ 24 ಗಂಟೆಯು ಒಂದಿಲ್ಲೊಂದು ರೀತಿಯಲ್ಲಿ, ಹಾಗೆಯೇ ವಿವಿಧ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು, ದೀನ ದಲಿತರು, ಶಿಕ್ಷಣ ವಂಚಿತರು ಮತ್ತು ತುಳಿತಕೊಳ್ಳಪಟ್ಟವರು ಈ ದೇಶದಲ್ಲಿ ಎಲ್ಲರಂತೆ ಬದಕಬೇಕು, ಜೀವಿಸಬೇಕು, ಸಮಸಮಾಜದಲ್ಲಿ ನಮ್ಮಂತೆ ಮುಂದೆ ಬರಬೇಕು, ಈ ನಿಟ್ಟಿನಲ್ಲಿ ನಮಗೆ ಇರುವ ದಾರಿ ಡಾ. ಬಿ.ಆರ್. ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನವನ್ನು, ಅದರಲ್ಲಿರುವ ಪ್ರತಿಯೊಬ್ಬರು ಓದಬೇಕು, ಸಂವಿಧಾನದ ತಿರಳನ್ನು ಅರಿತಾಗ, ಅದರ ಮುಖಾಂತರ ಸರ್ಕಾರದಲ್ಲಿ ಯಾವ ಯಾವ ರೀತಿಯ ಸವಲತ್ತುಗಳ, ಆದರೆ ಶಿಕ್ಷಣ ವಂಚಿತರಿಗೆ, ಕಡು ಬಡತನದಲ್ಲಿರುವವರಿಗೆ ಏನೆಲ್ಲಾ ಉಪಯೊಗವಾಗುತ್ತದೆ ಎಂಬುದರ ಬಗ್ಗೆ ತಿಳಿವಳಿಕೆ ಬರಲಿ ಎಂಬ ಉದ್ದೇಶದಿಂದ ನಾಡೋಜ ಡಾ. ವೂಡೇ ಪಿ. ಕೃಷ್ಣರವರು ಅಲ್ಪ ಸ್ವಲ್ಪವಾದರೂ ಡಾ. ಬಿ.ಆರ್. ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನವನ್ನು ಓದಲಿ, ಅರಿಯಲಿ ಎಂಬ ದೃಷ್ಟಿಯಿಂದಲೇ 'ಅಂಬೇಡ್ಕರ್ ಅನುಸಂಧಾನ' ಎಂಬ ಒಂದು ಚಿಂತನೆಗಳ ಕಿರು ಹೊತ್ತಗೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವುದು, ಜೊತೆಗೆ ಸಾಕಷ್ಟು ಜನರು ಈ ಕಿರು ಹೊತ್ತಗೆಯನ್ನು ಇಂದು ಅನೇಕರ ಮನೆಗಳಲ್ಲಿ ಕಾಣಬಹುದು, ನನ್ನ ಮನೆಯಲ್ಲಿಯೂ ಇದೆ, ಇಂತಹ ದಿನಗಳಲ್ಲಿ ವೂಡೇ ಪಿ. ರವರು ಅಂಬೇಡ್ಕರ್‌ರವರ ಕುರಿತಾದ 'ಅಂಬೇಡ್ಕರ್ ಅನುಸಂಧಾನ' ಎಂಬ ಕಿರು ಹೊತ್ತಗೆಯನ್ನು ಸ್ವತಃ ರಚಿಸಿ ಇಂದು ಓದುಗರು, ಅದರಲ್ಲೂ ಸಾಮಾನ್ಯ ಜನರು, ದೀನ ದಲಿತ ಹಿಂದುಳಿಗೆ ವರ್ಗದವರಿಗೆ ಬಹಳ ಸುಲಭವಾಗಿ ಕೈಗೆ ಸಿಗಲಿ ಎಂಬ ನಿಟ್ಟಿನಲ್ಲಿ ಕಿರುಹೊತ್ತಗೆಯನ್ನು ಬರೆದಿರುತ್ತಾರೆ.

ಓದುಗರೆ, ಡಾ.ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನಾಚರಣೆಯ ಸಂದರ್ಭದಲ್ಲಿ ಮತ್ತು ಅವರ ಜನ್ಮದಿನದ ಶುಭಾಶಯಗಳನ್ನು ಹೇಳುತ್ತಾ, ಕೋರುತ್ತಾ, ನಾಡೋಜ ಡಾ. ವೂಡೇ ಪಿ. ರವರು ಬರೆದಿರುವ 11 ಅಂಬೇಡ್ಕರ್ ಅನುಸಂಧಾನ'ದಲ್ಲಿ ಏನಿದೆ ಎಂಬುದನ್ನು ನಿಮಗಾಗಿ ಈ ಕೆಳಗೆ ಪ್ರಕಟಿಸುತ್ತಿದ್ದೇನೆ.

ಅಂಬೇಡ್ಕರ್ ಅನುಸಂಧಾನ

ಡಾ. ಅಂಬೇಡ್ಕರ್ ವಾದಗಳು ಇಂದಿನ ದಿನಕ್ಕೆ ಎಷ್ಟು ಪ್ರಸ್ತುತ ?

ತಮಗೆಲ್ಲ ಚೆನ್ನಾಗಿ ತಿಳಿದಿರುವ ಹಾಗೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಸಂದಿವೆ. ನಾವೆಲ್ಲ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದ್ದೇವೆ. ಈ ಸಮಯದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಸ್ಮರಿಸುವಂತಹ ಸದಾವಕಾಶ ನಮಗೆಲ್ಲ ದೊರೆತಿದೆ. ಜೊತೆಗೆ ಇವರಿಬ್ಬರನ್ನೂ ಇಂತಹ ಸಂದರ್ಭದಲ್ಲಿ ನಾವು ಸ್ಮರಿಸಲೇಬೇಕು. ಏಕೆಂದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಇವರಿಬ್ಬರ ಹೋರಾಟದ ಸೇವೆಯನ್ನು ನಾವು ಮರೆಯುವಂತಿಲ್ಲ.

ಅಂಬೇಡ್ಕರ್ ಅವರು ಮಹಾನ್ ಮಾನವತಾವಾದಿ. ಯಾರು ಇನ್ನೊಬ್ಬರ ನೋವನ್ನು ತನ್ನ ನೋವು ಎಂದು ಭಾವಿಸಿ, ಅವರ ಅಭ್ಯುದಯಕ್ಕಾಗಿ ತಮ್ಮ ಇಡೀ ಜೀವನವನ್ನು ಮುಡುಪಿಟ್ಟರೋ ಅಂಥವರು ನಿಜಕ್ಕೂ ಮಹಾನ್ ಮಾನವತಾವಾದಿಗಳೇ. ಈ ಸಂದರ್ಭದಲ್ಲಿ ಅಂಬೇಡ್ಕರ್ ಅವರ ಕುರಿತು ಕೆಲವು ಮಾತುಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಲು ನನಗೆ ಸಂತೋಷವಾಗುತ್ತಿದೆ.

ಅಂಬೇಡ್ಕರ್ ಅವರನ್ನು ನಾವು 'ಮೇಕರ್ ಆಫ್ ಮಾಡರ್ನ್ ಇಂಡಿಯಾ' ಎಂದು ಕರೆಯುತ್ತೇವೆ. ಅಂದರೆ ನವಭಾರತದ ನಿರ್ಮಾತೃಗಳಲ್ಲಿ ಅಂಬೇಡ್ಕರ್ ಅವರು ಬಹಳ ಶ್ರೇಷ್ಠಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರೊಬ್ಬ ರಾಷ್ಟ್ರನಾಯಕರು. ಪ್ರಶ್ನಾತೀತ ರಾಷ್ಟ್ರೀಯ ನಾಯಕರು. ಬೇಸರದ ವಿಷಯ ಎಂದರೆ ಕೆಲವರು ಅವರನ್ನು ಒಬ್ಬ ದಲಿತ ನಾಯಕ ಅಂತ ಹಣೆಪಟ್ಟಿ ಕಟ್ಟಿ, ಅವರನ್ನು ಅಲ್ಲಿಗೇ ಸೀಮಿತಗೊಳಿಸಿದ್ದಾರೆ. ಆದರೆ, ಅದು ಸತ್ಯವಲ್ಲ. ನಿಜಾರ್ಥದಲ್ಲಿ ಅವರೊಬ್ಬ ಸರ್ವ ರೀತಿಯಲ್ಲಿ ಕೂಡ ಶ್ರೇಷ್ಠ ರಾಷ್ಟ್ರನಾಯಕ. ನಾವು ಅವರನ್ನು ದಲಿತ ನಾಯಕ ಅಂತ ಸೀಮಿತಗೊಳಿಸಿದರೆ, ಅದು ಅವರ ವ್ಯಕ್ತಿತ್ವಕ್ಕೆ ಅಗೌರವ ತೋರಿದಂತೆ ಅಂತ ನಾನು ಭಾವಿಸುತ್ತೇನೆ. ಅವರು ಎಲ್ಲರಿಗೂ ಸೇರಿದವರು. ಪ್ರತಿಯೊಬ್ಬ ಭಾರತೀಯರಿಗೂ ಸೇರಿದವರು. ಪ್ರತಿಯೊಬ್ಬ ಭಾರತೀಯರ ಹೃನ್ಮಂದಿರದಲ್ಲಿ ಸದಾ ನೆಲೆಸಬೇಕಾದ ಮಹಾನ್ ಚೇತನ ಡಾ. ಬಿ.ಆರ್. ಅಂಬೇಡ್ಕರ್ ಅವರು. ಭಾರತೀಯ ಸಮಾಜವನ್ನು ಇಂದಿಗೂ ಸಹ ಜಾತೀಯತೆ ಎಷ್ಟು ಕಿತ್ತು ತಿನ್ನುತ್ತಿದೆ ಎನ್ನುವುದು ನಮಗೆಲ್ಲ ಗೊತ್ತೇ ಇದೆ. ಆ ಕಾಲದಲ್ಲಂತೂ ಈ ಸಮಸ್ಯೆ ವಿಪರೀತವಾಗಿತ್ತು. ತಮ್ಮ ಹತ್ಯೆಯಾಗುವ ಒಂದು ವಾರದ ಮೊದಲು, 'ಹರಿಜನ್ ಪತ್ರಿಕೆ'ಯಲ್ಲಿ ಮಹಾತ್ಮಾ ಗಾಂಧಿಯವರು ಒಂದು ಮಾತನ್ನು ಬರೆಯುತ್ತಾರೆ– "ನಮಗೆ ಈಗ ದೊರಕಿರುವುದು ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರ. ನೈತಿಕ

ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ ಹಾಗೂ ಆರ್ಥಿಕ ಸ್ವಾತಂತ್ರ್ಯವನ್ನು ನಾವಿನ್ನೂ ಗಳಿಸಿಕೊಳ್ಳಬೇಕಾಗಿದೆ" ಎಂದು. ಇದರರ್ಥ, ನಾವು ಜಾತಿ ವ್ಯವಸ್ಥೆಯಿಂದ ದೂರವಾದಾಗ ಮಾತ್ರ ನಮಗೆ ಸಾಮಾಜಿಕ ಸ್ವಾತಂತ್ರ್ಯ ಲಭಿಸುತ್ತದೆ. ಆದ್ದರಿಂದಲೇ ಅಂಬೇಡ್ಕರ್ ಅವರು ಜಾತೀಯತೆಯ ವಿರುದ್ಧ ಎದ್ದು ನಿಂತು, ಜನರಿಗೆ ಸಮಾನತೆಯನ್ನು ಒದಗಿಸಿ ಕೊಡಬೇಕೆನ್ನುವ ದೊಡ್ಡ ಆಶೋತ್ತರವನ್ನಿಟ್ಟುಕೊಂಡು ತಮ್ಮ ಸಂಪೂರ್ಣ ಹೋರಾಟವನ್ನು ರೂಪಿಸಿದ್ದರು.

ಅಂಬೇಡ್ಕರ್ ಕಂಡಂತಹ ದೊಡ್ಡ ಕನಸು ಏನೆಂದರೆ ಅವರು 'ಕಾಸ್ಟ್‌ಲೆಸ್ ಮತ್ತು ಕ್ಲಾಸ್‌ಲೆಸ್' ಸಮಾಜವನ್ನು ನಿರ್ಮಾಣ ಮಾಡಲು ಬಯಸಿದ್ದರು. ಅಂದರೆ ಸಮಾಜದಲ್ಲಿ ಯಾವುದೇ ಜಾತಿಗಳು ಇರಬಾರದು ಹಾಗೂ ಯಾವುದೇ ಶ್ರೇಣಿಗಳು ಇರಬಾರದು. ಇಂತಹ ದೊಡ್ಡ ಕಲ್ಪನೆ ಇಟ್ಟುಕೊಂಡು ತಮ್ಮ ಇಡೀ ಬದುಕನ್ನು ನಡೆಸಿದಂತಹ ಒಬ್ಬ ಮಹಾನ್ ಚಿಂತಕ ಡಾ. ಅಂಬೇಡ್ಕರ್ ಅವರು. ಆದ್ದರಿಂದ ಅವರು ಇಂದಿಗೂ ಪ್ರಸ್ತುತ.

ಒಂದು ವಿಷಯವನ್ನು ನಾವಿಲ್ಲಿ ಗಮನಿಸಬೇಕು. ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಸಮಾಜದಿಂದ ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲ. ಭಾರತದಂತಹ ದೇಶದಲ್ಲಿ ಅದು ಬಹಳ ಕಷ್ಟ. ಆದರೆ, ಜಾತಿ ವ್ಯವಸ್ಥೆಯಿಂದ ಆಗುವ ಅನ್ಯಾಯಗಳು, ಬೇಧ-ಭಾವಗಳನ್ನು ಸಾಕಷ್ಟು ಮಟ್ಟಿಗೆ ತಡೆಗಟ್ಟಲು ಸಾಧ್ಯವಿದೆ. ನಮ್ಮ ದೇಶದಲ್ಲಿ ಸಂವಿಧಾನ ಜಾರಿಗೆ ಬಂದಮೇಲೆ ಅಸ್ಪೃಶ್ಯತೆ ಎನ್ನುವ ದೊಡ್ಡ ಶಾಪದಿಂದ ನಾವು ಬಹುಮಟ್ಟಿಗೆ ಹೊರಗೆ ಬಂದಿದ್ದೇವೆ. ಹಾಗಂತ, ಇವತ್ತು ಎಲ್ಲಿಯೂ ಕೂಡ ಅಸ್ಪೃಶ್ಯತೆಯ ಘಟನೆಗಳು ನಡೆಯುವುದೇ ಇಲ್ಲ ಅಂತಲ್ಲ. ಅಲ್ಲಲ್ಲಿ ಆಗಾಗ ಇಂತಹ ಘಟನೆಗಳು ವರದಿಯಾಗುತ್ತವೆ. ಆದರೆ, ಆಗಿನ ಕಾಲಕ್ಕೆ ಹೋಲಿಸಿದರೆ ಅವುಗಳ ಪ್ರಮಾಣ ಗಣನೀಯವಾಗಿ ಇಳಿದಿದೆ. ಇದಕ್ಕೆ ಕಾರಣ ನಮ್ಮ ಸಂವಿಧಾನ ಹಾಗೂ ಡಾ. ಅಂಬೇಡ್ಕರ್ ಅವರು.

ಈ ಸಂದರ್ಭದಲ್ಲಿ ನಮ್ಮ ಸಂವಿಧಾನದ ಬಗ್ಗೆ ನಾನು ಒಂದೆರಡು ಮಾತನ್ನು ಹೇಳಲೇಬೇಕು. ನಮ್ಮ ಸಂವಿಧಾನ, ನೂರಾರು ವರ್ಷದ ಸ್ವಾತಂತ್ರ್ಯ ಹೋರಾಟದ ಫಲವಾಗಿ ಇಂದು ನಮಗೆ ದೊರಕಿರುವ ಒಂದು ಮಹತ್ತರವಾದ ಗ್ರಂಥ. ನನ್ನ ಪ್ರಕಾರ, 'ನಮ್ಮ ಸಂವಿಧಾನವು ನಮ್ಮೆಲ್ಲರಿಗೂ ಭಗವದ್ಗೀತೆಯಾಗಬೇಕು, ಕುರಾನ್ ಆಗಬೇಕು ಹಾಗೂ ಬೈಬಲ್ ಆಗಬೇಕು". ನಮ್ಮ ಧರ್ಮಗಳೆಲ್ಲವೂ ನಮ್ಮ ಖಾಸಗಿ ವಿಚಾರ. ಜಾತಿ ಖಾಸಗಿ ವಿಚಾರ. ಆದರೆ ನಾವು ನಮ್ಮ ಮನೆಯ ಹೊಸ್ತಿಲಿನಿಂದ ಹೊರಗೆ ಬಂದಾಗ ನಾವು ಭಾರತೀಯರು. ಭಗವದ್ಗೀತೆ, ಕುರಾನ್ ಹಾಗೂ

ಬೈಬಲ್ ಇವೆಲ್ಲ ಧರ್ಮಗ್ರಂಥಗಳಾದರೆ ಸಂವಿಧಾನ ನಮ್ಮ ರಾಷ್ಟ್ರಗ್ರಂಥ. ಆದ್ದರಿಂದ ನಾವು ಮನೆಯ ಹೊಸ್ತಿಲಿಂದ ಹೊರಗೆ ಬಂದಮೇಲೆ ನಮಗೆ ಸಂವಿಧಾನವೇ ಪ್ರಮುಖವಾಗಬೇಕು. ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ಸಂವಿಧಾನವನ್ನು ಓದಿ, ಚೆನ್ನಾಗಿ ಅರ್ಥ ಮಾಡಿಕೊಂಡು, ಪಾಲಿಸುವುದು ಅತ್ಯಗತ್ಯ.

ನಮ್ಮ ಭಾರತೀಯ ಸಂವಿಧಾನದಲ್ಲಿ ಬಹುತೇಕ ನಮ್ಮ ಹಕ್ಕುಗಳ ಬಗ್ಗೆಯೇ ಹೆಚ್ಚು ವಿವರಗಳಿವೆ. ಆದರೆ ಆರ್ಟಿಕಲ್ 51 ಎ ದಲ್ಲಿ ಮಾತ್ರ ನಮ್ಮ ಕರ್ತವ್ಯಗಳ ಬಗ್ಗೆ ವಿವರವಿದೆ. ಅಂದರೆ, ಪ್ರತಿಯೊಬ್ಬ ಭಾರತೀಯ ಪ್ರಜೆಯ ಕರ್ತವ್ಯಗಳ ಬಗ್ಗೆ ಅಲ್ಲಿ ನಮೂದಿಸಿದ್ದಾರೆ. ನಾವೆಲ್ಲರೂ ಆರ್ಟಿಕಲ್ 51 ಎ ಯನ್ನು ಚೆನ್ನಾಗಿ ಓದಿಕೊಂಡು, ಅದರಂತೆ ನಡೆದು ಜವಾಬ್ದಾರಿಯುತ ಪ್ರಜೆಗಳಾದರೆ ಸಂವಿಧಾನಕ್ಕೆ ಹೆಚ್ಚಿನ ಅರ್ಥ ಬರುತ್ತದೆ ಎನ್ನುವುದು ನನ್ನ ಭಾವನೆ.

ಗಾಂಧೀಜಿ ಮತ್ತು ಅಂಬೇಡ್ಕರ್ ಸಂಬಂಧ

ಒಂದು ವಿಷಯವನ್ನು ನಾವಿಲ್ಲಿ ಗಮನಿಸಬೇಕು. ಅಂಬೇಡ್ಕರ್ ಅವರು ಸ್ವಾತಂತ್ರ್ಯ ಹೋರಾಟದ ತೀವ್ರತೆಯ ಮುಂಚೂಣಿಯಲ್ಲಿ ಇದ್ದವರಲ್ಲ. ಆದರೆ, ಈ ದೇಶ ಗುಲಾಮಗಿರಿಯಿಂದ ಮುಕ್ತವಾಗಬೇಕು ಎನ್ನುವ ವೈಚಾರಿಕತೆ ಅವರಿಗಿತ್ತು. ಅದಕ್ಕಾಗಿ ಅವರು ದುಡಿದಿದ್ದರು. 1931ರಲ್ಲಿ ಸೆಕೆಂಡ್ ರೌಂಡ್ ಟೇಬಲ್ ಕಾನ್ಫರೆನ್ಸ್ ನಡೆದಾಗ ಅಂಬೇಡ್ಕರ್ ಅವರು ಗಾಂಧಿಯವರ ಜೊತೆಗೆ ಅದರಲ್ಲಿ ಭಾಗವಹಿಸುತ್ತಾರೆ. ಆದರೆ, ಗಾಂಧಿಯವರ ಜೊತೆ ಅಂಬೇಡ್ಕರ್ ಅವರಿಗೆ ಒಂದು ಚಿಕ್ಕ ವೈಚಾರಿಕ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಇದಕ್ಕೆ ಕಾರಣ ಬ್ರಿಟಿಷರ ಒಡೆದು ಆಳುವ ನೀತಿ. ಹಿಂದೂ ಸಮಾಜವನ್ನು ಒಡೆಯುವ ದೃಷ್ಟಿಯಿಂದ ಬ್ರಿಟಿಷರು ಪೂನಾ ಪ್ಯಾಕ್ಟ್‌ನಲ್ಲಿ ದಲಿತರಿಗೆ ಸೆಪರೇಟ್ ಎಲೆಕ್ಟೇಟ್ ಕೊಡಬೇಕು ಎನ್ನುವ ಪ್ರಸ್ತಾಪವನ್ನು ತರುತ್ತಾರೆ. ಅಂಬೇಡ್ಕರ್ ಅವರು ಇದರ ಪರವಾಗಿದ್ದರೆ, ಗಾಂಧಿಯವರು ಈ ಪ್ರಸ್ತಾವವನ್ನು ವಿರೋಧಿಸುತ್ತಾರೆ. ನಾವು ಹಿಂದೂ ಸಮಾಜದ ಐಕ್ಯತೆಯನ್ನು ಕಾಪಾಡಬೇಕು ಎನ್ನುವುದು ಗಾಂಧಿಯವರ ಧೋರಣೆ ಆಗಿರುತ್ತದೆ. ಆನಂತರ ಈ ವಿಚಾರದ ಬಗ್ಗೆಯೇ ಸಾಕಷ್ಟು ವಾದ ವಿವಾದಗಳು, ಹೋರಾಟಗಳು ನಡೆದು ಅಂತಿಮವಾಗಿ ಅಂಬೇಡ್ಕರ್ ಅವರು ಗಾಂಧಿಯವರ ಮಾತನ್ನು ಒಪ್ಪುತ್ತಾರೆ. ಹಿಂದೂ ಸಮಾಜದ ಐಕ್ಯತೆ ಮುಖ್ಯ ಎನ್ನುವುದನ್ನು ಅವರೂ ಒಪ್ಪಿಕೊಳ್ಳುತ್ತಾರೆ.

ಇಲ್ಲಿ ನಾನು ಒಂದು ವಿಚಾರವನ್ನು ಹೇಳಲು ಬಯಸುತ್ತೇನೆ. ಗಾಂಧಿಯವರು ಮತ್ತು ಅಂಬೇಡ್ಕರ್ ಅವರ ನಡುವೆ ಅನೇಕ ರಾಷ್ಟ್ರೀಯ ವಿಚಾರಗಳ ಕುರಿತು ಅಭಿಪ್ರಾಯ ಭೇದಗಳಿದ್ದವು. ಆದರೆ ಯಾವತ್ತೂ ಕೂಡ

ಮನಭೇದ ಇರಲಿಲ್ಲ. ಒಬ್ಬರನ್ನೊಬ್ಬರು ಯಾವತ್ತೂ ದ್ವೇಷಿಸಲಿಲ್ಲ. ಇದು ಬಹಳ ಮುಖ್ಯವಾದಂತಹ ವಿಚಾರ. ಮನಭೇದ ಕೆಟ್ಟದ್ದು, ಎಲ್ಲರೂ ಒಂದೇ, ರಾಷ್ಟ್ರಕ್ಕೋಸ್ಕರ ದುಡಿಯಬೇಕು ಎನ್ನುವ ಮನಃಸ್ಥಿತಿ ಇಬ್ಬರಲ್ಲೂ ಇತ್ತು. ಅಂಬೇಡ್ಕರ್ ಅವರು ಹೇಳಿದ ಒಂದು ಮಾತನ್ನು ನಾವಿಲ್ಲಿ ನೆನಪು ಮಾಡಿಕೊಳ್ಳುವುದು ಅತ್ಯಗತ್ಯ. 'ಐ ಆಮ್ ಇಂಡಿಯನ್ ಫಸ್ಟ್ ಆಂಡ್ ಇಂಡಿಯನ್ ಲಾಸ್ಟ್' ಎನ್ನುವ ಮಾತನ್ನು ಅವರು ಹೇಳುತ್ತಾರೆ. ಇದರರ್ಥ, ಭಾರತ ಎನ್ನುವ ಕಲ್ಪನೆಗೆ, ಚಿಂತನೆಗೆ ನಾನು ಯಾವತ್ತೂ ಕಟಿಬದ್ಧ ಎಂದು. ಇದು ಎಂತಹ ದೇಶಪ್ರೇಮದ ಹೇಳಿಕೆ ಅಲ್ವಾ?

ನಾವು ನಮ್ಮ ಗಾಂಧಿ ಭವನದ ಮೂಲಕ ಗಾಂಧಿ- ಅಂಬೇಡ್ಕರ್ ಎಲ್ಲರನ್ನೂ ನೆನಪಿಸಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಅವರ ವಿಚಾರಗಳನ್ನು ನಮ್ಮ ಮಕ್ಕಳಿಗೆ ಮುಟ್ಟಿಸುವಂತಹ ಕೆಲಸ ಮಾಡುತ್ತಿದ್ದೇವೆ. ಗಾಂಧಿಯವರು ಮೇಲ್ವರ್ಗದಿಂದ ಬಂದು ತಳ ಸಮುದಾಯದ ಏಳಿಗಾಗಿ ದುಡಿದಂತವರು. ಅಂಬೇಡ್ಕರ್ ಅವರು ತಳ ಸಮುದಾಯದಿಂದಲೇ ಬಂದು ತಳ ಸಮುದಾಯದವರ ಏಳಿಗಾಗಿ ದುಡಿದಂತವರು. ಈ ವಿಚಾರಗಳ ವ್ಯತ್ಯಾಸವನ್ನು ನಾವು ಮಕ್ಕಳಿಗೆ, ಯುವಕರಿಗೆ ಮುಟ್ಟಿಸಬೇಕು. ಇಷ್ಟೆಲ್ಲ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಒಬ್ಬರಿಗೊಬ್ಬರು ಪರಸ್ಪರ ಗೌರವ ಕೊಡುತ್ತಿದ್ದರು, ಇದೇ ಒಂದು ಉತ್ತಮ ಪಾಠ ನಮಗೆ. ಏಕೆಂದರೆ ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆ. ಹತ್ತಾರು ಜನರಿಗೆ ಹತ್ತಾರು ಅಭಿಪ್ರಾಯಗಳಿರುತ್ತವೆ. ಅಭಿಪ್ರಾಯಗಳು ಬೇರೆಯಾದ ಕೂಡಲೇ ಅವರನ್ನು ತಿರಸ್ಕಾರ ಮಾಡೋಕೆ ಆಗೋದಿಲ್ಲ. ಅಭಿಪ್ರಾಯ ಬೇಧವಿದ್ದರೂ ಸಹಿತ ಹೇಗೆ ಅನ್ಯೋನ್ಯವಾಗಿ ಬದುಕಬೇಕು ಎನ್ನುವುದನ್ನು ಅಂಬೇಡ್ಕರ್-ಗಾಂಧಿಜೀಯವರಂತವರ ಜೀವನ ಅಧ್ಯಯನದ ಮೂಲಕ ನಾವು ತಿಳಿದುಕೊಳ್ಳಬಹುದು. ಇಂತಹ ಹಲವು ಪ್ರಮುಖ ವಿಚಾರವನ್ನು ನಾವು ಗಾಂಧಿ ಭವನದ ಮೂಲಕ ಮಾಡುತ್ತಿದ್ದೇವೆ. ಬಿತ್ತರಿಸುವ ಕೆಲಸವನ್ನು ಮಾಡುತ್ತಿದ್ದೇವೆ.

ಅಂಬೇಡ್ಕರ್ ಮತ್ತು ಮಹಿಳಾ ಸಮಾನತೆ

ನಾನು ಇತ್ತೀಚೆಗೆ ಒಂದು ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿ ನಾನು ಮಾತಾಡುತ್ತಾ ಒಂದು ಮಾತು ಹೇಳಿದೆ. "ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನೀವು ಇಬ್ಬರು ಮಹಾನ್ ಭಾರತೀಯರನ್ನು ನೆನಪಿಸಿಕೊಳ್ಳಲೇಬೇಕು. ಮೊದಲನೆಯದಾಗಿ ಸತಿ ಸಹಗಮನ ಪದ್ಧತಿಯನ್ನು ಹೋಗಲಾಡಿಸಿದಂತಹ ರಾಜರಾಮ್ ಮೋಹನ್‌ರಾಯರು. ಎರಡನೆಯದಾಗಿ ಡಾ. ಅಂಬೇಡ್ಕರ್". ನಾನು ಯಾಕೆ ಅಂಬೇಡ್ಕರ್ ವಿಷಯವನ್ನು ಒತ್ತಿ ಹೇಳಿದೆ

ಎಂದರೆ ಮಹಿಳಾ ಸಮಾನತೆ ಬಗ್ಗೆ ಆ ದಿನಗಳಲ್ಲೇ ಸ್ಪಷ್ಟ ಕಲ್ಪನೆಯನ್ನು ಅವರು ಹೊಂದಿದ್ದರು. ಅದಕ್ಕಾಗಿ ಬಹಳಷ್ಟು ಪ್ರಯತ್ನವನ್ನೂ ಪಟ್ಟಿದ್ದರು. 1950ರಲ್ಲಿ ಅಂಬೇಡ್ಕರ್ ಅವರು 'ಹಿಂದೂ ಕೋಡ್‌ಬಿಲ್'ನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುತ್ತಾರೆ. ಆ ಬಿಲ್ಲಿನ ಮುಖ್ಯ ಅಂಶವೆಂದರೆ ಹೆಣ್ಣು ಮಕ್ಕಳಿಗೂ ಕೂಡ ಆಸ್ತಿಯಲ್ಲಿ ಸಮಪಾಲು ಸಿಗಬೇಕು ಎನ್ನುವುದು. ಇದು ಅಂಬೇಡ್ಕರ್ ಅವರ ಮನದಾಳದ ಬಯಕೆ ಆಗಿತ್ತು. ಆದರೆ, ದುರಾದೃಷ್ಟವಶಾತ್ ಆ ಬಿಲ್ಲು ಸಂಸತ್ತಿನಲ್ಲಿ ಅಂಗೀಕಾರ ಆಗುವುದಿಲ್ಲ. ಸಂಸತ್ತಿನಲ್ಲಿದ್ದ ಬಹುತೇಕ ಹಿಂದುಗಳು ಈ ಬಿಲ್ಲನ್ನು ವಿರೋಧಿಸುತ್ತಾರೆ. "ಭಾರತ ಇನ್ನೂ ಅಂಥ ಒಂದು ದೊಡ್ಡ ಆಮೂಲಾಗ್ರವಾದ ಬದಲಾವಣೆಗೆ ಸಿದ್ಧವಾಗಿಲ್ಲ" ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸುತ್ತಾರೆ. ಇದರಿಂದ ಅಂಬೇಡ್ಕರ್ ಅವರ ಆ ಒಂದು ದಿಟ್ಟ ಹೆಜ್ಜೆಗೆ ಹಿನ್ನಡೆ ಆಗುತ್ತದೆ. ಆದರೂ ಕೂಡ ಆ ಕಾಲಘಟ್ಟದಲ್ಲೇ ಇಂತಹ ಒಂದು ಯೋಚನೆ ಮಾಡಿದ್ದು ಅಂಬೇಡ್ಕರ್ ಅವರ ಹೆಗ್ಗಳಿಕೆ.

ಇಂದು ಅಂತಹುದೇ ಕಾನೂನು ಕರ್ನಾಟಕದಲ್ಲಿ ಜಾರಿಗೆ ಬಂದಿದೆ. ಆದರೆ ಅದಕ್ಕಾಗಿ ನಾವು ಸುಮಾರು 70 ವರ್ಷ ಕಾಯಬೇಕಾಯಿತು. ಇಷ್ಟು ವರ್ಷಗಳಲ್ಲಿ ಎಷ್ಟೋ ಪೀಳಿಗೆಯ ಮಹಿಳೆಯರು ತಮ್ಮ ಹಕ್ಕುಗಳನ್ನು ಕಳೆದುಕೊಂಡರು. ಅಂದೇ ಆ ಬಿಲ್ಲಿಗೆ ಒಪ್ಪಿಗೆ ಸಿಕ್ಕಿದ್ದರೆ ಭಾರತದಲ್ಲಿನ ಮಹಿಳೆಯರ ಸ್ಥಿತಿಗತಿಯಲ್ಲಿ ಆಮೂಲಾಗ್ರ ಬದಲಾವಣೆ ಆಗುವ ಎಲ್ಲ ಸಾಧ್ಯತೆಗಳಿದ್ದವು. ಆದ್ದರಿಂದಲೇ ನಾನು ಮತ್ತೆ ಮತ್ತೆ ಹೇಳುವ ಮಾತೆಂದರೆ ಅಂಬೇಡ್ಕರ್ ಅವರನ್ನು ನಾವು ಕೇವಲ ದಲಿತ ನಾಯಕನ ಚೌಕಟ್ಟಿನಲ್ಲಿ ನಿಲ್ಲಿಸಬಾರದು. ಅವರು ಯಾವುದೇ ಸಮುದಾಯ, ವರ್ಗಕ್ಕೆ ಒಳಪಟ್ಟವರಲ್ಲ.

ಅಂಬೇಡ್ಕರ್ ಮತ್ತು ಸಹಿಷ್ಣುತೆ

ಒಬ್ಬ ವ್ಯಕ್ತಿ ಇತರರ ಅಭಿಪ್ರಾಯಗಳಿಗೆ ಬೆಲೆಕೊಟ್ಟು ಅದನ್ನು ಗೌರವಿಸುತ್ತಾನೆ ಎಂದರೆ ಆತನಲ್ಲಿ ಸಹಿಷ್ಣುತೆ ಅಂಶ ಹೇರಳವಾಗಿದೆ ಎಂದೇ ಅರ್ಥ. ಅಂಬೇಡ್ಕರ್ ಅವರು ಎಷ್ಟರಮಟ್ಟಿಗೆ ಜನಾಭಿಪ್ರಾಯದಲ್ಲಿ ನಂಬಿಕೆ ಇಟ್ಟವರಾಗಿದ್ದರು ಎನ್ನುವುದನ್ನು ತಿಳಿಯಬೇಕಾದರೆ ನಮ್ಮ ಸಂವಿಧಾನ ರಚನೆಯಾದ ಪ್ರಕ್ರಿಯೆಯನ್ನು ಒಮ್ಮೆ ಗಮನಿಸಬೇಕು. ನಮ್ಮ ಸಂವಿಧಾನವನ್ನು ರಚನೆ ಮಾಡಬೇಕಾದರೆ ಅಂಬೇಡ್ಕರ್ ಅವರು ಸುಮಾರು 70 ದೇಶಗಳ ಸಂವಿಧಾನವನ್ನು ಅಧ್ಯಯನ ಮಾಡಿದ್ದರು. ಎಲ್ಲ ಸಂವಿಧಾನಗಳಲ್ಲಿ ಇರುವಂತಹ ಉತ್ತಮ ವಿಚಾರಗಳ ಸಾರವನ್ನು ಸಂಗ್ರಹ ಮಾಡಿದ್ದರು. ನಂತರ ಅವುಗಳನ್ನು ವ್ಯಾಪಕ ಚರ್ಚೆಗೆ ಒಳಪಡಿಸಿದರು. ಇದನ್ನೊಮ್ಮೆ

ಗಮನಿಸಿ, ನಾನು ಹೇಳಿದ್ದನ್ನು ನೀವು ಒಪ್ಪಿಕೊಳ್ಳಬೇಕು ಎಂದು ಅವರು ಹೇಳಲಿಲ್ಲ. ಅಂಬೇಡ್ಕರ್ ಅವರು ಮಂಡಿಸಿದ ಪ್ರತಿಯೊಂದು ವಿಷಯದ ಮೇಲೂ ವ್ಯಾಪಕ ಚರ್ಚೆಯಾಗುತ್ತದೆ. ಪ್ರತಿಯೊಂದು ಶಬ್ದದ ಬಗ್ಗೆಯೂ ವಿಮರ್ಶೆಯಾಗುತ್ತದೆ. ಈ ಎಲ್ಲ ಚರ್ಚೆಯನ್ನು ಅವರು ದಾಖಲೆ ಮಾಡುತ್ತಾರೆ. 2 ವರ್ಷ, 11 ತಿಂಗಳು, 15 ದಿವಸಗಳ ಕಾಲ ಈ ಪ್ರಕ್ರಿಯೆಗಳು ನಡೆಯುತ್ತವೆ. ಅಂತಿಮವಾಗಿ ಸಂವಿಧಾನ ರಚನೆಯಾಗುತ್ತದೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ತಾವೊಬ್ಬ ದೊಡ್ಡ ವಿದ್ವಾಂಸ ಎನ್ನುವ ರೀತಿಯಲ್ಲಿ ಅಂಬೇಡ್ಕರ್ ಅವರು ಎಂದಿಗೂ ವರ್ತಿಸಲಿಲ್ಲ. ಎಲ್ಲರನ್ನೂ ಗಣನೆಗೆ ತೆಗೆದುಕೊಂಡು, ಎಲ್ಲರ ಅಭಿಪ್ರಾಯಕ್ಕೂ ಗೌರವ ನೀಡಿ, ತಾವೆಷ್ಟು ಸಹಿಷ್ಣು ಎನ್ನುವುದನ್ನು ನಿರೂಪಿಸಿದರು.

ಸಂವಿಧಾನದ ಬಗ್ಗೆ ಜನಜಾಗೃತಿ

ಸಂವಿಧಾನದ ಬಗ್ಗೆ ಸ್ವಯಂಪ್ರೇರಿತರಾಗಿ ಜನರು ಜಾಗೃತಗೊಳ್ಳುವಂತಹ ಅಗತ್ಯತೆ ಇದೆ. ನಮ್ಮ ಪ್ರತಿಯೊಬ್ಬ ನಾಗರಿಕನಿಗೂ ಸಹ ಸಂವಿಧಾನದ ಬಗ್ಗೆ ಸ್ವಲ್ಪವಾದರೂ ತಿಳಿವಳಿಕೆ ಇರಬೇಕು. ಈ ವಿಷಯದಲ್ಲಿ ಶಿಕ್ಷಣ ಸಂಸ್ಥೆಗಳ ಜವಾಬ್ದಾರಿ ಬಹಳ ಮಹತ್ವದ್ದು. ಸಂವಿಧಾನದ ವಿಷಯಗಳನ್ನು ಪದವಿ ಶಿಕ್ಷಣದಲ್ಲಿ ಸೇರಿಸಿದ್ದಾರೆ. ಶಾಲೆಗಳಲ್ಲಿ ಕೂಡ ಸಂವಿಧಾನದ ಪರಿಚಯ ಮಾಡಿಕೊಟ್ಟರೆ ಜನರಲ್ಲಿ ಸಂವಿಧಾನದ ಬಗ್ಗೆ ಗೌರವ ಮೂಡಲು ಸಾಧ್ಯವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಶಿಕ್ಷಣ ಸಂಸ್ಥೆಗಳು ಹೆಚ್ಚು ಆಸಕ್ತಿವಹಿಸಿ ನಮ್ಮ ಸಂವಿಧಾನವನ್ನು, ಗಾಂಧಿ ಅಂಬೇಡ್ಕರ್ ಅವರಂತಹ ರಾಷ್ಟ್ರೀಯ ನಾಯಕರನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ನಮ್ಮ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ 17 ಕಾಲೇಜುಗಳಿವೆ. ಆ 17 ಕಾಲೇಜುಗಳಲ್ಲೂ ಅಂಬೇಡ್ಕರ್ ಅಧ್ಯಯನ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ವಿವೇಕಾನಂದ ಅಧ್ಯಯನ ಕೇಂದ್ರವನ್ನು ನಾವು ಸ್ಥಾಪನೆ ಮಾಡಿದ್ದೇವೆ. ಮಕ್ಕಳೆಲ್ಲರಿಗೂ ಓದುವುದಕ್ಕೆ, ಅಧ್ಯಯನ ಮಾಡೋದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಇದರಿಂದ ಹೆಚ್ಚು ಆಳವಾಗಿ ಮಕ್ಕಳು ಅಧ್ಯಯನ ಮಾಡಿ, ನಾಯಕತ್ವದ ಗುಣಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ದೊಡ್ಡ ರಾಷ್ಟ್ರೀಯ ಚಿಂತಕರ ವಿಚಾರಗಳನ್ನು ಅವರು ಜೀರ್ಣ ಮಾಡಿಕೊಂಡು, ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಪ್ರಯತ್ನಗಳನ್ನು ಎಲ್ಲ ಶಿಕ್ಷಣ ಸಂಸ್ಥೆಗಳೂ ಮಾಡಬೇಕೆಂದು ನನ್ನ ವಿನಂತಿ.

ಸಂವಿಧಾನ ತಿದ್ದುಪಡಿ ಬಗ್ಗೆ

ಆಗಾಗ ಕಾಲಕ್ಕೆ ತಕ್ಕಂತೆ ನಮ್ಮ ಸಂವಿಧಾನದಲ್ಲಿ ಸಣ್ಣ ಪುಟ್ಟ ತಿದ್ದುಪಡಿಗಳು ಆಗಿರುವುದು ನಿಜ. ಆದರೆ ಒಂದು ಮುಖ್ಯ ವಿಷಯವನ್ನು ನಾವಿಲ್ಲಿ ಗಮನಿಸಬೇಕು. ನಮ್ಮ ಸಂವಿಧಾನದ ಮೂಲ ಸ್ವರೂಪ ಏನಿದೆಯೋ, ಅದು ಹಾಗೆಯೇ ಇದೆ. ಅದರಲ್ಲಿ ಯಾವುದೂ ಆಮೂಲಾಗ್ರವಾದ ಬದಲಾವಣೆಗಳೇನೂ ಆಗಿಲ್ಲ. ಸ್ವತಃ ಅಂಬೇಡ್ಕರ್ ಅವರೇ ನಮ್ಮ ಸಂವಿಧಾನವನ್ನು 'ಅ ಲೈವಿ ಡಾಕ್ಯುಮೆಂಟ್' ಅಂತ ಹೇಳಿದ್ದರು. ಅಂದರೆ ನಮ್ಮ ಸಂವಿಧಾನ ಜೀವಂತ ಇರುವಂತಹ ಕಡತ. *anan* ಸಂವಿಧಾನದಲ್ಲಿ ಕಾಲಾನುಕಾಲಕ್ಕೆ ಬೇಕಾದಂತಹ ಸಣ್ಣಪುಟ್ಟ ತಿದ್ದುಪಡಿಗಳು ಆದರೆ ತಪ್ಪೇನಿಲ್ಲ. ಆದರೆ, ಸಂವಿಧಾನದ ಮೂಲ ಆಶಯವನ್ನು ಬದಲಾಯಿಸಲು ಯಾರೂ ಪ್ರಯತ್ನಪಡಬಾರದು, ಅದು ಅಪರಾಧವಾಗುತ್ತದೆ.

ಮೀಸಲಾತಿಯ ಹಿಂದಿನ ಉದ್ದೇಶ

ಅಂಬೇಡ್ಕರ್ ಅವರ ಕಲ್ಪನೆ ಬಹಳ ಸ್ಪಷ್ಟವಾಗಿತ್ತು. ಅವರ ಪ್ರಕಾರ ಎಲ್ಲ ವರ್ಗದ ಜನರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವಂತಹ ಕೆಲಸವೇ ನಾವು ಮಾಡಬೇಕಾದ ಮೊದಲನೆಯ ಕೆಲಸ. 'ಕಮಿಂಗ್ ಟುಗೆದರ್ ಈಸ್ ದಿ ಬಿಗಿನಿಂಗ್' ಎನ್ನುವ ಮಾತನ್ನು ಅವರು ಹೇಳಿದ್ದರು. ಜನರಲ್ಲಿ ಭೇದ ಹೋಗಿಬಿಡಬೇಕು, ಭಾವ ಕೆಳವರ್ಗದ ಜನರೇನಿದ್ದಾರೆ, ತುಳಿತಕ್ಕೊಳಗಾದ ಜನರೇನಿದ್ದಾರೆ, ಅವರಿಗೆ ನಾವು ಬೆಂಬಲವಾಗಿ ನಿಲ್ಲಬೇಕು ಎನ್ನುವುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಇದೇ ಉದ್ದೇಶಕ್ಕಾಗಿಯೇ ಅವರು ಸ್ವಾತಂತ್ರ್ಯ ನಂತರ ಹತ್ತು ವರ್ಷಗಳ ಮೀಸಲಾತಿಯನ್ನು ನೀಡಬೇಕೆಂದು ಹೇಳಿದರು. ಕೆಳವರ್ಗದವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎನ್ನುವ ಉದ್ದೇಶ ಇದರ ಹಿಂದೆ ಇತ್ತು. ಆ ಮೀಸಲಾತಿ ಈಗಲೂ ಹಾಗೆಯೇ ಮುಂದುವರೆದುಕೊಂಡು ಬಂದಿದೆ. ಮೀಸಲಾತಿಯಿಂದ ಏನಾದರೂ ಲಾಭವಾಯಿತಾ ಅಂತ ನೀವು ಕೇಳಿದರೆ, ಖಂಡಿತ ಲಾಭವಾಯಿತು ಅಂತ ನಾನು ಹೇಳುತ್ತೇನೆ. 1947ರ ಸಾಮಾಜಿಕ ಸ್ಥಿತಿಗೂ, ಇಂದಿನ ಸಾಮಾಜಿಕ ಸ್ಥಿತಿಗೂ ಸಾಕಷ್ಟು ಬದಲಾವಣೆಯಾಗಿದೆ. ಹಿಂದೆ ಶಿಕ್ಷಣದಿಂದ ವಂಚಿತರಾದವರು, ಸರ್ಕಾರಿ ಕೆಲಸದಿಂದ ವಂಚಿತರಾದವರೆಲ್ಲ ಇಂದು ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಇದರಿಂದ ನಮ್ಮ ಸ್ವಾತಂತ್ರ್ಯಕ್ಕೂ ಒಂದು ಅರ್ಥ ಬಂದಿದೆ ಅಂತಾ ಹೇಳಿ ನಾನು ಭಾವಿಸಿದ್ದೇನೆ. ಅಂಬೇಡ್ಕರ್ ಅವರ ಬಹಳ ಮುಖ್ಯವಾದ ಕಲ್ಪನೆ ಎಂದರೆ– ಲಿಬರ್ಟಿ, ಇಕ್ವಾಲಿಟಿ ಆಂಡ್ ಫ್ರೆಟರ್ನಿಟಿ. (ಸ್ವಾತಂತ್ರ್ಯ, ಸಮಾನತೆ ಮತ್ತು

ಭ್ರಾತೃತ್ವ). ಈ ಕಲ್ಪನೆ ಇಂದು ಬಹುಮಟ್ಟಿಗೆ ಸಾಕಾರಗೊಳ್ಳುತ್ತಾ ಇದೆ ಅಂತ ನಾನು ಭಾವಿಸುತ್ತೇನೆ.

ನಮ್ಮ ಕರ್ತವ್ಯವೇನು ?

ಬಾಬಾಸಾಹೇಬ್ ಅಂಬೇಡ್ಕರ್ ಅವರು ದಲಿತರ ಪ್ರಮುಖವಾಗಿ ಮೂರು ಕನಸುಗಳನ್ನು ಇಟ್ಟುಕೊಂಡಿದ್ದರು. ಮೊದಲನೆಯದು, ಅವರೆಲ್ಲರಿಗೂ ಶಿಕ್ಷಣ ಎಟಕುವಂತೆ ಮಾಡಬೇಕು. ಅದು ಸಂವಿಧಾನದ ಮೂಲಕ ಬಹುಮಟ್ಟಿಗೆ ಸಾಧ್ಯವಾಯಿತು. ಎರಡನೆಯದು, ದಲಿತರಿಗೆ ಸರ್ಕಾರಿ ಸೇವೆಗಳಲ್ಲಿ ಅವಕಾಶ ಸಿಗಬೇಕು. ಇದನ್ನೂ ಸಹ ಸಂವಿಧಾನ ರಚನೆಯ ಮೂಲಕ ಅಂಬೇಡ್ಕರ್ ಅವರು ತಕ್ಕಮಟ್ಟಿಗೆ ಸಾಧ್ಯವಾಗಿಸಿದರು. ಅವರು ಇಟ್ಟುಕೊಂಡಿದ್ದ ಮೂರನೆಯ ದೊಡ್ಡ ಕನಸು ಏನೆಂದರೆ, ಗ್ರಾಮೀಣ ಭಾರತದಲ್ಲಿರುವ ದಲಿತರ ಬದುಕು ಹಸನಾಗಬೇಕು ಎನ್ನುವುದು. ತಮ್ಮ ಕಡೆಯ ದಿನಗಳಲ್ಲಿ ಅಂಬೇಡ್ಕರ್ ಅವರೇ ಒಂದು ಕಡೆ ಹೇಳುತ್ತಾರೆ– "ನನ್ನ ಮೊದಲ ಎರಡು ಆಸೆ ಈಡೇರಿತು. ಆದ್ರೆ ಮೂರನೆಯ ಆಸೆ ಯಾಕೋ ಇನ್ನೂ ಈಡೇರಿಲ್ಲ", ಅಂದರೆ ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಬದುಕು ಇನ್ನೂ ಕೂಡ ಪೂರ್ಣವಾಗಿ ಹಸನಾಗಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇರುವಂತಹ ಅಸ್ಪೃಶ್ಯತಾ ಮನೋಭಾವ, ಜಾತಿ ಬಗೆಗಿನ ಕೀಳು ಭಾವನೆ, ಇವೆಲ್ಲವನ್ನೂ ತೊಡೆದು ಹಾಕುವಂತಹ ಕೆಲಸ ಇಂದಿಗೂ ಬಾಕಿ ಇದೆ. ಹಾಗಾಗಿ ಅಂಬೇಡ್ಕರ್ ಅನುಯಾಯಿಗಳು, ಅಂಬೇಡ್ಕರ್ ಪ್ರೇಮಿಗಳು, ಅಂಬೇಡ್ಕರ್ ಅಭಿಮಾನಿಗಳು ಎಲ್ಲರೂ ಕೂಡ ಆ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಅಂಬೇಡ್ಕರ್ ಅವರ ಈಡೇರದ ಮೂರನೆಯ ಕನಸನ್ನು ಎಲ್ಲರೂ ಕೂಡ ನನಸು ಮಾಡಿದರೆ ಅದೇ ಅವರಿಗೆ ನಾವು ಸಲ್ಲಿಸುವ ನಿಜವಾದ ಗೌರವ.

ನಾನು ಕೊನೆಯದಾಗಿ ನಮ್ಮ ಸಮುದಾಯದವರಲ್ಲಿ ಒಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ: ಇಂದಿನ ದಿನ ಸೋಶಿಯಲ್ ಮೀಡಿಯಾ ಮೂಲಕ ಸಾಕಷ್ಟು ಕೆಟ್ಟ, ಸುಳ್ಳು ಮಾಹಿತಿಯನ್ನು ಕೊಡುವ ಪ್ರಯತ್ನ ನಡೆಯುತ್ತಿದೆ. ದುರಾದೃಷ್ಟವೆಂದರೆ ನಮ್ಮ ಬಗ್ಗೆಯೂ ಮಹಾನ್ ನಾಯಕರ ಬಗ್ಗೆಯು ಸಹ ತಲೆಬುಡವಿಲ್ಲದ ಮಾಹಿತಿಗಳು ಹರಿದಾಡುತ್ತವೆ. ಯುವಕರಲ್ಲಿ ನಾನು ಹೇಳುವುದಿಷ್ಟೇ "ವೆರಿಫೈ ಬಿಫೋರ್ ಅಕ್ಸೆಪ್ಟ್ ಎನಿಥಿಂಗ್", ನೀವು ಏನನ್ನಾದರೂ ನಂಬುವ ಮೊದಲು ಅದು ಸತ್ಯವೆ? ಅಂತ ಒಂದು ಸಲ ಪರಾಮರ್ಶೆ ಮಾಡಿಕೊಳ್ಳಿ. ಬಂದಿದ್ದೆಲ್ಲಾ ಸತ್ಯ ಅಂತ ದಯವಿಟ್ಟು ನಂಬಬೇಡಿ. ಅಂಬೇಡ್ಕರ್ ಇರಬಹುದು, ಗಾಂಧೀಜಿ ಇರಬಹುದು,

ಪ್ರಶ್ನೆ ಮಾಡುವ ಸ್ವಾತಂತ್ರ್ಯ ನಿಮಗೂ ಇದೆ. ಆದರೆ ಅದಕ್ಕೂ ಮೊದಲು ಅಧ್ಯಯನ ಮಾಡಿ. ಅವರನ್ನು ಅರ್ಥ ಮಾಡಿಕೊಳ್ಳಿ. ನಂತರ ಅವರನ್ನು ಪ್ರಶ್ನೆ ಮಾಡಿ, ಬೇಕಾದರೆ ಅವರ ಬಗ್ಗೆ ಚಾಲೆಂಜ್ ಕೂಡ ಮಾಡಿ. ಇಬ್ಬರ ಬಗ್ಗೆಯೂ ವಿಪುಲವಾದ ಸಾಹಿತ್ಯ ನಮಗೆ ಎಲ್ಲ ಕಡೆ ದೊರೆಯುತ್ತದೆ. ಅವರಿಬ್ಬರದೂ ಪಾರದರ್ಶಕ ಬದುಕು. ಅವರ ಬಗ್ಗೆ ಓದಿ ಅರ್ಥೈಸಿಕೊಂಡರೆ ಖಂಡಿತವಾಗಿ ಅವರಿಬ್ಬರ ಬಗ್ಗೆ ಗೌರವ ಹೆಚ್ಚಾಗುತ್ತದೆ.

“ಸಮ ಸಮಾಜದ ಮುಖ್ಯವಾಹಿನಿ”

ವೂಡೇ ಪಿ. ಕೃಷ್ಣ ಕುರಿತಾದ ರಾಜ್ಯ ರಾಷ್ಟ್ರ ಮತ್ತು ಅಂತಾರಾಷ್ಟ್ರದ ಮಟ್ಟದಲ್ಲಿರುವ ಓದುಗರ ಮಾತುಗಳು ಹೃದಯದಿಂದ ಓದುತ್ತ ಪ್ರಸ್ತುತ ಗೊಂದಲದ ಕಾಲಘಟ್ಟದಲ್ಲಿ ನಮ್ಮಂತಹವರಿಗೆ ವೂಡೇ ಪಿ. ಅವರ ಕಾರ್ಯವೈಖರಿಯ ಬಗ್ಗೆ ಓದಿ ಅಂದಿನ ಗಾಂಧಿಯುಗ ಇಂದು ವೂಡೇ ಪಿ. ಯುಗವಾಗಿ ಬದಲಾಗುತ್ತಿದೆಯೇ ಎಂದು ನಮಗೆ ಅನ್ನಿಸುತ್ತದೆ. ಹೌದು ಗಾಂಧೀಜಿಯವರು ದೇಶದ ಸ್ವಾತಂತ್ರಕ್ಕಾಗಿ ತಮ್ಮನ್ನೇ ತಾವು ತ್ಯಾಗ ಮಾಡಿಕೊಂಡರು. ಅದೇ ರೀತಿ ಕಡುಬಡತನದಲ್ಲಿ ಹುಟ್ಟಿ ತಾವು ನೋವು ಕಷ್ಟಪಟ್ಟಂತೆ ಬೇರೆ ಯಾರೂ ಕಷ್ಟಪಡಬಾರದು, ಎಲ್ಲರೂ ಭಾರತದ ಪ್ರಜೆಗಳಾಗಿ ನೆಮ್ಮದಿಯಿಂದ ಬದುಕಬೇಕು ಎಂಬ ನಿಟ್ಟಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರು

'ಭಾರತೀಯ ಸಂವಿಧಾನ' ಎಂಬ ಗ್ರಂಥವನ್ನು ಕೊಟ್ಟರು. ಹೀಗಾಗಿ, ಭಾರತ ದೇಶಕ್ಕೆ ಸರ್ವಕಾಲಕ್ಕೂ ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ತ್ಯಾಗ ಶ್ರೇಷ್ಠವಾಗಿರುತ್ತದೆ. ಈ ಇಬ್ಬರು ನಾಯಕರು ಸ್ವಾರ್ಥವನ್ನು ಬಿಟ್ಟು ದೇಶಕ್ಕಾಗಿ ದೀನ ದಲಿತರಿಗಾಗಿ ದುಡಿದಂತಹವರು, ಈ ಇಬ್ಬರು ಸರ್ವಕಾಲಕ್ಕೂ ಸಲ್ಲುವ ಮಹಾನ್ ವ್ಯಕ್ತಿಗಳಾಗಿರುತ್ತಾರೆ. ಇವರ ನಂತರ ಇಂತಹ ವ್ಯಕ್ತಿಗಳು ನಮ್ಮ ಸಮಾಜದಲ್ಲಿ ಕಣ್ಣಿಗೆ ದುರ್ಬೀನು ಹಾಕಿ ಹುಡುಕಿದರೂ ಸಿಗುವುದಿಲ್ಲ, ಈ ಇಬ್ಬರ ಸೇವೆ ಅನನ್ಯವಾದದು, ಒಬ್ಬರು ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರೆ, ಮತ್ತೊಬ್ಬರು ಇಡೀ ವಿಶ್ವದಲ್ಲೇ ಹೆಮ್ಮೆ ಪಡುವಂತೆ ಗೌರವಿಸುವಂತಹ ಸಂವಿಧಾನವನ್ನು ಕೊಟ್ಟರು. ಇವರ ನಂತರ ದೇಶಕ್ಕಾಗಿ, ದೀನ ದಲಿತರ ಅಭಿವೃದ್ಧಿಗಾಗಿ ಯಾರೂ ತುಂಬು ಹೃದಯದಿಂದ ದುಡಿದಂತಹವರು, ಸ್ಪಂದಿಸುವವರು ಅಷ್ಟಾಗಿ ತಮಗೆ ಕಾಣುತ್ತಿಲ್ಲ, ಒಂದು ವೇಳೆ ಕಂಡರೂ ಸ್ವಾರ್ಥಿಗಳಾಗಿರುತ್ತಾರೆ. ಅವರು ವಿವಿಧ ರೀತಿಯ ಅಧಿಕಾರವನ್ನು ಪಡೆಯಲು ನಿರಂತರವಾಗಿ ಒಳಸಂಚನ್ನು ಮಾಡುತ್ತಾ ನೆಪಮಾತ್ರಕ್ಕೆ ಸಮಾಜಸೇವೆ, ಸಮುದಾಯದ ಸೇವೆ ಎಂದು ಹೇಳುತ್ತಾ ಪ್ರಜಾಪ್ರಭುತ್ವದ ಪ್ರಜೆಗಳಿಗೆ ವಂಚಿಸುವ ಕೆಲಸಗಳನ್ನು ಮಾಡುತ್ತಿರುತ್ತಾರೆ. ಅದರಲ್ಲೂ ಇತ್ತೀಚಿನ ದಿನಗಳಲ್ಲಿ ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರ ತತ್ವ ಸಿದ್ಧಾಂತಗಳು ಅವರ ಆದರ್ಶಗಳು ಕಾಣೆಯಾಗುತ್ತಿವೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ಇಬ್ಬರು ನಾಯಕರ ಸಾಧನೆಗಳನ್ನು ಕಣ್ಮರೆಯಾಗುವಂತೆ ಮಾಡುತ್ತಿದ್ದಾರೆ.

ಆದರೂ ಮಹಾತ್ಮ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ಸಾಧನೆಗಳನ್ನು ಅವರ ಕಾರ್ಯವೈಖರಿಯನ್ನು ಸಮ ಸಮಾಜದ ಪ್ರತಿಯೊಬ್ಬ ಪ್ರಜೆಯೂ ಮರೆಯಬಾರದು, ಅವರ ಆಚಾರ ವಿಚಾರಗಳನ್ನು ನಾವು ಅಳವಡಿಸಿಕೊಳ್ಳಬೇಕು ಎಂಬ ನಿಟ್ಟಿನಲ್ಲಿ ವೂಡೇಪಿ ಕೃಷ್ಣ ಅಂತಹವರು ಈ ಇಬ್ಬರು ಮಹಾನ್ ನಾಯಕರ ಕೆಲಸಕಾರ್ಯಗಳನ್ನು ಚತುತಪ್ಪದೆ ಎಲೆ ಮರೆಯ ಕಾಯಿಯಂತೆ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಯಾರು ಏನೇ ಹೇಳಲಿ, ಏನೇ ಟೀಕೆ ಮಾಡಲಿ ತನ್ನ ಜೀವನವನ್ನು ಸಮ ಸಮಾಜದ ಅಭಿವೃದ್ಧಿ ಜಾಗೃತಿಯ ಜೊತೆಗೆ ದೀನ ದಲಿತರ ಅಭಿವೃದ್ಧಿ ಮತ್ತು ಶಿಕ್ಷಣದ ಬಗ್ಗೆ ಸದಾ ದುಡಿಯುತ್ತಿರುವ ವೂಡೇಪಿರವರು ಮುಂದಿನ ಪೀಳಿಗೆಗೆ ಒಬ್ಬ ಆದರ್ಶ ವ್ಯಕ್ತಿಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಇವರು ವೃತ್ತಿ ಮತ್ತು ಪ್ರವೃತ್ತಿ ಯಾವುದು ಎಂದು ತಿಳಿಯಲು ನಮ್ಮಂತಹವರು ಹೋದಾಗ ನಮಗೆ ಗೊತ್ತಾಗುವುದು ಮಹಾತ್ಮ ಗಾಂಧಿ ಮತ್ತು ಅಂಬೇಡ್ಕರ್ ಅವರಲ್ಲಿದ್ದ ವೃತ್ತಿ ಪ್ರವೃತ್ತಿಯನ್ನು ತನ್ನ ಜೀವನದ

ಬದುಕಿನಲ್ಲಿ ಅಳವಡಿಸಿಕೊಂಡಿರುತ್ತಾರೆ. ಇಂತಹ ವ್ಯಕ್ತಿ ಈ ಕಾಲ ಘಟ್ಟದಲ್ಲಿಯೂ ನಮ್ಮಲ್ಲಿ ಇದ್ದಾರೆ ಎಂದರೆ ಆ ಇಬ್ಬರು ಮಹಾನ್ ನಾಯಕರ ಆಶೀರ್ವಾದ ಇರಬಹುದೇನೋ ಎಂಬ ನಂಬಿಕೆ ನನ್ನಂತಹವನಿಗೆ ಕಾಣುತ್ತದೆ. ಏಕೆಂದರೆ ವೂಡೇ ಪಿ. ಅವರು ದೀನ ದಲಿತರು ಮೊದಲು ಶಿಕ್ಷಣವನ್ನು ಪಡೆಯಬೇಕು. ಶಿಕ್ಷಣ ಪಡೆಯುವುದರ ಜೊತೆಗೆ ಜ್ಞಾನ, ಸಂಸ್ಕಾರವನ್ನು ಪಡೆಯಬೇಕು, ಅದೇ ರೀತಿ ಮಹಾತ್ಮ ಗಾಂಧೀಜಿಯವರು ದೇಶಕ್ಕೆ ಎಷ್ಟು ಪರಿಶುದ್ಧವಾಗಿ, ಅಹಿಂಸೆಯಿಂದ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟರೋ ಆ ರೀತಿ ದೇಶವನ್ನು, ದೇಶದ ಅಭಿವೃದ್ಧಿಯನ್ನು ನಾವು ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕು. ಈ ರೀತಿಯ ಧೋರಣೆಯನ್ನು ವೂಡೇಪಿ ಕೃಷ್ಣರಂತಹವರಲ್ಲಿ ನಾವು ಕಾಣಬಹುದು.

ನಾನು ಕಳೆದ ವರ್ಷ ಜುಲೈ 2023ರ ಆದಿಜಾಂಬವ ಜಾಗೃತಿ ಸಂಚಿಕೆಯೊಂದಿಗೆ ವೂಡೇಪಿ ಕೃಷ್ಣರವರ ಬಗ್ಗೆ ಪ್ರಥಮವಾಗಿ ಏನಾದರೂ ಬರೆಯಬೇಕು ಅಂದುಕೊಂಡು ಅವರ ಕುರಿತಾದ ಒಂದು ಲೇಖನವನ್ನು ನನಗೆ ತಿಳಿದ ಮಟ್ಟಿಗೆ ಬರೆದಿದ್ದೆ, ಅಲ್ಲಿಯತನಕ ವೂಡೇಪಿ ಕೃಷ್ಣರವರನ್ನು ಮತ್ತು ಅವರ ಬಗ್ಗೆ ಯಾವ ಮಾಹಿತಿಯಾಗಲಿ ನನ್ನ ಹತ್ತಿರ ಇರಲಿಲ್ಲ. ಆದರೂ ನನ್ನ ಅನೇಕ ಹಿರಿಯ ಪತ್ರಕರ್ತರು, ಸಾಹಿತಿಗಳು, ಮಿತ್ರರು, ಸಮಯ ಸಿಕ್ಕಾಗ ವೂಡೇಪಿರವರ ಬಗ್ಗೆ ತುಂಬಾ ಗೌರವದಿಂದ ಪ್ರೀತಿಯಿಂದ ಮಾತನಾಡುತ್ತಿದ್ದರು. ನಾನು ಸಹ ದಿನಪತ್ರಿಕೆಗಳನ್ನು ಓದುವಾಗ ಪ್ರತಿದಿನ ಅವರ ಬಗ್ಗೆ ಯಾವುದಾದರೂ ಒಂದು ಕಾಲಂನಲ್ಲಿ ಅವರ ಹೆಸರು ಇರುತ್ತಿತ್ತು. ನಗರದಲ್ಲಿ ನಡೆಯುವ ಪುಸ್ತಕ ಬಿಡುಗಡೆಯ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ, ಕನ್ನಡ ಪರವಾದ ಚಿಂತನ ಮಂಥನ ಸಮಾರಂಭ ಹೀಗೆ ಹತ್ತು ಹಲವು ರೀತಿಯ ಕಾರ್ಯಕ್ರಮಗಳಲ್ಲಿ ಇವರು ಭಾಗಿಯಾಗುತ್ತಿದ್ದ ಮಾಹಿತಿಗಳು ಸಾಮಾನ್ಯವಾಗಿ ಪತ್ರಿಕೆಗಳಲ್ಲಿ ಇರುತ್ತಿದ್ದು ಇದರ ಜೊತೆಗೆ ಮೊಬೈಲ್‌ನ ವಾಟ್ಸಪ್‌ಗಳಲ್ಲಿಯೂ ನನ್ನ ಅನೇಕ ಸ್ನೇಹಿತರು ಸಹ ವೂಡೇಪಿರವರು ಭಾಗವಹಿಸುವಂತಹ ಕಾರ್ಯಕ್ರಮದ ಬಗ್ಗೆ ವಾಟ್ಸಾಪ್ ಕಳುಹಿಸುತ್ತಿದ್ದರು. ಇವೆಲ್ಲವನ್ನು ಗಮನಿಸಿ ನಾನು ಏತಕ್ಕೆ ವೂಡೇಪಿ ಕೃಷ್ಣರವರ ಬಗ್ಗೆ ಏನಾದರೂ ಬರೆಯಬಾರದು ಅಂದುಕೊಂಡು ಅಲ್ಲಿಂದ ಶುರುವಾದ ವೂಡೇಪಿಯವರ ಅಂಕಣನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯ ಪ್ರತಿ ಸಂಚಿಕೆಯಲ್ಲಿ ಧಾರಾವಾಹಿ ರೂಪದಲ್ಲಿ ಪ್ರಕಟಗೊಳ್ಳುತ್ತಾ ಬರುತ್ತಿದೆ.

ಯಾವಾಗ ನಮ್ಮ ಆದಿಜಾಂಬವ ಜಾಗೃತಿ ಮಾಸಪತ್ರಿಕೆಯಲ್ಲಿ "ಆಡು ಮುಟ್ಟದ ಸೊಪ್ಪಿಲ್ಲ - ವೂಡೇ ಪಿ ಕೃಷ್ಣ" ಎಂಬ ಅಂಕಣ ಪ್ರಾರಂಭವಾಯಿತೋ ಅಲ್ಲಿಂದ ಪ್ರಾರಂಭವಾದ ವೂಡೇಪಿರವರ ಅಂಕಣವನ್ನು ರಾಜ್ಯದ 30

ಜಿಲ್ಲೆಗಳಲ್ಲಿರುವ ಹಿಂದುಳಿದವರು, ಶೋಷಿತರು, ದೀನ ದಲಿತರು, ಅಷ್ಟೇ ಏಕೆ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರದ ಮಟ್ಟದಲ್ಲಿ ಓದುಗರು ಓದಿ ತುಂಬು ಹೃದಯದಿಂದ ಅಂಕಣದ ಬಗ್ಗೆ ಮೆಚ್ಚುಗೆ ಸೂಚಿಸುವುದು ಒಂದು ಕಡೆ. ಅನೇಕ ಪ್ರಶ್ನೆ, ಅನೇಕರ ಆಶ್ಚರ್ಯದ ಮಾತು, "ಸಾರ್ ಓಹೋ ಇವರೇನಾ ವೂಡೇಪಿ ಕೃಷ್ಣ ಇವರೇನಾ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಇವರೇನಾ, ಗಾಂಧಿಭವನದ ಅಧ್ಯಕ್ಷರು" ಹೀಗೆ ಹತ್ತು ಹಲವು ರೀತಿಯ ಸಂತೋಷ ಪಡುವ ಪ್ರಶ್ನೆಗಳನ್ನು ಕೇಳಿದ್ದು ಉಂಟು. ಇಂದು ಕರ್ನಾಟಕ ರಾಜ್ಯದ ಮೂಲೆ ಮೂಲೆಯಲ್ಲಿಯೂ ಅದರಲ್ಲೂ ದಲಿತ ಸಮಾಜಕ್ಕೆ ವೂಡೇ ಪಿ ಕೃಷ್ಣರವರ ಬಗ್ಗೆ ನಮ್ಮ ಅಂಕಣವು ತಲುಪಿ ಇಂದು ಅನೇಕ ಓದುಗರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. ಇದಕ್ಕೆ ಕಾರಣ ವೂಡೇಪಿ ಕೃಷ್ಣರವರು ಒಬ್ಬ ನಿಃಸ್ವಾರ್ಥ ಮನೋಭಾವದ ಕಾಯಕ ಜೀವಿ, ಸದಾ ಅವರನ್ನು ಅವರ ಮುಖದ ಹಾವಭಾವವನ್ನು ಹತ್ತಿರದಿಂದ ಕಂಡಾಗ, ನೋಡಿದಾಗ ಸದಾ ಹಸನ್ಮುಖಿ, ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ಹಾಗೆ ಎಲ್ಲರೂ ಚೆನ್ನಾಗಿರಬೇಕು, ಮಹಾತ್ಮ ಗಾಂಧೀಜಿಯವರು ಹೇಳಿರುವಂತೆ ಮನುಷ್ಯನ ಬದುಕಿಗೆ ಶಾಂತಿಯೇ ಒಂದು ಶಕ್ತಿ, ಅಂಬೇಡ್ಕರ್ ಹೇಳಿರುವಂತೆ ಮನುಷ್ಯರಿಗೆ ಶಿಕ್ಷಣ ಮತ್ತು ಜ್ಞಾನ ಬಹುಮುಖ್ಯ, ಹೀಗಾಗಿ ಇವರಿಬ್ಬರ ಆದರ್ಶನವನ್ನು, ಆಚಾರ, ವಿಚಾರವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಇಂದು ಸಂವಿಧಾನದ ಬಗ್ಗೆ ಅರಿವು ಮೂಡಿಸುವುದು, ಪ್ರತಿಯೊಬ್ಬರು ಶಿಕ್ಷಣ ಪಡೆಯುವುದರ ಜೊತೆಗೆ ಜ್ಞಾನವನ್ನು ಸಂಪಾದಿಸಬೇಕು ಎಂಬ ನಿಟ್ಟಿನಲ್ಲಿ ನಿರಂತರವಾಗಿ ದುಡಿಯುತ್ತಿದ್ದಾರೆ. ಇಂತಹ ವ್ಯಕ್ತಿ ಇರುವುದರಿಂದ ನನ್ನಂತಹ ಅನೇಕ ಬರಹಗಾರರು, ಪತ್ರಕರ್ತರು, ಸಾಹಿತಿಗಳು, ಬರಹ ಲೋಕದಲ್ಲಿ ಅಂಬೆಗಾಲು ಇಡುತ್ತಿರುವವರಿಗೆ ಸದಾ ಸ್ಫೂರ್ತಿಯಾಗಿ ನಿಮಗೆ ಇರುತ್ತಾರೆ.

ಆದಿಜಾಂಬವ ಜಾಗೃತಿ ಪತ್ರಿಕೆ ಪ್ರಾರಂಭಗೊಂಡ ಸರಿ ಸುಮಾರು 27 ವರ್ಷಗಳ ಹತ್ತಿರ ಬರುತ್ತಿದೆ. ಈ 27 ವರ್ಷದಲ್ಲಿ ಅನೇಕರ ಅಂದರೆ ಸಾಹಿತಿಗಳ ಬಗ್ಗೆ, ಸಾಧಕರ ಬಗ್ಗೆ, ವಿಚಾರವಂತರ ಬಗ್ಗೆ, ಕನ್ನಡಕ್ಕಾಗಿ ದುಡಿಯುತ್ತಿರುವ ಹೋರಾಟಗಾರರ ಬಗ್ಗೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವವರನ್ನು ಗುರುತಿಸಿ ಅವರ ಕುರಿತಾದ ಲೇಖನವನ್ನು ಬರೆದು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಪ್ರಕಟಿಸಿ ಓದುಗರಿಗೆ ತಲುಪಿಸಿದ್ದು, ಓದುಗರು ಮೆಚ್ಚಿದ್ದು, ಅವರನ್ನು ಓದುಗರಿಗೆ ಪರಿಚಯಿಸಿದ್ದು ನನಗೆ ಸಂತೋಷದ ವಿಷಯವಾಗಿತ್ತು. ಅನೇಕ ಓದುಗರು ಪ್ರಶಂಸನೀಯ ಮಾತುಗಳನ್ನಾಡಿದ್ದು ವಿಶೇಷವಾಗಿತ್ತು. ಆದರೆ ಯಾವಾಗ ವೂಡೇ ಪಿ.ರವರ ಅಂಕಣವು ಪ್ರಾರಂಭಗೊಂಡಿತೋ ಆ ನಂತರ

ದಿನಗಳಲ್ಲಿ ಹೂವಿನಿಂದ ನಾರು ಸ್ವರ್ಗಕ್ಕೆ ಹೋದಂತೆ, ವೂಡೇ ಪಿ. ಕೃಷ್ಣ ಅವರ ಕುರಿತಾದ ಅಂಕಣದಿಂದ ನಾನು ಸಹ ಸ್ವರ್ಗಕ್ಕೆ ಹೋದಂತೆ ಆಯಿತು. ಏಕೆಂದರೆ ಸಾಮಾನ್ಯವಾಗಿ ಹಳ್ಳಿಗಳಲ್ಲಿರುವ ತಾಲ್ಲೂಕು, ಗ್ರಾಮಗಳಲ್ಲಿರುವ ಬಡಜನರು, ಕೂಲಿ ನಾಲಿ ಮಾಡುವವರು ದಲಿತ ಸಮುದಾಯದವರು ಅಷ್ಟಾಗಿ ದುಡ್ಡು ಕೊಟ್ಟು ಯಾವುದೇ ಪತ್ರಿಕೆಯನ್ನು ಖರೀದಿಸಿ ಓದುವುದು ಕಷ್ಟಸಾಧ್ಯವಾದ ಕೆಲಸ. ಏಕೆಂದರೆ ಬಡತನ, ಹಣದ ಸಮಸ್ಯೆ, ಆದರೆ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆ ರಾಜ್ಯದ ಪ್ರತಿಯೊಂದು ಹಳ್ಳಿ, ಜಿಲ್ಲೆ, ಗ್ರಾಮ, ರಸ್ತೆಯಲ್ಲಿ ಒಂದು ಪುಟ್ಟ ಚಪ್ಪಲಿ ಅಂಗಡಿ ಇಟ್ಟವನು ಸಹ ಇಂದು ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ಸಹ ಓದುತ್ತಿದ್ದಾನೆ. ಈ ರೀತಿ ಓದುವುದರಿಂದ ವೂಡೇಪಿ ಕೃಷ್ಣರವರ ಅಂಕಣವು ಅನೇಕರಿಗೆ ಆಶ್ಚರ್ಯ ಏಕೆಂದರೆ ಕೆಲವರು ನನ್ನನ್ನು ಕೇಳುತ್ತಾರೆ ಸಾರ್ ಇವರೇನಾ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು. ಸಾರ್ ಇವರೇನಾ ಗಾಂಧಿಭವನದ ಮುಖ್ಯಸ್ಥರು ಎಂದು, ಇಲ್ಲಿ ಒಂದು ಉದಾಹರಣೆಯನ್ನು ಕೊಡುವುದಾದರೆ ನಮ್ಮ ಪತ್ರಿಕೆಯ ಬಳಗದ ಒಬ್ಬ ಬಡ ವಕೀಲರು ಯಾದಗಿರಿಯಲ್ಲಿ ತಕ್ಕ ಮಟ್ಟಿಗೆ ವಕೀಲಗಿರಿಯನ್ನು ಮಾಡಿಕೊಂಡು ಸಾಧಾರಣವಾಗಿ ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಮೂರು ಜನ ಗಂಡು ಮಕ್ಕಳು ಒಂದು ಹೆಣ್ಣು ಮಗಳು, ಮೂರು ಜನ ಗಂಡು ಮಕ್ಕಳು ತಕ್ಕಮಟ್ಟಿಗೆ ಅಂದರೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಶಿಕ್ಷಣ ಪಡೆಯದೆ ಬಡತನದಲ್ಲಿ ಅಲ್ಪಸ್ವಲ್ಪ ಓದಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ. ವಕೀಲರ ಪತ್ನಿ ಗೃಹಿಣಿ, ಇನ್ನು ಕೊನೆಯ ಮಗಳು ಈಗ ಎರಡನೇ ಪಿಯುಸಿ ಓದುತ್ತಿದ್ದಾಳೆ. ಈ ವಕೀಲರು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ನಾನು ಅವರ ವಿಳಾಸಕ್ಕೆ ಸುಮಾರು 200 ಪ್ರತಿಗಳನ್ನು ಪ್ರತಿ ಸಂಚಿಕೆ ಪ್ರಕಟಗೊಂಡಾಗ ಪೋಸ್ಟಿನ ಮೂಲಕ ಕಳುಹಿಸುತ್ತೇವೆ, ಆ ಪತ್ರಿಕೆಯನ್ನು ಸ್ವತಃ ಆ ವಕೀಲರೇ ಅವರ ಮಿತ್ರರಿಗೆ ಅನೇಕ ಓದುಗರಿಗೆ ತಲುಪಿಸುವ ಕೆಲಸವನ್ನು ಕೆಲವಾರು ವರ್ಷಗಳಿಂದ ನಿಯತ್ತಿನಿಂದ ಮಾಡುತ್ತಾರೆ, ಹೀಗೆ ಒಂದು ದಿನ ಯಾದಗಿರಿಯ ವಕೀಲರು ಫೋನು ಮಾಡಿ "ಸಾರ್ ಪತ್ರಿಕೆಯಲ್ಲಿ ವೂಡೇಪಿ ಕೃಷ್ಣ ಸಾಹೇಬರ ಲೇಖನವನ್ನು ತಪ್ಪದೇ ಓದುತ್ತಿದ್ದೇನೆ, ಸಾರ್ ನಿಮಗೆ ಹೇಗೆ ಸಿಕ್ಕಿದರು? ಹೇಗೆ ಪರಿಚಯವಾದರು? ಇಂತಹ ಮಹಾನ್ ವ್ಯಕ್ತಿಯ ಸಂಬಂಧ ನೀವು ಇಟ್ಟುಕೊಂಡಿರುವುದಕ್ಕೆ ನಮಗೆ ತುಂಬಾ ಸಂತೋಷ, ಆಶ್ಚರ್ಯವಾಗುತ್ತದೆ. ಏಕೆಂದರೆ ಬೆಂಗಳೂರಿನ ಅಂತಹ ಪ್ರತಿಷ್ಠಿತ ವಿದ್ಯಾಸಂಸ್ಥೆಯ ಮುಖ್ಯಸ್ಥರಾಗಿದ್ದಾರೆ. ಹಾಗೆಯೇ ಗಾಂಧಿ ಭವನದ ಅಧ್ಯಕ್ಷರಾಗಿದ್ದಾರೆ. ಇಂತಹವರ ಬಗ್ಗೆ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಅವರ ಕುರಿತಾದ ಅಂಕಣವು ಬರುತ್ತಿರುವುದು ತುಂಬಾ ಸಂತೋಷ ಮತ್ತು ವಿಶೇಷ ಸಾರ್. ಧನ್ಯವಾದಗಳು ಸಾರ್" ಎಂದು ಹೇಳಿ, ಮಾತು

ಮುಂದುವರಿಸಿ ಅವರು ಹೇಳುತ್ತಾರೆ, "ಸಾರ್ ನನ್ನ ಮೂರು ಜನ ಗಂಡು ಮಕ್ಕಳು ಅಷ್ಟಾಗಿ ಓದಿಲ್ಲ, ಆದರೆ ನನಗೆ ನನ್ನ ಮನೆಯವರಿಗೆ ಬಹಳ ಆಸೆ ಇದೆ ಸಾರ್, ನನ್ನ ಮಗಳು ಈಗ ಎರಡನೇ ಪಿಯುಸಿ ಓದುತ್ತಿದ್ದಾಳೆ, ಪಿಯುಸಿ ನಂತರ ಮುಂದೇನು ಅವಳನ್ನು ಓದಿಸಲೇ, ಅಥವಾ ಬೇಡವೇ ಅಥವಾ ಇನ್ನೊಂದೆರೆಡು ವರ್ಷಗಳ ನಂತರ ಮದುವೆ ಮಾಡಲೇ ಎಂದು ಯೋಚಿಸುತ್ತಿರುವಾಗ, ವೂಡೇಪಿ ಕೃಷ್ಣರವರ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಓದುತ್ತಿರುವಾಗ ಹೇಗೂ ಪತ್ರಿಕೆಯ ಸಂಪಾದಕರು ನನಗೆ ಪರಿಚಯವಿದ್ದಾರೆ, ಸಂಪಾದಕರಿಗೆ ವೂಡೇಪಿ ಅಂತವರ ಸಂಪರ್ಕವಿದೆ, ಏತಕ್ಕೆ ನನ್ನ ಮಗಳನ್ನು ವೂಡೇಪಿ ಕೃಷ್ಣರವರ ಕಾಲೇಜಿಗೆ ಎಲ್.ಎಲ್.ಬಿ. ವ್ಯಾಸಂಗ ಮಾಡಲು ಸೇರಿಸಬಾರದು ಎಂದು ಯೋಚಿಸಿ ನನ್ನೊಂದಿಗೆ ಮಾತನಾಡುತ್ತಾ ಸಾರ್ ಹೇಗಾದರೂ ಮಾಡಿ ಶೇಷಾದ್ರಿಪುರಂ ಕಾಲೇಜಿನಲ್ಲಿ ನನ್ನ ಮಗಳಿಗೆ ಎಲ್.ಎಲ್.ಬಿ. ಓದಲು ವೂಡೇಪಿ ಕೃಷ್ಣರವರಿಗೆ ಹೇಳಿ ಒಂದು ಸಹಾಯ ಮಾಡಿ. ವೂಡೇಪಿರವರ ಆಶೀರ್ವಾದದಿಂದ ಒಬ್ಬ ಹಳ್ಳಿಗಾಡಿನ ನನ್ನ ಮಗಳು ಬೆಂಗಳೂರಿಗೆ ಬಂದು ನಿಮ್ಮಗಳ ಸಹಕಾರದಿಂದ ನನ್ನ ಮಗಳು ವಕೀಲೆಯಾದರೆ ಅದು ವೂಡೇಪಿ ಕೃಷ್ಣ ಅವರಿಗೂ ಮತ್ತು ನಿಮಗೂ ಸಲ್ಲುತ್ತದೆ ಎಂದು ಇತ್ತೀಚೆಗೆ ಯಾದಗಿರಿಯ ವಕೀಲರು ಹೇಳಿದ್ದು ನನಗೆ ಜೀವನದಲ್ಲಿ ಹುಟ್ಟಿದಕ್ಕೂ ಒಂದು ಪತ್ರಿಕೆಯನ್ನು ಪ್ರಾರಂಭಿಸಿದಕ್ಕೂ, ಪತ್ರಿಕೆಯಲ್ಲಿ ವೂಡೇಪಿ ಕೃಷ್ಣರವರ ಅಂಕಣವನ್ನು ಪ್ರಾರಂಭಿಸಿದಕ್ಕೂ ನನ್ನ ಜೀವನ ಸಾರ್ಥಕವಾಯಿತು ಎಂದು ಹೇಳಿ ನನ್ನನ್ನು ನಾನೇ ಹೊಗಳಿಕೊಂಡೆ.

ಯಾದಗಿರಿಯ ನನ್ನ ಮಿತ್ರರು, ಪತ್ರಿಕೆಯ ಬಳಗದವರು ಆದ ವಕೀಲರಿಗೆ ನನ್ನ ಕಡೆಯಿಂದ ಮತ್ತು ಪತ್ರಿಕೆಯ ಕಡೆಯಿಂದ ಅವರ ಮಗಳಿಗೆ ಶೇಷಾದ್ರಿಪುರಂ ಕಾಲೇಜಿನಲ್ಲಿ ಎಲ್.ಎಲ್.ಬಿ. ಓದಲು ನನ್ನ ಕೈಲಾದ ಮಟ್ಟಿಗೆ ಆರ್ಥಿಕ ನೆರವು ನೀಡುತ್ತೇವೆ ಎಂದು ಹೇಳಿದ್ದೇವೆ. ಇದಕ್ಕೆಲ್ಲ ಸ್ಫೂರ್ತಿ ವೂಡೇಪಿ ಕೃಷ್ಣರವರು.

ಹೀಗಾಗಿ ಸರ್ವ ಜನರ ಬಾಯಲ್ಲಿ ವೂಡೇಪಿರವರನ್ನು ಶಿಕ್ಷಣ ತಜ್ಞ ಎಂದು ಪ್ರೀತಿಯಿಂದ ಕರೆಯುತ್ತಾರೆ.



“ಮಾಧ್ಯಮಗಳಲ್ಲಿ ವೂಡೇ ಪಿ.”

ಅಗೆಯುತ್ತಾ, ಬಗೆಯುತ್ತಾ, ತೆಗೆಯುತ್ತಾ ಹೋದರೆ ವೂಡೇಪಿ ಕೃಷ್ಣರವರ ಬಗ್ಗೆ ಏನಾದರೂ ಬರೆಯಲು ಕುಳಿತರೆ ಅದು ನನಗೆ ಕಷ್ಟ ಎನ್ನಿಸುವುದಿಲ್ಲ, ಒಂದು ಸಂಚಿಕೆಗೆ ಒಂದು ಅಂಕಣವನ್ನು ಬರೆದು ಮತ್ತೊಂದು ಅಂಕಣವನ್ನು ಬರೆಯಲು ಕೈಗೆ ಪೆನ್ನು, ಒಂದಷ್ಟು ಬಿಳಿಯ ಪೇಪರಿನ ಹಾಳೆಗಳನ್ನು ತೆಗೆದುಕೊಂಡು ಬರೆಯಲು ಕುಳಿತರೆ ಅದೆಲ್ಲಿಂದ ಅವರ ಬಗ್ಗೆ ಒಂದಷ್ಟು ಮಾಹಿತಿಗಳು, ಒಂದಷ್ಟು ಅಪರೂಪದ ವಿಚಾರಗಳು ತಾವಾಗಿಯೆ ನನಗೆ ಸಿಕ್ಕಿ ಬಿಡುತ್ತವೆ. ಇದರ ಅರ್ಥ ವೂಡೇಪಿ ಕೃಷ್ಣರವರ ಜೀವನ, ಅವರ ಬದುಕು ಒಂದು ರೀತಿಯಲ್ಲಿ ತುಂಬಿದ ಕೊಡ ಇದ್ದ ಹಾಗೆ, ಅದು ಅಂದರೆ ತುಂಬಿದ ಕೊಡವನ್ನು ನಾವು ಕೆಳಗೆ ಕೆಡವಿದಾಗ ಮಾತ್ರ ಖಾಲಿಯಾಗುತ್ತದೆ, ಆದರೆ

ವೂಡೇಪಿರವರ ಬಗ್ಗೆ ಮಾಹಿತಿಗಳು ಹೊಸ ಹೊಸ ವಿಚಾರಗಳು ಸದಾ ಪ್ರತಿದಿನ ಒಂದಲ್ಲ ಒಂದು ಸೇರಿಕೊಳ್ಳುತ್ತವೆಯೇ ಹೊರತು, ಮಾಹಿತಿಗಳಿಗೆ ಎಂದೂ ಕೊರತೆಯಾಗುವುದಿಲ್ಲ, ಹೀಗಾಗಿಯೇ ನಮ್ಮಂತಹವರಿಗೆ ವೂಡೇಪಿ ಕೃಷ್ಣರವರು ಸದಾ ಬಹಳ ಎತ್ತರವಾದ ಸ್ಥಾನದಲ್ಲಿ ಕಾಣುತ್ತಾರೆ, ಏಕೆಂದರೆ ಅವರ ಆಚಾರ, ವಿಚಾರ ಸಂಸ್ಕಾರವು ಅವರ ನಡವಳಿಕೆಯು ಇಂದು ಅವರನ್ನು ಸಮಸಮಾಜದ ಮುಖ್ಯವಾಹಿನಿಯಲ್ಲಿ ಪ್ರತಿಯೊಬ್ಬರು ಜಾತ್ಯತೀತವಾಗಿ ಇಷ್ಟಪಡುವ, ಗುರ್ತಿಸುವ ಅಪರೂಪದ ವ್ಯಕ್ತಿಗಳಾಗುತ್ತಾರೆ, ಅದರಲ್ಲಿ ನಾನು ಸಹ ವೂಡೇ ಪಿ. ಕೃಷ್ಣರವರನ್ನು ಬಹಳ ವಿಶೇಷವಾಗಿ ಸದಾ ನೆನೆಯುತ್ತೇನೆ, ಏಕೆಂದರೆ ನಾನು ಮೊದಲೇ ಹೇಳಿದ ಹಾಗೆ ಅವರು ತುಂಬಿದ ಕೊಡ.

ಇಂತಹ ಅಪರೂಪದ ಅಸಾಧಾರಣ ವ್ಯಕ್ತಿಯಾದ ವೂಡೇ ಪಿ. ಅವರು ಯಾವುದೇ ರೀತಿಯ ಸಭೆ ಸಮಾರಂಭಗಳಾಗಿರಬಹುದು, ಪುಸ್ತಕ ಬಿಡುಗಡೆಯ ಕಾರ್ಯಕ್ರಮವಾಗಿರಬಹುದು, ಕನ್ನಡಕ್ಕೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಾಗಿರ ಬಹುದು. ಇವರು ಭಾಷಣ ಮಾಡುವ ವೇಳೆ ಆಯಾಯ ಸಂದರ್ಭಕ್ಕೆ ತಕ್ಕದಾಗಿ ಮತ್ತು ಅವರು ಹೇಳುವ ಪ್ರತಿಯೊಂದು ಮಾತುಗಳು ನಾಲ್ಕಾರು ಜನರಿಗೆ ತಲುಪಿ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ನಿಟ್ಟಿನಲ್ಲಿ ಬಹಳ ಅರ್ಥ ಪೂರ್ಣವಾದ ಮಾತುಗಳನ್ನು ಹೇಳುವುದರಲ್ಲಿ ವೂಡೇ ಪಿ. ಕೃಷ್ಣ ಅವರು ಮೊದಲಿಗರಾಗಿರುತ್ತಾರೆ.

ಹಾಗೆಯೇ ವೂಡೇಪಿ ಕೃಷ್ಣರವರು ಯಾವುದೇ ರೀತಿಯ ಕಾರ್ಯಕ್ರಮ, ಸಮಾರಂಭಗಳಿಗೆ ಹೋದರೂ ಮುದ್ರಣ ಮಾಧ್ಯಮದವರು, ಸುದ್ದಿ ಮಾಧ್ಯಮದವರು ಹಾಗೂ ಹೆಚ್ಚಿನ ವರದಿಗಾರರು ಕಾರ್ಯಕ್ರಮ ಸಮಾರಂಭ ಪ್ರಾರಂಭವಾಗುವುದಕ್ಕೆ ಮೊದಲೇ ಬಂದು ಕುಳಿತು ವೂಡೇಪಿ ಕೃಷ್ಣರವರ ಭಾಷಣದ ಮಾತುಗಳಿಗೆ ಗಂಟೆಗಟ್ಟಲೆ ಕಾಯುತ್ತಿರುತ್ತಾರೆ. ಈ ದೃಶ್ಯವನ್ನು ನಾನು ಕೆಲವಾರು ಕಾರ್ಯಕ್ರಮಗಳಲ್ಲಿ ಸಂದರ್ಭಗಳಲ್ಲಿ ಬಹಳ ಹತ್ತಿರದಿಂದ ಕಂಡಿದ್ದೇನೆ.

ವೂಡೇಪಿ ಕೃಷ್ಣರವರು ಸಭೆ, ಸಮಾರಂಭಗಳಲ್ಲಿ ತಮ್ಮ ಮಾತುಗಳಲ್ಲಿ ಈ ಕೆಳಗಿನಂತೆ ಹೇಳಿರುತ್ತಾರೆ, ಹೇಳಿದ್ದಾರೆ ಮುಂದೆಯೂ ಸಹ ಸಂದರ್ಭಕ್ಕೆ ತಕ್ಕಂತೆ ಹೇಳುತ್ತಾರೆ. ಕೆಲವು ಅವರ ಮನದಾಳದ ಮಾತುಗಳು ಈ ರೀತಿ ಈ ಕೆಳಗಿನಂತಿವೆ:

"ಖಾದಿಯ ರಾಷ್ಟ್ರಧ್ವಜ ಬಳಕೆಗೆ ಬೆಂಬಲಿಸುವ ಮೂಲಕ ಪರಿಸರ ಸಂರಕ್ಷಣೆಗೆ ಹೆಚ್ಚು ಗಮನ ಕೊಡುವುದರ ಜೊತೆಗೆ ಖಾದಿ ರಾಷ್ಟ್ರಧ್ವಜದ ಉತ್ಪಾದಕರಿಗೂ ಆರ್ಥಿಕವಾಗಿ ಹೆಚ್ಚಿನ ಸಹಾಯವಾಗಲಿ" ಎಂದು ಹೇಳಿರುತ್ತಾರೆ.

"ಪ್ರತಿವರ್ಷವು ಪಠ್ಯಪುಸ್ತಕದ ಕೊರತೆ ಪಠ್ಯಪುಸ್ತಕಗಳನ್ನು ಅನುಭವಿಸುತ್ತಿರುವ ಆಂಧ್ರ ಗಡಿನಾಡ ಕನ್ನಡ ಶಾಲೆಗಳಿಗೆ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯು ಅದರ ಜವಾಬ್ದಾರಿಯನ್ನು ಹೊತ್ತು ಪಠ್ಯ ಪುಸ್ತಕವನ್ನು ವಿತರಿಸಬೇಕು ಮತ್ತು ಅದರ ಹೊಣೆಯನ್ನು ಹೊರಬೇಕು" ಎಂದು ಹೇಳಿದರು.

ಶಿಕ್ಷಣದ ಬಗ್ಗೆ ಮಾತನಾಡುತ್ತಾ "ಪ್ರತಿಯೊಬ್ಬರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಕೊಡುವ ಸಲುವಾಗಿ ಸೈಕಲ್ ಜಾಥಾದ ಮೂಲಕ ಅರಿವನ್ನು ಮೂಡಿಸಬೇಕು". ಅದೇ ರೀತಿ ವಿಜ್ಞಾನ ಯಾನ ಎಂಬುದು ಭಾರತೀಯ ವೈಜ್ಞಾನಿಕ ಪರಂಪರೆ, ಮುಂದುವರೆದು ಧೂಮಪಾನ ಮತ್ತು ಮದ್ಯಪಾನದ ಬಗ್ಗೆ ಮಾತನಾಡುತ್ತಾ "ಮದ್ಯಪಾನ ಮತ್ತು ಧೂಮಪಾನಗಳನ್ನು ನಿಷೇಧಿಸಬೇಕಾದರೆ ಅದಕ್ಕಿಂತ ಮೊದಲು ತಜ್ಞರ ಮತ್ತು ಜನಾಭಿಪ್ರಾಯವನ್ನು ಸಂಗ್ರಹಿಸಿ ಅದರ ಆಧಾರದ ಮೇಲೆ ಮುಂದಿನ ನಿರ್ಧಾರವನ್ನು ಕೈಗೊಳ್ಳುವ ಕೆಲಸ ಮಾಡಬೇಕು".

ಮಾತೃಭಾಷೆಯ ಬಗ್ಗೆ ಮಾತನಾಡುತ್ತಾ "ಮಾತೃಭಾಷೆ ಸಂವಿಧಾನಿಕ ಹಕ್ಕಾಗಲಿ, ಸಾಹಿತಿಗಳು ಮತ್ತು ಶಿಕ್ಷಣ ತಜ್ಞರು, ಮತ್ತೆ ವಿಜ್ಞಾನಿಗಳು ಒಂದೇ ವೇದಿಕೆಯಲ್ಲಿ ಕುಳಿತು ಕನ್ನಡಿಗರಲ್ಲಿ ಏಕರೀತಿಯ ಪ್ರೀತಿ ವಿಶ್ವಾಸವನ್ನು ಹುಟ್ಟು ಹಾಕಬೇಕು" ಈ ಕುರಿತು ಹೆಚ್ಚಿನ ಚರ್ಚೆಗಳು ನಡೆಯಬೇಕು ಎನ್ನುತ್ತಾರೆ.

"ವಿದ್ಯಾರ್ಥಿಗಳು ತಮ್ಮ ತಪ್ಪುಗಳನ್ನು ಕಾಲೇಜಿನ ವ್ಯಾಸಂಗದ ಹಂತದಲ್ಲೇ ತಿದ್ದುಕೊಂಡರೆ ಸಮಾಜದಲ್ಲಿ ಉತ್ತಮ ಪ್ರಜೆಯಾಗಲು ಸಾಧ್ಯ".

"ದೇಶದಲ್ಲಿ ರಕ್ತದ ಕೊರತೆ ಹೆಚ್ಚಾಗಿದ್ದು ಹೆಚ್ಚು ಮಕ್ಕಳು ಸಹ ರಕ್ತ ನೀಡಲು ಮುಂದೆ ಬರಬೇಕು".

"ಶಿಕ್ಷಣದ ವ್ಯವಸ್ಥೆಯನ್ನು ಸರಿಪಡಿಸಲು ರಾಜಕೀಯ ಇಚ್ಛಾಶಕ್ತಿ ಇರಬೇಕು. ವಿದ್ಯಾರ್ಥಿಗಳ ಮಾನಸಿಕ ಸಮಸ್ಯೆ ಕುರಿತು ಕಾರ್ಯಗಾರ ನಡೆಸಲು ಪೂರಕವಾಗಿ ಕೆಲಸ ಮಾಡುವುದರ ಜೊತೆಗೆ ಕಾಲೇಜು ಆವರಣದಲ್ಲಿ ಖಾದಿ ಬಟ್ಟೆಗಳು, ಖಾದಿಯಿಂದ ತಯಾರಿಸಿದ ಉತ್ಪನ್ನಗಳ ಪ್ರದರ್ಶನಗಳನ್ನು ಹಾಗೂ ಮಾರಾಟ ಮೇಳ ನಡೆಸಲು ಅನುವು ಮಾಡಿಕೊಡಬೇಕು".

"ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರೇ ಆಧಾರಸ್ತಂಭ ಶಾಲೆಗೆ ನಿಧಾನವಾಗಿ ಬಂದರೆ ಧ್ಯಾನಕ್ಕೆ ಕಳುಹಿಸುವ ವ್ಯವಸ್ಥೆ ಇಲ್ಲಿನ ಶಾಲೆಗಳಲ್ಲಿವೆ, ಈ ರೀತಿಯ ಸಮುದಾಯದ ಸಹಭಾಗಿತ್ವದಿಂದ ಶಿಕ್ಷಣ ಪ್ರಗತಿ ಸಾಧ್ಯವಾಗುತ್ತದೆ".

ಮುಂದುವರೆದು "ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಹೇಗಿರಬೇಕು ಮತ್ತು ಸಾರ್ವಜನಿಕ ಹಣವನ್ನು ಹೇಗೆ ಬಳಸಬೇಕು ಎಂಬುದಕ್ಕೆ ಗಾಂಧೀಜಿ ಬಹುದೊಡ್ಡ ನಿದರ್ಶನವಾಗಿದ್ದು, ಇಂದಿನ ಸಾರ್ವಜನಿಕ ಜೀವನದಲ್ಲಿ ಇರುವವರಿಗೆ ಅದು ಅನುಕರಣೀಯ, ಗಾಂಧೀಜಿ ಅವರು ಸತ್ಯ, ಅಹಿಂಸೆ, ಸತ್ಯಾಗ್ರಹ ಹಾಗೂ ಸರ್ವೋದಯ ತತ್ವಗಳಿಗೆ ಬದ್ಧರಾಗಿ ಬದುಕಿ ತೋರಿಸಿದರು, ಸತ್ಯಶೋಧನೆಯ ಮೂಲಕ ಸತ್ಯಾಗ್ರಹಕ್ಕೆ ತಾತ್ವಿಕ ನೆಲೆ ಒದಗಿಸಿದರು, ರಕ್ತಚೆಲ್ಲದೆ ದೇಶಕ್ಕೆ ಸ್ವಾತಂತ್ರ್ಯ ವನ್ನು ದೊರಕಿಸಿಕೊಟ್ಟ ವಿಶ್ವದ ಏಕೈಕ ವ್ಯಕ್ತಿ ಗಾಂಧೀಜಿರವರು ಸತ್ಯ ಮತ್ತು ಅಹಿಂಸೆಯನ್ನು ಎತ್ತಿ ಹಿಡಿಯಲು 2329 ದಿನಗಳ ಕಾಲ ಜೈಲುವಾಸ ಅನುಭವಿಸಿ 142 ದಿನಗಳ ಕಾಲ ಉಪವಾಸ ಸತ್ಯಾಗ್ರಹವನ್ನು ಮಾಡಿದರು. ಅವರು ಎಂದಿಗೂ ಬ್ರಿಟಿಷರನ್ನು ದ್ವೇಷಿಸಲಿಲ್ಲ, ಬದಲಾಗಿ ಅವರ ನೀತಿ ರೀತಿಗಳನ್ನು ವಿರೋಧಿಸಿದರು".

"ಇಂದಿಗೂ ಭ್ರಷ್ಟಾಚಾರ, ಜಾತೀಯತೆ, ಭಯೋತ್ಪಾದನೆಯಂತಹ ಪಿಡುಗುಗಳು ಹೆಚ್ಚಾಗಿವೆ, ಬಡವರು ಮತ್ತಷ್ಟು ಬಡವರಾಗಿ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿರುತ್ತಾರೆ. ಹಾಗಾಗಿ ಆಳುವವರು ಬಡವರ, ಹಳ್ಳಿಗಳ ರೈತರ ಪರ ಚಿಂತಿಸಿ ಹೊಸ ಹೊಸ ನೀತಿಗಳನ್ನು ರೂಪಿಸಬೇಕಾಗಿದೆ".

"ಇಂದಿಗೂ ಪಾಶ್ಚಿಮಾತ್ಯ ಶಿಕ್ಷಣವನ್ನು ಪಡೆದರೂ ಸಂಪೂರ್ಣವಾಗಿ ಭಾರತೀಯತೆಯನ್ನು ಮೈಗೂಡಿಸಿಕೊಂಡಿದ್ದ ವಿವೇಕಾನಂದರು ಮತ್ತು ಮಹಾತ್ಮ ಗಾಂಧಿರವರ ಅದರ್ಶಗಳು ಸಮಸಮಾಜಕ್ಕೆ ಮಾರ್ಗದರ್ಶಿಯಾಗಿವೆ, ಅವರ ಚಿಂತನೆ ಭಾರತದ್ದಾಗಿದ್ದರೂ ಅದು ವಿಶ್ವದ ದೃಷ್ಟಿಯನ್ನು ಹೊಂದಿರುತ್ತದೆ".

ಹತ್ತಾರು ಪುಸ್ತಕಗಳನ್ನು ಓದಿದಷ್ಟು ಜ್ಞಾನ, ಇವರ ಉಪನ್ಯಾಸದಿಂದ ಸಿಗುತ್ತದೆ, ಸದಾ ಒಳ್ಳೆಯ ಚಿಂತನೆಗಳು ನಮ್ಮಲ್ಲಿ ನಾವು ರೂಢಿಸಿಕೊಳ್ಳಬೇಕು.

ದೇವರಾಜು ಅರಸುರವರ ಜಯಂತಿಯಲ್ಲಿ ಮಾತನಾಡುತ್ತ "ರಾಜ್ಯದಲ್ಲಿ ಹಿಂದುಳಿದ ಸಮುದಾಯಗಳ ಮುಖಂಡರು ರಾಜಕೀಯ ಕ್ಷೇತ್ರ ಪ್ರವೇಶಿಸಿ ಉನ್ನತ ಸ್ಥಾನಮಾನ ಹೊಂದಲು ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜು ಅರಸು ಮೂಲ ಕಾರಣರಾಗುತ್ತಾರೆ. ಬಹುದೊಡ್ಡ ಹಾಗೂ ಮೇಲ್ವರ್ಗದ ಸಮುದಾಯಗಳಿಗೆ ಸೀಮಿತವಾಗಿದ್ದ ರಾಜಕಾರಣದ ಅವಕಾಶ ಹಿಂದುಳಿದ ವರ್ಗಗಳಿಗೆ ದೊರೆಯಲು ದೇವರಾಜು ಅರಸುರವರ ಪಾತ್ರ ಪ್ರಮುಖವಾಗಿತ್ತು, ಇದೇ ಕಾರಣದಿಂದ ಪ್ರಸ್ತುತ ರಾಜಕಾರಣದಲ್ಲಿ ದಲಿತರಿಗೂ ಉತ್ತಮ ಸ್ಥಾನಮಾನಗಳು ಸಿಕ್ಕಿವೆ, ಅರಸುರವರು ಸಮಾಜದಲ್ಲಿ ಬಡವರ ಮತ್ತು ಶ್ರೀಮಂತರ ನಡುವಿನ ಅಂತರವನ್ನು ಹೋಗಲಾಡಿಸಲು ಸಾಕಷ್ಟು ಶ್ರಮಿಸಿದರು. ಅವರು ಮುಖ್ಯಮಂತ್ರಿಗಳಾಗಿದ್ದ

ಸಂದರ್ಭದಲ್ಲಿ ಬಡವರಿಗೆ, ದೀನ ದಲಿತರಿಗೆ ನಾನಾ ರೀತಿಯ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು ಬಹಳ ವಿಶೇಷವಾಗಿತ್ತು, ಹಾಗೆಯೇ ರಾಜ್ಯದಲ್ಲಿ ಮಲ ಹೊರುವ ಪದ್ಧತಿಯ ನಿರ್ಮೂಲನೆಗೆ ಕಾಯ್ದೆ ಒಂದನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು".

ಹೀಗಾಗಿ ಗಾಂಧೀಜಿ ಮತ್ತು ದೇವರಾಜು ಅರಸುರವರ ಚಿಂತನೆಗಳ ನಡುವೆ ಹಲವು ಸಾಧ್ಯತೆಗಳಿವೆ. ಅವರೂ ಸಹ ಗಾಂಧಿವಾದಿಗಳಾಗಿದ್ದರು, ಶಾಂತಿಯುತ ಕ್ರಾಂತಿ ನಡೆಯಬೇಕೆಂದು ಹೇಳುತ್ತಿದ್ದರು. ಬಡವರಿಗೆ ಭೂಮಿ ಎಂಬ ವಿನೋಬಾ ಭಾವೆ ಅವರ ಭೂದಾನ ಚಳವಳಿಯಲ್ಲಿ ಭಾಗವಹಿಸಿ ಗ್ರಾಮವನ್ನೇ ದಾನ ಮಾಡುವ ಚಿಂತನೆ ಮಾಡಿದ್ದರು.

ಈ ಮೇಲಿನ ಹತ್ತು ಹಲವು ವಿಚಾರಗಳು, ಮಾಹಿತಿಗಳು ಕೇವಲ ವೂಡೇಪಿ ಕೃಷ್ಣರವರ ಕೊರಳಿನಿಂದ ಬಂದವುಗಳಾಗಿರಲಿಲ್ಲ, ಬದಲಿಗೆ ಅಂತರಾಳದಿಂದ ಬಂದವುಗಳಾಗಿದ್ದವು, ಇವತ್ತಿಗೂ ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ಅವರ ಭಾಷಣದ ಮಾತುಗಳು ಸಮಾಜಮುಖೀ ಮಾತುಗಳು, ಗಾಂಧೀಜಿ, ಅಂಬೇಡ್ಕರ್, ದೇವರಾಜ ಅರಸು, ಪೆರಿಯಾರ್ ಇಂತಹವರನ್ನು ಕುರಿತು ಹತ್ತು ಹಲವು ವಿಚಾರಗಳನ್ನು ಹೇಳುತ್ತಿರುತ್ತಾರೆ, ಈ ರೀತಿ ಹೇಳುವ ಹಲವಾರು ಮಾಹಿತಿಗಳನ್ನು ಕ್ರೋಡೀಕರಿಸಿ ನಮ್ಮ ಭವಿಷ್ಯದ ಮಕ್ಕಳಿಗೆ ತಿಳಿಸಬೇಕು.

ದೇಶ ವಿದೇಶಗಳಲ್ಲಿ ವೂಡೇ ಪಿ. ಹೆಜ್ಜೆಗುರುತು

ವೂಡೇ ಪಿ. ಕೃಷ್ಣ ಅವರು ದಿನದ 24 ಗಂಟೆಯೂ ಒಂದಲ್ಲ ಒಂದು ಕೆಲಸದಲ್ಲಿ ತೊಡಗಿಸಿ ಕೊಂಡಿರುವ ಅಸಾಮಾನ್ಯ ವ್ಯಕ್ತಿ. ಏಕೆಂದರೆ ಒಬ್ಬ ಮಹಾನ್ ಸಾಧಕನಿಗೆ ದಿನದ 24 ಗಂಟೆಯಲ್ಲಿ ನಾನು ಸಮಾಜಕ್ಕೆ ಏನು ಮಾಡಬೇಕು? ನನ್ನ ಕೈಲಾದ ಮಟ್ಟಿಗೆ ನಿಃಸ್ವಾರ್ಥ ಸೇವೆಯನ್ನು ಮಾಡುತ್ತೇನೋ ಅದರಲ್ಲಿಯೇ ನಿದ್ರೆಯನ್ನು ಆರೋಗ್ಯವನ್ನು ನೆಮ್ಮದಿಯನ್ನು ಸಂತೋಷವನ್ನು ಕಂಡುಕೊಳ್ಳುವ ವ್ಯಕ್ತಿ. ಹೌದು ಮನುಷ್ಯನಿಗೆ ಎಷ್ಟೇ ಹಣ, ಅಂತಸ್ತು, ಅಧಿಕಾರ ಇದ್ದರೂ ಅವನಿಗೆ ಸಮಾಜದಲ್ಲಿ ಸಮಾಜದ ಮುಖ್ಯವಾಹಿನಿಯಲ್ಲಿ ಹೇಗೆ ಇರಬೇಕು, ಹೇಗೆ ಬದುಕಬೇಕು ಎಂಬ ಪರಿವೆ ಇರುವುದಿಲ್ಲ. ಹೀಗಾಗಿ ಇಂತಹ ಗುಂಪಿನವರಿಗೆ ದಿನದ 24 ಗಂಟೆಯು ಒಂದಲ್ಲ

ಒಂದು ರೀತಿಯಲ್ಲಿ ಕೆಲ ಸಂದರ್ಭಗಳೇ ಜಾಸ್ತಿಯಾಗಿ ಗೋಚರಿಸುತ್ತವೆ. ಆದರೆ, ನಮ್ಮ ವೂಡೇಪಿ ಕೃಷ್ಣರವರು ಎಷ್ಟೇ ಕೆಲಸದ ಒತ್ತಡ ಇದ್ದರೂ ಅವರು ಸದಾ ನಗುಮುಖದ ಸರದಾರರಾಗಿಯೇ ಇರುತ್ತಾರೆ, ಅದಕ್ಕೆ ಇರಬಹುದು ಕೃಷ್ಣರವರು ಸದಾ ಮಂದಸ್ಮಿತ ಮುಖವನ್ನು ಹೊಂದುತ್ತಿರುತ್ತಾರೆ, ಅವರು ಎಷ್ಟೇ ದೊಡ್ಡ ಹುದ್ದೆಯ ವ್ಯಕ್ತಿಯಾಗಲೀ ತಳಮಟ್ಟದಲ್ಲಿರಲಿ ಯಾವುದೇ ವೃತ್ತಿಯಲ್ಲಿರಲಿ ಕೃಷ್ಣರವರ ಕಾರ್ಯವೈಖರಿ ಯಾವತ್ತೂ ಬದಲಾವಣೆಯಾಗುವುದಿಲ್ಲ, ಹೀಗಾಗಿಯೇ ವೂಡೇಪಿ ಕೃಷ್ಣರವರು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಖ್ಯಾತಿಗೆ ಒಳ್ಳೆಯ ಹೆಸರನ್ನು ಪಡೆದಿರುತ್ತಾರೆ ಎಂದು ತುಂಬು ಹೃದಯದಿಂದ ಹೇಳುವುದು.

ಸರ್ವೇ ಜನಾಃ ಸುಖಿನೋ ಭವಂತು ಎನ್ನುವ ಒಬ್ಬ ಅಸಾಧಾರಣ ಅಸಾಮಾನ್ಯ ವ್ಯಕ್ತಿ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು, ಈ ನಶ್ವರವಾದ ಪ್ರಪಂಚದಲ್ಲಿ ಪ್ರತಿಯೊಬ್ಬರು ನೆಮ್ಮದಿಯಿಂದ ಜೀವಿಸಬೇಕು, ಯಾರಿಗೂ ಕೆಡಕನ್ನು ಮಾಡಬಾರದು, ಯಾರ ಮನಸ್ಸನ್ನು ನೋಯಿಸಬಾರದು ಎಲ್ಲರೂ ಚೆನ್ನಾಗಿರಬೇಕು ಎನ್ನುವ ವ್ಯಕ್ತಿಯೇ ನಮ್ಮೆಲ್ಲರ ಪ್ರೀತಿಯ ವೂಡೇಪಿ ಕೃಷ್ಣರವರು. ಇವರನ್ನು ಕೇವಲ ಕರ್ನಾಟಕ ಜನರು ಮಾತ್ರ ಇಷ್ಟಪಡುತ್ತಾರೆ ಎಂದು ನಾವು ತಿಳಿದುಕೊಂಡರೆ ಅದು ತಪ್ಪಾದೀತು, ದೇಶ ವಿದೇಶಗಳಲ್ಲಿರುವ ನಮ್ಮ ಕನ್ನಡದವರು ಸಹ ಇವರನ್ನು ಅತ್ಯಂತ ಪ್ರೀತಿ ವಿಶ್ವಾಸದಿಂದ ಕಾಣುತ್ತಾರೆ. ಎಂದರೆ ವೂಡೇಪಿ ಕೃಷ್ಣರವರ ವ್ಯಕ್ತಿತ್ವ ಮತ್ತು ಅವರ ಸಾಧನೆ ಏನು ಎಂಬುದಕ್ಕೆ ಮೇಲಿನ ಕೆಲವು ಮಾತುಗಳೇ ಉದಾಹರಣೆಯಾಗಿದೆ. ನಾವು ಕಂಡಂತೆ ರಾಜ್ಯದಲ್ಲಿ ಎಂಥೆಂಥ ಸಾಹಿತಿಗಳು, ಪತ್ರಕರ್ತರು, ವಿಚಾರವಂತರು, ಬುದ್ಧಿಜೀವಿಗಳು ಇದ್ದರೂ ವೂಡೇಪಿ ಕೃಷ್ಣರವರ ಸ್ಥಾನವನ್ನು ಯಾರೂ ತುಂಬಲು ಸಾಧ್ಯವಿಲ್ಲ, ಏಕೆಂದರೆ ರಾಜ್ಯ, ವಿದೇಶ, ದೇಶದಲ್ಲಿರುವ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ಒಮ್ಮೆ ನಮ್ಮ ಸಂಸ್ಥೆಯ ಯಾವುದಾದರೂ ಒಂದು ಕಾರ್ಯಕ್ರಮಕ್ಕೆ ವೂಡೇಪಿ ಕೃಷ್ಣರವರು ಬಂದರೆ ಅದಕ್ಕೊಂದು ಮೆರಗು, ಗೌರವ ಎಂದು ತಿಳಿಯಬೇಕಾಗುತ್ತದೆ, ಹೀಗಾಗಿ, ದೇಶವಿದೇಶಗಳಲ್ಲೂ ವೂಡೇಪಿ ಕೃಷ್ಣರವರ ಹೆಸರು ಕಲ್ಲು ಬಂಡೆಯಂತೆ ಶಾಶ್ವತವಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು.

ಹೀಗಾಗಿಯೇ ವೂಡೇಪಿ ಕೃಷ್ಣರವರು ಸರಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ವಿದೇಶಗಳಿಗೆ ಭೇಟಿ ನೀಡಿ ಅನೇಕ ಪ್ರತಿಷ್ಠಿತ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿದ ಕೀರ್ತಿ ವೂಡೇಪಿ ಕೃಷ್ಣ ಅವರಿಗೆ ಸಲ್ಲುತ್ತದೆ. 2000 ಇಸವಿಯಲ್ಲಿ

ಶ್ರೀ ಲಂಕಾಗೆ ಭಾರತ ಮತ್ತು ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮದ ಭಾರತ ತಂಡದ ಮುಖಂಡರಾಗಿ ತೆರಳಿದ್ದು ಇವರ ಹೆಗ್ಗಳಿಕೆ. ಅದೇ ರೀತಿ 2006ರಲ್ಲಿ ಗುಡ್ ಮಿಷನ್ ಪ್ರಯುಕ್ತ ಚೀನಾ ದೇಶಕ್ಕೆ ಭೇಟಿ ನೀಡಿದ ಭಾರತೀಯ ಸೌಹಾರ್ದಯುತ ತಂಡದ ಸದಸ್ಯರಾಗಿ ಭಾಗವಹಿಸಿದ್ದು ಬಹಳ ವಿಶೇಷವಾಗಿತ್ತು. ಅದೇ ರೀತಿ 2007ರಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಎರಡನೆಯ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದು ನಿಜಕ್ಕೂ ವೂಡೇಪಿ ಕೃಷ್ಣರವರು ಪ್ರಶಂಸನೀಯರು. ಮುಂದುವರೆದು 2008ರಲ್ಲಿ ನ್ಯೂಯಾರ್ಕ್ ನಗರದ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಬಹಳ ವಿಶೇಷವಾಗಿ ಸನ್ಮಾನವನ್ನು ಸ್ವೀಕರಿಸಿದ್ದು ವಿಶೇಷವಾಗಿತ್ತು. ಇದೇ ಸಂದರ್ಭದಲ್ಲಿ ನ್ಯೂಯಾರ್ಕ್‌ನ ವುಡ್‌ಲ್ಯಾಂಡ್ ಹೋಟೆಲ್‌ನಲ್ಲಿ ಬೆಂಗಳೂರಿನ ಅಂದಿನ ಮೇಯರ್ ಆಗಿದ್ದಂತಹ ಗೌರವಾನ್ವಿತ ಶ್ರೀ ಕೆ. ಎಂ ನಂಜಪ್ಪರವರ ಸ್ಮರಣಾರ್ಥವಾಗಿ ಅವರ ಮಗಳು ಶ್ರೀಮತಿ ಸತ್ಯ ಮತ್ತು ಅವರ ಅಳಿಯ ಡಾ. ಬಾನಾದ್ ವಿಶ್ವನಾಥ್ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೆ.ಎಂ. ನಂಜಪ್ಪರವರ ಕುರಿತಾಗಿ ಅವರ ಸಾಮಾಜಿಕ ಕಾರ್ಯ, ಅವರ ಆದರ್ಶಗಳ ಬಗ್ಗೆ ಅವರ ಸಾಧನೆಯ ಬಗ್ಗೆ ಮಾತನಾಡುತ್ತಾ ಕೆ.ಎಂ. ನಂಜಪ್ಪನವರ ಬದುಕೇ ಒಂದು ದೊಡ್ಡ ಆದರ್ಶ ಹಾಗೂ ಅವರ ಸಾಧನೆಯು ಒಂದು ಸ್ಪಿರಿಟ್ ಇದ್ದ ಹಾಗೆ ಎಂದು ಹೇಳುತ್ತಾ 96 ವರ್ಷ ತುಂಬು ಜೀವನ ನಡೆಸಿರುವುದು ನಿಜಕ್ಕೂ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಚಾರ, ಅಂದು ಕೆ.ಎಂ. ನಂಜಪ್ಪರಂತಹ ಮಹನೀಯರು ಬೆಂಗಳೂರಿನ ಮಹಾಪೌರರಾಗಿದ್ದು ನಿಜಕ್ಕೂ ಬೆಂಗಳೂರಿನ ಜನರ ಪುಣ್ಯ, ಏಕೆಂದರೆ ಅವರು ಬೆಂಗಳೂರಿನ ಮೇಯರ್ ಆಗಿದ್ದಂತಹ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಅನೇಕ ಉತ್ತಮವಾದ ಕೆಲಸ ಕಾರ್ಯಗಳು, ಬೆಂಗಳೂರು ನಗರ ಸ್ವಚ್ಛತೆ, ನೈರ್ಮಲ್ಯಕ್ಕೆ ಹೆಚ್ಚಿನ ಗಮನ ಕೊಟ್ಟಿದ್ದು ನಿಜಕ್ಕೂ ಅವರ ಈ ಸಾಧನೆಯೇ ಇಂದು ನಾವು ನೂಯಾರ್ಕ್‌ನ ಪ್ರತಿಷ್ಠಿತ ವುಡ್‌ಲ್ಯಾಂಡ್ ಹೋಟೆಲ್‌ನಲ್ಲಿ ಅವರ ಸ್ಮರಣೆಯನ್ನು ಮಾಡುತ್ತಿರುವುದು ಮತ್ತು ನನ್ನನ್ನು ಇಲ್ಲಿಗೆ ಅತಿಥಿಯಾಗಿ ಕರೆಸಿ ಅವರ ಬಗ್ಗೆ ಕೆಲವು ಮಾತುಗಳನ್ನು ಮತ್ತು ಅವರ ಆದರ್ಶಗಳ ಬಗ್ಗೆ ಮಾತನಾಡಿದ್ದು ನನ್ನ ಜೀವನದಲ್ಲಿ ಎಂದು ಮರೆಯಲು ಸಾಧ್ಯವಿಲ್ಲ ಎಂದು ಹೇಳಿದ್ದು ಒಂದು ವಿಶೇಷ. ಏಕೆಂದರೆ ವಿದೇಶದಲ್ಲಿ ಒಬ್ಬ ಕನ್ನಡಿಗ, ಬೆಂಗಳೂರಿನ ಮಾಜಿ ಮೇಯರ್ ಕೆ. ಎಂ. ನಂಜಪ್ಪರವರ ಬಗ್ಗೆ ಮಾತನಾಡಿದ್ದು ಸಾಮಾನ್ಯ ಸಂಗತಿಯಲ್ಲ. ಅಂತಹ ನಮ್ಮ ವೂಡೇಪಿ ಕೃಷ್ಣರವರಿಗೆ ಸಿಕ್ಕಿರುತ್ತದೆ. ಅಂದಿನ ಅವರ ಮಾತುಗಳು ಅಲ್ಲಿನ ಕನ್ನಡಿಗರಿಗೆ ಸ್ಫೂರ್ತಿಯಾಗಿದ್ದು ಮೆಚ್ಚಿ ಹೊಗಳಿದರು.

ಮತ್ತೆ ಇದೇ ವರ್ಷ 2008ರಲ್ಲಿ ಕತಾರ್‌ನಲ್ಲಿ ಹಮ್ಮಿಕೊಂಡಿದ್ದ 5ನೆಯ ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಶಿಕ್ಷಣ ತಜ್ಞರಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು, ಅನಂತರ 2010ರಲ್ಲಿ ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಆಹ್ವಾನದ ಮೇರೆಗೆ ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಬಗ್ಗೆ ವಿಶೇಷ ತರಬೇತಿ ಕಾರ್ಯಗಾರದಲ್ಲಿ ಭಾಗಿಯಾಗಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದರು. ನಂತರ 2011ರಲ್ಲಿ ಮಲೇಶಿಯಾದಲ್ಲಿ ನಡೆದ 2ನೆಯ ಮತ್ತು 3ನೆಯ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಬಗ್ಗೆ ವಿಶೇಷ ತರಬೇತಿ ಕಾರ್ಯಾಗಾರದಲ್ಲಿ ಭಾಗಿಯಾಗಿ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಂಡಿದ್ದರು.

ನಂತರ 2011ರಲ್ಲಿ ಮಲೇಶಿಯಾದಲ್ಲಿ ನಡೆದ 2ನೆಯ ಮತ್ತು 3ನೆಯ ಅಂತಾರಾಷ್ಟ್ರೀಯ ಮಾನವೀಯ ಕಾನೂನುಗಳ ಕಾಮನ್‌ವೆಲ್ತ್ ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಕೀರ್ತಿ, ಹೆಮ್ಮೆ ನಮ್ಮ ವೂಡೇಪಿ ಕೃಷ್ಣರವರದಾಗಿತ್ತು. ಮತ್ತೆ ಎರಡು ಮೂರು ವರ್ಷಗಳ ನಂತರ ಅಂದರೆ 2015ರಲ್ಲಿ ರಷ್ಯಾ ದೇಶಕ್ಕೆ ಭೇಟಿ ನೀಡಿದ್ದು ಅಲ್ಲಿ ಭಾರತ-ರಷ್ಯಾ ತಾಂತ್ರಿಕ ನಿಯೋಗದ ಸದಸ್ಯರಾಗಿದ್ದರು. ಅದೇ ವರ್ಷ ಸಿಂಗಾಪೂರದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಇಂಜಿನಿಯರುಗಳ ಶೃಂಗಸಭೆಯಲ್ಲಿ ವೂಡೇಪಿ ಕೃಷ್ಣರವರು ಭಾರತವನ್ನು ಪ್ರತಿನಿಧಿಸಿದ ಹಿರಿಮೆ ಮತ್ತು ಭಾರತ ದೇಶಕ್ಕೆ ಸಂದ ಬಹುದೊಡ್ಡ ಗೌರವ ಎಂದು ಹೇಳಬಹುದು.

ಅದೇ ರೀತಿ 2017ರಲ್ಲಿ ಜರ್ಮನಿ, ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳಿಗೆ ಭೇಟಿ ನೀಡಿದ ಬ್ರಿಕ್ಸ್ ಇಂಜಿನಿಯರಿಂಗ್ ಸಂಸ್ಥೆಗಳ ಫೆಡರೇಷನ್ನಿನ ತಾಂತ್ರಿಕ ನಿಯೋಗದ ಸದಸ್ಯರಾಗಿದ್ದು ಬಹು ಅಪರೂಪ ಎಂದು ಹೇಳಬಹುದು.

ಈ ರೀತಿ ವಿದೇಶಗಳಿಗೆ ಹೋದಾಗ ಅಲ್ಲಿಯ ಕೆಲವಾರು ಸಭೆ ಸಮಾರಂಭಗಳಿಗೆ ಮುಖ್ಯ ಅತಿಥಿಗಳಾಗಿ ಕೆಲವೊಮ್ಮೆ ಅಲ್ಲಿಯ ಸಂಸ್ಥೆಗಳ ಸದಸ್ಯರಾಗಿ ಹೋಗುವುದರ ಜೊತೆಗೆ ಸಮಯವನ್ನು ಹೊಂದಿಸಿಕೊಂಡು 2010ರಲ್ಲಿ ಕಠ್ಮಂಡುವಿನಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನು ಸಮಾವೇಶದಲ್ಲಿ ಭಾಗವಹಿಸಿ ಅಲ್ಲಿನ ಪ್ರತಿನಿಧಿಗಳ ಜೊತೆಗೆ ಭಾವಚಿತ್ರಗಳನ್ನು ತೆಗಿಸಿಕೊಂಡಿದ್ದು ಮತ್ತೊಂದು ವಿಶೇಷ.

ಮತ್ತೆ ಅಮೆರಿಕದಲ್ಲಿರುವ ಲಿಂಕನ್ ಸ್ಮಾರಕದ ಮುಂದೆ ಕರ್ನಾಟಕದ ಕೆಲವು ಕನ್ನಡಿಗರು ಅಲ್ಲಿ ನೆಲೆಸಿದ್ದು ಅವರ ಜೊತೆಗೆ ಸ್ಮಾರಕದ ಮುಂದೆ ಸಮಯ ಕಳೆದಿದ್ದು ಹಾಗೆಯೇ ಅಮೆರಿಕದ ವೈಟ್ ಹೌಸ್‌ಗೂ ಭೇಟಿ ಕೊಟ್ಟು ನಂತರ ಮಾಸ್ಕೋ ಸ್ಟೇಟ್

ಯುನಿವರ್ಸಿಟಿಯ ಮುಂಭಾಗದಲ್ಲಿ ಭಾರತದ ಪ್ರತಿನಿಧಿಗಳೊಂದಿಗೆ ಸಮಯ ಕಳೆದಿದ್ದು ವೂಡೇ ಪಿ. ಅವರಿಗೆ ಸಂದ ಬಹುದೊಡ್ಡ ಗೌರವ ಎಂದು ಹೇಳಬಹುದು.

ಹೀಗೆ ವೂಡೇ ಪಿ. ಅವರು ಕೇವಲ ಕರ್ನಾಟಕ, ಬೆಂಗಳೂರಿನಲ್ಲಿ ನಡೆಯುವ ವಿವಿಧ ರೀತಿಯ ಸಂಸ್ಕೃತಿ ಸಭೆ ಸಮಾರಂಭಗಳಿಗೆ ಮತ್ತು ಇಲ್ಲಿಯ ಜನರಿಗೆ ಮಾತ್ರ ಸೀಮಿತವಾಗದೆ ದುಡಿಯದೆ ದೇಶವಿದೇಶಗಳಲ್ಲೂ ನಿರಂತರವಾಗಿ ಒಂದಿಲ್ಲೊಂದು ರೀತಿಯಲ್ಲಿ ದುಡಿಯುತ್ತಿರುವ ಒಬ್ಬ ಅಪ್ಪಟ ಕನ್ನಡಾಭಿಮಾನಿ ಮತ್ತು ಅಪರೂಪದ ವ್ಯಕ್ತಿ ನಮ್ಮ ವೂಡೇಪಿ ಕೃಷ್ಣರವರು.

ಇವರ ಬಗ್ಗೆ ಬರೆಯುತ್ತಾ ಬರೆಯುತ್ತಾ ಹೋದರೆ ಅಗೆದಷ್ಟು, ಬಗೆದಷ್ಟು ತೆಗೆದಷ್ಟು ಸುದ್ದಿಗಳು ಸಿಗುತ್ತಿರುತ್ತವೆ. ನನ್ನಂತಹವನಿಗೆ ವೂಡೇಪಿರವರ ಬಗ್ಗೆ ಬರೆಯಲು ಕುಳಿತಾಗ ಹತ್ತು ಹಲವು ಮಾಹಿತಿಗಳು ನಿರಂತರವಾಗಿ ಸಿಗುತ್ತಿರುತ್ತದೆ, ನಾನೇ ಧನ್ಯ.



ವೂಡೇಪಿ ಸಾಧನೆ ಸಾಮಾನ್ಯವಾದುದಲ್ಲ

ಸಾಮಾನ್ಯವಾಗಿ ವೂಡೇಪಿ ಕೃಷ್ಣರವರ ಅಂಕಣವನ್ನು ನಾನು ಬರೆಯಲು ಪ್ರಾರಂಭಿಸಿದರೆ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಸರಿಯಾಗಿ ಒಂದು ಪುಟವನ್ನು ಬರೆಯಲೇಬೇಕು ಎಂಬ ಒಂದು ರೀತಿಯ ಹಠ, ಛಲ ಬಂದು ಬಿಡುತ್ತದೆ, ಅಪ್ಪಿ ತಪ್ಪಿ ಅರ್ಧಪುಟ, ಅಥವಾ ಮುಕ್ಕಾಲು ಪುಟ ಅಥವಾ ಕಾಲು ಪುಟವನ್ನು ಬರೆದರೆ ಅದು ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ. ಆ ಸಂದರ್ಭದಲ್ಲಿ ನಾನು ಏನೋ ಕಳೆದುಕೊಂಡುಬಿಟ್ಟಿದ್ದೇನೆ, ಏನೋ ತಪ್ಪು ಮಾಡಿದ್ದೇನೆ, ಯಾವುದೋ ಬಲವಾದ ಭಾರ ನನ್ನ ತಲೆಯ ಮೇಲಿದೆ ಎಂಬ ಯೋಚನೆ, ಭಯ ಶುರುವಾಗಿಬಿಡುತ್ತದೆ. ನಾನು ಎಂ.ಎ. ಪತ್ರಿಕೋದ್ಯಮ

ಜೊತೆಗೆ ಡಿಪ್ಲೊಮಾದಲ್ಲಿಯ ಪತ್ರಿಕಾ ಪದವಿಯನ್ನು ಪಡೆದಿರುವುದಕ್ಕೆ ಸಾರ್ಥಕವಾಯಿತು ಎಂದುಕೊಂಡಿದ್ದೇನೆ. ನಾನು ಪತ್ರಿಕೋದ್ಯಮದ ವ್ಯಾಸಂಗ ಮಾಡುವಾಗ ಒಬ್ಬ ಪತ್ರಕರ್ತ, ಒಬ್ಬ ವರದಿಗಾರ, ಒಬ್ಬ ಸಂಪಾದಕ ಯಾವುದೇ ವಿಷಯಗಳನ್ನು, ವಿಚಾರಗಳನ್ನು, ಬರೆಯುವಾಗ, ಓದುಗರಿಗೆ ಬರೆದು ತಿಳಿಸುವಾಗ ಆ ವಿಚಾರಗಳು ಅಗೆದು, ಬಗೆದು ತೆಗೆದ ಸುದ್ದಿಯಾಗಿರಬೇಕು ಎಂದು ಪತ್ರಿಕೋಧ್ಯಮದಲ್ಲಿ ಹೇಳುತ್ತದೆ, ಅದರಂತೆ ನನ್ನ 30–35 ವರ್ಷಗಳ ಪತ್ರಿಕೆಯ ಕೆಲಸ, ಬರವಣಿಗೆಯ ಕೆಲಸವು ಹೆಚ್ಚು ಕಮ್ಮಿ ಅಗೆದು, ಬಗೆದು, ತೆಗೆದ ಸುದ್ದಿಯಾಗಿರುತ್ತದೆ ಎಂದು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುತ್ತಾ ನನ್ನ ಬೆನ್ನನ್ನು ನಾನೇ ತಟ್ಟಿಕೊಳ್ಳುತ್ತೇನೆ.

ಅದೇ ರೀತಿ ನನ್ನ ಪಯಣ ಪತ್ರಿಕಾರಂಗ ಮತ್ತು ಬರವಣಿಗೆಯ ಲೋಕ ಇವೆರಡನ್ನೂ ನಾನು ನನ್ನ ಸ್ವಂತ ಮತ್ತು ವಾಸ್ತವಿಕತೆಯ ಹತ್ತಿರಕ್ಕೆ ತೆಗೆದುಕೊಂಡು ಹೋಗಿ ಇರುವ, ನಡೆದಿರುವ, ನಡೆಯುತ್ತಿರುವ ಘಟನೆಗಳನ್ನು ಕಂಡು, ನೋಡಿ ಅನುಭವಿಸುತ್ತಾ ಅಂತರಾಳದಿಂದ, ಮನದಾಳ ದಿಂದ ಬರೆಯುತ್ತೇನೆ, ಹೀಗಾಗಿಯೇ ಅನೇಕ ಓದುಗರು ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ದೇಶ ವಿದೇಶಗಳಲ್ಲೂ ಓದುವ ಬಳಗವಿದೆ. ಈ ಓದುಗ ಬಳಗದಿಂದ ನನ್ನಂತಹವನನ್ನು ಗುರ್ತಿಸಿ, ಪ್ರೀತಿಸಿ ನಮ್ಮ ಗಂಗಾಧರ್‌ರವರು ಸಹ ಚೆನ್ನಾಗಿ ಬರೆಯುತ್ತಾರೆ ಎಂದು ಅನೇಕರ ಹತ್ತಿರ ಹೇಳುತ್ತಿರುತ್ತಾರೆ, ಈ ಸ್ಫೂರ್ತಿಯ ಮಾತುಗಳು ನನಗೆ ವೂಡೇಪಿರವರ ಕುರಿತು ನಿರಂತರವಾಗಿ ಕಳೆದ ಒಂದೂವರೆ ವರ್ಷದಿಂದ ಅವರ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಅವರ ವಿಚಾರಧಾರೆಗಳನ್ನು, ಅವರ ಕುಟುಂಬದ ಹಿನ್ನೆಲೆಯನ್ನು ನನಗೆ ಗೊತ್ತಿರುವ ಹಾಗೆ, ತಿಳಿದಮಟ್ಟಿಗೆ ಬರೆಯುತ್ತಿದ್ದೇನೆ, ವೂಡೇಪಿರವರ ಬಗ್ಗೆ ನಾನು ಬರೆಯಲು ಕುಳಿತಾಗ ಅಗೆದು ಬಗೆದು ತೆಗೆದ ಸುದ್ಧಿಯಾಗಿರಬೇಕು ಎಂಬ ನಿಟ್ಟಿನಲ್ಲಿ ನಾನು ತುಂಬ ಭಯ ಭಕ್ತಿ, ನಾಚಿಕೆಯಿಂದ ಬರೆಯುತ್ತೇನೆ, ಏಕೆಂದರೆ ವೂಡೇಪಿ ಕೃಷ್ಣರವರು ಅರುವತ್ತು ವರ್ಷಗಳು ತುಂಬುವುದರೊಳಗೆ ಏನೆಲ್ಲಾ ಸಾಧನೆ ಮಾಡಿದ್ದರೆ ಏನೆಲ್ಲಾ ಸಾಧನೆ ಈಗಲೂ ಮಾಡುತ್ತಿದ್ದಾರೆ, ಈಗಲೂ ದಿನದ 24 ಗಂಟೆಯು ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ ಅಂತಹ ವ್ಯಕ್ತಿಯ ಒಂದು ಚಿತ್ರಣವನ್ನು ನಾನು ಬರೆಯುತ್ತಿರುವಾಗ ಈ ರೀತಿ ಬರೆಯುತ್ತಿರುವುದು ನಾನೇನ, ನಾನು ಆ ಮಟ್ಟಕ್ಕೆ ಇದ್ದೇನೆಯೇ ಹೇಳಿ ಕೇಳಿ ನಾನು ಪತ್ರಿಕೆ ಮತ್ತು ಬರವಣಿಗೆಯ ಲೋಕದಲ್ಲಿ ಅಂಬೆಗಾಲಿಡುತ್ತಿರುವವನು, ಇಂತಹವನು ಒಬ್ಬ ಮಹಾನ್ ಸಾಧಕ, ಅದರಲ್ಲೂ ಸಾಧಕರ ಲೋಕದಲ್ಲಿ ಮಹಾನ್ ಸಾಧಕರಾದ ವೂಡೇಪಿ ಕೃಷ್ಣರವರ

ಬಗ್ಗೆ ಅವರ ಕುರಿತಾದ ವ್ಯಕ್ತಿ ಚಿತ್ರಣದ ಲೇಖನವನ್ನು ಬರೆಯುತ್ತಿರುವುದು ಸಾಮಾನ್ಯ ಸಂಗತಿಯಲ್ಲ, ಒಬ್ಬ ಅಸಾಮಾನ್ಯ, ಮೇರು ವ್ಯಕ್ತಿತ್ವದ ವ್ಯಕ್ತಿ ವೂಡೇಪಿರವರು ಇದುವರೆವಿಗಿನ ಅವರ ಕುರಿತಾದ ನನ್ನ ಅಂಕಣವನ್ನು ಮೆಚ್ಚಿದ್ದಾರೆ ಎಂದು ಅಂದುಕೊಂಡಿದ್ದೇವೆ.

ಈ ಅಂಕಣದಲ್ಲಿ ಅವರ ಕಾರ್ಯಕ್ಷೇತ್ರಗಳ ವಿರಾಟ್ ದರ್ಶನದ ಚಿತ್ರಣ ಇಲ್ಲಿದೆ.

ಸಾಧನೆಗೆ ಸಾವಿರ ಮುಖ ಡಾ. ವೂಡೇ ಪಿ. ಕೃಷ್ಣ ಅವರ ಕಾರ್ಯಕ್ಷೇತ್ರಗಳ ವಿರಾಟ್ ದರ್ಶನ ಇಲ್ಲಿದೆ.

1. ಭಾರತ ಸರ್ಕಾರದ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಇಂಜಿನಿಯರಿಂಗ್ ಪರಿಷತ್ ಸದಸ್ಯರು.
2. ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ರಾಜ್ಯಸಚಿವ ದರ್ಜೆಯ ಸದಸ್ಯರು.
3. ಗಾಂಧೀ ಶಾಂತಿ ಪ್ರತಿಷ್ಠಾನದ ಮಾಜಿ ಅಧ್ಯಕ್ಷರು.
4. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು.
5. ಭಾರತೀಯ ಸೇವಾದಳ ಕೇಂದ್ರ ಸಮಿತಿಯ ಗೌರವ ಕೋಶಾಧ್ಯಕ್ಷರು.
6. ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳು
7. ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರು.
8. ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರು.
9. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
10. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರು.
11. ಭಾರತೀಯ ಕ್ಷಯರೋಗ ಸಂಸ್ಥೆಯ ಕೇಂದ್ರ ಸಮಿತಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು.
12. ಬೆಂಗಳೂರು ನಗರದ ಎಲ್ಲಾ ಸರ್ಕಾರಿ ಆಸ್ಪತ್ರೆಗಳ ಬೋರ್ಡ್ ಆಫ್ ವಿಸಿಟರ್ಸ್ ಸದಸ್ಯರು.

13. ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು ಹಾಗೂ ರಾಷ್ಟ್ರೀಯ ಪರಿಷತ್ ಸದಸ್ಯರು. 14.ರಾಷ್ಟ್ರೀಯ ವಿನ್ಯಾಸ ಮತ್ತು ಸಂಶೋಧನಾ ಸಂಸ್ಥೆಯ ಬೋರ್ಡ್ ಆಫ್ ಗವರ್ನರ್ಸ್‌ನ ಸದಸ್ಯರು.

15. ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ವ್ಯವಸ್ಥಾಪಕ ಮಂಡಳಿ ಸದಸ್ಯರು. 16.ಬೆಂಗಳೂರು ಶಾಖೆಯ ವ್ಯಾಲ್ಯುಯರ್ಸ್ ಸಂಸ್ಥೆಯ ಉಪಾಧ್ಯಕ್ಷರು,

17. ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರು.

18. ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘದ ಬೆಂಗಳೂರು ಘಟಕದ ಅಧ್ಯಕ್ಷರು.

19. ಭಾರತೀಯ ವಿಶ್ವಶಾಂತಿ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರು.

20. ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ದತ್ತಿಯ ವ್ಯವಸ್ಥಾಪಕ ಧರ್ಮದರ್ಶಿಗಳು.

21. ಕರ್ನಾಟಕ ಖಾಸಗಿ ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳ ಸಂಘದ ಕಾರ್ಯದರ್ಶಿಗಳು.

22. ಸದಾಶಿವನಗರ ಶಿಕ್ಷಣ ಸಂಸ್ಥೆಗಳ ಆಡಳಿತ ಪರಿಷತ್ತಿನ ಅಧ್ಯಕ್ಷರು.

23. ಅಪ್ಪಾವು ಪಿಳ್ಳೆ ಶಿಕ್ಷಣ ಸಂಸ್ಥೆಗಳ ಧರ್ಮದರ್ಶಿ,

24. ಬೆಂಗಳೂರಿನ ವಿಟ್ರಿಯಾ ಇಂಜಿನಿಯರಿಂಗ್ ಕಾಲೇಜಿನ ಶೈಕ್ಷಣಿಕ ಹಾಗೂ ಅಭಿವೃದ್ಧಿ ಸಮಿತಿ ಸದಸ್ಯರು.

25. ಸೈಂಟ್ ಜಾನ್ ಆಂಬುಲನ್ಸ್ ಸಂಘದ ಕರ್ನಾಟಕ ರಾಜ್ಯ ಶಾಖೆಯ ಕಾರ್ಯಕಾರಿಣಿ ಸದಸ್ಯರು.

26. ಕರ್ನಾಟಕ ಸರ್ವೋದಯ ಮಂಡಲದ ಕಾರ್ಯಕಾರಿ ಮಂಡಳಿ ಸದಸ್ಯರು.

27. ಶ್ರೀನಿವಾಸ ಮಂದಿರಂ ಧರ್ಮಸಂಸ್ಥೆಗೆ ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ ಧರ್ಮದರ್ಶಿಗಳು.

28. ರಾವ್ ಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‌ರವರು ಸ್ಥಾಪಿಸಿದ ಬ್ರಹ್ಮಮಂದಿರ ದತ್ತಿಯ ಧರ್ಮದರ್ಶಿಗಳು.

29. ವೂಡೇ ಪ್ರತಿಷ್ಠಾನದ ಸ್ಥಾಪಕ ಧರ್ಮದರ್ಶಿಗಳು.

30. ಕರ್ನಾಟಕ ಸರ್ಕಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ಶತಮಾನೋತ್ಸವದ ಅಂಗವಾಗಿ ರಾಜ್ಯದಾದ್ಯಂತ ಏರ್ಪಡಿಸಿದ್ದ 'ಯುವ ಜಾಗೃತಿ' ಕಾರ್ಯಕ್ರಮಗಳ ಸಂಘಟನಾ ಸಮಿತಿಯ ಸದಸ್ಯರು.

31. ಪಟೇಲ್ ಪ್ರತಿಷ್ಠಾನದ ಗೌರವ ಅಧ್ಯಕ್ಷರು.

32. ರಾಜಾರಾಮ್ ಮೋಹನ್ ರಾಯ್ ಸ್ಥಾಪಿತ ಬ್ರಹ್ಮಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರು.

33. ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರು

34. ಇಂಡಿಯನ್ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರು.

ಅಂತಾರಾಷ್ಟ್ರೀಯ, ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಸಮಾಜದ ದುರ್ಬಲರ ಸೇವೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಘ-ಸಂಸ್ಥೆಗಳಲ್ಲಿ ಉನ್ನತ ಮಟ್ಟದ ನಾಯಕರು ಹಗಲಿರುಳು ಶ್ರಮಿಸಿದ್ದಾರೆ. ಅವರುಗಳ ಹಾದಿಯಲ್ಲಿಯೇ ಸಂಘ-ಸಂಸ್ಥೆಗಳ ಪುರೋಭಿವೃದ್ಧಿಗಾಗಿಯೇ ಕಂಕಣತೊಟ್ಟು ಸಮಾಜದ ಸೇವೆಗಾಗಿ, ದೇಶದ ಸರ್ವತೋಮುಖ ಪ್ರಗತಿಗಾಗಿ ತಮ್ಮ ಜೀವನವನ್ನು ಮೀಸಲಿಟ್ಟುಕೊಂಡಿರುವ ಕೃಷ್ಣರವರು ಹಲವು ಮಹನೀಯರ ಪ್ರಭಾವ ಮತ್ತು ಸಂಘ -ಸಂಸ್ಥೆಗಳನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ರಾಷ್ಟ್ರಪ್ರೇಮ, ಸಾಮಾಜಿಕ ಕಳಕಳಿ, ಯುವಪೀಳಿಗೆಯ ಭವಿಷ್ಯದ ಬಗೆಗಿನ ಉತ್ತಮ ಆಶಯ ಮಾನವೀಯ ಮೌಲ್ಯಗಳ ತುಡಿತ. ನಾಯಕತ್ವದ ಗುಣವಿರುವ ಕೃಷ್ಣರವರು ಆಡಳಿತಾತ್ಮಕವಾಗಿ ಉನ್ನತ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ಅವರ ಸೇವೆ "ಆಡು ಮುಟ್ಟದ ಸೊಪ್ಪಿಲ್ಲ. ಕೃಷ್ಣರವರು ಮಾಡದ ಕಾರ್ಯವೇ ಇಲ್ಲ" ಎಂಬಂತೆ ಬಹುಮುಖ ಸ್ಥಾನಗಳನ್ನು ಹೊಂದಿ ನಿಸ್ವಾರ್ಥ ಸೇವೆ ರೀತಿಯಲ್ಲಿ ಸಲ್ಲಿಸುತ್ತಿದ್ದಾರೆ. ಹೀಗೆ ಇನ್ನೂ ದಾಖಲಿಸುತ್ತಾ ಹೋದರೆ ಬಹುಶಃ ಅವುಗಳು ಮುಗಿಯುವುದಿಲ್ಲವೇನೋ ......

ಇಲ್ಲಿ ಸೂಚಿಸಿರುವ ಸಂಘ-ಸಂಸ್ಥೆಗಳಲ್ಲಿ ಸೇವೆ ಮಾಡಲು ಹಲವು ಮಹನೀಯರು ಕೃಷ್ಣರವರ ಕಾರ್ಯತತ್ಪರತೆಯನ್ನು ಮೆಚ್ಚಿ ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ. ಅವರುಗಳು ವಹಿಸಿದ ಜವಾಬ್ದಾರಿಗಳನ್ನು ಶ್ರದ್ಧೆಯಿಂದ, ಪ್ರಾಮಾಣಿಕತೆಯಿಂದ ರಾಷ್ಟ್ರನಾಯಕರ ಆದರ್ಶಗಳೊಂದಿಗೆ ಸಂಸ್ಥೆಗಳನ್ನೂ ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ಆಡಳಿತಾತ್ಮಕವಾಗಿ ಜ್ಞಾನದ ಶಕ್ತಿಯನ್ನು ಬಳಸಿ ಉತ್ತಮ ಸಂಸ್ಥೆಗಳನ್ನಾಗಿ ರೂಪಿಸಿದ್ದಾರೆ.

ದಿನವೆಲ್ಲಾ ಗಾಂಧೀಜಿಯವರ ನೆನಪು

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಅಪರೂಪದ ಗಾದೆಯ ಮಾತಿನಂತೆ ವೂಡೇ ಪಿ. ಕೃಷ್ಣರವರು ಸರ್ವಜನರ ಪ್ರೀತಿಯ ವ್ಯಕ್ತಿ, ಹುಟ್ಟಿನಿಂದಲೇ ತಂದೆ, ತಾಯಿ, ಅಜ್ಜ, ಅಜ್ಜಿ ಮತ್ತು ಕುಟುಂಬದ ಹಿರಿಯರಿಂದ ಬಳುವಳಿಯಾಗಿ ಪಡೆದಿದ್ದು ಸಂಸ್ಕಾರ, ನಯ, ವಿನಯ ಮಾತಿನಲ್ಲಿ ಪ್ರೀತಿ ವಾತ್ಸಲ್ಯ, ಮಮತೆಯ ಕರುಣಾಮಯಿಯಾಗಿ ರೂಪಗೊಂಡಿರುವ ಅಪ್ಪಟ ಗಾಂಧಿವಾದಿ, ಕೆಲವಾರು ಸಂದರ್ಭದಲ್ಲಿ ವೂಡೇ ಪಿ. ಕೃಷ್ಣ ಅವರು ತುಂಬು ಹೃದಯದಿಂದ ಅಂತರಾಳದಿಂದ ಮನದಾಳದಿಂದ ಹೇಳುವ ನೆನೆಯುವ ಮಾತೆಂದರೆ ಗಾಂಧೀಜಿಯವರು ನನ್ನ ಪಾಲಿನ ಆದರ್ಶ ವ್ಯಕ್ತಿ ಎನ್ನುವುದು. ವೂಡೇ ಪಿ. ಅವರು, ಗಾಂಧೀಜಿಯವರ ಆದರ್ಶ, ಆಚಾರ

ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದು ನಮ್ಮಂತಹವರಿಗೆ ಸ್ಫೂರ್ತಿಯಾಗಿದ್ದಾರೆ. ಮಹಾತ್ಮ ಗಾಂಧೀಜಿಯವರನ್ನು ಎತ್ತರವಾದ ಸ್ಥಾನದಲ್ಲಿ ಕಂಡಿದ್ದಾರೆ. ಅವರ ಆದರ್ಶವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರೂ, ಗೌರವಾನ್ವಿತರಾದ ಐ.ಎನ್.ಎ. ರಾಮರಾವ್, ಪಾಟೀಲ್ ಪುಟ್ಟಪ್ಪ, ಹೆಚ್. ಎಸ್. ದೊರೆಸ್ವಾಮಿ, ಕೆ.ಎಸ್. ನಾರಾಯಣ ಸ್ವಾಮಿ, ಎಸ್. ವಿ. ಮಂಜುನಾಥ, ಡಾ. ಹೊ. ಶ್ರೀನಿವಾಸಯ್ಯ ಡಾ. ಎಂ. ಗುರುದಾಸ್, ಇವರ ದೊಡ್ಡಪ್ಪ ಡಬ್ಲ್ಯು ಹೆಚ್. ಹನುಮಂತಪ್ಪ ತಂದೆ ಡಬ್ಲ್ಯೂ ಹೆಚ್. ಪುಟ್ಟಯ್ಯ, ಪ್ರೊ. ಹೆಚ್. ಆರ್. ದಾಸೇಗೌಡ, ಡಾ. ಜಿ. ಮಾದೇಗೌಡ ಹೀಗೆ ಸ್ವಾತಂತ್ರ್ಯದ ಹೋರಾಟಗಾರರು, ದೇಶಕ್ಕೆ ಹೋರಾಡಿದ ಮಹನೀಯರು, ಕನ್ನಡ ಭಾಷೆಗಾಗಿ ಹೋರಾಡಿದ ಕನ್ನಡದ ಮಹಾ ಸಾಧಕರು, ಸಾಹಿತಿಗಳು, ಬರಹಗಾರರು, ಪತ್ರಕರ್ತರು, ಚಲನಚಿತ್ರದಲ್ಲಿ ದುಡಿದಂಥ ಹೆಸರಾಂತ ನಟ ನಟಿಯರು ಹೀಗೆ ದೇಶ, ನಾಡು ನುಡಿಗಾಗಿ ದುಡಿದಂಥ, ದುಡಿಯುತ್ತಿರುವ ಮಹನೀಯರ ಬಗ್ಗೆ ಅಪಾರವಾದ ಗೌರವವನ್ನು ಹೊಂದಿರುತ್ತಾರೆ.

ಹಿರಿಯ ಕವಿ ಸಿದ್ದಯ್ಯ ಪುರಾಣಿಕ್‌ರವರು ಹೇಳಿರುವಂತೆ 'ಏನಾದರೂ ಆಗು ಮೊದಲು ಮಾನವನಾಗು' ಎನ್ನುವಂತೆ ಅಕ್ಷರಶಃ ವೂಡೇ ಪಿ. ಕೃಷ್ಣರವರು ಜೀವನದಲ್ಲಿ ಎನು ಬೇಕಾದರೂ ಆಗಬಹುದಿತ್ತು, ಸಾಧಿಸಬಹುದಿತ್ತು. ಆದರೆ ಇವರ ನಡೆ, ನುಡಿ, ಗುರಿ, ಈ ನಶ್ವರವಾದ ಪ್ರಪಂಚದಲ್ಲಿ ಹುಟ್ಟಿದ ಮೇಲೆ ನಾವು ಏನನ್ನಾದರೂ ಮಾಡಬೇಕು, ಸಾಧಿಸಬೇಕು ನಿಜ, ಅದರೆ ನಾವು ಮೊದಲು ಒಳ್ಳೆಯ ಮನುಷ್ಯರಾದಾಗ ಮಾತ್ರ ನಾವು ಸಮಾಜಕ್ಕೆ ಏನಾದರೂ ಕೊಡಬಹುದು, ಮಾಡಬಹುದು ಎಂಬ ಅರಿವಿನಲ್ಲಿ ವೂಡೇ ಪಿ ಕೃಷ್ಣರವರು ತಮ್ಮ ಜೀವನದ ಅಮೂಲ್ಯವಾದ ಕ್ಷಣಗಳನ್ನು ನೆಮ್ಮದಿಯಿಂದ ಕಳೆಯುತ್ತಿದ್ದಾರೆ. ಇದರ ಜೊತೆಗೆ ದಿನದ 24 ಗಂಟೆಯು ಏನನ್ನಾದರೂ ಮಾಡಬೇಕು, ಸಮಾಜದ ಕೆಲಸ ವನ್ನಾಗಲಿ, ದೀನ ದಲಿತರ ಕೆಲಸವನ್ನಾಗಲೀ, ರಾಷ್ಟ್ರ ಕಟ್ಟುವ ಕೆಲಸವಾಗಲೀ, ದೇಶಕಟ್ಟುವ ಕೆಲಸವಾಗಲೀ, ಕನ್ನಡ ಭಾಷೆಯ ಕೆಲಸವಾಗಲೀ ಬಹಳ ಉತ್ಸಾಹದಿಂದ ಶ್ರದ್ಧೆಯಿಂದ ಮಾಡುತ್ತಾ ತನ್ನನ್ನು ತಾನು ದೇಶ, ರಾಜ್ಯದ ಸೇವೆಗೆ ಮುಡುಪಾಗಿಟ್ಟಿದ್ದಾರೆ ಎಂಬುದು ನನ್ನಂತಹವನಿಗೆ ಸೂಕ್ಷ್ಮವಾಗಿ ಗೊತ್ತಾಗುತ್ತದೆ.

ಹೀಗೆ ಹತ್ತು ಹಲವು ರೀತಿಯಲ್ಲಿ ಸಮಾಜದಲ್ಲಿನ ಸರ್ವಜನರ ಅದರಲ್ಲೂ ದೀನದಲಿತರ ಶೋಷಿತರ, ಒಪ್ಪತ್ತಿನ ಊಟಕ್ಕೂ ನಿರಂತರವಾಗಿ ಕಷ್ಟಪಡುವವರ ಬಾಳಿಗೆ ಎಲೆಮರೆಯ ಕಾಯಿಯಂತೆ ಪರಿಪೂರ್ಣವಾದ ಸೇವೆಯನ್ನು ಎಲ್ಲೂ

ತೋರಿಸಿಕೊಳ್ಳದಂತೆ ನಿರಂತರವಾಗಿ ಮಾಡುತ್ತಾ ಬರುತ್ತಿದ್ದಾರೆ. ಇಷ್ಟೆಲ್ಲದರ ಮಧ್ಯೆ 1923ರಲ್ಲಿ ಪ್ರಾರಂಭಗೊಂಡ ವಿಶೇಷವಾದ ಮತ್ತು ದೇಶದ ಸ್ವತಂತ್ರ ಪೂರ್ವದಲ್ಲಿ "ಹಿಂದೂಸ್ಥಾನಿ ಸೇವಾದಳ" ಸಂಸ್ಥೆಗೆ ಜವಾಹರಲಾಲ್ ನೆಹರುರವರು ಅಧ್ಯಕ್ಷರಾಗಿಯೂ, ಡಾ. ಎನ್. ಎಸ್. ಹರ್ಡಿಕರ್‌ರವರು ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸಿದ್ದರು. ಈ ಸಂಸ್ಥೆಯು ಮುಂದೊಂದು ದಿನ "ಭಾರತ ಸೇವಾದಳ" ಸಂಸ್ಥೆಯಾಯಿತು. ಈ ಭಾರತ ಸೇವಾದಳ ಸಂಸ್ಥೆಯು ಯಾವುದೇ ರಾಜಕೀಯ ಪಕ್ಷಗಳ ಮರ್ಜಿಗೆ ಒಳಗಾಗದೆ ಸ್ವತಂತ್ರ ಸಂಸ್ಥೆಯಾಗಿ ದೇಶದ ಏಕತೆ ಮತ್ತು ಭಾವೈಕ್ಯತೆಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಒಂದು ಸಂಸ್ಥೆ ಎಂದರೆ ಅದು ಭಾರತ ಸೇವಾದಳದ ಸಂಸ್ಥೆ ಎಂದು ಹೇಳಬಹುದು. ಇಂತಹ ಒಂದು ಅಪರೂಪದ ಸಂಸ್ಥೆಗೆ ವೂಡೇ ಪಿ. ಕೃಷ್ಣರವರು ಇಷ್ಟಪಟ್ಟು ಹೇಗಾದರೂ ಮಾಡಿ ರಾಷ್ಟ್ರದ ಏಕತೆ ಮತ್ತು ಭಾವೈಕ್ಯತೆಗಾಗಿ ಅಲ್ಪ ಸ್ವಲ್ಪ ಸೇವೆ ಮಾಡಬೇಕೆಂದು ಅಂದು ಭಾರತ ಸೇವಾದಳ ಸಂಸ್ಥೆಗೆ ಸೇರ್ಪಡೆಯಾಗಿ ನಂತರ ಅವರು ಭಾರತ ಸೇವಾದಳದ ಕೇಂದ್ರ ಸಮಿತಿಯ ಗೌರವ ಖಜಾಂಚಿಯಾಗಿ ಕೆಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುವುದು ನಾವೆಲ್ಲ ಹೆಮ್ಮೆಪಡುವ ಸಂಗತಿ. ಯಾವಾಗ ಭಾರತ ಸೇವಾದಳದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡರೋ, ಆಗಲೇ ಕರ್ನಾಟಕ ರಾಜ್ಯದಲ್ಲಿ ಭಾರತ ಸೇವಾದಳದ ಸಂಸ್ಥೆಯಿಂದ ಏನಾದರೂ ಸ್ವಲ್ಪ ಒಳ್ಳೆಯ ಕೆಲಸವನ್ನು ಮಾಡಬೇಕೆಂಬ ನಿಟ್ಟಿನಲ್ಲಿ ಕೆಲವೊಂದು ಹೊಸ ಹೊಸ ಕೆಲಸ ಕಾರ್ಯಗಳ ಯೋಜನೆಯ ಬಗ್ಗೆ ಚಿಂತಿಸಿ ಕರ್ನಾಟಕ ರಾಜ್ಯಾದ್ಯಂತ 14,000 (ಹದಿನಾಲ್ಕು) ಸಾವಿರ ಶಾಲೆಗಳಲ್ಲಿ ಸೇವಾದಳದ ಘಟಕಗಳನ್ನು ಸ್ಥಾಪಿಸಿ ಶಾಲೆಯ ಶಿಕ್ಷಕರಿಗಾಗಿಯೇ ಸಾವಿರಾರು ಸೇವಾದಳದ ತರಬೇತಿ ಶಿಬಿರಗಳನ್ನು ಏರ್ಪಡಿಸುವ, ತಾಲ್ಲೂಕು, ಜಿಲ್ಲೆ, ಮತ್ತು ರಾಜ್ಯ ಮಟ್ಟದಲ್ಲಿ ಶಾಲಾ ಮಕ್ಕಳಿಗಾಗಿಯೇ ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳನ್ನು ಸಂಘಟಿಸುವ, ಏರ್ಪಡಿಸುವ ಕೆಲಸ, ಕಾರ್ಯಗಳ ಜೊತೆಗೆ ಡಾ. ಎಂ.ಸಿ. ಮೋದಿ ಸೇವಾದಳ ತರಬೇತಿ ಕೇಂದ್ರವನ್ನು ಪ್ರಾರಂಭಿಸುವ ಕಾರ್ಯಗಳಲ್ಲಿ ವೂಡೇ ಪಿ. ಕೃಷ್ಣರವರು ಅತ್ಯಂತ ಪರಿಪೂರ್ಣವಾದ ಮತ್ತು ಮಹತ್ವಪೂರ್ಣವಾದ ಸೇವೆಯನ್ನು ಮಾಡುವುದರ ಜೊತೆಗೆ ತನ್ನನ್ನು ತಾನು ಈ ನಿಃಸ್ವಾರ್ಥ ಸಂಸ್ಥೆಗೆ ಅರ್ಪಿಸಿಕೊಂಡಿದ್ದಾರೆ ಎಂದು ಹೇಳಬಹುದು.

ವೂಡೇ ಪಿ. ಕೃಷ್ಣರವರ ಅಂಕಣದಲ್ಲಿ ನಾನು ಈ ಮೊದಲೇ ಬರೆದಿರುವಂತೆ ವೂಡೇ ಪಿ. ಯವರು ಮಹಾತ್ಮ ಗಾಂಧಿಜಿಯವರ ಆದರ್ಶ, ಅವರ ಜೀವನ ಬದುಕು, ನಡೆ ನುಡಿಗಳನ್ನು ತನ್ನ ಜೀವನದಲ್ಲಿ ಬಹಳ ಅರ್ಥಪೂರ್ಣವಾಗಿ ಅಳವಡಿಸಿಕೊಂಡು, ಅವರ ಚಿಂತನೆಯ ಹಾದಿಯಲ್ಲಿಯೇ ನಡೆಯುತ್ತಿದ್ದು, ಇದರ

ಅಡಿಯಲ್ಲಿ ಇಂದಿನ ಯುವ ಜನಾಂಗಕ್ಕಾಗಿ ಸಮಾಜದಲ್ಲಿ ಯುವಕರು ಎಲ್ಲಾ ಕ್ಷೇತ್ರಗಳಲ್ಲಿ ಸೇವೆ ಮಾಡಲಿ, ದುಡಿಯಲಿ ಎಂಬ ನಿಟ್ಟಿನಲ್ಲಿ ವಿವಿಧ ರೀತಿಯ ಯೋಜನೆಗಳನ್ನು ಹಮ್ಮಿಕೊಂಡಿದ್ದಾರೆ.

ಹಾಗೆಯೇ ಮಹಾತ್ಮ ಗಾಂಧೀಜಿಯವರ ಅನುಮತಿ ಹಸ್ತದಿಂದ ಸ್ಥಾಪಿತವಾದ "ಸರ್ವಸೇವಾ ಸಂಘ"ದ ಭಾಗವಾದ ಕರ್ನಾಟಕ ಸರ್ವೋದಯ ಮಂಡಲದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇದರ ಜೊತೆಗೆ ಪ್ರತಿಷ್ಠಿತ ಗಾಂಧಿ ಪ್ರಣೀತ ಸಂಸ್ಥೆಗಳಾದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಹಾಗೂ ಗಾಂಧೀ ಶಾಂತಿ ಪ್ರತಿಷ್ಠಾನ ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದದ್ದು ಬಹಳ ವಿಶೇಷ, ಏಕೆಂದರೆ ಕೇಂದ್ರ ಗಾಂಧಿ ಶಾಂತಿ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು ಮತ್ತು ಪ್ರಾರಂಭಿಸಿದವರು ಡಾ. ಬಾಬುರಾಜೇಂದ್ರಪ್ರಸಾದ್‌ರವರು ಹಾಗೆಯೇ ಅದರ ಸಂಸ್ಥಾಪಕ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾದದ್ದು ಬಹಳ ವಿಶೇಷ. ಏಕೆಂದರೆ ಕೇಂದ್ರ ಗಾಂಧಿ ಶಾಂತಿ ಪ್ರತಿಷ್ಠಾನವನ್ನು ಸ್ಥಾಪಿಸಿದ್ದ ಮತ್ತು ಪ್ರಾರಂಭಿಸಿದವರು ಡಾ. ರಾಜೇಂದ್ರ ಪ್ರಸಾದ್‌ರವರು, ಹಾಗೆಯೇ ಅವರ ಸಂಸ್ಥಾಪಕ ಅಧ್ಯಕ್ಷರಾಗಿದ್ದು ಬಹಳ ವಿಶೇಷ ಎಂದು ಇಲ್ಲಿ ಸ್ಮರಿಸಬಹುದು, ಮತ್ತು ಗಾಂಧಿ ತತ್ವ ಪ್ರಚಾರದ ವಿಂಗ್ ಹಿಂದೆ ಆರ್. ಆರ್. ದಿವಾಕರ್‌ರವರು ಇದರಲ್ಲಿದ್ದರು. ಇಲ್ಲಿಯ ಖಾದಿ ಉಡುಪು ಒಂದು ಸಂಕೇತ, ಈ ಖಾದಿ ಉಡುಪುಗಳನ್ನು ತಮ್ಮ ಶಾಲಾ ಕಾಲೇಜುಗಳಲ್ಲಿ ವಾರಕ್ಕೆ ಒಂದು ದಿನ ಪ್ರತಿಯೊಬ್ಬ ವಿದ್ಯಾರ್ಥಿಗಳು ಹಾಕಿಕೊಳ್ಳಬೇಕು ಅಥವಾ ಧರಿಸಿಕೊಳ್ಳಬೇಕು ಎಂಬ ನಿಯಮವನ್ನು ಸಹ ಮಾಡಿರುತ್ತಾರೆ. ಹೀಗಾಗಿ ಖಾದಿಯ ಬಟ್ಟೆಯ ಬಗ್ಗೆ ಯುವಜನರಲ್ಲಿ ಪ್ರೀತಿ ವಿಶ್ವಾಸ ಮೂಡಿಸುವ ಕಾರ್ಯವನ್ನು ಮಾಡಿದ್ದಾರೆ ವೂಡೇ ಪಿ. ರವರು.

ಜಾತ್ಯತೀತ ಸಮಾಜ ನಿರ್ಮಾಣದ ಗುರಿ ಹೊಂದಿರುವ ವೂಡೇಪಿ.

ಸಮ ಸಮಾಜ ಭಾರತ ದೇಶದಲ್ಲಿ ವಾಸಿಸುವ ಪ್ರತಿಯೊಬ್ಬರು ಒಂದೇ ಜಾತಿಯವರು, ಒಂದೇ ಧರ್ಮದವರು, ನಾವೆಲ್ಲರೂ ಸಮಾನ ಮನಸ್ಕ ವರ್ಗದವರು, ನಾವೆಲ್ಲರೂ ದೇಶದ, ರಾಜ್ಯದ, ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಬೇಕು, ನಮ್ಮಲ್ಲಿರುವ ಅವರ ಜಾತಿ, ಇವರ ಜಾತಿ, ಅವನು ಹಿಂದೂ, ಇವನು ಮುಸ್ಲಿಂ, ಅವನು ಹಿಂದುಳಿದ ಜಾತಿಯವನು, ಇವನು ಮುಂದುವರೆದ ಜಾತಿಯವನು ಎಂದು ನಮ್ಮ ನಮ್ಮಲ್ಲೇ ಇಂತಹ ಜಾತಿ ಮತ್ತು ಧರ್ಮದ ವಿಚಾರವಾಗಿ ನಾವು ಇಂದು ದೇಶದಲ್ಲಿ ರಾಜ್ಯದಲ್ಲಿ ಅಸ್ತಿತ್ವವನ್ನು

ಕಳೆದುಕೊಳ್ಳಬಾರದು, ನಾವೆಲ್ಲರೂ ಸಮಾನ ಮನಸ್ಕರಾಗಿ ನಾವೆಲ್ಲರೂ ಒಂದೇ ಧರ್ಮದವರು, ಒಂದೇ ವರ್ಗದವರು, ಪ್ರತಿಯೊಬ್ಬ ಜನ ಸಾಮಾನ್ಯರಲ್ಲಿ ಜಾತಿ ಭೇದದ ವಿಷಜಂತು ಎಂಬ ಪದವನ್ನು ಹೋಗಲಾಡಿಸಬೇಕು. ನವ ಸಮಾಜದ ನಿರ್ಮಾಣವನ್ನು ನಾವೆಲ್ಲರೂ ಮಾಡಬೇಕು, ನಮ್ಮಲ್ಲಿರುವ ಜಾತಿ, ಧರ್ಮದ ಬಗ್ಗೆ ಸಂಕುಚಿತ ಮನೋಭಾವನೆಯನ್ನು ಮೊದಲು ನಮ್ಮನಮ್ಮ ಮನಸ್ಸುಗಳಿಂದ ಕಿತ್ತು ಹಾಕಬೇಕು, ನಾವು ಎಲ್ಲಿ, ಯಾವ ಸ್ಥಳದಲ್ಲಿದ್ದೇವೆಯೋ ಅಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಮನಸ್ಸಿನ, ಮನುಷ್ಯರನ್ನು ನಿರ್ಮಾಣ ಮಾಡಿದರೆ, ಈ ಪದ್ಧತಿ ರಾಜ್ಯ, ರಾಷ್ಟ್ರಮಟ್ಟದಲ್ಲಿಯು ಸಹ ಒಂದಲ್ಲ ಒಂದು ದಿನ ನಾವು ಭಾರತ ಮತ್ತು ನಾವಿರುವ ಜಾಗವನ್ನು ಜಾತ್ಯತೀತ ಸಮಾಜವನ್ನು ಇಂದಲ್ಲ ನಾಳೆ ನಿರ್ಮಾಣ ಮಾಡಬಹುದು ಎಂದು ವೂಡೇ ಪಿ ಕೃಷ್ಣರವರು ಸದಾ ಚಿಂತಿಸಿರುತ್ತಾರೆ. ಈ ನಿಟ್ಟಿನಲ್ಲಿ ಜಾತ್ಯಾತೀತ ಸಮಾಜದ ನಿರ್ಮಾಣದ ಗುರಿ ಹೊಂದಿರುವ ವೂಡೇ ಪಿ. ಕೃಷ್ಣರವರು ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಸ್ಥೆಯು ಬೆಂಗಳೂರು ಘಟಕದ ಅಧ್ಯಕ್ಷರಾಗಿ ಶಾಲಾ ಮಕ್ಕಳ ಹಾಗೂ ಯುವ ಜನತೆಯಲ್ಲಿ ಅಂತರ್ಜಾತೀಯ ಸೌಹಾರ್ದತೆ ಮತ್ತು ಏಕತೆಯ ಭಾವವನ್ನು ಮೂಡಿಸುವ ನಿಟ್ಟಿನಲ್ಲಿ ಹೆಚ್ಚು ಹೆಚ್ಚಾಗಿ ಶ್ರಮಿಸುತ್ತಿದ್ದಾರೆ.

ಹಿಂದಿನ ಸಮಾಜ ಮತ್ತು ಈಗಿನ ಸಮಾಜದ ವ್ಯವಸ್ಥೆಯನ್ನು ಸಮಾಜದಲ್ಲಿ ನಾವು ಹೇಗೆ ಜೀವಿಸುತ್ತಿದ್ದೇವೆ, ಹೇಗೆ ಸಮಾಜದಲ್ಲಿ ಅಂದಿನಿಂದ ಇವತ್ತಿನ ವರೆಗೂ ಇದ್ದೇವೆ ಎಂಬುದು ಒಂದು ಕಡೆ ಮುಖ್ಯವಾದರೆ ಅಂದಿನ ಸಮಾಜದಲ್ಲಿ ಪ್ರತಿಯೊಬ್ಬರು ಸಮಾನ ಮನಸ್ಕರಾಗಿ ಪ್ರತಿ ವಿಚಾರದಲ್ಲಿಯೂ ಸಕಾರಾತ್ಮಕವಾಗಿ ಚಿಂತಿಸಿ ಸ್ಪಂದಿಸುತ್ತಾ ಜೀವಿಸುತ್ತಾ ಮತ್ತು ದೇಶ, ರಾಜ್ಯ, ತಾವಿರುವ ಸ್ಥಳಗಳ ಬಗ್ಗೆ ಒಳ್ಳೆಯದನ್ನು ಯೋಚಿಸುತ್ತಿದ್ದ ಕಾರಣಕ್ಕೂ ಈ ಕಾಲದಲ್ಲಿ ನಾವಾಯಿತು, ನಮ್ಮ ಕುಟುಂಬ, ಹೆಂಡತಿ, ಮಕ್ಕಳು, ಬಂಧು ಬಳಗ ಎನ್ನುವ ಈಗಿನ ಸಮಾಜದಲ್ಲಿ ದೇಶಕ್ಕಾಗಿ ದೇಶದ ಅಭಿವೃದ್ಧಿಗಾಗಿ ದೀನ-ದಲಿತ ಶ್ರೇಯೋಭಿವೃದ್ಧಿಗಾಗಿ ಅಕ್ಷರ ವಂಚಿತರನ್ನು ಗುರ್ತಿಸಿ ಅವರಿಗೆ ಅಕ್ಷರವನ್ನು ನೀಡಿ ನವ ಸಮಾಜವನ್ನು ಮತ್ತು ಜಾತ್ಯತೀತ ಸಮಾಜವನ್ನು ನಿರ್ಮಿಸಲು ಪಣತೊಟ್ಟು ನಿಂತಿರುವ ಅಪರೂಪದ ಸಾಲಿನಲ್ಲಿ ನಮ್ಮ ವೂಡೇ ಪಿ. ಕೃಷ್ಣರವರು ಎಲ್ಲರಿಗಿಂತ ಮೊದಲ ಸಾಲಿನಲ್ಲಿ ಬಹಳ ಎತ್ತರವಾಗಿ ನಿಲ್ಲುತ್ತಾರೆ. ಅದರಲ್ಲೂ ಈಗಿನ ಸಮಾಜವನ್ನು ಮತ್ತು ಹಿಂದಿನ ಸಮಾಜದ ಆಗುಹೋಗುಗಳ ಬಗ್ಗೆ ಒಮ್ಮೆ ಮೆಲುಕು ಹಾಕಿ ಹಿಂದಿರುಗಿ ನೋಡಿದಾಗ ನಮ್ಮ ಮುಂದೆ ಒಬ್ಬ ಸರಳ, ಸಜ್ಜನಿಕೆಯ ನಿಃಸ್ವಾರ್ಥ ವ್ಯಕ್ತಿ ಪ್ರತಿಕ್ಷೇತ್ರದಲ್ಲೂ ತಮ್ಮ ಕೈಲಾದ ಮಟ್ಟಿಗೆ, ಎಲೆ ಮರೆಯ ಕಾಯಿಯಂತೆ ಎಲ್ಲಿಯೂ ನಾನು

ಮಾಡಿದೆ, ನಾನು ಮಾಡಿದೆ, ಎಲ್ಲವೂ ನನ್ನಿಂದಲೇ ಎಂದು ಎಲ್ಲಿಯೂ, ಯಾವ ಸಂದರ್ಭದಲ್ಲಿಯೂ ತೋರಿಸಿಕೊಳ್ಳದ ಹಂಚಿಕೊಳ್ಳದ ಒಬ್ಬ ಅಪರೂಪದ ಸಾಧಕ ನಮ್ಮ ವೂಡೇ ಪಿ. ಕೃಷ್ಣರವರು, ಹೀಗಾಗಿಯೇ ವೂಡೇ ಪಿ. ಕೃಷ್ಣರವರನ್ನು "ಆಡು ಮುಟ್ಟದ ಸೊಪ್ಪಿಲ್ಲ" ಕೃಷ್ಣ ಮುಟ್ಟದೇ ಇರುವ ಯಾವ ಕೆಲಸಗಳು ಸದ್ಯಕ್ಕೆ ಖಾಲಿ ಇಲ್ಲ" ಹೆಚ್ಚು ಕಮ್ಮಿ ಸಮಾಜದಲ್ಲಿರುವ ಎಲ್ಲ ರೀತಿಯ ಕೆಲಸವನ್ನು ದೀನ ದಲಿತರ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದಾರೆ.

ಹೀಗಾಗಿಯೇ ಸರ್ವರಿಗೂ ಇಷ್ಟವಾಗುವ ಸರ್ವರೂ ಇಷ್ಟಪಡುವ ಹಾಗೂ ವೈಯಕ್ತಿಕವಾಗಿ ನಾನು ತುಂಬಾನೇ ಇಷ್ಟಪಡುವ ವ್ಯಕ್ತಿ ಸರ್ವರ ಆಸ್ತಿ ನಮ್ಮ ವೂಡೇ ಪಿ. ಕೃಷ್ಣಜೀರವರು.

“ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷನಾಗಿರುವುದು ನನ್ನ ಅದೃಷ್ಟ, ಪುಣ್ಯ”

ವಿವಿಧ ರೀತಿಯ ಸಮಾಜಮುಖಿ ಸಮಾಜ ಸೇವೆಯ ಜೊತೆಗೆ ಹತ್ತು ಹಲವು ರೀತಿಯ ಸಂಸ್ಥೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತನ್ನನ್ನು ತಾನು ಗುರ್ತಿಸಿಕೊಳ್ಳುವ ಕೆಲಸದಲ್ಲಿ ವೂಡೇ ಪಿ. ಕೃಷ್ಣರವರು ಒಬ್ಬ ಅಸಾಮಾನ್ಯ ಸಮಾಜ ಸೇವಕರಾಗಿ ಸಮಾಜದ ಮುಖ್ಯ ವಾಹಿನಿಯಲ್ಲಿದ್ದಾರೆ. ಇವರನ್ನು ನಾವು ಯಾವಾಗಲಾದರೂ ಭೇಟಿ ಮಾಡಲು ಅವರ ಕಛೇರಿಗಳಿಗೆ ಹೋದಾಗ ನನಗೆ ಅನ್ನಿಸಿದ್ದು ನಾನು ನನ್ನ ವೃತ್ತಿ ಜೀವನದಲ್ಲಿ ಒಬ್ಬ ಪತ್ರಕರ್ತನಾಗಿ, ಒಬ್ಬ ವಕೀಲನಾಗಿ, ಒಬ್ಬ ಬರಹಗಾರನಾಗಿ ಸಮಾಜದ ಉನ್ನತ ಶ್ರೇಣಿಯ ವ್ಯಕ್ತಿಗಳನ್ನು ಬಹಳ ಸುಲಭವಾಗಿ ಕಾಣುವ, ನೋಡುವ ಸೌಭಾಗ್ಯ ನನಗೆ ಸಿಕ್ಕರುತ್ತದೆ. ಇಲ್ಲಿ ಒಂದು ಪ್ರಶ್ನೆ. ಈ ರೀತಿಯ ವ್ಯಕ್ತಿಗಳನ್ನು ಭೇಟಿ ಮಾಡುವ ಸಂದರ್ಭ ಅವರುಗಳಲ್ಲಿ ಒಂದಲ್ಲ ಒಂದು ರೀತಿಯ ಅಧಿಕಾರ ಅವರನ್ನು

ಆವರಿಸುತ್ತದೆ. ಹೀಗಾಗಿ, ಅವರನ್ನು ಆ ದೃಷ್ಟಿಕೋನದಲ್ಲಿಯೇ ಅನೇಕ ಬಾರಿ ಭೇಟಿಯಾಗಿರುವ ಸಂದರ್ಭಗಳು ಇದ್ದವು. ಅದೇ ರೀತಿ ಅವರಿಗೆ ಅಧಿಕಾರ ಹೋದಾಗ ಅಂತಹವರನ್ನು ಸಾಮಾನ್ಯವಾಗಿ ಯಾರೂ ಭೇಟಿ ಮಾಡಲು ಇಚ್ಛಿಸುವುದಿಲ್ಲ. ಇದು ಸ್ವಾರ್ಥವೋ, ನಿಃಸ್ವಾರ್ಥವೋ ಗೊತ್ತಿಲ್ಲ. ಆದರೆ, ನನ್ನ ವೈಯಕ್ತಿಕ ಅಭಿಪ್ರಾಯ ಅಧಿಕಾರವಿದ್ದಾಗ ಯಾರೇ ಆಗಲೀ ಮೌಲ್ಯವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಅಧಿಕಾರವಿರಲಿ, ಇಲ್ಲದಿರಲಿ ಅವರಿಗೆ ಗೌರವ ಇದ್ದೇ ಇರುತ್ತದೆ.

ಏತಕ್ಕೆ ಮೇಲಿನ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಿದ್ದೇನೆ ಎಂದರೆ ನಾನು ಕಂಡಂತೆ ವೂಡೇ ಪಿ. ಕೃಷ್ಣರವರು ಮೇಲಿನ ಎಲ್ಲ ಸ್ತರದ ವ್ಯಕ್ತಿಗಳೊಂದಿಗೆ ಹೋಲಿಕೆ ಮಾಡಲು ಯಾವತ್ತಿಗೂ ಸಾಧ್ಯವಾಗುವುದಿಲ್ಲ.. ಏಕೆಂದರೆ ನಾನು ವೂಡೇ ಪಿ. ಕೃಷ್ಣರವರ ಅಂಕಣವನ್ನು ಪ್ರಾರಂಭ ಮಾಡುವ ಸಮಯದಲ್ಲಿ ಆ ಅಂಕಣಕ್ಕೆ ಒಂದೊಳ್ಳೆಯ ಶೀರ್ಷಿಕೆಯನ್ನು ಕೊಡಬೇಕೆಂದು ಹಲವುಬಾರಿ ಯೋಚಿಸಿದಾಗ ನನಗೆ ಆಗ ಅರ್ಥವಾಗಿದ್ದೇ "ಆಡು ಮುಟ್ಟದ ಸೊಪ್ಪಿಲ್ಲ–ವೂಡೇ ಪಿ ಕೃಷ್ಣ" ಎಂಬ ಶೀರ್ಷಿಕೆ. ನಿಜಕ್ಕೂ ವೂಡೇ ಪಿ. ಕೃಷ್ಣರವರ ಬಗ್ಗೆ ಅಂಕಣ ಬರೆಯುತ್ತಾ ಅವರ ಬಗ್ಗೆ ಸಮಗ್ರವಾಗಿ ಅಧ್ಯಯನ, ತಿಳಿಯಲು ಹೊರಟಾಗ ನನಗೆ ಗೊತ್ತಾಗಿದ್ದು ವೂಡೇ ಪಿ. ಕೃಷ್ಣರವರ ಮೇಲಿನ ಎಲ್ಲ ಸ್ತರದ ವ್ಯಕ್ತಿಗಳಿಗಿಂತ, ಅವರಿಗಿಂತ ಬಹಳ ಎತ್ತರವಾಗಿದ್ದಾರೆ ಎಂಬ ಖಚಿತವಾದ ಮಾಹಿತಿ ನನಗೆ ತಿಳಿಯಿತು. ಹೌದು ವೂಡೇ ಪಿ. ಕೃಷ್ಣರವರಿಗೆ ನಾನು ಮೊದಲೇ ಕೆಲವು ಅಂಕಣದಲ್ಲಿ ಪ್ರಸ್ತಾಪಿಸಿರುವಂತೆ ಸಕಲ ರೀತಿಯ ಸವಲತ್ತುಗಳನ್ನು ಕೊಟ್ಟಿದ್ದರು, ಹೊಂದಿದ್ದರೂ ಎಲ್ಲ ಸ್ತರದ ವ್ಯಕ್ತಿಗಳಿಗಿಂತ ಎತ್ತರವಾದ ಸ್ಥಾನದಲ್ಲಿದ್ದರೂ ಅವರು ಒಬ್ಬ ಸಾಧಾರಣ ವ್ಯಕ್ತಿಯಾಗಿಯೇ ನಮಗೆ ಸದಾ ಕಾಣುತ್ತಾರೆ.

ಸಾಮಾನ್ಯವಾಗಿ ಯಾವುದೇ ಸಮುದಾಯದ ವ್ಯಕ್ತಿಗಳು ತನ್ನ ಜೀವಮಾನದಲ್ಲಿ ಯಾವುದಾದರೂ ಒಂದು ಸಂಘ ಸಂಸ್ಥೆಯಲ್ಲಿ ಒಬ್ಬ ಪದಾಧಿಕಾರಿಯಾದರೆ, ಅಥವಾ ಒಂದು ಸಂಘಟನೆಯ ಮುಖಂಡನಾದರೆ ಅಥವಾ ಯಾವುದಾದರೂ ಸಮಾಜ ಸೇವಾಮುಖಿ ಸಂಸ್ಥೆಗಳ ಸದಸ್ಯರಾದರೆ, ಅಥವಾ ಶಿಕ್ಷಣ ಸಂಸ್ಥೆಯ ಸದಸ್ಯರಾದರೆ ಅಂತಹ ವ್ಯಕ್ತಿಗಳನ್ನು ನಮ್ಮಂತಹವರು ಮಾತನಾಡಿಸಲು ಸಾಧ್ಯವಾಗುವುದಿಲ್ಲ ಏಕೆಂದರೆ ಅವರಿಗೆ ಆ ಸದಸ್ಯತ್ವವೇ ಸರ್ವಸ್ವವಾಗಿರುತ್ತದೆ. ಹಾಗೆಯೇ ಕೇಂದ್ರ ಸರ್ಕಾರದವರಾಗಲೀ, ರಾಜ್ಯ ಸರ್ಕಾರದವರಾಗಲೀ ಯಾವುದಾದರೂ ಒಂದು ಸಂಸ್ಥೆಯ ಸದಸ್ಯರಾಗಿ ನೇಮಿಸಿದರೆ ಮುಗಿದೇ ಹೋಯಿತು. ಅಂತಹ

ವ್ಯಕ್ತಿಗಳು ಕ್ಷಣಾರ್ಧದಲ್ಲಿ ಬದಲಾಗಿ ಬಿಡುತ್ತಾರೆ. ಆದರೆ ನಮ್ಮ ವೂಡೇ ಪಿ. ಕೃಷ್ಣರವರು ಒಂದಲ್ಲ ಎರಡಲ್ಲ ಹಲವಾರು ಸಂಘ ಸಂಸ್ಥೆಗಳಿಗೆ ಶಿಕ್ಷಣ ಸಂಸ್ಥೆಗಳಿಗೆ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿಗೆ ದುಡಿಯುತ್ತಿರುವ ಒಬ್ಬ ಸಾಧಾರಣ ವ್ಯಕ್ತಿಯಾಗಿಯೇ ನಮಗೆ ಕಾಣುತ್ತಾರೆ.

ವೂಡೇ ಪಿ. ಕೃಷ್ಣರವರು ಕ್ಷಯರೋಗ ನಿವಾರಣಾ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದನ್ನು ಗುರ್ತಿಸಿ ಭಾರತೀಯ ಕ್ಷಯರೋಗ ಸಂಸ್ಥೆಯ ಕೇಂದ್ರ ಸಮಿತಿ ಮತ್ತು ರಾಷ್ಟ್ರೀಯ ಕಾರ್ಯಕಾರಣಿಯ ಸದಸ್ಯರನ್ನಾಗಿ ಘನ ಸರ್ಕಾರ ನೇಮಿಸಿತು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಗರ್ಭಿಣಿಯರಲ್ಲಿ ಅನಿಮಿಯಾ ನಿವಾರಣೆಗೆ ರೆಡ್ ಕ್ರಾಸ್ ಸಂಸ್ಥೆಯು ಕೈಗೊಂಡಿರುವ ಯೋಜನೆಯನ್ನು ತಳಮಟ್ಟದ ಮತ್ತು ಉದ್ಯಮವರ್ಗದ ಹಾಗೂ ಬಡವರಿಗೆ ತಲುಪಿಸುವ ಕಾರ್ಯದಲ್ಲಿ ಇಂದಿಗೂ ವೂಡೇ ಪಿ. ಕೃಷ್ಣರವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇದೇನು ಸಾಮಾನ್ಯವಾದ ಹುದ್ದೆಯಲ್ಲ, ಅತ್ಯಂತ ಶ್ರೇಷ್ಠವಾದ ಕೆಲಸ ಎಂದು ಹೇಳಬಹುದು.

ರೆಡ್‌ಕ್ರಾಸ್ ರಕ್ತನಿಧಿ ಮತ್ತಿತರ ಆರೋಗ್ಯ ಭಾಗ್ಯ ಕಾರ್ಯಕ್ರಮಗಳ ನಿರ್ವಹಣೆಗಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ವಿಶೇಷ ಅಭಿವೃದ್ಧಿ ಸಹಾಯಾರ್ಥವನ್ನು ದೊರಕಿಸಿಕೊಡುವಲ್ಲಿ ಕೃಷ್ಣರವರ ಪಾತ್ರ ಬಹಳ ಮಹತ್ತರ ವಾಗಿರುತ್ತದೆ. ಇದೇ ರೀತಿ ರೆಡ್‌ಕ್ರಾಸ್ ರಕ್ತ ನಿಧಿಯ ಮಹಿಳೆಯರಿಂದ ಅತಿ ಹೆಚ್ಚು ರಕ್ತವನ್ನು ದಾನವನ್ನಾಗಿ ಪಡೆದುದಕ್ಕಾಗಿ 2007ರಲ್ಲಿ 'ಕರ್ನಾಟಕ ಏಡ್ಸ್ ಪ್ರಿವೆನ್ಸನ್ ಸೊಸೈಟಿ ಪ್ರಶಸ್ತಿ'ಯನ್ನು ಪಡೆಯಲು ಕೃಷ್ಣರವರ ಪಾತ್ರ ಬಹಳ ಮುಖ್ಯವಾಗಿರುತ್ತದೆ. 1984ರಿಂದ ಡಾ. ಕೃಷ್ಣ ಅವರು ರೆಡ್ ಕ್ರಾಸ್ ಸಂಘಟನೆಯನ್ನು ಜನರಿಂದ ಜನರಿಗಾಗಿ ನೆರವಾಗುವ ಒಂದು ಆಂದೋಲನವನ್ನಾಗಿಸುವಲ್ಲಿ ಅಪಾರವಾಗಿ ಶ್ರಮಿಸಿದ್ದಾರೆ. ಇದಕ್ಕೆ ನಾವ್ಯಾರು ಬೆಲೆ ಕಟ್ಟಲು ಸಾಧ್ಯವಾಗುವುದಿಲ್ಲ.

ಇದರ ಜೊತೆಗೆ 2002ರಿಂದ ರೆಡ್‌ಕ್ರಾಸ್ ಸಂಸ್ಥೆಯ ಕರ್ನಾಟಕ ರಾಜ್ಯ ಶಾಖೆಯ ಉನ್ನತ ಹುದ್ದೆಯಾದ ಗೌರವ ಕಾರ್ಯ ನಿರ್ವಾಹಕ ಉಪಾಧ್ಯಕ್ಷರಾಗಿ ಈ ಕಾರ್ಯವನ್ನು ಅತ್ಯಂತ ಯಶಸ್ವಿ ಮತ್ತು ಜವಾಬ್ದಾರಿಯುತವಾಗಿ ನಿರ್ವಹಿಸಿದ್ದಾರೆ. ಲೆಕ್ಕವಿಲ್ಲದಷು ರಕ್ತದಾನ ಶಿಬಿರಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ಜರುಗುವಂತೆ ನಿರ್ವಹಿಸಿದ್ದಾರೆ. ಜೊತೆ ಜೊತೆಗೆ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯಲ್ಲೂ ದಕ್ಷ ಆಡಳಿತಗಾರನಾಗಿ ರಚನಾತ್ಮಕವಾದ ಯೋಜನೆಗಳನ್ನು ರೂಪಿಸುವಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ. ವೂಡೇ ಪಿ. ಕೃಷ್ಣರವರು ಯಾವುದೇ ಕೆಲಸಕ್ಕೆ ಕೈ ಹಾಕಿದರೂ

ಅದು ಯಶಸ್ಸು ಕಾಣಲೇಬೇಕು. ಅಂತಹ ಛಲ ಇವರಲ್ಲಿದೆ. ಹೀಗಾಗಿಯೇ ವೂಡೇ ಪಿ. ಕೃಷ್ಣರವರು ಸರ್ವಜನರಿಗೆ ಇಷ್ಟವಾಗುವ ವ್ಯಕ್ತಿಯಾಗಿ ನಿಲ್ಲುತ್ತಾರೆ, ಕಾಣುತ್ತಾರೆ.

ಇವರ ಅನೇಕ ಕಾರ್ಯಕ್ರಮಗಳಲ್ಲಿ ಹೆಸರಾಂತ ಸಾಹಿತಿಗಳು, ಪತ್ರಕರ್ತರು, ಕೇಂದ್ರ, ರಾಜ್ಯ ಸರ್ಕಾರದ ಸಚಿವರುಗಳು, ರಾಜ್ಯಪಾಲರುಗಳು, ಉನ್ನತ ಹುದ್ದೆಯ ಅಧಿಕಾರಿಗಳು, ಸಂಘ ಸಂಸ್ಥೆಗಳು, ಮತ್ತು ಅದರ ಸಂಘಟಕರುಗಳು, ರಾಷ್ಟ್ರಪತಿಗಳು, ಮಾಜಿ ರಾಷ್ಟ್ರಪತಿಗಳು ಭಾಗವಹಿಸಿರುವ ಅನೇಕ ನಿದರ್ಶನಗಳಿವೆ. ಒಬ್ಬ ಅಸಾಮಾನ್ಯ ವ್ಯಕ್ತಿ ಸಾಮಾನ್ಯ ವ್ಯಕ್ತಿಯಂತೆ ಯಾವುದೇ ರೀತಿಯ ಹಮ್ಮು ಬಿಮ್ಮು ಇಲ್ಲದೆ ಸರ್ವರಿಗೂ ಬಹಳ ಇಷ್ಟವಾಗುವ, ಇಷ್ಟಪಡುವ ಬಹಳ ಎತ್ತರವಾದ ವ್ಯಕ್ತಿ ನಮ್ಮ ವೂಡೇ ಪಿ. ಕೃಷ್ಣರವರು. ಇವರು ಯಾವುದೇ ಸಭೆ ಸಮಾರಂಭಗಳಿಗೆ ಮುಖ್ಯ ಅತಿಥಿಯಾಗಿಯೋ ಸಮಾರಂಭದ ಅಧ್ಯಕ್ಷರಾಗಿಯೋ. ಅಥವಾ ಮುಖ್ಯ ಭಾಷಣಕಾರರಾಗಿಯೋ ಆ ಸಭೆಗೆ ಹೋದಾಗ ಇವರನ್ನು ನೋಡಲು, ಕಾಣಲು, ಇವರ ಭಾಷಣದ ಮಾತುಗಳನ್ನು ಕೇಳಲು ಹಿರಿಯರೆನ್ನದೆ, ಕಿರಿಯರೆನ್ನದೆ ಬಂದು ಸಭೆಯಲ್ಲಿ ಭಾಗವಹಿಸಿರುವ ದೃಶ್ಯ ನಾನು ಕಣ್ಣಾರೆ ಕಂಡಿರುತ್ತೇನೆ. ಹೀಗಾಗಿಯೇ ನಾನು ಸಹ ವೂಡೇ ಪಿ. ಕೃಷ್ಣರವರ ಬಹುದೊಡ್ಡ ಅಭಿಮಾನಿಯಾಗಿದ್ದೇನೆ.

ಮತ್ತೊಂದು ಘಟನೆ, ಯಾವುದೇ ಗೊಂದಲ, ವಿವಾದಗಳಿಗೆ ಸಿಲುಕದೆ ಡಾ. ಡಿ.ಎಂ. ನಂಜುಂಡಪ್ಪನವರ ಜೊತೆಗೂಡಿ ರೇಸ್‌ಕೋರ್ಸ್‌ನ ಎದುರು ಭವ್ಯವಾದ ರೆಡ್‌ಕ್ರಾಸ್ ಭವನವನ್ನು ನಿರ್ಮಿಸಿರುವುದು ಕೃಷ್ಣರವರ ನಿಃಸ್ವಾರ್ಥ ಸೇವೆಗೆ ಕೈಗನ್ನಡಿಯಾಗಿದೆ. ಈ ಭವನವನ್ನು ನಿರ್ಮಿಸಲು, ಕಟ್ಟಲು ಬೇಕಾದ ಎಲ್ಲಾ ಮೂಲ ಸೌಕರ್ಯಗಳನ್ನು ಕಲ್ಪಿಸುವುದರ ಜೊತೆಗೆ ಸರ್ಕಾರದಿಂದ ಒಪ್ಪಿಗೆ ಪಡೆದು ಒಂದು ಮಾದರಿಯ ರಕ್ತನಿಧಿಯನ್ನು ಸ್ಥಾಪಿಸಿದರು. ಹಾಗೆಯೇ ಬ್ಲಡ್ ಸೆಪರೇಶನ್ ಘಟಕಕ್ಕೂ ಸಹ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿದರು.

ರಕ್ತದಾನ ಮಾಡಿ ಹೆಚ್ಚು ಜೀವಗಳನ್ನು ಉಳಿಸಿ ಎನ್ನುವ ಘೋಷಣೆಯನ್ನು ನಿಖರವಾಗಿ ಯಶಸ್ವಿಗೊಳಿಸಿದ ಕೀರ್ತಿ ನಮ್ಮ ವೂಡೇ ಪಿ. ಕೃಷ್ಣರವರಿಗೆ ಸಲ್ಲಬೇಕು. ರಕ್ತದಾನವನ್ನು ಹೇಳಿ ಅವರಿವರಿಗೆ ರಕ್ತದಾನ ಮಾಡಿ ಎಂದು ಹೇಳುವುದರ ಜೊತೆಗೆ ಸ್ವತಃ ತಾವೇ ಹತ್ತು ಹಲವು ಬಾರಿ ರಕ್ತದಾನ ಮಾಡಿ ಎಲ್ಲರಿಗೂ ಮಾದರಿಯಾಗಿದ್ದಾರೆ. ರಕ್ತದಾನ ಮಾಡುವವರಿಗೆ ಸಾಮಾನ್ಯವಾಗಿ ಹೃದಯಾಘಾತವಾಗುವುದು ಕಡಿಮೆ ಎಂಬ ವೈಜ್ಞಾನಿಕ ಸತ್ಯಾಂಶವನ್ನು ರಕ್ತದಾನಿಗಳಿಗೆ ತಿಳಿಸುವಲ್ಲಿ ಕೃಷ್ಣರವರು ಮುಂಚೂಣಿಯಲ್ಲಿದ್ದಾರೆ.

ಇಷ್ಟೊಂದು ಕೆಲಸ ಕಾರ್ಯಗಳು, ಎಷ್ಟೊಂದು ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ದುಡಿಯುವ ವೂಡೇ ಪಿ. ಕೃಷ್ಣರವರು ಅತ್ಯಂತ ಮಹತ್ವದ ಜವಾಬ್ದಾರಿ ಎಂದರೆ ಅದು 'ಕರ್ನಾಟಕ ಗಾಂಧಿ ಸ್ಮಾರಕ ನಿಧಿ'ಯ ಅಧ್ಯಕ್ಷ ಸ್ಥಾನ.

ಹೌದೆನ್ನುತ್ತಾರೆ ವೂಡೇ ಪಿ. ಕೃಷ್ಣರವರು, ಏಕೆಂದರೆ ಬಾಲ್ಯದಿಂದಲೇ ಗಾಂಧಿಯವರ ಚಿಂತನೆಗಳು ಅವರ ಆದರ್ಶ, ಅವರ ನಡೆ ನುಡಿಗಳು ನನ್ನ ಜೀವನ ಮತ್ತು ಬದುಕಿನ ಮೇಲೆ ಹೆಚ್ಚಿನ ಮಹತ್ವವನ್ನು ಬೀರಿದೆ. ಇವತ್ತಿಗೂ ನನ್ನ ಜೀವನ, ನನ್ನ ಸಮಾಜ, ಕಾಯಕ, ನನ್ನ ಬಂಧು ಬಳಗದವರ ಸಂಬಂಧಗಳು ಮತ್ತು ನನ್ನ ಸಾರ್ವಜನಿಕ ಜೀವನದ ಎಲ್ಲಾ ಆಗುಹೋಗುಗಳಿಗೆ ಮಹಾತ್ಮ ಗಾಂಧಿಯವರ ಪ್ರಭಾವ ಹೆಚ್ಚಾಗಿ ಬೀರಿದೆ. ಅದರೂ ನನ್ನ ತಂದೆ ತಾಯಿ ಕುಟುಂಬದ ಹಿರಿಯರ ಆಶೀರ್ವಾದ, ಮಾರ್ಗದರ್ಶನ, ಅವರು ಮಾಡಿದ ಒಳ್ಳೆಯ ಕೆಲಸಗಳಿಂದ ಇಂದು ನಾನು ಪವಿತ್ರವಾದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷನಾಗಿದ್ದೇನೆ. ಬಹುಶಃ ಮುಂದೊಂದು ದಿನ ನಾನು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷನಾಗುತ್ತೇನೆ ಎಂದು ನನ್ನ ಕನಸು ಮನಸ್ಸಿನಲ್ಲಿಯೂ ಯೋಚಿಸಿರಲಿಲ್ಲ, ನನಗೆ ಗೊತ್ತಿರಲಿಲ್ಲ, ಎಂದು ಬಹಳ ವಿನಮ್ರವಾಗಿ ತುಂಬು ಹೃದಯದಿಂದ ಆ ಸಂತೋಷದ ಕ್ಷಣಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಾರೆ. ಮತ್ತು ಸದಾ ಸ್ಮರಿಸುತ್ತಾರೆ. ಹೀಗಾಗಿ ನನ್ನ ಜೀವನದಲ್ಲಿ ನಾನು ಎಂದೂ ಮರೆಯದ ಕ್ಷಣ ಮತ್ತು ಇದು ನನ್ನ ಸುದೈವ ಎಂದು ನೆನೆಯುತ್ತಾರೆ.

ಇಂದು ನಾವು ಗಾಂಧಿ ಭವನದ ಮೂಲಕ ಗಾಂಧಿಯವರನ್ನು ನೆನಪಿಸಿಕೊಳ್ಳುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದ್ದೇವೆ. ಗಾಂದೀಜಿಯವರ ಆಚಾರ, ವಿಚಾರಗಳು, ಅವರ ಆದರ್ಶಗಳನ್ನು ಹಿಂದಿನ ಪೀಳಿಗೆಯ ಮಕ್ಕಳಿಗೆ ತಲುಪಿಸುವತ್ತ ಮುಟ್ಟಸುವತ್ತ ನಾವು ನಮ್ಮ ಕೈಲಾದ ಮಟ್ಟಿಗೆ ಅಲ್ಪ ಸ್ವಲ್ಪ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ. ಜೊತೆ ಜೊತೆಗೆ ಗಾಂಧಿಯವರ ಬಗ್ಗೆ ಸಂಬಂಧಪಟ್ಟಂತಹ ವಿಚಾರಧಾರೆಗಳನ್ನು ಮಕ್ಕಳಿಗೆ ತಿಳಿಸುವುದು ಮಕ್ಕಳಿಗೆ ಶಿಬಿರಗಳನ್ನು ಆಯೋಜಿಸುವುದು, ಅವರ ಸಿನಿಮಾಗಳನ್ನು ತೋರಿಸುವುದು, ಗಾಂಧೀಜಿಯವರ ವಿಚಾರಧಾರೆಗಳ ಬಗ್ಗೆ ಪರೀಕ್ಷೆಗಳನ್ನು ನಡೆಸುವುದು, ಹೀಗೆ ಹತ್ತು ಹಲವು ರೀತಿಯ ಕಾರ್ಯಕ್ರಮಗಳ ಮೂಲಕ ಯುವ ಮನಸ್ಸನ್ನು ಕಟ್ಟುವ ಮತ್ತು ಯುವ ಮನಸ್ಸುಗಳನ್ನು ಮುಟ್ಟುವ ಕೆಲಸವನ್ನು ನಾವು ನಿರಂತರವಾಗಿ ಮಾಡುತ್ತಾ ಬರುತ್ತಿದ್ದೇವೆ. ಜೊತೆಗೆ ನಮ್ಮ ಚೆನ್ನಮ್ಮ ಹಳ್ಳಿಕೇರಿಯವರು ಉತ್ತರ ಕರ್ನಾಟಕದಲೆಲ್ಲಾ ಗಾಂಧಿ ವಿಚಾರವನ್ನು ಪ್ರಚಾರ ಮಾಡಿದ್ದಾರೆ.

ನಮಗೆ ಕೊಟ್ಟಂತಹ ಸಮಯದಲ್ಲಿ ನಮಗೆ ಇರುವ ಸಂಪನ್ಮೂಲದಲ್ಲಿ ನಾವು ಸಾಕಷ್ಟು ಗಾಂಧಿ ವಿಚಾರವನ್ನು ಮುಟ್ಟಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದು ತುಂಬು ಹೃದಯದಿಂದ ವೂಡೇ ಪಿ. ಕೃಷ್ಣರವರು ಹೇಳಿಕೊಳ್ಳುತ್ತಾರೆ.

ವೂಡೇ ಪಿ. ಕೃಷ್ಣರವರ ಬಗ್ಗೆ ಅವರ ಒಳಹೊಕ್ಕು ಅವರ ಬಗ್ಗೆ ಮಾಹಿತಿಯನ್ನು ಕಲೆ ಹಾಕುವುದರ ಜೊತೆಗೆ ಅವರೊಂದಿಗೆ ಸಾಕಷ್ಟು ಸಮಯವನ್ನು ಕಳೆದಾಗ ನಿಜಕ್ಕೂ ಅವರು ಈ ಶತಮಾನದ ಒಬ್ಬ ಮಹಾ ಸಮಾಜಸೇವಕರಾಗಿ ನಮ್ಮ ಮುಂದೆ ನಿಲ್ಲುತ್ತಾರೆ. ಒಟ್ಟಾರೆ ನನ್ನಂತಹವರು ವೂಡೇ ಪಿ. ಕೃಷ್ಣರವರ ಬಗ್ಗೆ ಏನಾದರೂ ಬರೆಯಬೇಕೆಂದರೆ ಒಂದು ಕಡೆ ಉಲ್ಲಾಸ ಮತ್ತೊಂದು ಕಡೆ ಅವರು ಸಾಮಾನ್ಯ ವ್ಯಕ್ತಿಯಲ್ಲ, ಅವರ ಬಗ್ಗೆ ಏನೇ ಬರೆದರೂ ಅದು ಸರ್ವ ಜನರು ಒಪ್ಪುವ ಪ್ರೀತಿಸುವ ವಸ್ತುವಾಗಬೇಕು, ಆ ನಿಟ್ಟಿನಲ್ಲಿ ನಾನು ಅಂಬೆಗಾಲು ಇಡುತ್ತಿದ್ದೇನೆ, ಹೌದಲ್ವೇ?

"ಕೊಟ್ಟವರಿಗೆ ಹಿಂದಿರುಗಿಸಿದ್ದು"

ಸುಮಾರು ನಾಲ್ಕೈದು ತಿಂಗಳ ಹಿಂದೆ ವೂಡೇಪಿ ಕೃಷ್ಣರವರನ್ನು ಭೇಟಿ ಮಾಡಲು ಅವರಿಗೊಂದು ದೂರವಾಣಿ ಕರೆ ಮಾಡಿ ಮರುದಿನ ಬೆಳಗ್ಗೆ ಹತ್ತು ಗಂಟೆಗೆ ಶೇಷಾದ್ರಿಪುರಂನ ಕಾಲೇಜಿಗೆ ಹೋಗಿ ವೂಡೇಪಿ ರವರನ್ನು ಅವರ ಚೇಂಬರ್‌ಗೆ ಹೋಗಿ ಭೇಟಿ ಮಾಡುತ್ತ ಮತ್ತೆ ಯಥಾಪ್ರಕಾರ ಘಮಘಮಿಸುವ ಬಿಸಿ ಬಿಸಿಯಾದ ಒಂದು ಲೋಟ ಕಾಫಿಯನ್ನು ಕುಡಿಯುತ್ತಾ ಇರುವಾಗ, ನನ್ನ ಬಹುದಿನದ ಒಂದು ಪ್ರಶ್ನೆ ಅವರ ಕೈಯಲ್ಲಿ ಸಮಯ ನೋಡಲು ವಾಚ್ ಇಲ್ಲದಿರುವುದು, ಇದನ್ನು ಆ ದಿನ ನಾನು ವೂಡೇ ಪಿ. ಅವರ ಹತ್ತಿರ "ಸಾರ್ ಏತಕ್ಕೆ ತಾವುಗಳು ವಾಚನ್ನು ಕೈಗೆ ಕಟ್ಟುವುದಿಲ್ಲ" ಎಂದು ಕೇಳಿದಾಗ ಅವರು ಕೊಟ್ಟ ಉತ್ತರ ಹೇಗಿತ್ತು ಎಂದರೆ

ಮುಗ್ಧ ಮನಸ್ಸಿನ ಮಕ್ಕಳು ಹೇಳುವಂತೆ ಇತ್ತು. "ಯಾವಾಗ ಬೆಂಗಳೂರಿಗೆ ಮೊಬೈಲ್ ಫೋನ್‌ಗಳು ಬಂದವೋ ಆಗ ನಾನು ಸಹ ಒಂದು ಮೊಬೈಲ್ ಫೋನನ್ನು ಖರೀದಿಸಿದೆ, ಖರೀದಿಸಿದ ನಂತರ, ಮೊಬೈಲ್‌ನಲ್ಲೇ ಎಲ್ಲವೂ ಅಂದರೆ ದಿನಾಂಕ, ಹೊರಗಡೆಯಿಂದ, ಸ್ನೇಹಿತರು, ನೆಂಟರಿಷ್ಟರು, ಬಂಧು-ಬಳಗದವರು ಮಾಡಿರುವ ಕರೆಗಳ ಮಾಹಿತಿಗಳು ಸಿಗುತ್ತಿತ್ತು, ಹಾಗೆಯೇ ಮೊಬೈಲ್‌ನಲ್ಲಿ ದಿನಾಂಕ ಹಾಗೂ ಅವರಿವರ ಮೆಸೇಜ್‌ಗಳು, ಕಾಣಬಹುದಿತ್ತು. ಮತ್ತು ಸಮಯವು ಸಹ ಮೊಬೈಲ್‌ನಲ್ಲಿ ಕಾಣಬಹುದಿತ್ತು. ಹೀಗಾಗಿ ಅವತ್ತಿನಿಂದ ಇವತ್ತಿನವರೆವಿಗೂ ನಾನು ಕೈಗೆ ವಾಚ್ ಅನ್ನು ಕಟ್ಟುವುದಿಲ್ಲ" ಎಂದು ಹೇಳಿದಾಗ ತನಗೆ ಅನಿಸಿದ್ದು, ಇದೇನಪ್ಪ ಇವರು ಸಣ್ಣ ಮಕ್ಕಳು ಹೇಳುವ ಹಾಗೆ ಮೊಬೈಲ್‌ನಲ್ಲಿ ದಿನಾಂಕ, ಸಮಯ ಎಲ್ಲವೂ ಸಿಗುತ್ತದೆ. ಎಂಬಂತೆ ಹೇಳಿದಾಗ ನಿಜಕ್ಕೂ ವೂಡೇಪಿ ಕೃಷ್ಣರವರು ಎಂತಹ ಮುಗ್ಧ ಸ್ವಭಾವದ ವ್ಯಕ್ತಿ, ಅವರು ಮನಸ್ಸು ಮಾಡಿದರೆ ಲಕ್ಷಾಂತರ ರೂಪಾಯಿಗಳ ಬೆಲೆಬಾಳುವ ವಾಚನ್ನು ಖರೀದಿಸಿ ಕೈಗೆ ಕಟ್ಟಿಕೊಳ್ಳಬಹುದು. ಆದರೆ, ಇವರು ಎಷ್ಟು ಸರಳವಲ್ಲವೆ ಎಂದು, ಅಂದು ಅವರ ಸರಳತೆಯ ಬಗ್ಗೆ ಆಗಾಗ್ಗೆ ಯೋಚಿಸುತ್ತಿರುವಾಗ ಒಂದು ಅಪರೂಪದ ಮಾಹಿತಿಯೊಂದು ನನಗೆ ಲಭ್ಯವಾಯಿತು ಅದೇನೆಂದರೆ;

ಕೆಲವು ವರ್ಷಗಳ ಹಿಂದೆ ವೂಡೇಪಿ ಕೃಷ್ಣರವರು ಚಿಕಾಗೋದಲ್ಲಿ ಅಕ್ಕ ಸಂಸ್ಥೆ ಯವರು ಏರ್ಪಡಿಸಿದ್ದ ಕನ್ನಡ ಸಮ್ಮೇಳನಕ್ಕೆ ಮುಖ್ಯ ಅತಿಥಿಗಳಾಗಿ ಹೋಗಿದ್ದರು. ಚಿಕಾಗೋ ತೆರಳಿ ಅಲ್ಲಿಂದ ಕತಾರ್ ದೇಶದ ರಾಜಧಾನಿಯಾದ ದೋಹದಲ್ಲಿ ಅಂದು ಕನ್ನಡ ಸಮ್ಮೇಳನವನ್ನು ಏರ್ಪಡಿಸಿದರು, ಈ ಸಭೆಯಲ್ಲಿ ವೂಡೇಪಿ ರವರು ಭಾಗವಹಿಸಿ, ಅಲ್ಲಿ ಸ್ನೇಹಿತರ, ಆತ್ಮೀಯರ ಅದ್ದೂರಿಯ ಅತಿಥ್ಯವನ್ನು ಸ್ವೀಕರಿಸಿ ಕೆಲವು ಸಮಯ ವಿಶ್ರಾಂತಿ ತೆಗೆದುಕೊಂಡು ಇನ್ನೇನು ಬೆಂಗಳೂರಿಗೆ ಬರುವ ಸಮಯದಲ್ಲಿ ಅಲ್ಲಿಂದ ದುಬೈಗೆ ಹೋಗುವ ಸಂದರ್ಭ ಒದಗಿ ಬಂತು. ಹೇಗೂ ಚಿಕಾಗೋಗೆ ಬಂದಿದ್ದೇನೆ, ಇಲ್ಲಿಂದ ದುಬೈ ಸ್ವಲ್ಪ ಹತ್ತಿರವಾಗಬಹುದು, ಅಲ್ಲಿಗೂ ಹೋಗಿ ಬಂದುಬಿಡೋಣ, ಮತ್ತೆ ದುಬೈಗೆ ಹೋಗಲು ಸಾಧ್ಯವಾಗುತ್ತದೋ ಇಲ್ಲವೋ ಗೊತ್ತಿಲ್ಲ ಎಂದುಕೊಂಡು ದುಬೈಗೆ ಪ್ರಯಾಣ ಬೆಳೆಸಿದರು. ಅಲ್ಲಿಯೂ ಸಹ ವೂಡೇಪಿಯವರ ಅಭಿಮಾನಿಗಳು ಮತ್ತು ಆಪ್ತರು ಇದ್ದದ್ದು ವಿಶೇಷವಾಗಿತ್ತು. ಹೀಗಾಗಿ ದುಬೈಗೆ ಹೋಗಿ ಒಂದು ಹೋಟೆಲ್‌ನಲ್ಲಿ ತಂಗಿದ್ದು, ಕೆಲವು ಗಂಟೆಗಳ ಕಾಲ ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ ಅಲ್ಲಿಗೆ ಬಂದ ಹಿರಿಯ ಪತ್ರಕರ್ತರಾದ ಇ.ವಿ. ಸತ್ಯನಾರಾಯಣರವರು ಭೇಟಿಯಾಗಿ ಉಭಯ ಕುಶಲೋಪರಿಯಾಗಿ

ಲೋಕರೂಢಿಯಾಗಿ ಮಾತನಾಡುತ್ತಾ ಸ್ವಲ್ಪ ಸಮಯ ಕಳೆದು ದುಬೈಗೆ ತುಂಬಾ ಹತ್ತಿರವಿದ್ದ ಶಾರ್ಜಾದಲ್ಲಿ ಇ.ವಿ. ಸತ್ಯನಾರಾಯಣರವರ ತಮ್ಮನ ಮನೆ ಇತ್ತು, ಅಲ್ಲಿಗೆ ವೂಡೆ ಪಿ.ಯವರನ್ನು ಕರೆದುಕೊಂಡು ಹೋದರು. ಅಲ್ಲಿ ತಮ್ಮನಿಗೆ ವೂಡೇಪಿಯವರನ್ನು ಪರಿಚಯ ಮಾಡಿಕೊಡುತ್ತಾ, ವೂಡೇಪಿಯವರ ಸಮಾಜ ಮುಖಿಯ ಕೆಲಸ ಕಾರ್ಯಗಳು, ಅವರಿಗೆ ಬಿಡುವಿಲ್ಲದಿದ್ದರೂ ಚಿಕಾಗೋದಲ್ಲಿ ನಡೆದ ಅಕ್ಕ ಸಮ್ಮೇಳನಕ್ಕೆ ಬಂದಿರುವ ವಿಷಯವನ್ನು ತಿಳಿಸಿದರು.

ಚಿಕಾಗೋದಲ್ಲಿರುವ ಕನ್ನಡಿಗರ ಅದೃಷ್ಟ ಎಂದು ತಮ್ಮನಿಗೆ ಪರಿಚಯ ಮಾಡಿಕೊಟ್ಟರು. ನಂತರ ಮನೆಗೆ ಬಂದ ಅತಿಥಿಯನ್ನು ಅತ್ಯಂತ ಪ್ರೀತಿಯಿಂದ ಸತ್ಕರಿಸಿದ್ದು ವಿಶೇಷವಾಗಿತ್ತು. ಮಧ್ಯಾಹ್ನ ಇ.ವಿ. ಸತ್ಯನಾರಾಯಣರವರ ತಮ್ಮನ ಮನೆಯ ಊಟೋಪಾಚಾರವನ್ನು ಮುಗಿಸಿ ಮನೆಯಿಂದ ವಾಪಸ್ಸು ಹೊರಡುವಾಗ ಲೋಕರೂಢಿಯಂತೆ ಇ.ವಿ. ಸತ್ಯನಾರಾಯಣರವರ ತಮ್ಮ ಎಲ್ಲರಿಗೂ ಒಂದೊಂದು ಚಿಕ್ಕ ವಾಚನ್ನು ಉಡುಗೊರೆಯಾಗಿ ನೀಡಿದರು, ಹಾಗೆಯೇ ವೂಡೇಪಿ ಕೃಷ್ಣರವರಿಗೂ ಒಂದು ಸಣ್ಣ ವಾಚನ್ನು ಕೊಟ್ಟರು, ಸರಿ ಅಲ್ಲಿ ಔತಣವನ್ನು ಸ್ವೀಕರಿಸಿ, ಇ.ವಿ. ಸತ್ಯನಾರಾಯಣರವರ ತಮ್ಮ ಕೊಟ್ಟಿದ್ದ ವಾಚನ್ನು ತೆಗೆದುಕೊಂಡು ಅಲ್ಲಿಂದ ನೇರವಾಗಿ ವಿಮಾನದ ಮೂಲಕ ಬೆಳಗಿನ ಜಾವ ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಬಂದಿಳಿದು, ಅಲ್ಲಿಂದ ಹೊರಡುವಾಗ, "ಸತ್ಯನಾರಾಯಣರವರೆ ತಾವು ತಪ್ಪು ತಿಳಿಯಬೇಡಿ, ಶಾರ್ಜಾದಲ್ಲಿ ತಾವು ತಮ್ಮನ ಮನೆಗೆ ಕರೆದುಕೊಂಡು ಹೋಗಿ ನಮ್ಮನ್ನು ಅಷ್ಟು ಪ್ರೀತಿಯಿಂದ ಗೌರವಿಸಿದ್ದಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಅದು ಹೊರದೇಶದಲ್ಲಿ ನಮ್ಮ ಕನ್ನಡಿಗರು ನಮಗೆ ಸಿಕ್ಕಾಗ ಅದು ಎಷ್ಟೊಂದು ಸಂತೋಷ, ನೆಮ್ಮದಿ, ಪ್ರೀತಿ ವಿಶ್ವಾಸಕ್ಕೆ ಎಂದು ಬೆಲೆ ಕಟ್ಟಲು ಸಾಧ್ಯವಿಲ್ಲ, ಹಾಗೆಯೇ ನಾನು ಅಲ್ಲಿಂದ ಬರುವಾಗ ನಿಮ್ಮ ತಮ್ಮರವರು ನನಗೆ ಪ್ರೀತಿಯಿಂದ ಉಡುಗೊರೆಯಾಗಿ ಒಂದು ವಾಚನ್ನು ಕೊಟ್ಟಿರುತ್ತಾರೆ. ಆದರೆ ನಾನು ವಾಚನ್ನು ಕಟ್ಟದೆ ಎಷ್ಟೋ ವರ್ಷಗಳಾಗಿವೆ, ಯಾವಾಗ ಮೊಬೈಲ್ ಫೋನುಗಳು ಬಂದವೋ ಆಗಲೇ ನಾನು ನನ್ನ ಕೈಗೆ ವಾಚನ್ನು ಕಟ್ಟುವುದನ್ನು ನಿಲ್ಲಿಸಿದೆ, ಏನಾದರೂ ಸಮಯ ನೋಡಬೇಕೆಂದರೆ ಜೇಬಿನಲ್ಲಿರುವ ಮೊಬೈಲನ್ನು ತೆಗೆದು ತಕ್ಷಣವೇ ಸಮಯವನ್ನು ನೋಡಬಹುದು, ಆದ್ದರಿಂದ ತಾವು ತಪ್ಪು ತಿಳಿಯದೆ ನಿಮ್ಮ ತಮ್ಮರವರು ನೀಡಿದ್ದ ವಾಚನ್ನು ನಿಮಗೆ ಪ್ರೀತಿಯಿಂದ ವಾಪಸ್ಸು ಕೊಡುತ್ತಿದ್ದೇನೆ, ತಾವುಗಳು ಅನ್ಯಥಾ ಭಾವಿಸದೆ ಈ ವಾಚನ್ನು ತೆಗೆದುಕೊಂಡು ಬೇರೆ ಯಾರಾದರೂ ಬಡ ವಿದ್ಯಾರ್ಥಿಗೆ

ಉಡುಗೊರೆಯಾಗಿ ಕೊಡಿ" ಎಂದು ಹೇಳಿ ವಿನಮ್ರವಾಗಿ ವಾಚನ್ನು ಹಿಂದಿರುಗಿಸಿ ಸ್ನೇಹದ ನಗೆ ಬೀರಿ ಹೊರಟರಂತೆ.

ಹೀಗಾಗಿಯೇ, ವೂಡೇಪಿರವರು ನಮ್ಮಂತಹವರಿಗೆ ಯಾವಾಗಲೂ ಬಹಳ ಇಷ್ಟವಾಗುತ್ತಾರೆ, ಏಕೆಂದರೆ ಈ ಯುಗದಲ್ಲಿಯೂ ಇಂತಹ ಒಬ್ಬ ನಿಃಸ್ವಾರ್ಥ ವ್ಯಕ್ತಿ ಇದ್ದಾರಲ್ಲ ಎಂಬುದು ನನಗೆ ತೊಳಲಾಟದ ವಿಷಯ, ಏಕೆಂದರೆ ಇಂತಹ ಅಪರೂಪದ ಸಾಧಕರು ಈ ಕಾಲದಲ್ಲಿ ಸಿಗುವುದು ಬಹಳ ಅಪರೂಪ ಅಂತಹುದರಲ್ಲಿ ವೂಡೇಪಿರವರು ಸದಾ ಎಲ್ಲಾ ವರ್ಗದ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದು ಬಿಡುತ್ತಾರೆ, ಈ ಲೇಖನ ಬರೆಯುವಾಗ ಅಂದು ನಾನು ವೂಡೇಪಿಯವರಿಗೆ ವಾಚನ್ನು ಏಕೆ ತಾವು ಕಟ್ಟುತ್ತಿಲ್ಲ ಎಂಬ ಪ್ರಶ್ನೆಗೆ ಚಿಕಾಗೋ ಪ್ರವಾಸದ ಸಂದರ್ಭ ಮತ್ತು ಶಾರ್ಜಾದಲ್ಲಿ ಹಿರಿಯ ಪತ್ರಕರ್ತನ ತಮ್ಮನ ಮನೆಯಲ್ಲಿ ಉಡುಗೊರೆಯಾಗಿ ಕೊಟ್ಟ ವಾಚನ್ನು ಹಿಂದಿರುಗಿಸಿದ್ದು, ಈ ಘಟನೆಯಿಂದ ನನ್ನ ವಾಚಿನ ಪ್ರಶ್ನೆಗೆ ಉತ್ತರ ಸಿಕ್ಕಿತು. ಹೀಗಾಗಿಯೇ ಸ್ನೇಹಿತರ ವಲಯದಲ್ಲಿ ವೂಡೇಪಿರವರು ಸರ್ವಕಾಲಕ್ಕೂ ಅಜಾತಶತ್ರು.

ಇಂತಹ ಒಬ್ಬ ಅಜಾತಶತ್ರು, ನಿಃಸ್ವಾರ್ಥ ವ್ಯಕ್ತಿ ಇಂದು ನಮ್ಮ ಸಮ ಸಮಾಜದಲ್ಲಿ ಅಪರೂಪಕ್ಕೆ ಒಬ್ಬರು, ಸಾವಿರಾರು ಕೋಟಿಗೆ ಒಬ್ಬರು ಇರುತ್ತಾರಂತೆ, ಅಂತಹ ಸಾವಿರಾರು, ಕೋಟಿ ಕೋಟಿಗಳ ಪೈಕಿ ಇಂದು ನಮ್ಮೆದುರಿಗೆ ಇರುವ ವ್ಯಕ್ತಿ ವೂಡೇಪಿರವರು ಈಗಾಗಲೇ ನಿಮಗೆ ಗೊತ್ತಿರುವಂತೆ ವೂಡೇಪಿ ಮನೆತನಕ್ಕೆ ಒಳ್ಳೆಯಗೌರವ, ಪ್ರೀತಿ, ವಿಶ್ವಾಸ ಹಾಗೂ ಸಕಲ ರೀತಿಯ ಸೌಭಾಗ್ಯವೂ ಇದೆ, ಆದರೂ ಇವರಿಗೆ ಸದಾ ಚಿಂತೆ ಒಂದೇ. ದೇಶ ಅಥವಾ ಒಂದು ರಾಜ್ಯ ಅಭಿವೃದ್ಧಿ, ಜಾಗೃತಿಯಾಗಬೇಕಾದರೆ ಡಾ. ಬಿ.ಆರ್. ಅಂಬೇಡ್ಕರ್‌ರವರು ಹೇಳಿರುವಂತೆ ಶಿಕ್ಷಣ ಬಹಳ ಮುಖ್ಯವಾಗಿರುತ್ತದೆ. ಎಂಬ ಸಿದ್ಧಾಂತದ ಅಡಿಯಲ್ಲಿ ಇಂದು ತಾವು ಏನು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಾಗಿರಬಹುದು, ಗಾಂಧಿ ಸ್ಮಾರಕ ಭವನವಾಗಿರ ಬಹುದು ಅಥವಾ ಇವರು ಅಲಂಕರಿಸಿರುವ ಯಾವುದೇ ಸಂಘ ಸಂಸ್ಥೆಗಳಲ್ಲಿ ವಿವಿಧ ರೀತಿಯ ಹುದ್ದೆಗಳಲ್ಲಿದ್ದರೂ ಎಲ್ಲಿಯೂ ಕೆಟ್ಟ ಹೆಸರು ಬರಬಾರದು, ಸಾಧ್ಯವಾದಷ್ಟು ಒಳ್ಳೆಯ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಬೇಕು, ಯಾವುದೇ ಸಂಸ್ಥೆಯಾಗಿರಲೀ, ವ್ಯವಹಾರಗಳು ಪಕ್ಕವಾಗಿರಬೇಕು, ಎಲ್ಲಿಯೂ ಯಾವುದೇ ಸಂದರ್ಭದಲ್ಲಿಯೂ ಜನರಿಗೆ ತಪ್ಪು ಸಂದೇಶ ರವಾನೆಯಾಗಬಾರದು ಹೀಗಾಗಿ, ನಾವು ಮಾಡುವ ಕೆಲಸಗಳು ಪಾರದರ್ಶಕವಾಗಿರಬೇಕು ಎಂಬ ಮನೋಭಾವನೆಯುಳ್ಳ ವ್ಯಕ್ತಿ ನಮ್ಮ ವೂಡೇಪಿ ಕೃಷ್ಣರವರು.

ಇವರು ಮುಂದಿನ ಯೋಚನೆ ಮತ್ತು ಅಲೋಚನೆಯಿಂದ ತಾವು ದುಡಿಯುತ್ತಿರುವ ಶಿಕ್ಷಣ ಸಂಸ್ಥೆ ಮತ್ತು ಇತರೆ ಸಂಸ್ಥೆಗಳಲ್ಲಿ ಎಲ್ಲೂ ಒಂದು ಪೈಸೆಯೂ ಕೂಡ ಅಪವ್ಯಯ ಆಗಬಾರದು, ಪ್ರತಿಯೊಂದು ಬಾಬತ್ತಿಗೂ ಲೆಕ್ಕ ಪತ್ರವಿರಬೇಕು, ಎಲ್ಲವೂ ಲೆಕ್ಕಾಚಾರವಿರಬೇಕು ಎನ್ನುವುದು ಇವರ ಉದ್ದೇಶ ಮತ್ತು ನಿಲುವು, ಇವರ ಗೌರವ ಸ್ಥಾನದ ಅರ್ಥಕ್ಕೆ ಎಲ್ಲಿಯೂ, ಯಾವ ಸಂದರ್ಭದಲ್ಲಿಯೂ ಲೋಪಬಾರದಂತೆ ಕನ್ನಡಿಯಂತೆ ಇದ್ದು ಕೆಲಸಮಾಡಬೇಕು, ಹಾಗೆಯೇ ಮಕ್ಕಳ ಹೂವು ಮಕ್ಕಳಿಗೆ ಸದ್ವಿನಿಯೋಗವಾಗಬೇಕು, ಪ್ರತಿಭೆಗಳು ಅರಳಬೇಕು, ವಿದ್ಯಾರ್ಥಿಗಳೆಂದರೆ ಕೇವಲ ಅವರು ಓದಿದವರು ಮಾತ್ರವಲ್ಲ, ತಯಾರಾದವರು ಎಂದು ಅರ್ಥವಾಗುತ್ತದೆ ಎಂಬುದು ವೂಡೇಪಿರವರ ಮನದಾಳದ, ಅಂತರಾಳದ ಮಾತು. ಅದರಲ್ಲೂ ದೀನದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರು ಹಾಗೂ ಬಡ ಮಕ್ಕಳು ಕಡ್ಡಾಯವಾಗಿ ಶಿಕ್ಷಣವನ್ನು ಪಡೆಯಬೇಕು. ಇಂದಿನ ಮಕ್ಕಳೇ ಮುಂದಿನ ದೇಶದ ಪ್ರಜೆಗಳು, ಮಕ್ಕಳು ಶಿಕ್ಷಣವನ್ನು ಪಡೆದರೆ ತನ್ನ ಕುಟುಂಬ, ರಾಜ್ಯ ಮತ್ತು ದೇಶಕ್ಕೆ ಲಾಭವಿರುತ್ತದೆ, ಹೀಗಾಗಿ, ಮಕ್ಕಳು ಹೆಚ್ಚಿನ ಶಿಕ್ಷಣ ಪಡೆಯಬೇಕು, ಎಂಬುದು ಇವರ ಅಗಾಧವಾದ ಆಸೆ, ಧ್ಯೇಯ ಹೀಗಾಗಿ ಆರ್ಥಿಕವಾಗಿ ತೊಂದರೆಯನ್ನು ಅನುಭವಿಸುವ ಕುಟುಂಬದ ಮಕ್ಕಳು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಮಾತ್ರವಲ್ಲದೆ ಬೇರೆ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದರೂ, ಅವರಿಗೆ ಶಾಲಾ ಫೀಜ್ ಅನ್ನು ಕಟ್ಟಲು ಸಾಧ್ಯವಾಗದಿದ್ದರೆ ಅಂತಹವರಿಗೆ ಆರ್ಥಿಕವಾಗಿ ಮತ್ತು ಸಾಕಷ್ಟು ರಿಯಾಯಿತಿ ನೀಡಿ ಶಿಕ್ಷಣವನ್ನು ಮುಂದುವರೆಸಲು ಅನುವು ಮಾಡಿಕೊಡುತ್ತಾರೆ ನಮ್ಮ ವೂಡೇಪಿರವರು.

ಜೊತೆಗೆ ಅಂಧ ಹಾಗೂ ಇತರೆ ವಿಕಲಚೇತನ ಮಕ್ಕಳಿಗೆ ಶೇಕಡಾ 50ರಷ್ಟು ರಿಯಾಯಿತಿ ದರದಲ್ಲಿ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಟ್ಟು ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡಲು ಅನುವು ಮಾಡಿಕೊಟ್ಟಿರುತ್ತಾರೆ. ಮುಂದೆಯೂ ಕೊಡುತ್ತಾರೆ. ಇಂದು ಇವರ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣ ಪಡೆದಂತಹವರು ವಿವಿಧ ರೀತಿಯ ಉನ್ನತ ಹುದ್ದೆಯಲ್ಲಿ ದೇಶ ವಿದೇಶದಲ್ಲಿದ್ದಾರೆ ಎಂದು ನನಗೆ ಗೊತ್ತಾಗುತ್ತದೆ.

ಹಾಗೆಯೇ ಸಮಯ ಸಿಕ್ಕಾಗ, ಅವಕಾಶ ಬಂದಾಗ ನಮ್ಮ ಸಂಸ್ಥೆಯ ವಿದ್ಯಾರ್ಥಿಗಳನ್ನು, ಶಿಕ್ಷಕ ಸಿಬ್ಬಂದಿಗಳವರನ್ನು ಬೇರೆ ಬೇರೆ ರಾಮಕೃಷ್ಣಾಶ್ರಮಗಳಿಗೆ ಕರೆದುಕೊಂಡು ಹೋಗಿ ಅಲ್ಲಿಯ ಚಿಂತನ ಮಂಥನ ಸಭೆಗಳಲ್ಲಿ ಪಾಲ್ಗೊಳ್ಳುವಂತೆ

ಮಾಡುವುದರ ಮೂಲಕ ವೂಡೇಪಿರವರು ತಮ್ಮ ವಿದ್ಯಾಸಂಸ್ಥೆಗೆ ಶೈಕ್ಷಣಿಕ ಪ್ರಗತಿಗೆ ನೈತಿಕತೆಯನ್ನು ತುಂಬುತ್ತಿದ್ದಾರೆ. ಹಾಗಾಗಿ ದಾನ ದಾನಗಳಲ್ಲಿ ಶ್ರೇಷ್ಠವಾದದ್ದು ವಿದ್ಯಾದಾನ ಎಂಬುದನ್ನು ಅರಿತಿರುವ ಸರ್ವಕಾಲಕ್ಕೂ ಶ್ರೇಷ್ಠ ವ್ಯಕ್ತಿ ಹಾಗೂ ಅಪರೂಪದ ವ್ಯಕ್ತಿ ನಮ್ಮ ವೂಡೇ ಪಿ.ರವರು.

"ಸಾಹಿತ್ಯ ಲೋಕಕ್ಕೆ ಒಂದು ಗೌರವ"

ಪ್ರತಿದಿನ ನಾನು ನನ್ನ ಮನೆಗೆ ಹೆಚ್ಚು ಕಮ್ಮಿ ಕನ್ನಡದ ಎಲ್ಲಾ ದಿನ ಪತ್ರಿಕೆಗಳನ್ನು ಅಂದರೆ ಪ್ರಜಾವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ವಿಶ್ವವಾಣಿ, ವಿಜಯವಾಣಿ, ಉದಯವಾಣಿ, ಸಂಯುಕ್ತ ಕರ್ನಾಟಕ, ಹೊಸ ದಿಗಂತ ಹಾಗೂ ಸಂಜೆ ಸಿಗುವ ಕೆಲವು ಕನ್ನಡ ಪತ್ರಿಕೆಗಳು, ಮತ್ತು ಕೆಲವಾರು ಸಣ್ಣ ಪತ್ರಿಕೆಗಳು ನಮ್ಮ ಮನೆಗೆ ಬರುತ್ತವೆ. ನಾನು ತರುತ್ತೇನೆ. ಈ ಎಲ್ಲಾ ಪತ್ರಿಕೆಗಳನ್ನು ತಿರುವುತ್ತಾ ಕಣ್ಣಾಡಿಸುತ್ತಾ ಕುಳಿತು ನೋಡಿದಾಗ, ಓದಿದಾಗ ಹೆಚ್ಚಿನ ಪತ್ರಿಕೆಗಳಲ್ಲಿ ವೂಡೇ ಪಿ. ರವರ ಕುರಿತಾದ ಒಂದು ವರದಿ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಫೋಟೋಗಳು, ಎಲ್ಲಕ್ಕಿಂತ ವಿಶೇಷವಾಗಿ ಪುಸ್ತಕಗಳ ಲೋಕಾರ್ಪಣೆ ಸಮಾರಂಭಗಳಿಗೆ ಮುಖ್ಯ

ಅತಿಥಿಗಳಾಗಿ ಹೋಗುವುದು, ಉದ್ಘಾಟಕರಾಗಿ ಹೋಗುವುದು, ಅಥವಾ ಪುಸ್ತಕಗಳನ್ನು ಬಿಡುಗಡೆ ಮಾಡಲು ಹೋಗುವುದು ಹೀಗೆ ಒಂದಲ್ಲ ಒಂದು ಕಾರ್ಯಕ್ರಮದ ಮಾಹಿತಿಯು ವೂಡೇ ಪಿ ರವರ ಬಗ್ಗೆ ವರದಿಗಳು ಇದ್ದೇ ಇರುತ್ತವೆ. ವೂಡೇ ಪಿ ರವರು ಭಾಗವಹಿಸುವ ಸಮಾರಂಭಗಳು ಯಾವುದೇ ಸಂಘ ಸಂಸ್ಥೆಗಳಾಗಿರಬಹುದು, ಶೋಷಿತರ, ಹಿಂದುಳಿದವರ ದೀನ ದಲಿತರ ಏರ್ಪಡಿಸುವ ಸಭೆ, ಸಮಾರಂಭಗಳಾಗಿರಬಹುದು, ಯಾವುದೇ ರೀತಿಯ ಸಂಕೋಚವಿಲ್ಲದೆ ಸಮಾರಂಭಗಳಿಗೆ ಸಂತೋಷದಿಂದ ಹೋಗುವ ವ್ಯಕ್ತಿ ಎಂದರೆ ಅದು ವೂಡೇಪಿರವರು. ನಾನು ಒಮ್ಮೆ ಒಂದು ಸಮಾರಂಭವನ್ನು ಗಾಂಧಿಭವನದ ಬಾಪೂ ಸಭಾಂಗಣದಲ್ಲಿ ಏರ್ಪಡಿಸಿದ್ದೆ, ಅದು ಬಹು ದೊಡ್ಡ ಸಮಾರಂಭ, ಆ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಜಸ್ಟೀಸ್ ಕೃಷ್ಣ ಎಸ್. ದೀಕ್ಷಿತ್, ಜಸ್ಟೀಸ್ ಆರ್. ದೇವದಾಸ್, ಜಸ್ಟೀಸ್ ಬಿ. ವೀರಪ್ಪ ಹಾಗೂ ಸಾಹಿತಿಗಳು ಮತ್ತು ಪತ್ರಕರ್ತರು ಮುಖ್ಯ ಅತಿಥಿಗಳಾಗಿ ಬರುವವರಿದ್ದರು. ನಾನು ಒಂದು ದಿನ ಅಂದರೆ ಒಂದು ತಿಂಗಳು ಮುಂಚಿತವಾಗಿಯೇ ವೂಡೇಪಿರವರನ್ನು ಬೇಟಿಯಾಗಿ ಸಾರ್ ನಮ್ಮ 'ಆದಿಜಾಂಬವ ಜಾಗೃತಿ ಪತ್ರಿಕೆ'ಯ ವತಿಯಿಂದ ಒಂದು ಸಮಾರಂಭವನ್ನು ಏರ್ಪಡಿಸಿದ್ದೇವೆ. ತಾವುಗಳು ಬಂದು ಸಮಾರಂಭವನ್ನು ಉದ್ಘಾಟಿಸಬೇಕೆಂದು ಮನವಿ ಮಾಡಿದೆ. ಆಗ ಅವರು ತಮ್ಮ ದಿನಚರಿಯ ಡೈರಿಯನ್ನು ತೆಗೆದು ನೋಡಿದರು. ಆಗ ಅವರು ನಮ್ಮ ಸಮಾರಂಭದ ದಿನಾಂಕವನ್ನು ಅವರು ಬೇರೆ ಯಾವುದೋ ಬಹುಶ ಹೈದರಾಬಾದ್-ಕರ್ನಾಟಕ ಭಾಗಕ್ಕೆ ಮೊದಲೇ ಅಂದರೆ ಮೂರು ತಿಂಗಳ ಮೊದಲೇ ಇವರು ಆ ಕಾರ್ಯಕ್ರಮಕ್ಕೆ ಹೋಗಲು ಅನುಮತಿಕೊಟ್ಟಿದ್ದರು. ಅಂದರೆ ನಾನು ಕಂಡಂತೆ ಈ ದೇಶದ ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳು ಬಿಟ್ಟರೆ ಮೂರು ತಿಂಗಳು ಮೊದಲೇ ಸಮಾರಂಭಕ್ಕೆ ಹೋಗಲು ಅನುಮತಿ ಕೊಡುವ ವ್ಯಕ್ತಿ ಎಂದರೆ ಅದು ವೂಡೇ ಪಿ. ಕೃಷ್ಣರವರು, ಈ ವಿಚಾರವಾಗಿ ನಾನು ಅಂದು ನಮ್ಮ ಸಮಾರಂಭಕ್ಕೆ ಆಹ್ವಾನಿಸಲು ಅವರನ್ನು ಬೇಟಿ ಮಾಡಲು ಹೋದಾಗ ಗಂಗಾಧರ್‌ಜಿ ನಾನು ಈಗಾಗಲೇ ನಿಮ್ಮ ಸಮಾರಂಭದ ದಿನವೇ ನಾನು ಬೇರೆ ಊರಿಗೆ ಹೋಗಬೇಕು, ಅಲ್ಲಿ ಒಂದು ಪುಸ್ತಕ ಬಿಡುಗಡೆಯ ಸಮಾರಂಭ, ಬಹಳ ದಿನಗಳಿಂದ ನನ್ನ ದಿನಾಂಕವನ್ನು, ನೀವೇ ಬರಬೇಕು ಎಂದು ಕೇಳುತ್ತಿದ್ದರು, ಜೊತೆಗೆ ಹಳ್ಳಿಯ ಮುಗ್ಧರು ಅಷ್ಟು ಅಭಿಮಾನವಿಟ್ಟು ನನ್ನನ್ನು ಅಲ್ಲಿಗೆ ಕರೆಯುತ್ತಿದ್ದಾರೆ ನಾನು ಮೊದಲ ಆದ್ಯತೆ ಆ ಹಳ್ಳಿಯ ಮುಗ್ಧರ ಸಮಾರಂಭಕ್ಕೆ ಹೋಗಬೇಕು, ನೀವು ನಿಮ್ಮ ಸಮಾರಂಭವನ್ನು ಚೆನ್ನಾಗಿ ಮಾಡಿ ಮುಂದೆ ಮತ್ಯಾವುದಾದರೂ ಕಾರ್ಯಕ್ರಮಕ್ಕೆ ಬರುತ್ತೇನೆ ಎಂದು

ಹೇಳಿದರು. ಸರಿ ನಾನು ಸಹ ಅವರ ಮಾತಿಗೆ ಒಪ್ಪಿ ನಮ್ಮ ಸಮಾರಂಭವು ನಾವು ಗೊತ್ತುಪಡಿಸಿದ ದಿನಾಂಕದಂದು ನಡೆಯಿತು. ಮತ್ತು ವೂಡೇಪಿ ಬರದಿದ್ದನ್ನು ಕೆಲವು ನ್ಯಾಯಮೂರ್ತಿಗಳು ಕೇಳಿದರು, ಅವರಿಗೆ ಮೇಲಿನ ಮಾಹಿತಿಯನ್ನು ಕೊಟ್ಟೆ, ಸಮಾರಂಭವು ಚೆನ್ನಾಗಿ ನಡೆಯಿತು.

ನಮ್ಮ ಸಮಾರಂಭವು ಆಗಿ ಒಂದೆರಡು ದಿನಗಳಾಗಿರಬಹುದು ನಾನು ನನ್ನ ಆತ್ಮೀಯರು, ಹಿರಿಯರು, ಖ್ಯಾತ ಸಾಹಿತಿಗಳು, ಕನ್ನಡ ಪರ ಹೋರಾಟಗಾರರು ಮತ್ತು ಹಿರಿಯ ಪತ್ರಕರ್ತರ ಹತ್ತಿರ ವೂಡೇಪಿರವರು ನಮ್ಮ ಸಮಾರಂಭಕ್ಕೆ ಬರದಿದ್ದುದನ್ನು ಹೇಳಿದೆ ಆಗ ಆ ಸಾಹಿತಿಗಳು ಹೇಳಿದ ಒಂದು ಮಾತು ನಿಜಕ್ಕೂ ತುಂಬಾ ಆಶ್ಚರ್ಯವಾಗಿತ್ತು. "ನೋಡಿ ಗಂಗಾಧರ್ ಇಂದು ಬೆಂಗಳೂರು, ಬೆಂಗಳೂರು ಗ್ರಾಮಾಂತರ ಮತ್ತು ಕೆಲವು ಜಿಲ್ಲೆಗಳಲ್ಲಿ ಸಾಹಿತ್ಯ ಎಂಬ ಪದಕ್ಕೆ ಏನಾದರೂ ಒಂದು ಗೌರವ ಇದ್ದರೆ ಅದು ವೂಡೇಪಿ ಕೃಷ್ಣರವರಂತವರಿಂದ. ಏಕೆಂದರೆ, ಪುಸ್ತಕಗಳನ್ನು ಕೃತಿಗಳನ್ನು ಎಲ್ಲರೂ ಬರೆಯಬಹುದು. ಪ್ರಕಟಿಸಬಹುದು ಆದರೆ ಅದಕ್ಕೆ ಒಂದು ರೂಪ, ಮೌಲ್ಯ, ಸಿಗುವುದು ಕಷ್ಟದ ಮಾತು, ಏಕೆಂದರೆ ಒಬ್ಬ ಬರಹಗಾರ, ಲೇಖಕ ತಾನು ಬರೆದ ಪುಸ್ತಕಗಳನ್ನು ಪ್ರಕಟಿಸಿ ಅದನ್ನು ಲೋಕಾರ್ಪಣೆ ಮಾಡಬೇಕಾದರೆ ಅದಕ್ಕೆ ಸೂಕ್ತವಾದ ಸಹಕಾರ, ಸಭಾಂಗಣದ ಕೊರತೆ, ಆರ್ಥಿಕ ಸಮಸ್ಯೆಗಳು, ಸಮಾರಂಭಕ್ಕೆ ಬೇಕಾದ ಎಲ್ಲಾ ರೀತಿಯ ವ್ಯವಸ್ಥೆಗಳು ಯಾವೊಬ್ಬ ಬರಹಗಾರನಿಗೆ, ಲೇಖಕನಿಗೆ ಅಷ್ಟಾಗಿ ಇರುವುದಿಲ್ಲ, ಕಾರಣ ಸಾಮಾನ್ಯವಾಗಿ ಒಬ್ಬ ಬರಹಗಾರ, ಲೇಖಕ ಯಾವತ್ತೂ ಆರ್ಥಿಕವಾಗಿ ಸಬಲವಾಗಿರುವುದಿಲ್ಲ, ಆದರೆ, ಅವನಲ್ಲಿ ಬರವಣಿಗೆಯ ದಾಹ, ತಲೆ ಮತ್ತು ಹೃದಯದಲ್ಲಿ ಬರವಣಿಗೆಯ ವಿಷಯದ ಕಸರತ್ತುಗಳು ಯಥೇಚ್ಚವಾಗಿ ತುಂಬಿ ತುಳುಕುತ್ತಿರುತ್ತವೆ, ಆದರೆ ಆರ್ಥಿಕ ಸಮಸ್ಯೆ ಎದ್ದು ಕಾಣುತ್ತದೆ. ಇಂತಹ ಸಂದರ್ಭ ದಲ್ಲಿ ನನಗೆ ತಿಳಿದಿರುವಂತೆ ಗೊತ್ತಿರುವಂತೆ ಬೆಂಗಳೂರಿನಲ್ಲಿ ಯಾವುದೇ ರೀತಿಯ ಪುಸ್ತಕಗಳು ಕೃತಿಗಳು ಲೋಕಾರ್ಪಣೆಗೊಂಡರೆ ಆ ಸಮಾರಂಭದಲ್ಲಿ ವೂಡೇ ಪಿ ಕೃಷ್ಣರವರಂತಹ ಮೇರುವ್ಯಕ್ತಿ ಇದ್ದೇ ಇರುತ್ತಾರೆ. ಇದರ ಅರ್ಥ ವೂಡೇಪಿ ಕೃಷ್ಣರವರು ಇರುವುದರಿಂದ ಬೆಂಗಳೂರು ಅಂತಹ ರಾಜಧಾನಿಯಲ್ಲಿ ಸಾಹಿತ್ಯಕ್ಕೆ ಒಂದು ಗೌರವ ಇದ್ದೇ ಇದೆ. ಇದಕ್ಕೆ ಮುಖ್ಯ ಕಾರಣ ಪ್ರತಿಷ್ಠಿತ ಗಾಂಧಿಭವನ ಸ್ಮಾರಕ ನಿಧಿಯ ಮುಖ್ಯಸ್ಥರು, ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ವೂಡೇ ಪಿ ಕೃಷ್ಣರವರು, ಹೀಗಾಗಿ ಗಾಂಧಿ ಭವನ ಮತ್ತು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ತಿಂಗಳಿಗೆ ಹತ್ತಾರು ಸಾಹಿತ್ಯ ಬರವಣಿಗೆಗೆ

ಸಂಬಂಧಪಟ್ಟಂತಹ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಈ ರೀತಿ ನಡೆಯಲು ಪ್ರತ್ಯಕ್ಷವಾಗಿ ಪರೋಕ್ಷವಾಗಿ ವೂಡೇಪಿರವರ ಸಹಕಾರ, ಅವರ ಅಭಿಮಾನ ಇಂದು ಸಾಹಿತ್ಯ ಬರವಣಿಗೆ ಎಂಬ ಕಬ್ಬಿಣದ ಕಡಲೆ ಎಲ್ಲಾ ಸ್ತರದ ಸಮುದಾಯದವರು ನಾನು ಬರೆಯಬೇಕು, ನಾವು ಬರೆಯಬೇಕು ಎಂಬ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿರುತ್ತವೆ. ಒಟ್ಟಾರೆ ಇದಕ್ಕೆಲ್ಲ ಸ್ಫೂರ್ತಿ ವೂಡೇ ಪಿರವರು, ಹೀಗಾಗಿ ವೂಡೇಪಿರವರು ಬರವಣಿಗೆ ಲೇಖಕರಿಗೆ ಹೆಚ್ಚಿನ ಪ್ರೋತ್ಸಾಹಕೊಡುವುದರಿಂದ ಇಂದು ಸಾಹಿತ್ಯ ಲೋಕಕ್ಕೆ ವೂಡೇ ಪಿ ರವರ ಕೊಡುಗೆ ಅಪಾರ ಎಂದು ಹೇಳಿದರು. ಈ ಮಾತನ್ನು ಕೇಳಿ ನನಗೆ ಒಂದು ರೀತಿಯ ಆಶ್ಚರ್ಯವಾಯಿತು. ಏಕೆಂದರೆ ಈ ಲೇಖನದ ಪ್ರಾರಂಭದಲ್ಲಿ ನಾನು ಬರೆದಿರುವ ಹಾಗೂ ನಾನು ಪ್ರತಿದಿನ ಅಷ್ಟೊಂದು ಕನ್ನಡದ ದಿನ ಪತ್ರಿಕೆಗಳಲ್ಲಿ ವೂಡೇ ಪಿ ರವರ ಕುರಿತಾದ ಒಂದು ಮಾಹಿತಿ ಅಂದರೆ ಕಾರ್ಯಕ್ರಮವನ್ನು ವೂಡೇಪಿರವರು ಉದ್ಘಾಟಿಸುತ್ತಾರೆ. ಪುಸ್ತಕವನ್ನು ವೂಡೇ ಪಿರವರು ಲೋಕಾರ್ಪಣೆ ಮಾಡುತ್ತಾರೆ. ಈ ರೀತಿಯ ವರದಿಗಳು ಇದ್ದೇ ಇರುತ್ತವೆ, ಹೌದು ನನ್ನ ಆತ್ಮೀಯರು, ಹಿರಿಯ ಸಾಹಿತಿಗಳು ಅಂದು ವೂಡೇ ಪಿರವರಂತಹವರಿಂದ ಇಂದು ಸಾಹಿತ್ಯ ಲೋಕ್ಕೆ ಮತ್ತು ಬರಹಗಾರರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಹೇಳಿದ್ದು ನೂರಕ್ಕೆ ನೂರು ಸತ್ಯ, ಪುಸ್ತಕ ಬಿಡುಗಡೆಯ ಸಮಾರಂಭಕ್ಕೆ ಗಾಂಧಿಭವನದ ಸಭಾಂಗಣವಾಗಿರಬಹುದು, ಶೇಷಾದ್ರಿಪುರಂ ಸಭಾಂಗಣವಾಗಿರಬಹುದು, ಸಿಗಬೇಕಾದರೆ ವೂಡೇಪಿರವರು ಅಲ್ಲಿ ಇರುವುದರಿಂದ ಮಾತ್ರ ಸಾಹಿತ್ಯ ಲೋಕಕ್ಕೆ ಒಂದು ಮೆರಗು ಎಂದು ನನಗೆ ಗೊತ್ತಾಯಿತು.

ಹೀಗಾಗಿ, ವೂಡೇ ಪಿ. ಕೃಷ್ಣರವರು ಸರ್ವ ಜನಾಂಗದವರು ಮೆಚ್ಚುವ, ಅಪ್ಪಟ ಒಬ್ಬ ಅಪ್ಪಟ ಗಾಂಧಿವಾದಿ. ಪ್ರಜೆಗಳು, ರಾಜ್ಯ, ದೇಶ ಅಭಿವೃದ್ಧಿಯಾಗಿರ ಬೇಕಾದರೆ ವೂಡೇಪಿಯವರಂತಹ ಗಾಂಧಿವಾದಿಗಳು ಪ್ರಸ್ತುತ ಪರಿಸ್ಥಿತಿಯಲ್ಲಿ ಸಮಾಸಮಾಜದಲ್ಲಿ ಇರಲೇ ಬೇಕು. ಇಂದು ನಾವುಗಳು ಬದುಕುತ್ತಿರುವುದು ಅಂದಿನ ಗಾಂಧಿಯ ಸ್ವತಂತ್ರದ ದಿನಗಳ ರಾಮರಾಜ್ಯದಲ್ಲಿ ಜೀವಿಸುತ್ತಿಲ್ಲ, ಬದುಕುತ್ತಿಲ್ಲ, ಗಾಂಧೀಜಿಯವರು ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ನಂತರ ದೇಶದಲ್ಲಿ ಇದ್ದದೆ ಪ್ರೀತಿ, ವಿಶ್ವಾಸ, ನೆಮ್ಮದಿ, ಎಲ್ಲಕ್ಕಿಂತ ಮುಖ್ಯವಾಗಿ ಯಾವುದೇ ರೀತಿಯ ಅಧಿಕಾರಕ್ಕಿಂತ ನಮ್ಮ ದೇಶ ಚೆನ್ನಾಗಿರಬೇಕು, ನಮ್ಮ ದೇಶ ಅಭಿವೃದ್ಧಿಯಾಗಬೇಕು ಎಂಬುದನ್ನು ಗಾಂಧಿಯವರ ಯುಗದಲ್ಲಿ ನಾವು ಗಳು ಕಾಣುತ್ತೇವೆ, ಇತಿಹಾಸದ ಪುಟದಲ್ಲಿಯೂ ಹಿಂದಿನ ನೆನಪುಗಳನ್ನು ನೋಡಬಹುದು.

ಆದರೆ ಇಂದು ನಾವು ಬದುಕುತ್ತಿರುವುದು, ಜೀವಿಸುತ್ತಿರುವುದು ಪ್ರೀತಿ ವಿಶ್ವಾಸದ ಮಧ್ಯ ಜೀವಿಸುತ್ತಿಲ್ಲ, ಬದುಕುತ್ತಿಲ್ಲ. ನೆಮ್ಮದಿಯ ಜೀವನವನ್ನು ನಡೆಸಲು ಸಾಧ್ಯವಾಗುತ್ತಿಲ್ಲ, ದಿನಬೆಳಗಾದರೆ ಜಾತಿ, ಧರ್ಮ, ದೇವರು ಈ ಮೂರು ಹೆಸರುಗಳಿಂದ ಇಂದು ನಾವು ಬದುಕುತ್ತಿದ್ದೇವೆ, ಆದರೆ, ಅಂದು ಗಾಂಧಿಯ ಯುಗದಲ್ಲಿ ನೆಮ್ಮದಿಯ ಜೀವನ, ಪ್ರೀತಿ ವಿಶ್ವಾಸವಿತ್ತು, ಇಂದು ಧರ್ಮ ಧರ್ಮಗಳ ಮಧ್ಯ ಬಿರುಕು, ಗಲಾಟೆ, ವೈಮನಸ್ಸು, ಜಾತಿ ಜಾತಿಗಳ ಮಧ್ಯಭಿನ್ನಾಭಿಪ್ರಾಯ, ಆ ದೇವರು, ಈ ದೇವರು ಎಂದು ಕಿತ್ತಾಡುವ ವಾತವರಣದಲ್ಲಿ ಇಂದು ನಾವು ಬಹಳ ಕಷ್ಟಕರವಾದ ವಾತವರಣದಲ್ಲಿ ಇಂದು ನೆಮ್ಮದಿಯಿಲ್ಲದಂತೆ ನಾವು ಜೀವಿಸುತ್ತಿದ್ದೇವೆ.

ಅಂತಹದಲ್ಲಿ ಅಲ್ಲೊಬ್ಬರು, ಇಲ್ಲೊಬ್ಬರು ಎನ್ನುವಂತೆ ಒಬ್ಬ ಅಪ್ಪಟ ಗಾಂಧಿವಾದ ವೂಡೇ ಪಿ. ಕೃಷ್ಣರವರ ಎಲೆ ಮರೆಯ ಕಾಯಿಯಂತೆ ಗಾಂಧಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರ ದಾರಿಯಲ್ಲಿ ಸಮಾಜದಲ್ಲಿ ಸರ್ವ ಜನರ ಶ್ರೇಯೋಽಭಿವೃದ್ಧಿಗಾಗಿ ದುಡಿಯುತ್ತಿರುವ ಒಬ್ಬ ಅಪ್ಪಟ ಗಾಂಧಿವಾದಿ ನಮ್ಮೆಲ್ಲರ ವೂಡೇ ಪಿ. ಕೃಷ್ಣರವರು ಇಂತಹ ಒಬ್ಬ ವ್ಯಕ್ತಿಯ ಬಗ್ಗೆ ಅಂದು ಹಿರಿಯ ಸಾಹಿತಿಯೊಬ್ಬರು ಹೇಳಿದ ಮಾತು ವೂಡೇ ಪಿ ಕೃಷ್ಣರವರು ಇರುವುದರಿಂದಲೇ ಇಂದು ಕನ್ನಡ ಸಾಹಿತ್ಯ ಲೋಕವು ನಿಂತನೀರಾಗದೆ ಹರಿಯುವ ನದಿಯಂತೆ ಸದಾ ಹರಿಯುತ್ತಿದೆ ಎಂದು ಹೇಳಿದ್ದು ಎಷ್ಟು ಅರ್ಥಪೂರ್ಣವಾಗಿದೆ, ಈ ಮಾತು ಸರ್ವಕಾಲಕ್ಕೂ ಮತ್ತು ವೂಡೇ ಪಿ. ಕೃಷ್ಣರವರು ಇರುವ ವರೆಗೂ ಸತ್ಯವಾದ ಮಾತು.

ಇದಕ್ಕೋಸ್ಕರವೇನೋ ನನ್ನಂತಹವನು ಒಂದು ತಳಮಟ್ಟದ ಸಮುದಾಯ ದಲ್ಲಿ ಹುಟ್ಟಿ ಆ ಸಮುದಾಯದ ಹೆಸರಿನಲ್ಲಿ ಕಳೆದ 25–26 ವರ್ಷಗಳಿಂದ ಒಂದು ಪತ್ರಿಕೆಯನ್ನು ಅದು 'ಆದಿಜಾಂಬವ ಜಾಗೃತಿ ಪತ್ರಿಕೆ'ಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದಕ್ಕೆ ಸಾಕ್ಷಿ. ನನ್ನ ಬರವಣಿಗೆಯನ್ನು, ನನ್ನ ಲೇಖನವನ್ನು ಓದಿ ಅತೀವ ಸಂತೋಷದಿಂದ "ಗಂಗಾಧರ್‌ಜಿ ನೀವು ಚೆನ್ನಾಗಿ ಬರೆಯುತ್ತೀರಾ, ದೇವರು ನಿಮ್ಮನ್ನು ಚೆನ್ನಾಗಿ ಇಟ್ಟಿರಲಿ" ಎಂದು ಹೇಳಿದಾಗ ನಿಜಕ್ಕೂ ನನಗೆ ಗೊತ್ತಿಲ್ಲದ ಹಾಗೆ ನನ್ನ ದೇಹದಲ್ಲಿ ಒಂದು ರೀತಿಯ ಶಕ್ತಿ ಮತ್ತು ಆಯಸ್ಕಂತದಂತೆ ನೀನು ಬರಿ, ನೀನು ಬರಿ ಎಂದು ಸದಾ ಹುರಿದುಂಬಿಸುವ ಒಂದು ಅಶರೀರವಾಣಿಯ ಸಂದೇಶದಂತೆ ನೆನಪಾಗುತ್ತದೆ, ಹೀಗಾಗಿಯೇ, ಕಳೆದ ಕೆಲವು ತಿಂಗಳುಗಳಿಂದ ನನಗೂ ವೂಡೇ ಪಿ. ರವರಿಗೂ ಹತ್ತಿರದ ನಂಟು. ಭಾವನಾತ್ಮಕವಾದ ಸಂಬಂಧಗಳು ಇಲ್ಲದೆ, ನನಗೆ ಕಳೆದ ಕೆಲವಾರು ವರ್ಷಗಳಿಂದ ಅವರನ್ನು ನಾನು ನನ್ನ ಅಂತರಂಗದಲ್ಲಿ ಅವರ ಕೆಲಸ ಕಾರ್ಯಗಳು, ಅವರ

ನಡೆಗಳು, ಅವರ ನುಡಿಗಳು, ಅವರ ಉಡುಗೆ ತೊಡುಗೆಗಳು, ಅವರ ಬಾಯಿಂದ ಬರುವ ಅಪರೂಪದ ನುಡಿಮುತ್ತುಗಳು ಇವೆಲ್ಲಕ್ಕಿಂತ ಮೀಗಿಲಾಗಿ ಬರ ವಣಿಗೆ ಮತ್ತು ಪತ್ರಿಕಾಲೋಕದಲ್ಲಿ ನಿರಂತರವಾಗಿ ತೆವಳುತ್ತಿರುವ, ಅಂಬೆಗಾಲು ಇಡುತ್ತಿರುವ ನನಗೆ ವೂಡೇ ಪಿರವರು ಒಂದು ರೀತಿಯ ಸ್ಫೂರ್ತಿಯಾಗಿದ್ದಾರೆ. ಈ ಪ್ರೀತಿ, ಈ ಸ್ಫೂರ್ತಿಯೇ ಇಂದು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಕಳೆದ ಕೆಲವಾರು ತಿಂಗಳುಗಳಿಂದ ಅವರ ಕುರಿತಾ 'ಆಡು ಮುಟ್ಟದ ಸೊಪ್ಪಿಲ್ಲ- ವೂಡೇ ಪಿ. ಕೃಷ್ಣ' ಎಂಬ ಒಂದೊಳ್ಳೆಯ ಅಂಕಣವನ್ನು ನಾನು ಬರೆಯುತ್ತಿದ್ದೇನೆ ನಾನು ಮೊದಲೇ ಹೇಳಿದ ಹಾಗೆ ನನ್ನ ಬರವಣಿಗೆಗೆ ವೂಡೇ ಪಿ ರವರ ಸ್ಫೂರ್ತಿ, ಹೀಗಾಗಿ ಅವರ ಕುರಿತಾದ ಅಂಕಣವು ಇಂದು ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಓದುಗರ ಮೆಚ್ಚುಗೆಯನ್ನು ಪಡೆದಿರುತ್ತದೆ, ಹೀಗಾಗಿಯೇ ಹೇಳೋದು ಹೂವಿನಿಂದ ನಾರು ಸ್ವರ್ಗಕ್ಕೆ ಹೋದಂತೆ ನಾನು ಸಹ ಹೂವಿನ ಜೊತೆಗೆ ಸ್ವರ್ಗಕ್ಕೆ ಹೋಗದಿದ್ದರೂ ಪರವಾಗಿಲ್ಲ, ಆ ಹೂವಿನ ಘಮಲವನ್ನು ಸದಾ ಹೀರುವ ಶಕ್ತಿಯನ್ನು ನನಗೆ ವೂಡೇ ಪಿ.ಯವರು ಮತ್ತು ಓದುಗರು ನೀಡಲಿ ಎಂದು ಈ ಮೂಲಕ ನಾನು ಬಯಸುತ್ತೇನೆ.



“ಟಿಕೆಟ್ ನೀಡದಿರಲು ಮನವಿ”

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರು ಮತ್ತು ಆದಿಜಾಂಬವ ಜಾಗೃತಿ ಪತ್ರಿಕೆಯ ಪೋಷಕರು ಆದ ಗೌರವಾನ್ವಿತ ವೂಡೇ ಪಿ. ಕೃಷ್ಣರವರು ಇತ್ತೀಚೆಗೆ ರಾಜ್ಯ ದಲ್ಲಿರುವ ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳಿಗೆ ಪತ್ರ ಬರೆಯುವ ಮೂಲಕ ಒಂದು ಒಳ್ಳೆಯ ಅಪರೂಪದ ಸಂದೇಶವನ್ನು ಕೊಟ್ಟಿರುತ್ತಾರೆ ಹಾಗೂ ರಾಜ್ಯದ ಪ್ರತಿಯೊಬ್ಬ ಮತದಾರನು ಈ ಸಂದೇಶದಿಂದ ಎಚ್ಚರಗೊಳ್ಳಬೇಕು.

2023ರಲ್ಲಿ ನಡೆಯುವ ರಾಜ್ಯ ವಿಧಾನಸಭೆಯ ಚುನಾವಣೆ ಇನ್ನೇನು ಎರಡು ಮೂರು ತಿಂಗಳಲ್ಲಿ ನಡೆಯ ಲಿದ್ದು ಇತ್ತೀಚೆಗೆ ರಾಜ್ಯದ ರಾಜಕಾರಣ ಕ್ರಿಮಿನಲ್ ವ್ಯಕ್ತಿಗಳಿಂದ ತುಂಬಿ ತುಳುಕುತ್ತಿದೆ. ರಾಜಕೀಯಕ್ಕೆ ಪ್ರವೇಶಿಸುವವರು ಹೆಚ್ಚಿನ ಸಂಸದರು ಶೇಕಡ 43. ವಿಧಾನಸಭೆಯ ಶೇಕಡಾ 27 ಸದಸ್ಯರುಗಳು ಹತ್ತು ಹಲವು ಮಾನದಂಡಗಳಲ್ಲಿ ಅಂದರೆ ಕ್ರಿಮಿನಲ್, ಜಾತಿ, ಧರ್ಮ, ಬಲ, ಗೂಂಡಾ ಪ್ರವೃತ್ತಿಯುಳ್ಳವರು, ಭುಜಬಲದಿಂದ

ಪಕ್ಷದ ಮುಖಂಡರುಗಳನ್ನು, ಮತದಾರರನ್ನು ಎದುರಿಸಿ, ಬೆದರಿಸಿ ಚುನಾವಣೆಗೆ ನಿಲ್ಲಲು ಅಭ್ಯರ್ಥಿಗಳಾಗಿ ಸೀಟುಗಳನ್ನು ಪಡೆದು ನಂತರ ಅನ್ಯಾಯದ ಹಣವನ್ನು ಯಥೇಚ್ಛವಾಗಿ ಖರ್ಚು ಮಾಡಿ, ಮತಗಳಿಗೆ ಒಂದಷ್ಟು ಹಣವನ್ನು ಕೊಟ್ಟು ಮತಗಳನ್ನು ಪಡೆದು ರಾಜಕಾರಣದಲ್ಲಿ ಗೆದ್ದು ಬರುತ್ತಾರೆ.

ಇಂತಹ ಕ್ರಿಮಿನಲ್ ಹಿನ್ನೆಲೆಯುಳ್ಳವರು ರಾಜಕಾರಣದಲ್ಲಿ ಬರುವವರು ಎಂದಿಗೂ ಪ್ರಜಾಪ್ರಭುತ್ವದ ಅಡಿಯಲ್ಲಿ ದೇಶದ, ರಾಜ್ಯದ ಮತ್ತು ಮತದಾರರ ಆಶಯದ ಅನುಗುಣವಾಗಿ ನಿಯತ್ತಿನಿಂದ, ಪ್ರಾಮಾಣಿಕವಾಗಿ ಕೆಲಸ ಮಾಡುವುದಿಲ್ಲ. ಹಾಗೂ ಇಂತಹ ಕ್ರಿಮಿನಲ್ ಹಿನ್ನೆಲೆಯುಳ್ಳವರು ರಾಜಕಾರಣಿಗಳಾಗಿ ಬಂದರೆ ದೇಶ, ರಾಜ್ಯ, ಮತದಾರ ಈ ಮೂರು ಅಭಿವೃದ್ಧಿ ಹೊಂದುವುದಿಲ್ಲ. ಹೀಗಾಗಿ ರಾಜಕಾರಣಕ್ಕೆ ಬರುವವರು ಪ್ರಜಾಪ್ರಭುತ್ವದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇದರ ಜೊತೆಗೆ ಪತ್ರಿಕಾಂಗ ಈ ನಾಲ್ಕು ಅಂಗಗಳು ಪರಸ್ಪರ ಪೂರಕಭಾವದಲ್ಲಿ ಹಸ್ತಕ್ಷೇಪವಿಲ್ಲದೆ ತಮ್ಮ ತಮ್ಮ ಇತಿಮಿತಿಯಲ್ಲಿ ಕಾರ್ಯ ನಿರ್ವಹಿಸಬೇಕಾದರೆ ಸಜ್ಜನರಿಗೆ, ನಿಷ್ಠಾವಂತರಿಗೆ ಮತದಾರ ಪ್ರಭುಗಳ ಮೇಲೆ ಗೌರವ ಇರುವವರನ್ನು 2023ರ ರಾಜ್ಯ ವಿಧಾನ ಸಭೆಯ ಚುನಾವಣೆಗೆ ನಿಲ್ಲಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕೆಂದು ಹೇಳಿದರು ಸುಪ್ರೀಂಕೋರ್ಟಿನ ನಿವೃತ್ತ ನ್ಯಾಯಮೂರ್ತಿಗಳಾದ ಗೌರವಾನ್ವಿತ ಶ್ರೀ ಶಿವರಾಜ ವಿ. ಪಾಟೀಲ್ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣರವರು ಎ.ಐ.ಸಿ.ಸಿ. ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿ ರಾಜ್ಯಾಧ್ಯಕ್ಷರಾದ ನಳಿನ್‌ಕುಮಾರ್ ಕಟೀಲ್, ಜೆ.ಡಿ.ಎಸ್. ರಾಜ್ಯಾಧ್ಯಕ್ಷರಾದ ಸಿ.ಎಂ. ಇಬ್ರಾಹಿಂ. ಅವರಿಗೆ ಪತ್ರವನ್ನು ಬರೆದಿರುತ್ತಾರೆ.

ಸೂಕ್ತ ಸಂದರ್ಭದಲ್ಲಿ ಇನ್ನೇನು ಎರಡು ಮೂರು ತಿಂಗಳಲ್ಲಿ ರಾಜ್ಯ ವಿಧಾನಸಭೆಯ ಚುನಾವಣೆ ಸಮೀಪಿಸುತ್ತಿದ್ದು ಇಂತಹ ಸಂದರ್ಭದಲ್ಲಿ ಗೌರವಾನ್ವಿತರು ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳಿಗೆ ಬರೆದಿರುವ ಪತ್ರ ಹೆಚ್ಚಿನ ಮಹತ್ವ ಪಡೆದಿರುವುದರಲ್ಲಿ ಎರಡು ಮಾತಿಲ್ಲ.

ಹಾಗೆಯೇ ರಾಜ್ಯದ ಪ್ರತಿಯೊಬ್ಬ ಮತದಾರನು ತಮ್ಮ ಮತಗಳನ್ನು ಯಾವುದೇ ಕಾರಣಕ್ಕೂ ಹಣ ಇತರೆ ವಸ್ತುಗಳಿಗೆ ಮಾರಿಕೊಳ್ಳದೆ ಪ್ರಾಮಾಣಿಕ, ಸಜ್ಜನ ಅಭ್ಯರ್ಥಿಗಳನ್ನು ಆಯ್ಕೆಮಾಡಬೇಕೆಂದು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆ ರಾಜ್ಯದ ಪತ್ರಿಯೊಬ್ಬ ಮತದಾರರಲ್ಲೂ ಮನವಿ ಮಾಡಿಕೊಳ್ಳುತ್ತದೆ.

ಹಾಗೆಯೇ ಪತ್ರಿಕೆ ಬಳಗ ಗೌರವಾನ್ವಿತ ವೂಡೇ ಪಿ. ಕೃಷ್ಣರವರಿಗೆ ಈ ಮೂಲಕ ಅಭಿನಂದಿಸುತ್ತದೆ.

“ಸಂವಿಧಾನಕ್ಕೆ ಯಾವ ಚ್ಯುತಿಯೂ ಇಲ್ಲ”

ಮೇಲಿನ ಶೀರ್ಷಿಕೆಯ ಈ ಮಾತನ್ನು ನಾನು ಹೇಳುವುದಕ್ಕಿಂತ ಹಿಂದಿನ ಸಂಚಿಕೆಗಳಲ್ಲಿ ‘ಅಂಬೇಡ್ಕರ್‌ರವರ ಚಿಂತನೆಯಲ್ಲಿ ವೂಡೇ ಪಿ.’ ಎಂಬ ತಲೆಬರಹದಲ್ಲಿ ಯಥಾಪ್ರಕಾರ ವೂಡೇ ಪಿ. ಕೃಷ್ಣರವರ ಬಗ್ಗೆ ಅಂಕಣವನ್ನು ಬರೆಯುವುದರ ಜೊತೆಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮ ದಿನಾಚರಣೆಯ ಶುಭ ಸಂದರ್ಭದಲ್ಲಿ ಡಾ. ವೂಡೇ ಪಿ. ಕೃಷ್ಣರವರಿಗೆ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಯಾವ ರೀತಿ ಒಲವಿತ್ತು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಅಪಾರವಾದ ಅಭಿಮಾನ, ಜ್ಞಾನವನ್ನು ತನ್ನ ದೇಹದ, ಹೃದಯದ ಕಣ ಕಣದಲ್ಲೂ ಸದಾ ಹರಿಯುತ್ತಿರುವ ನದಿಯ ನೀರಿನಂತೆ

ಇದ್ದು ಇವರು ಹೇಳುವ ಒಂದು ಮಾತು ದೇಶದಲ್ಲಿರುವ ಪ್ರತಿಯೊಬ್ಬರು ಡಾ. ಬಿ.ಆರ್. ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನವನ್ನು ಓದಬೇಕು. ಸಂವಿಧಾನದಿಂದ ಸಿಗುವ ಪ್ರಯೋಜನಗಳು ಏನು, ಸಂವಿಧಾನವು ನಮಗೆ ಏನು ಕೊಟ್ಟಿದೆ. ಮುಂದೆ ಅದರಿಂದ ಯಾವ ರೀತಿ ನಾವು ಹೆಚ್ಚಿನ ಪ್ರಯೋಜನ ಪಡೆಯಬಹುದು ಎಂಬುದರ ಬಗ್ಗೆ ವೂಡೇಪಿರವರೆ ಬರೆದಿದ್ದ ಒಂದು ಕಿರು ಹೊತ್ತಿಗೆ "ಅಂಬೇಡ್ಕರ್ ಅನುಸಂಧಾನ" ಎಂಬ ಸಣ್ಣ ಕೃತಿಯನ್ನು ಬರೆದು, ಈ ಕಿರು ಹೊತ್ತಗೆಯನ್ನು ಪ್ರತಿಯೊಬ್ಬರು ಓದಲಿ, ಅವರಿಗೆ ತಲುಪಲಿ ಎಂಬ ಉದ್ದೇಶ ವೂಡೇಪಿರವರದಾಗಿತ್ತು. ಕಾಕತಾಳೀಯವೆಂಬಂತೆ ಇದೇ ಹೊತ್ತಿಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನವೂ ಬಂದಿತು ಹಾಗೂ ವೂಡೇಪಿರವರಿಗೆ ಅಂಬೇಡ್ಕರ್ ಮತ್ತು ಸಂವಿದಾನದ ಬಗ್ಗೆ ಅಪಾರವಾದ ಒಲವು ಇದ್ದ ಕಾರಣ ಕಳೆದ ಸಂಚಿಕೆಯಲ್ಲಿ ವೂಡೇಪಿರವರ ಕುರಿತಾದ ಅಂಕಣದ ಜೊತೆಗೆ ಅವರೇ ಬರೆದಿದ್ದ 'ಅಂಬೇಡ್ಕರ್ ಅನುಸಂಧಾನ' ಕಿರು ಕೃತಿಯನ್ನು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಒಮ್ಮೆಲೇ ಪ್ರಕಟಗೊಂಡು ಯಥಾಪ್ರಕಾರ ಆ ಸಂಚಿಕೆಯನ್ನು ಸಹ ದೇಶ ವಿದೇಶಗಳ ವಿವಿಧ ರಾಜ್ಯಗಳಲ್ಲಿರುವ ಓದುಗರಿಗೆ ಪತ್ರಿಕೆ ತಲುಪಿ ಒಂದೆರಡು ಮೂರು ದಿನಗಳ ನಂತರ ದೆಹಲಿಯ ನಮ್ಮ ಕರ್ನಾಟಕ ಭವನದಲ್ಲಿ ನಮ್ಮ 'ಆದಿಜಾಂಬವ ಜಾಗೃತಿ ಪತ್ರಿಕೆ'ಯ ಓದುಗ ಅಭಿಮಾನಿ, ಹವ್ಯಾಸಿ ಬರಹಗಾರರು, ವಿಚಾರವಂತರು, ಬುದ್ಧಿಜೀವಿಯು ಆದ ಗುಣಸಾಗರ್ ಕಿರುವಾಣಿ ಎಂಬುವರು ನವದೆಹಲಿಯಿಂದ ಅಂಬೇಡ್ಕರ್‌ರವರ ಚಿಂತನೆಯಲ್ಲಿ ವೂಡೇಪಿರವರು ಎಂಬ ಅಂಕಣದ ಜೊತೆಗೆ ಬರೆದಿದ್ದ ಸ್ವತಃ ವೂಡೇಪಿರವರೇ ಬರೆದಿದ್ದ ಅಂಬೇಡ್ಕರ್ ಅನುಸಂಧಾನವನ್ನು ಓದಿ ಅವರೇ ಬರೆದಿರುವ ಈ ಕೆಳಗಿನ ಒಂದು ಪ್ರತಿಕ್ರಿಯೆಯನ್ನು ಓದುಗರು ಓದಲೇಬೇಕು.

"ವೂಡೇಪಿಯಂತಹವರು ಇರುವಾಗ ಸಂವಿಧಾನಕ್ಕೆ ಯಾವ ಚ್ಯುತಿಯು ಬರುವುದಿಲ್ಲ"

ದೀನ ದಲಿತರ ಚಿಂತಕ, ಅಂಬೇಡ್ಕರ್‌ರವರ ಚಿಂತನೆಯಲ್ಲಿರುವ ವೂಡೇಪಿರವರಿಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನದ ಶುಭ ಸಂದರ್ಭದಲ್ಲಿ ತಮಗೂ ಕೂಡ ಈ ಲೇಖನದ ಮೂಲಕ ಅಭಿನಂದಿಸುತ್ತೇನೆ

ಪ್ರಸ್ತುತ ನಮ್ಮ ಭಾರತ ದೇಶದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳು ರಾಜಕೀಯದ ಅಧಿಕಾರವನ್ನು ಪಡೆಯಲು ಒಂದಲ್ಲ ಒಂದು ರೀತಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರು ಕೊಟ್ಟಿರುವ ಮಹಾನ್ ಗ್ರಂಥ, ಮಹಾನ್ ಶಕ್ತಿ

ಸಂವಿಧಾನದ ವಿಚಾರವಾಗಿ ಒಂದಲ್ಲ ಒಂದು ರೀತಿಯ ವ್ಯತಿರಿಕ್ತ ಹೇಳಿಕೆಗಳು, ಭಾಷಣಗಳು, ಪುಂಖಾನುಪುಂಖವಾಗಿ ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳಲ್ಲಿ ನಿರಂತರವಾಗಿ ಬರುತ್ತಿವೆ.

ಒಂದು ರಾಷ್ಟ್ರೀಯ ಪಕ್ಷದವರು ನಾವು ಸಂವಿಧಾನವನ್ನು ಬದಲಾಯಿಸುತ್ತೇವೆ, ತಿದ್ದುಪಡಿ ತರುತ್ತೇವೆ, ರದ್ದು ಮಾಡುವುದಿಲ್ಲ, ಮೀಸಲಾತಿಯನ್ನು ತೆಗೆದು ಹಾಕುವುದಿಲ್ಲ ಎಂದು ಹೇಳಿದರೆ, ಮತ್ತೊಂದು ರಾಷ್ಟ್ರೀಯ ಪಕ್ಷವು ಇದಕ್ಕೆ ಪೂರಕವಾಗಿ ದೇಶದಲ್ಲಿ ಕೋಮುವಾದಿ ಪಕ್ಷವು, ಮನುವಾದಿಗಳು ರಾಜಕೀಯ ಅಧಿಕಾರಕ್ಕೆ ಬಂದರೆ ಸಂವಿದಾನವನ್ನು ಬದಲಾಯಿಸಬಹುದು, ರದ್ದು ಮಾಡಬಹುದು, ಮೀಸಲಾತಿಯನ್ನು ಕಿತ್ತು ಹಾಕಬಹುದು ಎಂದು ಕಿರುಚಾಡುತ್ತಾ, ಕೂಗಾಡುತ್ತವೆ. ಒಟ್ಟಾರೆ ಪ್ರಸ್ತುತ ರಾಜಕೀಯ ಪಕ್ಷಗಳು ಮತ್ತು ಅದರ ಮುಖಂಡರುಗಳಿಗೆ ಸಂವಿಧಾನದ ಬಗ್ಗೆ ಸಂಪೂರ್ಣ ಅರಿವು ಇಲ್ಲದಿದ್ದರೂ ಕಳೆದು ಕೆಲವು ವರ್ಷಗಳಿಂದ ಸಂವಿಧಾನದ ವಿಚಾರವಾಗಿ ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ ಎಂದು ಹೇಳುವುದು ಎಲ್ಲಾ ರಾಜಕೀಯ ಪಕ್ಷಗಳಿಗೆ ಈ ಮೂಲಕ ಮತದಾರ ಪ್ರಭುಗಳು 2024ರ ಲೋಕಸಭಾ ಚುನಾವಣೆಯಲ್ಲಿ ತಮ್ಮ ಮತಗಳನ್ನು ಚಲಾಯಿಸುವ ಮೂಲಕ ಬುದ್ಧಿ ಕಲಿಸಬೇಕು.

ಇಲ್ಲೊಂದು ಪ್ರಶ್ನೆಯನ್ನು ಪ್ರತಿಯೊಬ್ಬರು ಅರಿಯಬೇಕು, ಕೇವಲ ರಾಜಕೀಯದ ಅಧಿಕಾರವನ್ನು ಪಡೆಯಲು ರಾಜಕೀಯ ಪಕ್ಷದ ಮುಖಂಡರುಗಳು ಯಾವ ರೀತಿ ಸಂವಿಧಾನದ ಬಗ್ಗೆ ಮಾತನಾಡುತ್ತಾರೆ. ಇವರಿಗೆ ಹೇಳೋರು, ಕೇಳೋರು ಯಾರು ಇಲ್ಲವೇ? ಸಂವಿಧಾನವನ್ನು ಬದಲಿಸುತ್ತೇವೆ, ಹಾಗೆ ಹೀಗೆ ಎಂದು ಪ್ರತಿದಿನ ಹೇಳುತ್ತಿದ್ದಾರೆ. ಮತದಾರರಿಗೆ ಒಂದು ವಿಚಾರವನ್ನು ಇಲ್ಲಿ ಪ್ರಸ್ತುತಪಡಿಸುತ್ತೇವೆ, ಯಾವುದೇ ರಾಜಕೀಯ ಪಕ್ಷದ ಮುಖಂಡರಾಗಿರಬಹುದು, ರಾಜಕೀಯ ಪಕ್ಷದವರಾಗಿರಬಹುದು ಅವರು ಸಂವಿದಾನಕ್ಕೆ ಅಪಚಾರವೆಸಗುವುದಾಗಲೀ, ಚ್ಯುತಿ ಬರುವ ಕೆಲಸವನ್ನಾಗಲೀ, ವ್ಯತಿರಿಕ್ತ ಹೇಳಿಕೆಗಳನ್ನು ಕೊಡುವುದಾಗಲೀ ಮಾಡಿದರೆ ದೇಶದ ಎಲ್ಲಾ ದಲಿತ ಸಮುದಾಯಗಳು ಸಿಡಿದೇಳುವ ಕಾಲ ಬರಬಹುದು, ಹಾಗೂ ಸಂವಿಧಾನದ ಬಗ್ಗೆ, ಅದರ ಮಹತ್ವದ ಬಗ್ಗೆ ಇತ್ತೀಚಿನ ದಿನಗಳಲ್ಲಿ ಹಲವಾರು ಬುದ್ಧಿಜೀವಿಗಳು, ಲೇಖಕರು, ಸಾಹಿತಿಗಳು, ಜಾಗೃತಿ ಮೂಡಿಸುತ್ತಿರುವುದು ಸಂತೋಷದ ವಿಚಾರ.

ಅದೇ ರೀತಿ ಭಾರತ ದೇಶದ ಮಾಧ್ಯಮ ಲೋಕದಲ್ಲೇ ಒಂದು ಜಾತಿಯ ಪತ್ರಿಕೆ ಇರುವುದೆಂದರೆ ಅದು ಆದಿಜಾಂಬವ ಜಾಗೃತಿ ಪತ್ರಿಕೆ, ಅಂತಹ ಪತ್ರಿಕೆಯಲ್ಲಿ

"ಆಡುಮುಟ್ಟದ ಸೊಪ್ಪಿಲ್ಲ, ವೂಡೇಪಿರವರ ಅಂಕಣದಲ್ಲಿ ಸಂಪಾದಕರು ವೂಡೇಪಿರವರ ಬಗ್ಗೆ ಲೇಖನವನ್ನು ಬರೆಯುತ್ತ, ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮದಿನದ ಶುಭ ಸಂದರ್ಭದಲ್ಲಿ ಡಾ. ವೂಡೇಪಿರವರು ಬರೆದಿರುವ ಅಂಬೇಡ್ಕರ್ ಅನುಸಂದಾನ ಎಂಬ ಕಿರುಹೊತ್ತಗೆಯ ಕೃತಿಯನ್ನು ಪತ್ರಿಕೆಯಲ್ಲಿ ಪ್ರಕಟಿಸಿ ಸಂವಿಧಾನದ ಬಗ್ಗೆ ಮತ್ತು ಅದರ ಸಾಧಕ ಬಾಧಕಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಟ್ಟಿದ್ದಾರೆ, ವೂಡೇಪಿಯವರಿಗೆ ತುಂಬು ಹೃದಯದ ಅಭಿನಂದನೆಗಳು.

ಇದಾದ ನಂತರ ಮತ್ತೊಬ್ಬ ಹಿರಿಯ ನಿವೃತ್ತ ಅಧಿಕಾರಿ ಹೇಳುತ್ತಾರೆ, ನಾವು ಇಂದು ಏನೇ ಆಗಿದ್ದರೂ ಅದು ಬಾಬಾಸಾಹೇಬ್ ಅಂಬೇಡ್ಕರ್‌ರವರು ಕೊಟ್ಟಿರುವ ಸಂವಿಧಾನದ ಮೂಲಕ. ನಮ್ಮಂತಹವರು ಇಂದು ಉನ್ನತ ಪದವಿಗಳನ್ನು ಅಲಂಕರಿಸುತ್ತಿದ್ದೇವೆ, ಆದರೆ ಸಂವಿಧಾನಕ್ಕೆ ಚ್ಯುತಿ ಬರುವಂತಹ ಸಂದರ್ಭದಲ್ಲಿ ಕೆಲವು ರಾಜಕೀಯ ಪಕ್ಷಗಳ ಮುಖಂಡರುಗಳು, ರಾಜಕೀಯದ ಅಧಿಕಾರವನ್ನು ಪಡೆಯುವುದಕ್ಕೋಸ್ಕರ ಇತ್ತೀಚಿನ ಕೆಲವು ದಿನಗಳಲ್ಲಿ ನಾವು ಅಧಿಕಾರಕ್ಕೆ ಬಂದಿರುವುದು ಸಂವಿಧಾನವನ್ನು ಬದಲಿಸುವುದಕ್ಕೆ, ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ಎಂದು ಹೇಳುತ್ತಿದ್ದಾರೆ, ಆದರೆ, ಇಂತಹ ಹೇಳಿಕೆಯ ವಿರುದ್ಧ ವಿಚಾರವಂತರು, ಬುದ್ಧಿಜೀವಿಗಳು, ಪ್ರಗತಿಪರ ಚಿಂತಕರು ಹೋರಾಟವನ್ನು ಮಾಡುತ್ತಿದ್ದಾರೆ, ಆದರೆ ಏನು ಸಂವಿಧಾನದ ಅಡಿಯಲ್ಲಿ ಮೀಸಲಾತಿಯ ಅಡಿಯಲ್ಲಿ ಆಳುವ ಸರ್ಕಾರದ ದಲಿತ ಮಂತ್ರಿಗಳು, ಸಂಸದರು, ಶಾಸಕರುಗಳು ಹೆಚ್ಚಿನ ಧ್ವನಿಯನ್ನು ಪಾರ್ಲಿಮೆಂಟಿನಲ್ಲಿ ಎತ್ತಲು ಸಾಧ್ಯವಾಗುತ್ತಿಲ್ಲ, ಇದಕ್ಕೆ ಎಲ್ಲಿ ನಮ್ಮ ರಾಜಕೀಯ ಅಧಿಕಾರ ಹೋಗಿ ಬಿಡುತ್ತದೋ ಎಂಬ ಭಯ ಅಂಜಿಕೆ.

ಇಂತಹ ಒಂದು ಸಂದರ್ಭದಲ್ಲಿ ಭಾರತ ದೇಶದಲ್ಲಿ ಒಂದು ಜಾತಿಯ ಹೆಸರಿನ ಪತ್ರಿಕೆ ಇದ್ದರೆ ಅದು ಒಂದು ಮಾದಿಗ ಸಮುದಾಯದ (ಆದಿಜಾಂಬವ) ಒಂದೇ ಒಂದು ಪತ್ರಿಕೆ ಅದು ಆದಿಜಾಂಬವ ಜಾಗೃತಿ ಪತ್ರಿಕೆ, ಇಂತಹ ಒಂದು ಪತ್ರಿಕೆಯಲ್ಲಿ ಕೆಲವಾರು ಬಾರಿ ಸಂವಿಧಾನವನ್ನು ಬದಲಿಸುತ್ತೇವೆ ಎಂದು ಹೇಳುವವರಿಗೆ ಇದಕ್ಕೆ ಪ್ರಚೋದನೆ ಕೊಡುವವರಿಗೆ ಹಿಗ್ಗಾ ಮುಗ್ಗಾ ಜಾಡಿಸಿ ಪತ್ರಿಕೆಯಲ್ಲಿ ಬಹಳ ಗಟ್ಟಿಯಾಗಿ ಲೇಖನಗಳನ್ನು ಬರೆದು ಸರಿಯಾದ ಉತ್ತರವನ್ನು ಕೊಟ್ಟಿರುತ್ತಾರೆ.

ಅದರಲ್ಲೂ ಇತ್ತೀಚೆಗೆ ಡಾ. ಬಿ.ಆರ್. ಅಂಬೇಡ್ಕರ್‌ರವರ 133ನೆಯ ಜನ್ಮದಿನಾಚರಣೆಯ ಪ್ರಯುಕ್ತ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಶಿಕ್ಷಣ ತಜ್ಞರು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು, ವಿಚಾರವಂತರು ಬುದ್ಧಿಜೀವಿಗಳು

ಹಾಗೂ ದೀನದಲಿತರ ಚಿಂತಕರು ಆದ ಡಾ. ವೂಡೇ ಪಿ ಕೃಷ್ಣರವರ ಲೇಖನದ ಅಂಕಣವನ್ನು ನಾನು ಓದುತ್ತಿರುವಾಗ, ಅವರ ಕುರಿತಾದ ಒಂದಿಷ್ಟು ಮಾಹಿತಿಯನ್ನು ಪತ್ರಿಕೆಯಲ್ಲಿ ಓದುತ್ತಿದ್ದಾಗ ಮುಂದುವರಿದು ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು ಬಹಳ ಜಾಣ್ಮೆಯಿಂದ, ತುಂಬಾ ಚುರುಕಾಗಿ ವೂಡೇಪಿರವರು ಜನ ಸಾಮಾನ್ಯರಿಗೆ ಸಂವಿಧಾನದ ಅರಿವಿಲ್ಲದವರಿಗೆ ಒಟ್ಟಾರೆ ಪ್ರತಿಯೊಬ್ಬರು ಸಂವಿಧಾನವನ್ನು ಓದಲಿ, ಅದರ ತಿರುಳನ್ನು ತಿಳಿಯಲಿ, ಸಂವಿಧಾನದ ಮೌಲ್ಯಗಳನ್ನು ದೇಶದ ಪ್ರತಿಯೊಬ್ಬ ಪ್ರಜೆಯು ಜೀವನದಲ್ಲಿ ಅಳವಡಿಸಿಕೊಳ್ಳಲಿ ಎಂಬ ನಿಟ್ಟಿನಲ್ಲಿ ವೂಡೇಪಿರವರು ಬರೆದಿರುವ ಅಂಬೇಡ್ಕರ್ ಅನುಸಂಧಾನ (ಡಾ. ಬಿ.ಆರ್. ಅಂಬೇಡ್ಕರ್ ವಾದಗಳು ಇಂದಿನ ದಿನಕ್ಕೆ ಎಷ್ಟು ಪ್ರಸ್ತುತ) ಎಂಬ ಒಂದು ಕಿರುಹೊತ್ತಯನ್ನು ಯಥಾವತ್ತಾಗಿ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅದನ್ನು ನಾನು ಓದಿದಾಗ ನಾನು ಒಬ್ಬ ನಿವೃತ್ತ ಹಿರಿಯ ಅಧಿಕಾರಿಯಾಗಿದ್ದರೂ ನನಗೆ ಅನ್ನಿಸಿದ್ದು ಪ್ರಸ್ತುತ ಸನ್ನಿವೇಶದಲ್ಲಿ ಪರಿಸ್ಥಿತಿಯಲ್ಲಿ ಸಂವಿಧಾನ ಭಾರತ ದೇಶದ ಪ್ರತಿಯೊಬ್ಬ ಪ್ರಜೆಗಳಿಗೆ ಎಷ್ಟು ಮುಖ್ಯವೋ ಅದೇ ರೀತಿ ಸಂವಿಧಾನದ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ಪ್ರತಿಯೊಬ್ಬ ಪ್ರಜೆಯು ಅವರ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂವಿಧಾನದಿಂದ ಸಿಗುವ ಪ್ರಯೋಜನವನ್ನು ಪಡೆಯಬೇಕು ಎಂಬ ನಿಟ್ಟಿನಲ್ಲಿ ವೂಡೇಪಿ ಕೃಷ್ಣರವರು ಪ್ರಸ್ತುತ ಪರಿಸ್ಥಿತಿಯಲ್ಲಿ ಸಂವಿಧಾನ ಉಳಿಸುವಿಕೆಗೆ ಅಷ್ಟೇ ಮುಖ್ಯರಾಗುತ್ತಾರೆ. ಇಂತಹ ಕಾಲದ ಪರಿಸ್ಥಿತಿಯಲ್ಲಿ ಬಹಳ ಬಹಳ ಎತ್ತರವಾಗಿ ನಮಗೆ ವೂಡೇಪಿರವರು ಕಾಣುತ್ತಾರೆ. ಇಂತಹ ವೂಡೇಪಿ ಕೃಷ್ಣರವಂತಹ ಹತ್ತು ಜನರು ಈ ಭಾರತ ದೇಶದಲ್ಲಿ ಇದ್ದರೆ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ಬರೆದಿರುವ ಸಂವಿಧಾನವನ್ನು ಯಾರಿಂದಲೂ ಬದಲಾಯಸಲು ಎಂದಿಗೂ ಸಾಧ್ಯವಿಲ್ಲ.

ಹೀಗಾಗಿ, ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯ ಮೂಲಕ ಶಿಕ್ಷಣ ತಜ್ಞರು ದೀನ ದಲಿತರ ಚಿಂತಕರು ಆದ ಡಾ. ವೂಡೇಪಿ ಕೃಷ್ಣರವರೆ ಸಮಸ್ತ ದಲಿತ ಸಮುದಾಯದ ಪರವಾಗಿ ಮತ್ತು ನನ್ನ ವೈಯಕ್ತಿಕವಾಗಿ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಹಾಗೆಯೇ ವೂಡೇಪಿ ಕೃಷ್ಣರವರಲ್ಲಿ ಒಂದು ಮನವಿ ಮುಂದಿನ ದಿನಗಳಲ್ಲಿ ನಿಮ್ಮ ಸೇವೆ ಶಿಕ್ಷಣ, ಸಾಮಾಜಿಕ ಸೇವೆಗಳ ಜೊತೆಗೆ ಕೆಲವು ತಿಳುವಳಿಕೆಯಿಲ್ಲದವರು ಸಂವಿಧಾನವನ್ನು ಬದಲಾಯಿಸುವ ಮಾತನಾಡುತ್ತಾರೆ. ಇಂತಹ ಕಿಡಿಗೇಡಿಗಳಿಗೆ ತಮ್ಮಂತಹವರು ಭದ್ರವಾದ ಗೋಡೆಯಾಗಿ ಆಸರೆಯಾಗಿ ನಿಲ್ಲಬೇಕು. ನಿಮ್ಮ

ಹಿಂದೆ ಲಕ್ಷಾಂತರ ಕೋಟ್ಯಂತರ ದೀನ ದಲಿತರ ದಂಡೇ ಇರುತ್ತದೆ, ಏಕೆಂದರೆ ಡಾ. ಬಿ.ಆರ್. ಅಂಬೇಡ್ಕರ್‌ರವರ ಬಗ್ಗೆ ಅಪೂರ್ವವಾದ ಅಭಿಮಾನ, ಸಂವಿಧಾನದ ಬಗ್ಗೆ, ಅಖಂಡವಾಗಿ ಪ್ರೀತಿ ಭಕ್ತಿ ಭಾವನೆ ನಿಮ್ಮಲ್ಲಿ ಮತ್ತು ದೇಹದ ನರನಾಡಿಗಳಲ್ಲಿ ಗಟ್ಟಿಯಾಗಿ ಬೇರೂರಿದೆ, ಆದ್ದರಿಂದ ನಿಮ್ಮ ಧ್ವನಿ ಯಾವಾಗಲು ಹೀಗೆ ಇರಲಿ, ಅಂಬೇಡ್ಕರವರ ಅನುಸಂಧಾನ ಇಂದಿನ ದಿನಕ್ಕೆ ಖಂಡಿತವಾಗಿಯೂ ಪ್ರತಿಯೊಬ್ಬರಿಗೂ ಪ್ರಸ್ತುತ ಒಟ್ಟಾರೆ ನಿಮ್ಮ ಸೇವೆಯ ಮನೋಭಾವಕ್ಕೆ ನಾನು ಋಣಿ" ನಮಸ್ಕಾರ.

ಈ ರೀತಿಯ ಮತ್ತೊಬ್ಬ ಹಿರಿಯ ಉನ್ನತ ನಿವೃತ್ತ ಅಧಿಕಾರಿಯೊಬ್ಬರು ವೂಡೇ ಪಿ ಕೃಷ್ಣರವರ ಬಗ್ಗೆ ಹೃದಯಕ್ಕೆ ಹತ್ತಿರವಾಗಿರುವ ವೂಡೇಪಿರವರ ಬಗ್ಗೆ ಪ್ರತಿಕ್ರಿಯೆಯನ್ನು ಕೊಟ್ಟಿರುತ್ತಾರೆ.

ಹಾಗೆಯೇ ಮತ್ತೊಬ್ಬ ಹಿರಿಯ ವಕೀಲರು, ಬೆಂಗಳೂರು, ಇವರು ಸಹ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ಓದಿ, ಅವರು ಈ ರೀತಿ ಹೇಳುತ್ತಾರೆ. ಸಂಪಾದಕರೆ ಆದಿಜಾಂಬವ ಜಾಗೃತಿ ಪತ್ರಿಕೆಯು ಕಳೆದ ಸಂಚಿಕೆಯಲ್ಲಿ ವೂಡೇಪಿ ಕೃಷ್ಣರವರ ಅಂಕಣವನ್ನು ಓದುತ್ತಿದ್ದಾಗ ಅವರ ಲೇಖನದ ಮಧ್ಯಭಾಗದಲ್ಲಿ "ಅಂಬೇಡ್ಕರ್ ಅನುಸಂಧಾನ" (ಡಾ. ಅಂಬೇಡ್ಕರ್ ವಾದಗಳು ಇಂದಿನ ದಿನಕ್ಕೆ ಎಷ್ಟು ಪ್ರಸ್ತುತ) ಎಂಬ ಲೇಖನವನ್ನು ಓದುತ್ತಾ ಓದುತ್ತಾ ನಿಜಕ್ಕೂ ಅಂಬೇಡ್ಕರ್ ಮತ್ತು ಸಂವಿಧಾನವನ್ನು ಎಲೆ ಮರೆಯ ಕಾಯಿಯಂತೆ ತೆರೆಮರೆಯಲ್ಲಿದ್ದು ಎಷ್ಟು ಪ್ರೀತಿಸುತ್ತಿದ್ದಾರೆ, ಎಷ್ಟು ಗೌರವಿಸುತ್ತಿದ್ದಾರೆ ವೂಡೇ ಪಿ. ಕೃಷ್ಣರವರು ಎಂಬುದನ್ನು ಅವರೆ ಬರೆದಿರುವ 'ಅಂಬೇಡ್ಕರ್ ಅನುಸಂಧಾನ' ಎಂಬ ಕಿರುಹೊತ್ತಗೆಯ ಸಂಪೂರ್ಣವಾಗಿ ಪತ್ರಿಕೆಯಲ್ಲಿ ಪ್ರಕಟಿಸಿರುವುದು ನಮ್ಮಂತಹ ಓದುಗರಿಗೆ ಮತ್ತು ವೈಯಕ್ತಿಕವಾಗಿ ಹೇಳುವುದಾದರೆ ನನ್ನಂತಹ ಎಷ್ಟೋ ವಕೀಲರಿಗೆ ವೂಡೇಪಿ ಕೃಷ್ಣರವರು ಒಂದು ಮಾದರಿ, ಏಕೆಂದರೆ ಕೇವಲ ಒಂದು ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳದೆ ಹತ್ತಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಬರವಣಿಗೆಯಲ್ಲಿ ತೊಡಗಿಸಿಕೊಂಡು ಅಂಬೇಡ್ಕರ್ ಮತ್ತು ಸಂವಿಧಾನದ ಬಗ್ಗೆ ಎಷ್ಟೊಂದು ಗೌರವ, ಅಭಿಮಾನವನ್ನು ಹೊಂದಿದ್ದಾರೆ, ಇಂತಹ ವೂಡೇಪಿ ಕೃಷ್ಣರವರು ಇರುವುದರಿಂದಲೇ ಇಂದು ಸಂವಿಧಾನಕ್ಕೆ ಯಾರು ಎಷ್ಟೇ ಲಾಗ ಹಾಕಿದರು ಚ್ಯುತಿ ಬರುವುದಿಲ್ಲ, ಇಂತಹ ಅಪರೂಪದ ವೂಡೇ ಪಿ ಕೃಷ್ಣ ಅಂತಹ ಮಹಾನುಭಾವರು ಇನ್ನೂ ಹತ್ತಾರು ಜನರು ತೆರೆಮರೆಯಲ್ಲಿ ಸಂವಿಧಾನವನ್ನು ಕಾಪಾಡುತ್ತಿದ್ದಾರೆ. ಈ ಮೂಲಕ ವೂಡೇಪಿರವರಿಗೆ ಅನಂತಾನಂತ ಧನ್ಯವಾದಗಳು.

ಹಾಗೆಯೇ ಅಂಬೇಡ್ಕರ್ ಅನುಸಂಧಾನಕರು ಈ ಹೊತ್ತಗೆಯನ್ನು ರಾಜ್ಯದ 30 ಜಿಲ್ಲೆಗಳಲ್ಲಿರುವವರಿಗೆ ತಲುಪಿಸುವ ವ್ಯವಸ್ಥೆ ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು ಮಾಡಿದರೆ ಬಹಳ ಒಳ್ಳೆಯದು, ಇದೊಂದು ಸಲಹೆ, ತಪ್ಪಾಗಿ ತಿಳಿಯದಿರಿ!

ಹೀಗೆ ಕಳೆದ ಸಂಚಿಕೆಯಲ್ಲಿ ವೂಡೇಪಿಯವರ ಅಂಕಣದಲ್ಲಿ ಅಂಬೇಡ್ಕರ್ ಅನುಸಂಧಾನ ಕಿರಿಹೊತ್ತಗೆಯನ್ನು ಓದಿ ಅನೇಕರು ತುಂಬು ಹೃದಯದಿಂದ ಪ್ರತಿಕ್ರಿಯೆಗಳನ್ನು ಕೊಟ್ಟಿರುತ್ತಾರೆ. ಓದುಗರು ಕೊಟ್ಟಿರುವ ಪ್ರತಿಕ್ರಿಯೆಗಳಿಗೆ ಒಬ್ಬ ಪತ್ರಿಕೆಯ ಸಂಪಾದಕನಾಗಿ ನಾವು ಬೆಲೆ ಕಟ್ಟಲು ಸಾಧ್ಯವಿಲ್ಲ. ಏಕೆಂದರೆ, ಕಳೆದ ವರ್ಷ ಜುಲೈ 2023ರಿಂದ "ಆಡು ಮುಟ್ಟದ ಸೊಪ್ಪಿಲ್ಲ - ವೂಡೇ ಪಿ. ಕೃಷ್ಣ" ಎಂಬ ಅಂಕಣವು ಪ್ರತಿ ಸಂಚಿಕೆಯಲ್ಲೂ ಪ್ರಕಟಗೊಳ್ಳುತ್ತಿದ್ದು, ಪ್ರತಿಯೊಬ್ಬ ಓದುಗರು ಅವರ ಅಂಕಣವನ್ನು ಓದಿ ಮೆಚ್ಚುಗೆಯನ್ನು ಸೂಚಿಸುವುದರ ಜೊತೆಗೆ ಪತ್ರಿಕೆಯಲ್ಲಿ ನಿರಂತರವಾಗಿ ಪ್ರಕಟಗೊಂಡ ಆಡುಮುಟ್ಟದ ಸೊಪ್ಪಿಲ್ಲ ವೂಡೇಪಿ ಕೃಷ್ಣ ರವರ ಕುರಿತಾದ ಅಂಕಣವನ್ನು ಒಂದು ಅಭಿನಂದನಾ ಗ್ರಂಥವನ್ನಾಗಿ ಪ್ರಕಟಿಸಿ ಲೋಕಾರ್ಪಣೆ ಮಾಡಿ ಎಂದು ಅನೇಕರು ನನ್ನನ್ನು ಕೇಳುತ್ತಿದ್ದಾರೆ.

ಈ ನಿಟ್ಟಿನಲ್ಲಿ ನಾನು ಈಗಾಗಲೇ ಆಡು ಮುಟ್ಟದ ಸೊಪ್ಪಿಲ್ಲ–ವೂಡೇಪಿ ಕೃಷ್ಣ ಎಂಬ ಅಭಿನಂದನಾ ಗ್ರಂಥವನ್ನು ಪ್ರಕಟಿಸಬೇಕೆಂದು ತೀರ್ಮಾನಿಸಿದ್ದು, ಜೊತೆಗೆ ವೂಡೇಪಿರವರ ಒಡನಾಡಿಗಳಲ್ಲು ಸಹ ಅವರ ಕುರಿತಾದ ಒಂದಷ್ಟು ಮಾಹಿತಿಗಳನ್ನು ಲೇಖನ ರೂಪದಲ್ಲಿ ಬರೆದು ಕೊಡಿ ಎಂದು ಕೇಳುತ್ತಿದ್ದೇವೆ. ಆದಷ್ಟು ಬೇಗನೆ ವೂಡೇಪಿರವರ ಅಭಿನಂದನಾ ಗ್ರಂಥವನ್ನು ಪ್ರಕಟಿಸಿ ಲೋಕಾರ್ಪಣೆ ಮಾಡುತ್ತೇನೆ. ವೂಡೇಪಿ ರವರ ಒಡನಾಡಿಗಳು ಅವರ ಅಭಿಮಾನಿಗಳು ಅವರ ಕುರಿತಾದ ಒಂದಷ್ಟು ಮಾಹಿತಿಗಳನ್ನು ಬರೆದು ನಮ್ಮ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ.*

---

* ಈ ಆಶಯ ಮುಂದಿನ ಎಪ್ಪತ್ತರ ಸಂದರ್ಭದಲ್ಲಿ ಆಗಲೆಂದು ಆಶಿಸುತ್ತೇನೆ. (ಲೇ.)

ವೂಡೇ ಪಿ. ಅವರ ಪತ್ನಿ
ಶ್ರೀಮತಿ ಸವಿತಾ

ಸಾಮಾನ್ಯವಾಗಿ ಸಭೆ ಸಮಾರಂಭಗಳಲ್ಲಿ, ಮಹಿಳಾ ಕಾರ್ಯಕ್ರಮಗಳಲ್ಲಿ ಲೋಕರೂಢಿಯಾಗಿ ಕೇಳಿ ಬರುವ ಒಂದು ನಿರಂತರವಾದ ಮಾತು ಪ್ರತಿಯೊಬ್ಬ ಪುರುಷನ ಸಾಧನೆ, ಕೀರ್ತಿ, ಗೌರವದ ಹಿಂದೆ ಮಹಿಳೆಯ ಪಾತ್ರ ಬಹಳ ಮಹತ್ವದ್ದು ಮತ್ತು ಮುಖ್ಯವಾದ ಪಾತ್ರ ವಹಿಸುತ್ತದೆ ಎಂಬುದು. ಶ್ರೀಮತಿ ಸವಿತಾ ಮೇಡಂರವರು ವೂಡೇಪಿ ಕೃಷ್ಣರವರ ಸಾಧನೆ ಗೌರವದ ಹಿಂದೆ ಗಟ್ಟಿಯಾಗಿ ಇದ್ದರೂ ಇವರು ಸಹ ವೂಡೇಪಿರವರಂತೆ ಸಮಾಜದ ಮುಖ್ಯ ವಾಹಿನಿಯಲ್ಲಿ ವೂಡೇಪಿಯವರಂತೆ ಒಬ್ಬ ಮಹಿಳೆ ಯಾಗಿ ದುಡಿಯುತ್ತಿದ್ದಾರೆ.

ಇದರ ಅರ್ಥ ಕೇವಲ ಒಬ್ಬ ಹೆಣ್ಣು ಮಗಳು ಮದುವೆಯಾಗಿ ತನ್ನ ಗಂಡನ ಮನೆ ಸೇರಿದ ನಂತರ

ತನ್ನ ಗಂಡನ ಎಲ್ಲಾ ಆಗು ಹೋಗುಗಳು, ಕಷ್ಟ ಸುಖಗಳು, ಹೀಗೆ ಹತ್ತು ಹಲವು ರೀತಿಯ ಕೆಲಸ ಕಾರ್ಯಗಳ ಜೊತೆಗಿದ್ದು ಅವರ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡುವುದು ಸಾಮಾನ್ಯ ಸಂಗತಿ. ಲೋಕರೂಢಿಯಾಗಿ ಹೆಣ್ಣುಮಕ್ಕಳು ಮದುವೆಯಾಗಿ ಗಂಡನ ಮನೆಗೆ ಹೋಗಿ ನಾಲ್ಕು ಗೋಡೆಗಳ ಮಧ್ಯೆ ಗಂಡ, ಅತ್ತೆ, ಮಾವ ಇನ್ನಿತರ ಕುಟುಂಬದ ಸೇವೆಯನ್ನು ಮಾಡಿಕೊಂಡಿರಬೇಕೆಂಬುದು ಒಂದು ಪ್ರತೀತಿ, ಆದರೆ, ನಮ್ಮ ವೂಡೇ ಪಿ. ಕೃಷ್ಣರವರ ಪತ್ನಿಯವರು: "ನಾನು ನನ್ನ ಪತಿಯ ಶ್ರೇಯೋಭಿವೃದ್ಧಿಗಾಗಿ, ಅವರ ಎಲ್ಲಾ ಬೇಕು ಬೇಡಗಳನ್ನು ಅವರ ಏಳಿಗೆಯನ್ನು ಸಮಾಜದಲ್ಲಿ ಗೌರವವನ್ನು ಸಂಪಾದಿಸಲು ಅವರ ಜೊತೆಗೆ ಸದಾ ನಾನು ಇದ್ದು ಅವರಿಗೆ ಎಲ್ಲಾ ರೀತಿಯ ನನ್ನ ಸಹಕಾರ, ಪ್ರೀತಿ ವಿಶ್ವಾಸವು ಇದ್ದೇ ಇರುತ್ತದೆ, ಅದು ನನ್ನ ಸೇವೆ, ನನ್ನ ಧರ್ಮವೂ ಹೌದು. ಆದರೆ ನಾನು ಸಹ ಒಬ್ಬ ಹೆಣ್ಣಾಗಿ ಕೇವಲ ಗಂಡನ ಏಳಿಗೆ ಮತ್ತು ಹೆಸರಿನಿಂದ ನಾನು ವೂಡೇಪಿ ಕೃಷ್ಣರವರ ಪತ್ನಿ ಎಂಬುವುದಕ್ಕಿಂತ ನಾನು ಸಮಾಜದ ಮುಖ್ಯವಾಹಿನಿಯಲ್ಲಿ ಪತಿಯವರಂತೆ ನಾನು ಏನಾದರೂ ಅಲ್ಪ ಸ್ವಲ್ಪ ಸೇವೆಯನ್ನು ಅದು ಯಾವುದೇ ಕ್ಷೇತ್ರವಾಗಿರಬಹುದು, ಶಿಕ್ಷಣ ಕ್ಷೇತ್ರಗಳಾಗಿರಬಹುದು, ಸಾಮಾಜಿಕ ಕ್ಷೇತ್ರವಾಗಿರಬಹುದು, ಧಾರ್ಮಿಕ ಕ್ಷೇತ್ರವಾಗಿರಬಹುದು ಅಥವಾ ದೀನ ದಲಿತರ ಕೆಲಸವಾಗಿರಬಹುದು ಏನಾದರೂ ಅಲ್ಪ ಸ್ವಲ್ಪ ಸೇವೆಯನ್ನು ಮಾಡುತ್ತಾ ಇದ್ದಾಗ ಮಾತ್ರ ನಾನು ವೂಡೇಪಿ ಕೃಷ್ಣರವರ ಪತ್ನಿಯಾಗಿದ್ದಕ್ಕೂ ಸಾರ್ಥಕವಾಗುತ್ತದೆ. ಅದು ಬಿಟ್ಟು ಪುರುಷನ ಹಿಂದೆ ಪತ್ನಿಯ ಶ್ರಮ, ಸಹಕಾರ ಇದೆ ಎಂದು ಹೇಳುತ್ತಾ ಹೋದರೆ, ನಾವು ಎಂದೂ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಿಲ್ಲ. ಮಹಿಳೆಯ ಸಾಧನೆ ಕೇವಲ ಪುರುಷನ ಹಿಂದೆ ಮಹಿಳೆಯೊಬ್ಬರು ಇದ್ದಾಳೆ ಎಂಬ ಅರ್ಥಕ್ಕೆ ಪದಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಹೀಗಾಗಿ ನಾನು ಸಹ ನನ್ನ ಪತಿಯವರ ಎಲ್ಲಾ ಬೆಳವಣಿಗೆಯ ವಿಚಾರದಲ್ಲಿ ಅವರಿಗೆ ನನ್ನ ಸಂಪೂರ್ಣ ಸಹಕಾರ ಇದ್ದೇ ಇರುತ್ತದೆ, ಹಾಗೆಯೇ ನನಗೂ ವೂಡೇಪಿ ಕೃಷ್ಣರವರ ಪತ್ನಿಯಾಗಿರುವುದು ಹೆಮ್ಮೆ ಹಾಗೂ ನಾನು ನನ್ನ ಪತಿಯ ಜೊತೆಯಲ್ಲಿಯೇ ಸಮಾಜ ಸೇವೆ ಮಾಡುತ್ತಾ ಸಮಾಜದ ಮುಖ್ಯವಾಹಿನಿಯಲ್ಲಿ ಒಬ್ಬ ಮಹಿಳೆಯಾಗಿ ಸಮಾಜದಲ್ಲಿ ನನ್ನ ಕೈಲಾದ ಮಟ್ಟಿಗೆ ಅಲ್ಪಸ್ವಲ್ಪ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೇನೆ. ಮುಂದೆಯೂ ಮಾಡುತ್ತೇನೆ ಇದಕ್ಕೆ ಸ್ಫೂರ್ತಿ ನನ್ನ ಪತಿ ನಾಡೋಜ ವೂಡೇಪಿ ಕೃಷ್ಣರವರು ಎಂದು ಹೇಳಲು ನನಗೆ ಅತ್ಯಂತ ಹೆಮ್ಮೆಯೆನಿಸುತ್ತದೆ. ಹೀಗಾಗಿಯೇ ನನ್ನ ಜೀವನದ ಬದುಕಿನಲ್ಲಿ ಒಬ್ಬ ಪುರುಷನ ಹಿಂದೆ ಒಬ್ಬ ಮಹಿಳೆಯೊಬ್ಬಳು ಇದ್ದಾಳೆ ಎನ್ನುವುದಕ್ಕಿಂತ

ಒಬ್ಬ ಮಹಿಳೆಯ ಹಿಂದೆ ಒಬ್ಬ ಪುರುಷನಿದ್ದಾನೆ ಎಂಬುದಕ್ಕೆ ನಾನೇ ಒಳ್ಳೆಯ ಉದಾಹರಣೆ ಎಂದು ಹೇಳಲು ಬಹಳ ಹೆಮ್ಮೆಯೆನಿಸುತ್ತದೆ."

ಅವರು ಮುಂದುವರೆದು ವೂಡೇಪಿರವರ ಪತ್ನಿ ಹೇಳುವಂತೆ "ನನ್ನ ಪತಿ ಕೃಷ್ಣರವರು ಇತರರಿಗಿಂತ ವಿಭಿನ್ನ ಸ್ವಭಾವದವರು, ಗುಣದವರು ಎನ್ನುವುದನ್ನು ಬಿಟ್ಟರೆ ಬೇರೆ ಯಾವುದು ನನಗೆ ಅವರ ಬಗ್ಗೆ ಅಷ್ಟಾಗಿ ಗೊತ್ತಿರಲಿಲ್ಲ, ಯಾವಾಗ ನಾನು ಅವರನ್ನು ಮದುವೆಯಾದೆನೋ ಅನಂತರ ಇವರ ವ್ಯಕ್ತಿತ್ವ ಇವರ ಗುಣ, ಇವರ ಮೃದು ಮನಸ್ಸು ಹೇಗಿದೆ, ಇವರ ಸ್ವಭಾವ ಹೇಗಿದೆ ಎಂಬುದನ್ನು ನಾನು ಮದುವೆಯಾದ ನಂತರ ನಿಧಾನವಾಗಿ, ಹಂತಹಂತವಾಗಿ ತಿಳಿಯುತ್ತಾ ಹೋಯಿತು. ಹಾಗೆಯೇ ನನ್ನ ಪತಿಯ ಬಗ್ಗೆ ಇದ್ದ ಗೌರವ, ಪ್ರೀತಿ, ವಿಶ್ವಾಸ ದಿನೇ ದಿನೇ ಹೆಚ್ಚುತ್ತಲೇ ಹೋಯಿತು, ಜೊತೆಗೆ ವಿವಾಹದ ನಂತರ ನನ್ನ ಪತಿಯವರ ಸಹಕಾರ, ಮಾರ್ಗದರ್ಶನದಿಂದ ನಾನು ಸ್ನಾತಕೋತ್ತರ ಪದವಿಯನ್ನು ಪಡೆಯಲು ಸಾಧ್ಯವಾಯಿತು. ಇಲ್ಲಿಯೂ ಸಹ ನನ್ನ ಮುಂದಿನ ಸ್ನಾತಕೋತ್ತರ ಪದವಿ ಪಡೆಯಲು ನನ್ನ ಪತಿಯವರ ಸಹಕಾರ, ಪ್ರೋತ್ಸಾಹ ಹೆಚ್ಚಿನದಾಗಿತ್ತು. ಇವರ ಸಹಕಾರದಿಂದಲೇ ನಾನು ಮದುವೆಯ ನಂತರ, ಸ್ನಾತಕೋತ್ತರ ಪದವಿಯನ್ನು ಪಡೆಯಲು ಸಾಧ್ಯವಾಯಿತು. ಕೇವಲ ಉನ್ನತ ಮಟ್ಟದ ಶಿಕ್ಷಣವನ್ನು ಪಡೆದರೆ ಸಾಲದು, ಪಡೆದ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ನಾಲ್ಕಾರು ಜನರಿಗೆ ಉಪಯೋಗವಾಗುವಂತೆ ಏನಾದರೂ ಮಾಡು ಎಂದು ನನ್ನ ಪತಿಯವರು ಆಗಾಗ್ಗೆ ಹೇಳುತ್ತಿದ್ದರು, ಹೀಗಿರುವಾಗ ಒಮ್ಮೆ ನನ್ನ ಪತಿಯವರೇ ನನ್ನೊಂದಿಗೆ ಪ್ರಸ್ತಾಪಮಾಡಿ ಹೇಗೂ ನಿನಗೆ ಒಳ್ಳೆಯ ಶಿಕ್ಷಣವಿದೆ, ನಿನಗೆ ಏನನ್ನಾದರೂ ಸಾಧಿಸುವ ಛಲ ನಿನ್ನಲಿದೆ, ಒಬ್ಬ ಮಹಿಳಾ ಉದ್ಯಮಿಯಾಗಿ ಏನನ್ನಾದರೂ ಮಾಡು ಎಂದು ಹೇಳಿ ನನ್ನಲ್ಲಿ ಆತ್ಮಸ್ಥೈರ್ಯ, ಪ್ರೀತಿ ವಿಶ್ವಾಸ ತುಂಬಿದರು. ಈ ನಿಟ್ಟಿನಲ್ಲಿ ನನ್ನ ಪತಿಯ ಸಹಕಾರ, ಮಾರ್ಗದರ್ಶನದಲ್ಲಿ ನಾನು ಒಬ್ಬ ಮಹಿಳಾ ಉದ್ಯಮಿಯಾಗುವ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಒಂದು ಸಣ್ಣ ಉದ್ಯಮವೊಂದನ್ನು ಸ್ಥಾಪಿಸಿ ಇದರ ಉಸ್ತುವಾರಿಯನ್ನೂ ಜವಾಬ್ದಾರಿಯನ್ನೂ ನೋಡಿಕೊಳ್ಳುವಂತೆ ಹೇಳಿದ್ದು ಇಂದು ಒಂದು ಉದ್ಯಮ ಸಂಸ್ಥೆಯು ಚೆನ್ನಾಗಿ ನಡೆಯುತ್ತಿದ್ದು ಇದರಿಂದ ಹಲವರಿಗೆ ಒಳ್ಳೆಯದಾಗಿರುತ್ತದೆ ಎಂದು ಹೇಳುತ್ತಾ ಇವೆಲ್ಲದಕ್ಕೂ ನನ್ನ ಹಿಂದಿರುವ ಶಕ್ತಿ ನನ್ನ ಪತಿ" ಎಂದು ತುಂಬು ಹೃದಯದಿಂದ ಶ್ರೀಮತಿ ಸವಿತಾರವರು ಹೇಳಿಕೊಳ್ಳುತ್ತಾರೆ.

"ಇದರ ಜೊತೆಗೆ ಶಾರದಾ ಮಠದವರು ನಡೆಸುವ ನಿವೇದಿತಾ ಶಾಲೆಯಲ್ಲಿ ನಾನು ಸ್ವಯಂ ಸೇವಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಲು ಸಹ ನನ್ನ ಪತಿ ವೂಡೇಪಿ ಕೃಷ್ಣರವರು ಹೇಳಿದ್ದು, ಪ್ರೋತ್ಸಾಹಿಸಿದ್ದು ನಿಜವಾಗಿಯೂ ನನಗೆ ನಾನು ಸಹ ಒಂದು ಸಂಸ್ಥೆಯಲ್ಲಿ ಸ್ವಯಂಸೇವಕಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿರುವುದು ನನ್ನ ಜೀವನದ ಅತ್ಯಂತ ಸಂತೋಷದ ದಿನಗಳಾಗಿ ಕಳೆಯುತ್ತಿದ್ದೇನೆ. ಆ ಸ್ವಯಂ ಸೇವಕಿ ಶಿಕ್ಷಕಿಯ ಕೆಲಸ ಇಂದು ನಾನು ಒಬ್ಬ ಮಹಿಳೆಯಾಗಿ, ನನ್ನನ್ನು ನಾನು ಸಮಾಜದ ಮುಖ್ಯವಾಹಿನಿಯಲ್ಲಿ ಗುರ್ತಿಸಿ ಕೊಳ್ಳುತ್ತಿರುವುದಕ್ಕೆ ಕಾರಣ ನನ್ನ ಪತಿ ವೂಡೇಪಿ ಕೃಷ್ಣರವರು ಎಷ್ಟೇ ಆಗಲಿ ನನ್ನ ಪತಿಯವರು ಗಾಂಧೀಜಿಯವರ ಮತ್ತು ಡಾ. ಬಿ.ಆರ್. ಅಂಬೇಡ್ಕರ್‌ರವರ ಅನುಯಾಯಿಯಲ್ಲವೆ?"

ಇನ್ನು ತಮ್ಮ ಪತಿಯವರ ಬಗ್ಗೆ ವೂಡೇಪಿಯವರ ಪತ್ನಿ ಶ್ರೀಮತಿ ಸವಿತಾ ರವರು ತುಂಬು ಹೃದಯದಿಂದ ಅಂತರಾಳದಿಂದ ಮನದಾಳದಿಂದ ಹೇಳುತ್ತಾರೆ, "ನನ್ನ ಪತಿಯವರು ಯಾವುದೇ ರೀತಿಯ ನಾಟಕೀಯವಿಲ್ಲದೆ, ಹಿಂದೆ ಮುಂದೆ ಮಾತನಾಡುವ ವ್ಯಕ್ತಿಯಲ್ಲ, ಏನು ಹೇಳಬೇಕೋ, ಏನು ಮಾಡಬೇಕೋ, ಯಾವ ಸಂದರ್ಭದಲ್ಲಿ ಏನು ಮಾಡಬೇಕು, ಏನು ಹೇಳಬೇಕು ಎಂಬುದನ್ನು ನೇರ ವಾಗಿ ಹೇಳುವ ವ್ಯಕ್ತಿ, ನನ್ನ ಪತಿ ಅತ್ಯಂತ ಸರಳ ವ್ಯಕ್ತಿ, ಸರಳ ಸ್ವಭಾವದವರು, ಹೀಗಾಗಿಯೇ ಸಮಾಜದಲ್ಲಿ ನನ್ನ ಪತಿಯನ್ನು ಹೇಗೆ ನೋಡುತ್ತಾರೋ, ಹೇಗೆ ಕಾಣುತ್ತಾರೋ ಅದೇ ಅವರ ಮೂಲ ವ್ಯಕ್ತಿತ್ವ. ಒಳಗೊಂದು, ಹೊರಗೊಂದು, ಮುಖಸ್ತುತಿಗೋಸ್ಕರ ಅವರಿವರನ್ನು ಮೆಚ್ಚಿಸಲು, ಎಂದು ಮಾತನಾಡುವ ಜಾಯಮಾನದವರಲ್ಲ ಸಾಮಾನ್ಯವಾಗಿ ಅವರು ತುಂಬಾನೆ ಸೌಮ್ಯ ಸ್ವಭಾವದವರು, ಉಡುಗೆ ತೊಡುಗೆ ಆಹಾರ ಪದ್ಧತಿ, ನಡೆವಳಿಕೆ ಪ್ರತಿಯೊಂದರಲ್ಲೂ ಅವರು ಬಹಳ ಸರಳ, ಸಾಧಾರಣ ವ್ಯಕ್ತಿ, ಒಬ್ಬ ಮನುಷ್ಯ ಬದುಕಿಗೆ ಜೀವನಕ್ಕೆ ಏನು ಬೇಕೋ ಎಷ್ಟು ಬೇಕೋ ಅಷ್ಟೇ ಸಾಕು, ಅದಕ್ಕಿಂತ ಹೆಚ್ಚಿನದು ಬೇಡ, ಅವರಿಗೆ ವಿವಿಧ ರೀತಿಯ ಆಸೆ ಇಲ್ಲ, ಅಷ್ಟೇ ಅಲ್ಲ ಅವರ ಕೈಗೆ ಒಂದೊಳ್ಳೆಯ ಗಡಿಯಾರವನ್ನು ಕಟ್ಟಿಕೊಳ್ಳುವುದಿಲ್ಲ. ಹೀಗಾಗಿ ಅವರಿಗೆ ಯಾವ ವಸ್ತು ಅಗತ್ಯವಿದೆಯೊ ಅಂತಹ ವಸ್ತುಗಳನ್ನು ಮಾತ್ರ ಕೊಂಡುಕೊಳ್ಳುತ್ತಾರೆ, ಅನಗತ್ಯವಾಗಿ ಕೈಗೆ ಸಿಕ್ಕಿದನ್ನು ಖರೀದಿಸಲು ಎಂದು ಇಷ್ಟಪಟ್ಟವರಲ್ಲ."

"ಹಾಗೆಯೇ ನಾನು ಕಂಡಂತೆ ಇವರ ಉಡುಗೆ ಖಾದಿ ಬಟ್ಟೆ ಬಿಟ್ಟರೆ ಬೇರೆ ಯಾವುದೇ ರೀತಿಯ ಬಟ್ಟೆಗಳನ್ನು ಧರಿಸುವುದಿಲ್ಲ, ಜೊತೆಗೆ ವಿವಿಧ ಸಂಸ್ಥೆಗಳಲ್ಲಿ, ಕಛೇರಿಗಳಲ್ಲಿ ಸ್ವಯಂ ಪ್ರೀತಿಯಿಂದ ನಿಃಸ್ವಾರ್ಥತೆಯಿಂದ ದುಡಿಯುತ್ತಿದ್ದರೂ,

ಎಷ್ಟೇ ಕೆಲಸ ಕಾರ್ಯಗಳು ಇದ್ದರೂ ಆ ಕೆಲಸಗಳನ್ನು ಅಲ್ಲಿಯೇ ಮುಗಿಸಿ ಮನೆಗೆ ಬರುವುದು ಇವರ ಪದ್ಧತಿ. ಇವರು ಎಂದು ಕಛೇರಿಯ ಕೆಲಸ ಕಾರ್ಯಗಳನ್ನ ಮನೆಗೆ ತಂದು ಕೆಲಸದ ಒತ್ತಡವನ್ನು ಮನೆಯವರ ಮೇಲೆ ತೋರಿಸಿದವರಲ್ಲ, ಕುಟುಂಬದವರ ಮೇಲೆ ಒತ್ತಡವನ್ನು ಹೇರಿದವರಲ್ಲಿ ಹೀಗಾಗಿಯೇ ಮನೆಯಲ್ಲಿ ಎಂದೂ ನೆಮ್ಮದಿಯನ್ನು ಕೆಡಿಸಿಕೊಂಡವರಲ್ಲ."

"ನಾನು ನನ್ನ ಪತಿಯವರನ್ನು ನೋಡಿದಂತೆ ಮದುವೆಯಾದಾಗಿನಿಂದ ಹಿಡಿದು ಇವತ್ತಿನ ತನಕ ಯಾರೇ ಆಗಿರಲಿ, ಯಾವುದೇ ಸಮುದಾಯದವರಾಗಲಿ ಯಾವುದೇ ಕೆಲಸವಾಗಿರಲು ಆರ್ಥಿಕವಾಗಿ ಕಷ್ಟದಿಂದ ಬಳಲುತ್ತಿರುವವರು ಬಂದು ಇವರ ಹತ್ತಿರ ಕಷ್ಟವಿದೆ ಎಂದು ಹೇಳಿ ಸಹಾಯವನ್ನು ಕೇಳಿದಾಗ ಯಾರಿಗೂ ನಿರಾಶೆಗೊಳಿಸಿಲ್ಲ, ತಮ್ಮ ಕೈಲಾದ ಮಟ್ಟಿಗೆ ಸಹಾಯ ಮಾಡುತ್ತಿದ್ದಾರೆ. ಹೀಗಾಗಿಯೆ, ಇಂದು ಅನೇಕ ಬಡಮಕ್ಕಳಿಗೆ, ದೀನ ದಲಿತರ ಬಡಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವಲ್ಲಿ ಎಲೆ ಮರೆಯ ಕಾಯಿಯಂತೆ ದುಡಿಯುತ್ತಿದ್ದಾರೆ."

"ಹಾಗೆಯೇ ಓದಿನ ಮೇಲೆ, ಶಿಕ್ಷಣದ ಬಗ್ಗೆ ಅಪಾರವಾದ ಗೌರವ, ಪ್ರೀತಿ, ವಿಶ್ವಾಸ, ಬರೆಹಗಾರರನ್ನು, ಸಾಹಿತಿಗಳನ್ನು ಲೇಖಕರನ್ನು, ಪತ್ರಕರ್ತರನ್ನು ಅತಿ ಹೆಚ್ಚಿನ ಗೌರವದಿಂದ ಕಾಣುವ ವ್ಯಕ್ತಿ ನನ್ನ ಪತಿಯವರು."

"ನನ್ನ ವಿವಾಹವಾಗಿದ್ದು 1991ರಲ್ಲಿ. ಅಂದಿನಿಂದ ಇಂದಿನ ತನಕ ನಮ್ಮ ಬದುಕು, ನಮ್ಮ ಜೀವನ ತುಂಬಾ ಸಂತೋಷವಾಗಿದೆ, ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ ವೂಡೇಪಿ ಕೃಷ್ಣರವರಂಥ ಪತಿಯನ್ನು ಪಡೆದಿರುವುದು ನನ್ನ ಸೌಭಾಗ್ಯ, ಎಷ್ಟೋ ಜನ್ಮದ ಪುಣ್ಯದ ಫಲದಿಂದ ಇಂದು ಅಂತಹ ಪತಿಯನ್ನು ಪಡೆದಿರುವುದಕ್ಕೆ ನಾನೇ ಧನ್ಯ" ಎಂದು ಬಹಳ ವಿನಮ್ರವಾಗಿ ಹೇಳುತ್ತಾರೆ ವೂಡೇಪಿರವರ ಪತ್ನಿ ಶ್ರೀಮತಿ ಸವಿತಾ ಮೇಡಂರವರು.

ಒಟ್ಟಾರೆ ನಮ್ಮ 'ಆದಿಜಾಂಬವ ಜಾಗೃತಿ ಪತ್ರಿಕೆ'ಯಲ್ಲಿ ಇಂತಹ ಒಬ್ಬ ಮಹಾನ್ ಸಾಧಕರ ಮತ್ತು ಅವರ ಕುಟುಂಬದವರ ಕುರಿತು ಪತ್ರಿಕೆಯಲ್ಲಿ ಕಳೆದ ಒಂದು ವರ್ಷದಿಂದ ಅಂಕಣದ ರೂಪದಲ್ಲಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಪ್ರಕಟಗೊಂಡು ಬರುತ್ತಿದೆ. ದೇಶ, ವಿದೇಶಗಳಲ್ಲಿಯೂ ಪತ್ರಿಕೆಯ ಓದುಗರು ಸಹ ವೂಡೇಪಿ ಅವರ ಅಂಕಣವನ್ನು ಓದಿ ಬಹಳವಾಗಿ ಮೆಚ್ಚಿರುತ್ತಾರೆ.

ಇಂತಹ ಕುಟುಂಬದ ವ್ಯಕ್ತಿಯ ಕುರಿತಾದ ಅಂಕಣವನ್ನು ನಾನು ಬರೆಯುತ್ತಿದ್ದೇನೆ ಎಂದರೆ ಒಂದು ಕಡೆ ಸಂತೋಷ ಮತ್ತೊಂದು ಕಡೆ ಭಯ.

ಏಕೆಂದರೆ, ವೂಡೇಪಿ ಕೃಷ್ಣ ಮತ್ತು ಅವರ ಮನೆತನ ಒಂದು ರೀತಿಯಲ್ಲಿ ಆಲದ ಮರ ಇದ್ದಹಾಗೆ. ಅಂತಹ ಮರದ ಬಗ್ಗೆ ನಾನು ಏನು ಬರೆದು ಬಿಡುತ್ತೇನೋ, ಎಲ್ಲಿ ವೂಡೇಪಿಯವರು ನನಗೆ ಬಯ್ಯುತ್ತಾರೋ ಎಂಬ ಭಯ ನನಗೆ ಸದಾ ಕಾಡುತ್ತಿರುತ್ತದೆ.

ಆದರೂ ಪ್ರತಿ ಸಂಚಿಕೆಯನ್ನು ವೂಡೇಪಿಯವರು ಓದಿ ತುಂಬು ಹೃದಯದಿಂದ ಗಂಗಾಧರ್ ತುಂಬಾ ಚೆನ್ನಾಗಿ ಬರೆಯುತ್ತಿದ್ದೀರಿ, ಬರೆಯಿರಿ, ಎಂದು ಪ್ರತಿ ಸಂಚಿಕೆ ಅವರ ಮನೆಗೆ ತಲುಪಿದ ತಕ್ಷಣ ಹೇಳುವ ಈ ಮಾತು ನನಗೆ ಆತ್ಮಸ್ಥೈರ್ಯ ತುಂಬುತ್ತಾ ವೂಡೇಪಿಯವರ ಅಂಕಣವನ್ನು ಬರೆಯಲು ಕುಳಿತಾಗ ಗೊತ್ತಿದ್ದು, ಗೊತ್ತಿಲ್ಲದೆ ಬರೆದುಬಿಡುತ್ತೇನೆ. ಇದರಿಂದ ಓದುಗರ ಪ್ರೀತಿ ದಿನೇ ದಿನೇ ಹೆಚ್ಚಾಗುತ್ತಿದೆ.

"ವೂಡೇ ಪ್ರತಿಷ್ಠಾನದ ಸ್ಥಾಪನೆ"



ವೂಡೇಪಿ ಕೃಷ್ಣರವರ ಮನೆತನದ ವಂಶವೃಕ್ಷವನ್ನು ಒಮ್ಮೆ ನಾವು ನೋಡಿದಾಗ ನಮ್ಮ ಸಮಾಜದಲ್ಲಿ ಇಂತಹ ಒಂದು ಸುಸಂಸ್ಕೃತವಾದ ಕುಟುಂಬವು ಇತ್ತು. ಇದೆ, ಮುಂದೆಯೂ ಇರುತ್ತದೆ ಎಂಬ ಮಾತು ನಮಗೆ ನೆನಪಿಗೆ ಬರುತ್ತದೆ. ಒಮ್ಮೆ ವೂಡೇಪಿರವರ ಕುಟುಂಬದ ವಂಶವೃಕ್ಷದ ಬಗ್ಗೆ ಕಣ್ಣಾಡಿಸಿದೆ. ಅವರ ಕುಟುಂಬ ವಂಶವೃಕ್ಷವನ್ನು ನೋಡುತ್ತಾ ಓದುತ್ತಾ ಹೋದಂತೆ ದೇಶ ವಿದೇಶಗಳಲಿದ್ದ, ಇರುವ ಯಾವ ಮಹಾರಾಜರ ಮನೆತನಕ್ಕೂ ಕಮ್ಮಿ ಇಲ್ಲದಂತಹ ಮನೆತನ ವೂಡೇಪಿರವರದು. 1807ರಲ್ಲಿ ಬೆಂಗಳೂರಿಗೆ ವಲಸೆ ಬಂದವರು ಈ ವೂಡೇಪಿ ಕುಟುಂಬದವರು, ಸರಳವಾದ ಪದಗಳಲ್ಲಿ

ಹೇಳುವುದಾದರೆ ಈ ಕುಟುಂಬವು ಆ ಕಾಲದಿಂದಲೂ ಇವತ್ತಿನ ವರೆವಿಗೂ ಕುಟುಂಬದ ಒಬ್ಬೊಬ್ಬ ಸದಸ್ಯರು, ಒಂದೊಂದು ಕ್ಷೇತ್ರದಲ್ಲಿ ಪ್ರವೀಣರಾಗಿದ್ದಾರೆ, ನುರಿತವರಾಗಿದ್ದಾರೆ. ಹೇಳಿ ಕೇಳಿ ವೂಡೇಪಿ ಕುಟುಂಬವು ಒಂದು ರೀತಿಯಲ್ಲಿ ರಾಜ ಮನೆತನದವರು ಎಂಬ ಭಾವನೆ ಅವರ ವಂಶ ವೃಕ್ಷವನ್ನು ನೋಡಿದಾಗ ನಮಗೆ ತಿಳಿಯುತ್ತದೆ. ಈ ಕುಟುಂಬವು ಕೇವಲ ಹಣ, ಅಂತಸ್ತು, ಅಧಿಕಾರಕ್ಕಾಗಿ ಎಂದೂ ಬದುಕಿದವರಲ್ಲ, ಇವರಿಗೆ ದೇವರು ಎಲ್ಲವನ್ನು ಕೊಟ್ಟಿದ್ದಾನೆ. ಅದನ್ನು ಸ್ವಾರ್ಥಕ್ಕಾಗಿ ಬಳಸದೆ ಸಮಾಜಮುಖಿ ಕೆಲಸಕಾರ್ಯಗಳಲ್ಲಿ ದೀನ ದಲಿತರ ಅಭಿವೃದ್ಧಿಗಾಗಿ ಜಾಗೃತಿಗಾಗಿ, ಶಿಕ್ಷಣಕ್ಕಾಗಿ, ಕಲೆ, ಸಾಹಿತ್ಯಕ್ಕಾಗಿ, ತಮ್ಮ ಕೈಲಾದ ಮಟ್ಟಿಗೆ ಸ್ವಂತಿಕೆಯಿಂದ ಸಮಾಜಮುಖಿ ಕೆಲಸವನ್ನು ವೂಡೇಪಿರವರ ಕುಟುಂಬವು ಅಂದಿನಿಂದ ಇವತ್ತಿನ ವರೆವಿಗೂ ಮಾಡಿಕೊಂಡು ಬರುತ್ತಿರುವುದು ಸಮ ಸಮಾಜದಲ್ಲಿರುವ ಪ್ರತಿಯೊಬ್ಬರು ಹಮ್ಮೆ ಪಡುವ ವಿಚಾರವಾಗಿದೆ.

ವೂಡೇಪಿ ಕುಟುಂಬದವರು ಅವರಿವರು ಮೆಚ್ಚುವುದಕ್ಕಾಗಲಿ, ಮೆಚ್ಚಿಸಿಕೊಳ್ಳು ವುದಕ್ಕಾಗಲಿ, ಪ್ರಶಂಸನೀಯ ಮಾತುಗಳು ಬರಲಿ ಎಂದಾಗಲೀ ಇವರು ಎಂದು ಸಮಾಜಮುಖಿಯ ಕೆಲಸವನ್ನು ಮಾಡದೆ, ಎಲೆ ಮರೆಯ ಕಾಯಿಯಂತೆ ಅನೇಕ ವರ್ಷಗಳಿಂದ ಸಮಾಜದ ಮುಖ್ಯವಾಹಿನಿಯಲ್ಲಿ ದುಡಿಯುತ್ತಾ ಬರುತ್ತಿದ್ದಾರೆ. ಇದಕ್ಕೆ ಒಂದೊಳ್ಳೆಯ ಉದಾಹರಣೆಯಾದರೆ ಆಡುಮುಟ್ಟದ ಸೊಪ್ಪಿಲ್ಲ ವೂಡೇ ಪಿ ಕೃಷ್ಣರವರೇ ಸಾಕ್ಷಿಯಾಗಿದ್ದಾರೆ.

ದಿನದ 24 ತಾಸಿನಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಯಾವುದಾದರೂ ಒಂದು ಕೆಲಸದಲ್ಲಿ ವೂಡೇಪಿರವರು ತೊಡಗಿಸಿಕೊಂಡಿರುತ್ತಾರೆ, ಇಂತಹದ್ದೇ ಕೆಲಸ ಕಾರ್ಯಗಳಾಗಿರಬೇಕು ಎಂಬ ಯಾವುದೇ ರೀತಿಯ ಕಟ್ಟುಪಾಡುಗಳಿಲ್ಲ, ಅದು ಸಮಾಜಮುಖಿಯ ಸೇವೆಯಾಗಿರಬಹುದು, ಅದು ದೀನ ದಲಿತರ ಸೇವೆಯಾಗಿರಬಹುದು. ಅದು ಕಲೆ, ಸಾಹಿತ್ಯ ಹಾಗೂ ಕನ್ನಡ ಸಾಂಸ್ಕೃತಿಕ ಪರಿಸರಕ್ಕೆ ಸಂಬಂಧಪಟ್ಟ ಕೆಲಸವಾಗಿರಬಹುದು ಹೀಗೆ ಪ್ರತಿಗಂಟೆಯು ಈ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ. ಇತ್ತೀಚೆಗೆ ನನ್ನ ಹಿರಿಯ ಪತ್ರಕರ್ತರ ಹತ್ತಿರ ಮಾತನಾಡುವಾಗ, ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯ ಅಂಕಣದಲ್ಲಿ ಪ್ರಕಟಗೊಳ್ಳುತ್ತಿರುವ ವೂಡೇಪಿ ಕೃಷ್ಣರವರ ಕುರಿತು 'ಆಡು ಮುಟ್ಟದ ಸೊಪ್ಪಿಲ್ಲ ವೂಡೇ ಪಿ. ಕೃಷ್ಣ' ರವರ ಅಂಕಣದ ಬಗ್ಗೆ ಆ ಹಿರಿಯ ಪತ್ರಕರ್ತರು ಹೇಳಿದ್ದು ಈ ರೀತಿ ಇತ್ತು. "ನೋಡಿ ಗಂಗಾಧರ್ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ವೂಡೇಪಿ ಕೃಷ್ಣರವರ ಕುರಿತು ಮೂಡಿಬರುತ್ತಿರುವ ಅಂಕಣವು ತುಂಬಾ

ಅದ್ಭುತವಾಗಿ ಮೂಡಿಬರುತ್ತಿದೆ. ಅಷ್ಟೇ ಪ್ರತಿ ಅಂಕಣದಲ್ಲಿ ಅವರ ಕುರಿತಾದ ಅವರ ಜೀವನದಲ್ಲಿ ಪ್ರತಿನಿತ್ಯ, ಪ್ರತಿ ಸಂದರ್ಭದಲ್ಲೂ ನಡೆದಿರುವ, ನಡೆಯುವ ಮುಂದೆ ನಡೆಯುವ ಘಟನೆಗಳನ್ನು ಬಹಳ ಸರಳಭಾಷೆಯಲ್ಲಿ, ಎಲ್ಲರೂ ಓದುವಂತೆ ಬರೆಯುತ್ತಿರುವುದರಿಂದ ವೂಡೇಪಿರವರ ಅಂಕಣ ಬಹಳ ಅದ್ಭುತವಾಗಿ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಇನ್ನೊಂದು ವಿಷಯ ನಿಮಗೆ ಗೊತ್ತೇ ಗಂಗಾಧರ್, ವೂಡೇಪಿರವರು ಇವತ್ತು ಸಮಾಜದಲ್ಲಿ ಬಹಳ ಎತ್ತರವಾದ, ಗೌರವಾನ್ವಿತ ವ್ಯಕ್ತಿ, ಸಕಲ ರೀತಿಯ ಸವಲತ್ತುಗಳು, ಸೌಲಭ್ಯಗಳು, ಆರ್ಥಿಕವಾಗಿ ಯಾರಿಗೂ ಕಮ್ಮಿ ಇಲ್ಲದಂತೆ ಇದ್ದಾರೆ. ಬಡವ ನೀ ಮಡಗದಂಗೆ ಇರು ಎನ್ನುವಂತೆ ವೂಡೇಪಿರವರು ಸಮಾಜದ ಮುಖ್ಯವಾಹಿನಿಯಲ್ಲಿ ಎಷ್ಟು ಸರಳ ವ್ಯಕ್ತಿಯೋ ಮನೆಯಲ್ಲಿಯೂ ಸಹ ಅಷ್ಟೇ ಸರಳ ವ್ಯಕ್ತಿ. ಹೀಗಾಗಿಯೇ ಇವತ್ತಿಗೂ ವೂಡೇಪಿಯವರ ಮನೆಯಲ್ಲಿ ಮನೆಯ ಕೆಲಸ ಕಾರ್ಯಗಳನ್ನು ಮಾಡಲು ಯಾವ ಆಳುಕಾಳುಗಳಿಲ್ಲ. ಯಾರನ್ನು ಮನೆಯ ಕೆಲಸಕ್ಕೂ ಇಟ್ಟುಕೊಂಡಿಲ್ಲ. ಮನೆಯ ಕೆಲಸವನ್ನು ಸ್ವತಃ ವೂಡೇಪಿ ಕೃಷ್ಣ ಮತ್ತು ಅವರ ಶ್ರೀಮತಿಯವರೇ ಮಾಡಿಕೊಳ್ಳುತ್ತಾರಂತೆ, ಇವರು ಮನಸ್ಸು ಮಾಡಿದರೆ ಮನೆಯ ಕೆಲಸಕ್ಕೆ ಯಾರನ್ನೂ ಬೇಕಾದರೂ ಎಷ್ಟು ಜನರನ್ನಾದರೂ ನೇಮಿಸಿಕೊಳ್ಳಬಹುದು, ಆದರೆ ವೂಡೇಪಿ ಕೃಷ್ಣರವರು ಹೇಳಿ ಕೇಳಿ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ಆದರ್ಶಗಳನ್ನು ಸಿದ್ಧಾಂತಗಳನ್ನು ಅಳವಡಿಸಿಕೊಂಡಿರುವುದರ ಜೊತೆಗೆ ಅಪ್ಪಟ ಗಾಂಧಿವಾದಿ. ನಮ್ಮ ವೂಡೇಪಿರವರು ಒಟ್ಟಾರೆ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬರುತ್ತಿರುವ ವೂಡೇಪಿ ಕೃಷ್ಣರವರ ಆಡುಮುಟ್ಟದ ಸೊಪ್ಪಿಲ್ಲ –ವೂಡೇಪಿ ಕೃಷ್ಣರವರ ಅಂಕಣ ವಿಶೇಷವಾಗಿ ಮೂಡಿ ಬರುತ್ತಿದ್ದು ಮತ್ತು ಮುಂದಿನ ಯುವ ಪೀಳಿಗೆಗೆ ಇವರ ಈ ಅಂಕಣವು ಪುಸ್ತಕ ರೂಪದಲ್ಲಿ ಹೊರಬಂದರೆ ಹೆಚ್ಚಿನ ಅನುಕೂಲವಾಗುವುದರಲ್ಲಿ ಯಾವುದೇ ರೀತಿಯ ಸಂದೇಹವಿಲ್ಲ" ಎಂದು ಆ ಹಿರಿಯ ಪತ್ರಕರ್ತನು ಹೇಳಿದರು. ಬಹುಶಃ ಆ ಹಿರಿಯ ಪತ್ರಕರ್ತರು ಹೇಳಿದ ಕೆಲವು ವಿಚಾರಗಳು ನಿಜಕ್ಕೂ ನನ್ನಂತ ಒಬ್ಬ ಪತ್ರಕರ್ತನಿಗೆ ಬರೆಹಗಾರನಿಗೆ ವೂಡೇಪಿರವರು ನನ್ನಂತಹವರಿಗೆ ಯಾವತ್ತೂ ಸರ್ವರೀತಿಯಲ್ಲಿಯೂ ಒಬ್ಬ ಅಪರೂಪದ ವ್ಯಕ್ತಿಯಾಗಿಯೇ ಕಾಣುತ್ತಾರೆ, ಇವರ ಬಗ್ಗೆ ಅಗೆದು, ಬಗೆದು, ತೆಗೆದು ಪ್ರತಿ ಸಂಚಿಕೆಯಲ್ಲಿಯು ವೂಡೇಪಿರವರ ಕುರಿತಾದ ವಿಶೇಷವಾದ ವಿಚಾರಗಳನ್ನು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬರೆದು ಪತ್ರಿಕೆಯ ಮುದ್ರಣಗೊಂಡು ಓದುಗರಿಗೆ ಪೋಸ್ಟಿನಲ್ಲಿ ತಲುಪಿಸಿ ಎರಡು ಮೂರು ದಿನಗಳ ನಂತರ ರಾಜ್ಯ ರಾಷ್ಟ್ರದ ಮತ್ತು ಅಂತಾರಾಷ್ಟ್ರೀಯ ಅನೇಕ

ಓದುಗರು ವೂಡೇಪಿರವರ ಅಂಕಣವನ್ನು ಓದಿ, ವೂಡೇಪಿಯಂತಹವರು ಈ ಕಾಲಘಟ್ಟದಲ್ಲಿಯೂ ಇದ್ದಾರೆ, ಹಾಗೆಯೇ ವೂಡೇಪಿರವರಂತಹವರು ಇರುವುದರಿಂದಲೇ ಇಂದು ಕನ್ನಡ ಸಾಹಿತ್ಯ ಲೋಕ ಸದಾ ಒಂದಿಲ್ಲೊಂದು ಚಟುವಟಿಕೆಗಳಲ್ಲಿರುತ್ತದೆ ಎಂದು ಅನೇಕರು ಹೇಳುತ್ತಿರುತ್ತಾರೆ, ಈ ರೀತಿಯ ಪ್ರಶಂಸನೀಯ ಮಾತುಗಳನ್ನು ಕೇಳಿದಾಗ ಒಂದು ರೀತಿಯಲ್ಲಿ ನನಗೆ ಎಲ್ಲಿಲ್ಲದ ಸಂತೋಷವಾಗುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಇಂತಹ ಒಬ್ಬ ಮಹಾನ್ ವ್ಯಕ್ತಿಯ ಬಗ್ಗೆ ಅವರ ಕುರಿತಾದ ಅಲ್ಪ ಸ್ವಲ್ಪ ಮಾಹಿತಿಯನ್ನು ಒಂದು ತಳ ಮಟ್ಟದ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬರೆಯುತ್ತಿರುವುದು ನಾನೇನ ಎಂಬ ಭಯ, ಅನುಮಾನ, ಗಂಭೀರತೆ, ಖಿನ್ನತೆ ಎಲ್ಲವೂ ಒಮ್ಮೆಲೇ ಬಂದು ಬಿಡುತ್ತದೆ, ಕಾರಣ ವೂಡೇಪಿ ಕೃಷ್ಣರವರು ನನ್ನ ಕಣ್ಣಮುಂದೆ ಒಬ್ಬ ಗಣ್ಯವ್ಯಕ್ತಿಯಾಗಿ, ಒಬ್ಬ ಅಸಾಮಾನ್ಯ ವ್ಯಕ್ತಿಯಾಗಿ ಒಬ್ಬ ಗಾಂಧಿವಾದಿಯಾಗಿ ಒಬ್ಬ ಅಂಬೇಡ್ಕರ್‌ರವರ ಕಟ್ಟಾ ಅಭಿಮಾನಿಯಾಗಿ, ಅನುಯಾಯಿಯಾಗಿ ಕಾಣುತ್ತಾರೆ, ಇಷ್ಟಾದರೂ ಇವೆಲ್ಲದರ ನಡುವೆ ತುಂಬಾ ಸಂತೋಷವಾಗುತ್ತದೆ. ಇಂತಹ ವೂಡೇಪಿರವರ ಕುಟುಂಬವು ಹತ್ತು ಹಲವು ರೀತಿಯ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಇದರ ಜೊತೆಗೆ ವೂಡೇಪಿರವರ ತಂದೆಯವರು ಒಂದು ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ.

1983ರಲ್ಲಿ "ವೂಡೇಪಿ ಪ್ರತಿಷ್ಠಾನ" -ಸ್ಥಾಪನೆ

ಡಾ. ವೂಡೆಪಿ ಕೃಷ್ಣರವರ ತಂದೆ ಅಪ್ಪಟ ಗಾಂಧೀವಾದಿಗಳು, ಗಾಂಧೀಜಿಯವರ ತತ್ವ, ಅವರ ಆದರ್ಶಗಳ ಪ್ರೇರಣೆ ಪಡೆದು ದೀನ ದಲಿತರ ಹಿಂದುಳಿದವರ, ಶೋಷಿತರ ಅಭಿವೃದ್ಧಿಗಾಗಿ ಏನಾದರೂ ಸೇವೆಯನ್ನು ಮಾಡಲು ಮತ್ತು ಸಮಾಜದ ಕಾರ್ಯಗಳಲ್ಲಿ ಅದರಲ್ಲೂ ಸಾಮಾನ್ಯ ಜನರ ಕಷ್ಟಗಳಿಗೆ ಸ್ಪಂದಿಸಲು ನಿಃಸ್ವಾರ್ಥ ಮನಸ್ಸಿನಿಂದ 1983ರಲ್ಲಿ "ವೂಡೇ ಪ್ರತಿಷ್ಠಾನ"ವನ್ನು ಪುಟ್ಟಯ್ಯನವರು ಸ್ಥಾಪಿಸಿದರು, ಪುಟ್ಟಯ್ಯನವರು ನಾನು ವಿದ್ಯಾರ್ಥಿಯಾಗಿದ್ದಾಗ ತಾವು ಸರ್ಕಾರದಿಂದ ಪಡೆದ ವಿದ್ಯಾರ್ಥಿ ವೇತನದ ಉದ್ದೇಶ ಮತ್ತು ಅದರ ಉಪಯೋಗವನ್ನು ಗ್ರಹಿಸಿ ತಾವು ಅದೇ ರೀತಿಯಲ್ಲಿ ಹಲವಾರು ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿದ್ಯಾದಾನ ಮಾಡಬೇಕೆಂಬ ಹಂಬಲದಿಂದ 'ವೂಡೇ ಪ್ರತಿಷ್ಠಾನ' ಸ್ಥಾಪಿಸಿದ್ದು ಒಂದು ಇತಿಹಾಸ ಘಳಿಗೆ.

ಈ ಪ್ರತಿಷ್ಠಾನ ವತಿಯಿಂದ ಪ್ರತಿವರ್ಷವು ನೂರಾರು ವಿದ್ಯಾರ್ಥಿಗಳಿಗೆ ಅದರಲ್ಲೂ ವೃತ್ತಿ ಶಿಕ್ಷಣ ಪಡೆಯುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅದರಲ್ಲೂ

ಆರ್ಥಿಕವಾಗಿ ಬಡತನದಲ್ಲಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು ಪ್ರಾರಂಭಿಸಿದ್ದು ಪ್ರತಿಷ್ಠಾನದ ಮೂಲ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ವೂಡೇ ಪಿ ಕೃಷ್ಣರವರು ಇನ್ನೂ ವಿದ್ಯಾರ್ಥಿಯಾಗಿದ್ದರು. ಪ್ರತಿಷ್ಠಾನದಲ್ಲಿ ಕೇವಲ ವಿದ್ಯಾರ್ಥಿ ವೇತನ ಕೊಡುವುದು ಮಾತ್ರವಲ್ಲ ಮನುಷ್ಯನಿಗೆ ಆರೋಗ್ಯವು ಅಷ್ಟೇ ಮುಖ್ಯ ಎಂದು ತಿಳಿದು ಆರೋಗ್ಯ ಸೇವೆಯನ್ನು ಒದಗಿಸುವ ಕೆಲಸವನ್ನು ವೂಡೇ ಪಿ. ಹಮ್ಮಿಕೊಂಡರು, ಅದರಲ್ಲಿ ಹಳ್ಳಿಗಳಲ್ಲಿರುವ, ಆರ್ಥಿಕವಾಗಿ ದುರ್ಬಲರಾದ ಮಹಿಳೆಯರನ್ನು ಗುರ್ತಿಸಿ ಅಂಚೇ ಕಛೇರಿಯಿಂದ ಎಂ.ಓ. (ಮನಿಆರ್ಡರ್) ಮೂಲಕ ಅವರಿಗೆ ಅವರ ವಿಳಾಸಕ್ಕೆ ಇಂತಿಷ್ಟು ಹಣವನ್ನು ಕಳುಹಿಸುವ ವ್ಯವಸ್ಥೆ ಯನ್ನು ಪ್ರತಿಷ್ಠಾನವು ಮಾಡುತ್ತ ಬರುತ್ತಿದೆ.

ಜನ ಸಮುದಾಯದ ಹಿತೈಷಿ ಸಂಸ್ಥೆಗಳಾದ ಆಚಾರ್ಯ ವಿನೋಬಾ ಭಾವೆರವರು ಸ್ಥಾಪಿಸಿದ್ದ ವಿಶ್ವನೀಡಂ ಟ್ರಸ್ಟ್, ಸಂತ ಜಾನ್ ಆಂಬುಲೆನ್ಸ್ ಸಂಸ್ಥೆ ಮುಂತಾದವುಗಳ ಜೊತೆಗೆ ಒಡನಾಟವನ್ನು ಹೊಂದಿದ್ದು ಈಗಲೂ ಹತ್ತು ಹಲವು ರೀತಿಯ ಕೆಲಸ ಕಾರ್ಯಗಳನ್ನು ಪ್ರತಿಷ್ಠಾನವು ಮಾಡುತ್ತಿದೆ. ಎಷ್ಟೇ ಇದ್ದರೂ, ಏನೇ ಇದ್ದರೂ ಹುಟ್ಟಿದ ಊರು ಮತ್ತು ಮನೆತನಗಳ ಸಂಸ್ಕರಣೆ ಮತ್ತು ಋಣ ಪಾವತಿಗಳ ಸದಾಶಯದಿಂದ ವೂಡೇ ಪ್ರತಿಷ್ಠಾನವು ಇಂದು ಬಹಳ ಎಚ್ಚರಿಕೆಯಿಂದ ಸಾಮಾಜಿಕ ಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ ಬರುತ್ತಿದೆ.

ಅಂದು ಸ್ಥಾಪನೆಗೊಂಡ ವೂಡೇ ಪ್ರತಿಷ್ಠಾನವು ಇಂದು ಕೂಡ ವೂಡೇಪಿ ಕೃಷ್ಣರವರ ಸಾರಥ್ಯದಲ್ಲಿ, ಸಂಸ್ಥಾಪಕ ಟ್ರಸ್ಟಿಯಾಗಿ ಬಹಳ ಅಚ್ಚುಕಟ್ಟಾಗಿ, ವ್ಯವಸ್ಥಿತ ವಾಗಿ ಕಾರ್ಯವನ್ನು ನಿರ್ವಹಿಸುತ್ತಿದೆ.

ಹಾಗೂ ವೂಡೇ ಪ್ರತಿಷ್ಠಾನವು ಸರ್ವೋದಯ ಕ್ಷೇತ್ರದಲ್ಲಿಯೂ ವಿಶೇಷವಾದ ಸೇವೆಯನ್ನು ಸಲ್ಲಿಸಿರುವ, ಸಲ್ಲಿಸುತ್ತಿರುವರನ್ನು ಗುರ್ತಿಸಿ ಸೇವಾಮನೋಭಾವದ ಹಿರಿಯರಿಗೆ 'ವೂಡೇ ಪ್ರತಿಷ್ಠಾನ ಪ್ರಶಸ್ತಿ'ಗಳನ್ನು ನೀಡುವ ಗುರುತರವಾದ ಜವಾಬ್ದಾರಿಯನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇದರ ಜೊತೆಗೆ ಸಮಾಜಮುಖಿಯಲ್ಲಿ ಸಮಾಜಕ್ಕೆ ಪ್ರಯೋಜನಕಾರಿಯಾಗಿ ಬದುಕಿ ಬಾಳಿದವರ ತತ್ವ ಆದರ್ಶಗಳ, ಮಾನವೀಯ ಮೌಲ್ಯಗಳು, ಸಾಮಾಜಿಕ ಪ್ರಗತಿಯ ಜವಾಬ್ದಾರಿಗಳು, ರಾಷ್ಟ್ರಪ್ರೇಮದ ಆಸಕ್ತಿಗಳು ಹೀಗೆ, ಒಂದಲ್ಲ ಹತ್ತು ಹಲವು ರೀತಿಯ ಬಹುಮುಖಿಯಾದ ಅಂಶಗಳನ್ನು ಕುರಿತ ಅನೇಕ ರೀತಿಯ ಉಪನ್ಯಾಸಗಳನ್ನು, ಚರ್ಚೆಗಳನ್ನು ಅಂಶಗಳನ್ನು ಕುರಿತ ಅನೇಕ

ರೀತಿಯ ಉಪನ್ಯಾಸಗಳನ್ನು, ಚರ್ಚೆಗಳನ್ನೂ ಸಂವಾದಗಳನ್ನೂ ಏರ್ಪಡಿಸುತ್ತಿದ್ದಾರೆ. ಇದರ ಜೊತೆಗೆ ಅನೇಕ ಪುಸ್ತಕಗಳನ್ನು ವೂಡೇ ಪ್ರತಿಷ್ಠಾನ ಪ್ರಕಟಿಸುತ್ತಿದೆ.

ಈ ರೀತಿಯಾಗಿ ಅಂದು 1883ರಲ್ಲಿ ವೂಡೇ ಪ್ರತಿಷ್ಠಾನ ಸ್ಥಾಪನೆಗೊಂಡು ಇಂದಿಗೂ ಅಪರೂಪದ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಇದರ ನೇತಾರ ನಮ್ಮ ವೂಡೇ ಪಿ ಕೃಷ್ಣರವರೆಂಬುದು ನಮಗೆ ಅಭಿಮಾನದ ಸಂಗತಿ.

ಪ್ರಶಸ್ತಿಗಳ ಸಾಲುಸಾಲು

ವೂಡೇಪಿ ಕೃಷ್ಣರವರ ಬದುಕು, ಜೀವನ ನಿಂತ ನೀರಾಗಿರದೆ ಸದಾ ಹರಿಯುವ ನೀರಾಗಿದೆ. ನಾನು ಕೆಲವೊಮ್ಮೆ ವೂಡೇ ಪಿ. ಕೃಷ್ಣರವರ ಕುರಿತು ಎಲ್ಲಿಯಾದರೂ, ಯಾರನ್ನಾದರೂ ಅವರ ಬಗ್ಗೆ ಮಾಹಿತಿ ಕೇಳಿದರೆ ಕೆಲವರು ಹೇಳುತ್ತಾರೆ. ವೂಡೇಪಿ ಕೃಷ್ಣರವರು ದಿನದ 24 ಗಂಟೆಯೂ ಸಮ ಸಮಾಜದ, ದೀನ ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಅಭಿವೃದ್ಧಿ ಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಶ್ರಮಜೀವಿ, ಬಹುಶ ವೂಡೇಪಿ ಕೃಷ್ಣರವರು ತಾನು ತನ್ನ ಕುಟುಂಬ ಎನ್ನುವುದಕ್ಕಿಂತ ನಾವು ನಮ್ಮ ಸಮಾಜ ಎಂದು ಚಿಂತಿಸುವ ಒಬ್ಬ ಮಹಾನ್ ಸಾಧಕರು. ಇವರನ್ನು ಬರೀ ಸಾಧಕ ಎಂದು ಕರೆಯುವುದಕ್ಕಿಂತ ಸಾಧಕರ ಲೋಕದಲ್ಲಿ

ಮಹಾನ್ ಸಾಧಕರು ಎಂದು ಕರೆದರೆ ಅದು ಬಹಳ ಸೂಕ್ತವಾಗಿರುತ್ತದೆ, ಏಕೆಂದರೆ, ಇವರು ಸಮಾಜದಲ್ಲಿ ಸಮಾಜ ಸೇವೆಯನ್ನು ಮಾಡುತ್ತಿರುವುದನ್ನು ಹತ್ತಿರದಿಂದ ಗಮನಿಸಿದರೆ ಇವರ ಸಮಾಜಸೇವೆ ಇವರ ಮಾತು, ಇವರ ಚಿಂತನೆ, ಇವರ ಯೋಚನೆಗಳು ಒಂದೇ ಎರಡೇ, ಹತ್ತಾರು ರೀತಿಯಲ್ಲಿ ಅವರದೇ ಆದ ದಿಕ್ಕಿನಲ್ಲಿ ದಿನ 24 ಗಂಟೆಯು ದುಡಿಯುವ ಬಹುಮುಖ ಸೇವೆಯ ಸಾಧಕ ನಮ್ಮ ವೂಡೇಪಿ ಕೃಷ್ಣರವರು ಎಂದು ಹಲವಾರು ಅಭಿಮಾನಿಗಳು ಹೇಳುತ್ತಿರುತ್ತಾರೆ.

ವೂಡೇಪಿ ಕೃಷ್ಣರವರು ಎಲೆಮರೆಯ ಕಾಯಿಯಂತೆ ನಿರಂತರವಾಗಿ ದುಡಿಯುತ್ತಿದ್ದರೂ ಅವರು ಎಂದೂ ಪ್ರಶಸ್ತಿಗಳ ಹಿಂದೆ ಹೋದವರಲ್ಲ, ಅವರಿವರನ್ನು ಕೇಳಿ ಪಡೆದವರಲ್ಲ, ಆದರೆ, ಅವರ ಸಮಾಜ ಮುಖಿಯ ಸೇವೆಗಳನ್ನು ಗುರ್ತಿಸಿ ಒಂದಲ್ಲ ಎರಡಲ್ಲ ನೂರಾರು, ಸಾವಿರಾರು ವಿವಿಧ ಶ್ರೇಣಿಯ ಪ್ರಶಸ್ತಿಗಳು ಬಂದಿರುತ್ತವೆ. ಹೀಗಾಗಿಯೇ ವೂಡೇಪಿರವರ ಕೆಲಸ ಕಾರ್ಯಗಳು, ಅವರ ನಡೆವಳಿಕೆ, ಅವರ ಮಾತು ಅವರ ಸಮಾಜ ಸೇವೆಗಳು ನಮ್ಮಂತಹವರಿಗೆ ಸ್ಫೂರ್ತಿಯಾಗಿರುತ್ತದೆ, ಅಂತಹ ವೂಡೇಪಿ ಕೃಷ್ಣರವರು ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಇಂದಿನ ಸಮಾಜದಲ್ಲಿ ಯಾವುದೇ ಸಭೆ ಸಮಾರಂಭಗಳಲ್ಲಿ ವೂಡೇಪಿ ಕೃಷ್ಣರವರ ಉಪಸ್ಥಿತಿ ಎದ್ದು ಕಾಣುತ್ತಿದೆ, ಒಂದು ವೇಳೆ ವೂಡೇಪಿ ಕೃಷ್ಣರವರು ಆ ಸಮಾರಂಭದಲ್ಲಿ ಇಲ್ಲದೆ ಹೋದರೆ ಅಂದಿನ ಸಮಾರಂಭ ಮಂಕಾಗಿ ಬಿಡುತ್ತದೆ, ಇದು ಸತ್ಯವಾದ ಮಾತು.

ವೂಡೇಪಿ ಕೃಷ್ಣರವರ ಬಹುಮುಖಿ ಸೇವೆಯ ಸಾಧನೆಯನ್ನು ಗುರ್ತಿಸಿ, ಹುಡುಕಿಕೊಂಡು ಬಂದ ಪ್ರಶಸ್ತಿಗಳು ಒಂದಲ್ಲ, ಎರಡಲ್ಲ, ಅನೇಕಾನೇಕ ಪ್ರಶಸ್ತಿಗಳು ಯಾವ ತರಹದ್ದು, ಯಾವ ಯಾವ ಸಂದರ್ಭದಲ್ಲಿ ಸಿಕ್ಕಿದೆ ಎಂಬುದರ ಕಡೆಗೆ ಒಮ್ಮೆ ಮೆಲುಕು ಹಾಕಿ ನೋಡುತ್ತಾ ಹೋದರೆ ಈ ಕೆಳಗಿನಂತೆ ವೂಡೇಪಿರವರಿಗೆ ಬಂದ ಪ್ರಶಸ್ತಿಗಳ ಸರಮಾಲೆ ಹೀಗಿದೆ.

1. 2004ರಲ್ಲಿ ಪ್ರತಿಷ್ಠಿತ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ
2. ಅಸಾಧಾರಣ ರೆಡ್‌ಕ್ರಾಸ್ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ರಾಷ್ಟ್ರಪ್ರಶಸ್ತಿಯಾದ ರಾಷ್ಟ್ರಪತಿಗಳ ಚಿನ್ನದ ಪದಕ
3. ರಾಜ್ಯ ಯುವ ಪ್ರಶಸ್ತಿ
4. ವಿಕಲ ಚೇತನರ ಕಲ್ಯಾಣಾಭಿವೃದ್ಧಿ ರಾಜ್ಯಪ್ರಶಸ್ತಿ
5. ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ

6. ಕರ್ನಾಟಕ ರಾಜ್ಯಪಾಲರಿಂದ 'ರೆಡ್‌ಕ್ರಾಸ್' ಸೇವಾ ಪ್ರಶಸ್ತಿ

7. ಶಿಕ್ಷಣ ಕ್ಷೇತ್ರದ ಸೇವೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೀಡುವ ಪ್ರತಿಷ್ಠಿತ 'ಕೆಂಪೇಗೌಡ ಪ್ರಶಸ್ತಿ'.

8. ವಿವೇಕಾನಂದ ಕಲಾಕೇಂದ್ರದ 'ಸೇವಾಶ್ರೀ ಪ್ರಶಸ್ತಿ'.

9. ಡಿ.ವಿ.ಜಿ ಪುರಸ್ಕಾರ

10. ಬೆಂಗಳೂರು ಮೆಟ್ರೋ ರೋಟರಿ ಸಂಸ್ಥೆಯ ಗೌರವ ಸದಸ್ಯತ್ವ

11. ಆಂಧ್ರ ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ

12. ಇಂಗ್ಲೇಂಡಿನ ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಸಂಸ್ಥೆಯ ಫೆಲೋ ಗೌರವ

13. ನ್ಯೂಯಾರ್ಕ್‌ನಲ್ಲಿ ಬಸವ ಇಂಟರ್‌ನ್ಯಾಷನಲ್ ಸಂಸ್ಥೆಯ ಬಿನ್ನವತ್ತಳೆ

14. ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಪ್ರತಿಷ್ಠಿತ ಫೆಲೋ ಗೌರವ

15. ಕತಾರ್‌ನಲ್ಲಿ ನಡೆದ 5ನೇ ವಿಶ್ವ ಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಫೆಲೋ ಗೌರವ

16. ಗಾಂಧೀ ವಿಚಾರ ಪ್ರಚಾರ ಸೇವೆಗಾಗಿ ಮಂಡ್ಯದ ಗಾಂಧೀ ಭವನದಿಂದ ಗಾಂಧೀವಾದಿ ಎಸ್. ವಿಶ್ವನಾಥ್ ಹೆಸರಿನ ಪ್ರಶಸ್ತಿಯನ್ನು 2017ರಲ್ಲಿ ನೀಡಲಾಯಿತು.

17. 'ದಿ ಹಿಂದೂ' ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ "ಡಾಯನ್ಸ್" ಎಂಬ ವಿಶಿಷ್ಟ ಮತ್ತು ಅಪರೂಪದ ಪ್ರಶಸ್ತಿಯನ್ನು 2017ರಲ್ಲಿ ನೀಡಲಾಯಿತು.

18. 2017ರಲ್ಲಿ ಬೆಂಗಳೂರು ಗಾಂಧಿನಗರ ವಿಧಾನ ಸಭಾಕ್ಷೇತ್ರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವವನ್ನು ನೀಡಲಾಯಿತು.

19. 2020ರಲ್ಲಿ ವೂಡೇಪಿ ಕೃಷ್ಣರವರ ಸಮಾಜ ಸೇವೆಯನ್ನು ಗುರ್ತಿಸಿ ಪ್ರತಿಷ್ಠಿತ ಮಂಡ್ಯದ ಡಾ. ಜಿ. ಮಾದೇಗೌಡ ಪ್ರತಿಷ್ಠಾನ ಹೆಸರಿನ ಪ್ರಶಸ್ತಿಯನ್ನು ನೀಡಲಾಯಿತು.

20. ವೂಡೇಪಿರವರು ನಿರಂತರವಾಗಿ ಶಿಕ್ಷಣ ಕ್ಷೇತ್ರದಲ್ಲಿನ ಸೇವೆಗಾಗಿ ಹಂಪಿ ಕನ್ನಡ ವಿಶ್ವ ವಿದ್ಯಾಲಯದಿಂದ ಗೌರವ ಡಿ.ಲಿಟ್‌ಗೆ ಸರಿಸಮಾನವಾದ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು 2020ರಲ್ಲಿ ನೀಡಲಾಯಿತು.

ಹೀಗೆ, ಈ ರೀತಿಯ ಪ್ರಶಸ್ತಿಗಳ ಸರಮಾಲೆಯನ್ನೇ ಅತ್ಯಂತ ಕಿರಿಯ ವಯಸ್ಸಿನಲ್ಲೇ ಪಡೆದ, ಈಗಲೂ ಪಡೆಯುತ್ತಿರುವ ಅಸಾಮಾನ್ಯ ವ್ಯಕ್ತಿತ್ವವನ್ನು ಹೊಂದಿರುವ ವೂಡೇಪಿ ಕೃಷ್ಣರವರ ಕುರಿತು ಜ್ಞಾನಪೀಠ ಪುರಸ್ಕೃತರಾದ ಡಾ. ಚಂದ್ರಶೇಖರ್ ಕಂಬಾರರವರು ಹೇಳುವಂತೆ "ಒಬ್ಬ ಒಳ್ಳೆಯ ಕೆಲಸ ಮಾಡುವುದು ಪುಣ್ಯದ ತುರಾಯಿಗಳನ್ನು ರುಮಾಲಿಗೆ ಸಿಕ್ಕಸಿಕೊಳ್ಳಲಿಕ್ಕೆ ಅಲ್ಲ, ಅದು ಅವನ ಜೀವನ ರೀತಿ ಅಷ್ಟೇ" ಎನ್ನುವ ಮಾತು ನಿಜಕ್ಕೂ ಕೃಷ್ಣರವರಿಗೆ ಒಪ್ಪುವಂತಹದ್ದು, ವೂಡೇಪಿ ಕೃಷ್ಣರವರು ಎಂದೂ ಪ್ರಶಸ್ತಿಗಾಗಿ ಪ್ರಶಸ್ತಿಯ ಹಿಂದೆ ಬೆನ್ನತ್ತಿ ಹೋದವರಲ್ಲ, ನನಗೆ ಪ್ರಶಸ್ತಿಗಳು ಬರಲಿ ಎಂದು ಸೇವೆ ಮಾಡಿದವರಲ್ಲ, ಆದರೆ ವೂಡೇಪಿ ಕೃಷ್ಣ ಸೇವೆ ಮಾಡುವುದು ಅವರ ಬದುಕಿನ ಸಹಜತೆಯಾಗಿದೆ, ಆದ್ದರಿಂದಲೇ ವಿಶಿಷ್ಠವಾದ, ವಿಶೇಷವಾದಂತಹ ಪ್ರಶಸ್ತಿಗಳು, ವೂಡೇಪಿ ಕೃಷ್ಣರವರನ್ನು ಸಹಜವಾಗಿಯೇ ಹುಡುಕಿಕೊಂಡು ಬಂದಿವೆ, ಬರುತ್ತಿವೆ. ಹಾಗೆಯೇ ವೂಡೇಪಿ ಕೃಷ್ಣರವರು ನಿಷ್ಕಲ್ಮಶ ಜೀವಿಯಾಗಿ, ನಿಸ್ವಾರ್ಥ ವ್ಯಕ್ತಿಯಾಗಿ, ಆಶಾಜೀವಿಯಾಗಿ ಸದಾ ಯಾವುದಾದರೂ ಒಂದು ಚಟುವಟಿಕೆಯಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳುವ ನೇರ ನುಡಿಯ ಕ್ರಿಯಾಶೀಲ ವ್ಯಕ್ತಿತ್ವದ ಸರಳ ಸಜ್ಜನಿಕೆಯ ಸಾಕಾರಮೂರ್ತಿಯಾಗಿರುವುದರಿಂದ ವೂಡೇಪಿ ಕೃಷ್ಣರವರಿಗೆ ಯಾವುದೇ ರೀತಿಯ ಎಷ್ಟೇ ಪ್ರಶಸ್ತಿಗಳು ಬಂದರೂ ಸಹ ಅವರೆಂದೂ ಹಿಗ್ಗುವುದಿಲ್ಲ, ಬೀಗುವುದಿಲ್ಲ, ಸಹಜ ರೀತಿಯಲ್ಲಿ ತಮ್ಮ ಪಾಡಿಗೆ ತಾವು ಪ್ರಾಮಾಣಿಕವಾಗಿ ತಮ್ಮ ಸೇವೆಯಲ್ಲಿ ಮುಳುಗಿರುತ್ತಾರೆ.

ಹಾಗೂ ಅತೀ ಕಿರಿಯ ವಯಸ್ಸಿನಲ್ಲಿಯೇ ಇಂತಹ ಮಹಾನ್ ಸಾಧಕರಾಗಿ ಹೊರಹೊಮ್ಮಲು ಅವರ ಬಹುಮುಖಿಯ ಅಧ್ಯಯನ, ನಿಸ್ಪೃಹವಾದ ಪ್ರಾಮಾಣಿಕ ಸೇವೆ, ಸಾಮಾಜಿಕ ಕಳಕಳಿ, ಬದ್ಧತೆಯಿಂದ ಕೂಡಿದ ಬದುಕು ಇಂದು ಅವರನ್ನು ಉನ್ನತ ಮಟ್ಟಕ್ಕೆ, ಉನ್ನತ ಜಾಗಕ್ಕೆ ಕೊಂಡೊಯ್ದಿದೆ ಎಂದರೆ ಅದು ತಪ್ಪಾಗಲಾರದು, ಸರ್ಕಾರ ಹಾಗೂ ಸಂಘ ಸಂಸ್ಥೆಗಳು ನೀಡುವ ವಿವಿಧ ಪ್ರಶಸ್ತಿ ಪುರಸ್ಕಾರಗಳ ಗೌರವಕ್ಕೆ ಪಾತ್ರರಾಗಿರುವ ಕೃಷ್ಣರವರ ವ್ಯಕ್ತಿತ್ವಕ್ಕೆ ಮತ್ತಷ್ಟು ಹೊಳಪು ಬರುವುದರೊಂದಿಗೆ ಸಮಾಜಸೇವೆ ಮಾಡಲು ಪ್ರೇರಣೆ ಬದಗಿಸಿದೆ ಎಂದು ಹೇಳಬಹುದು.

ಹೀಗಾಗಿ ವೂಡೇಪಿರವರನ್ನು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವಿಯೇ ಹೊರತು ಇವರಾಗಿಯೇ ಎಂದೂ ಹೋಗಲಿಲ್ಲ.



ಜನ್ಮದಿನದ ಶುಭಾಶಯಗಳು

ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಕಳೆದ ಕೆಲವು ತಿಂಗಳುಗಳಿಂದ ವೂಡೇ ಪಿ. ಕೃಷ್ಣರವರ ಕುರಿತಾದ ಒಂದು ಪರಿಚಯದ ಮಾಲಿಕೆ ಯನ್ನು ಪ್ರತಿ ಸಂಚಿಕೆಯಲ್ಲಿ ನನಗೆ ತಿಳಿದ ಮಟ್ಟಿಗೆ ಗೊತ್ತಿರುವ ಮಟ್ಟಿಗೆ ಬರೆಯುತ್ತಿದ್ದೇನಷ್ಟೆ. ವೂಡೇ ಪಿ. ಕೃಷ್ಣರವರ ವ್ಯಕ್ತಿ ಪರಿಚಯವನ್ನು ಪ್ರತಿ ಸಂಚಿಕೆಗೆ ಅವರ ಕುರಿತಾದ ಲೇಖನವನ್ನು ಬರೆಯುವಾಗ ನಾನು ಬಹಳ ಎಚ್ಚರಿಕೆಯಿಂದ ಎಲ್ಲಿಯೂ ಅವರ ಕುರಿತಾದ ಪದಗಳು ಎಲ್ಲಿಯೂ ತಪ್ಪಾಗಬಾರದು. ಎಲ್ಲಿಯೂ ಎಡವಬಾರದು ಎಂಬ ನಿಟ್ಟಿನಲ್ಲಿ ಅವರ ಪರಿಚಯವನ್ನು ಬರೆಯುತ್ತಿದ್ದೇನೆ. ಆದರೂ ಪತ್ರಿಕೆಯು ಮುದ್ರಣಕ್ಕೆ ಹೋಗಿ ಓದುಗರಿಗೆ ತಲುಪಿ ಅವರ ಅಭಿಪ್ರಾಯಗಳು

ಯಾವ ರೀತಿ ಬರುತ್ತದೋ ಒಂದು ವೇಳೆ ಏನಾದರೂ ತಪ್ಪುಗಳನ್ನು ಬರೆದಿರುತ್ತೇನೋ ಎಂಬ ಭಯ ನನ್ನನ್ನು ಸದಾ ಕಾಡುತ್ತಿರುತ್ತದೆ. ಅದರಲ್ಲೂ ವೂಡೇ ಪಿ. ಕೃಷ್ಣರವರ ಮನೆಗೆ 'ಆದಿಜಾಂಬವ ಜಾಗೃತಿ ಪತ್ರಿಕೆ' ತಲುಪಿದ ನಂತರ ಅವರ ಸಂದೇಶಕ್ಕಾಗಿ ನಾನು ಕಾಯುತ್ತಿರುತ್ತೇನೆ. ಒಂದು ವೇಳೆ ಅವರು ತಡವಾಗಿ ಹೇಳಿದರೆ ನನ್ನ ಸಂಕಟ ಹೇಳತೀರದು, ಏಕೆಂದರೆ, ಅವರಿಂದ ಚೆನ್ನಾಗಿ ಬರೆಯುತ್ತೀರಾ, ಅಥವಾ ತಪ್ಪಾಗಿ ಬರೆದಿರುತ್ತೀರಾ ಎಂಬ ಒಂದು ವಾಕ್ಯಕ್ಕಾಗಿ ನಾನು ಅವರ ಉತ್ತರವನ್ನು ಎದುರು ನೋಡುತ್ತಿರುತ್ತೇನೆ. ಈಗಾಗಲೇ ಏಳೆಂಟು ಕಂತುಗಳು ಬಂದಿದ್ದು ಸ್ವತಃ ವೂಡೇ ಪಿ. ರವರೇ ಇದು ವರೆಗೂ ಅಂಕಣಗಳ ಬಗ್ಗೆ ಮತ್ತು ನನ್ನ ಅಲ್ಪ ಸ್ವಲ್ಪ ಬರವಣಿಗೆಯ ಬಗ್ಗೆ ಅವರು ತುಂಬು ಹೃದಯದಿಂದ "ಚೆನ್ನಾಗಿ ಬರೆದಿರುತ್ತೀರಾ, ಬರೆಯುತ್ತೀರಾ" ಎಂದು ಹೇಳಿದಾಗ ನನ್ನ ಬೆನ್ನನ್ನು ನಾನೇ ತಟ್ಟಿಕೊಂಡು ಸಂತೋಷ ಪಡುತ್ತೇನೆ.

ಬರುವ ಫೆಬ್ರವರಿ 1ನೆಯ ತಾರೀಖು ನಮ್ಮೆಲ್ಲರ ಸಾಧಕರ ಸಾಲಿನಲ್ಲಿ ಹೆಮ್ಮರವಾಗಿ ಕಾಣುವ ವೂಡೇ ಪಿ. ಕೃಷ್ಣರವರಿಗೆ ಈ ಲೇಖನದ ಮೂಲಕ ಅವರಿಗೆ ಹುಟ್ಟು ಹಬ್ಬದ ಶುಭಾಶಯವನ್ನು ಕೋರುತ್ತಿದ್ದೇನೆ.

ಹೂವಿನಿಂದ ನಾರು ಸ್ವರ್ಗಕ್ಕೆ ಹೋದಂತೆ ಬರವಣಿಗೆ ಮತ್ತು ಪತ್ರಿಕಾರಂಗದಲ್ಲಿ ಅಂಬೆಗಾಲಿಡುತ್ತಿರುವ ನಾನು ಕೆಲವೊಮ್ಮೆ ಯೋಚನೆ ಮಾಡುತ್ತೇನೆ, ನಾನೆಲ್ಲಿ ಅವರೆಲ್ಲಿ, ಸಮಾ ಸಮಾಜದಲ್ಲಿ ಎಷ್ಟೋ ಜನ ಸಾಧಕರಿಗಿಂತ ದೀನದಲಿತರ, ಹಿಂದುಳಿದವರ ಶೋಷಿತ ಸಮುದಾಯದವರಿಗಾಗಿ ನಿರಂತರವಾಗಿ ದಿನದ 24 ಗಂಟೆಯು ದುಡಿಯುತ್ತಿರುವ ವೂಡೇ ಪಿ. ಕೃಷ್ಣರವರ ಕುರಿತಾದ ಅಂಕಣವನ್ನು ಪ್ರಾರಂಭಿಸಿ ಅವರ ಬಗ್ಗೆ ಬರೆಯುವಾಗ ಈ ಸಂಚಿಕೆಗೆ ಅಂಕಣವನ್ನು ಬರೆಯುತ್ತಿರುವಾಗ ನನಗೆ ಅನ್ನಿಸಿದ್ದು ಬರೆಹ ಲೋಕದಲ್ಲಿ ನನ್ನಂತವನಿಗೆ ಒಬ್ಬ ಹಿರಿಯ, ಸಜ್ಜನ, ಸರ್ವಜನಾಂಗದ ಚಿಂತಕ ವೂಡೇ ಪಿ. ಕೃಷ್ಣರವರ ಕುರಿತು ಬರೆಯುತ್ತಿರುವಾಗ ನಿಜಕ್ಕೂ ನನಗೆ ಆದ ಸಂತೋಷ ಅಷ್ಟಿಷ್ಟಲ್ಲ. ನಿಜವಾಗಿ ಅವರ ಕುರಿತಾದ ಲೇಖನ ಬರೆದು ಅವರಿಗಾಗಿಯೇ ಒಂದು ಅಂಕಣವನ್ನು ಮೀಸಲಿಟ್ಟು ಓದುಗರಿಂದ ಮೆಚ್ಚುಗೆಯ ಮಾತುಗಳನ್ನು ಪಡೆಯುವ ನಾನು ನಿಜಕ್ಕೂ ಪುಣ್ಯವಂತನೇ ಸರಿ, ಅದಕ್ಕೆ ದೊಡ್ಡವರು ಹೇಳುವುದು ಯಾವೊಬ್ಬ ವ್ಯಕ್ತಿ ಸಂಸ್ಕಾರವನ್ನು ಮೈಗೂಡಿಸಿಕೊಳ್ಳಬೇಕಾದರೆ ಮತ್ತೊಬ್ಬ ಸುಸಂಸ್ಕೃತ, ಸಂಸ್ಕಾರವುಳ್ಳ ಮತ್ತು ಸರ್ವ ಜನಾಂಗವನ್ನು ಪ್ರೀತಿಸುವ ಅಪ್ಪುವ ವ್ಯಕ್ತಿಗಳಿಂದ ನನ್ನಂತಹವನು ಸಹ ಬರವಣಿಗೆಯ ಲೋಕದಲ್ಲಿ ಗುರುತಿಸಿಕೊಳ್ಳಬಹುದು. ಈ ಒಂದು ಸುಸಂದರ್ಭದಲ್ಲಿ

ನಾನು ನನ್ನ ಜೀವನ ಪರ್ಯಂತ ವೂಡೇ ಪಿ. ಕೃಷ್ಣರವರನ್ನು ಸ್ಮರಿಸುತ್ತಲೇ ಇರಬೇಕೆಂಬುದು ನನ್ನ ಇಚ್ಛೆ, ಅದು ಹಾಗೆ ಇರಲಿ.

ಇಂತಹ ವೂಡೇ ಪಿ. ಕೃಷ್ಣರವರಿಗೆ ಅದೆಲ್ಲಿಂದ ಬಂತೋ ಗೊತ್ತಿಲ್ಲ ನಾಳಿನ ಪ್ರಜೆಗಳಾದ ಇಂದಿನ ಯುವಜನಾಂಗದ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಅಪಾರವಾದ ಆಸಕ್ತಿ ಇದ್ದು ಇಂದಿನ ಯುವಕರು ಅಂದರೆ ಎಲ್ಲಾ ಸಮುದಾಯದವರು ಮುಂದಿನ ಪೀಳಿಗೆಗೆ ಹೋಗಿ ಅಲ್ಲಿ ಪ್ರಜಾಪ್ರಭುತ್ವದ ಗಟ್ಟಿ ಸಮಾಜವನ್ನು ನಿರ್ಮಿಸಬೇಕು, ಇಂದಿನ ಯುವಕರು ಮುಂದಿನ ಪೀಳಿಗೆಗೆ ನಮ್ಮ ಕೊಡುಗೆ ಏನು, ಯಾವ ರೀತಿ ಯುವ ಜನಾಂಗವನ್ನು ಜಾಗೃತಿಗೊಳಿಸಬೇಕು ಎಂಬುದರ ಬಗ್ಗೆ ವೂಡೇ ಪಿ. ಯವರಿಗೆ ತಮ್ಮದೇ ಆದ ಕೆಲವು ಚಿಂತನೆಗಳಿವೆ. ಅವುಗಳನ್ನು ಕಾರ್ಯಗತಗೊಳಿಸುವುದರಲ್ಲಿ ಮಗ್ನರಾಗಿದ್ದಾರೆ. ನಾವು ಅವರನ್ನು ಹತ್ತಿರದಿಂದ ನೋಡಿದಾಗ ವೂಡೇ ಪಿ. ಕೃಷ್ಣರವರಲ್ಲಿ ಒಂದು ಮಗುವಿನ ಮನಸ್ಸನ್ನು ನಾವು ಕಾಣಬಹುದು. ಇದರ ಅರ್ಥ ಮಹಿಳೆ ಗರ್ಭಿಣಿಯಾಗಿ ಒಂಬತ್ತು ತಿಂಗಳು ಒಂದು ಮಗು ತಾಯಿಯ ಹೊಟ್ಟೆಯಲ್ಲಿರುವಾಗ ಆ ಮಗುವಿಗೆ ಏನು ಗೊತ್ತಿರುವುದಿಲ್ಲ. ಅದೇ ರೀತಿ ಕೃಷ್ಣರವರಲ್ಲಿ ಮತ್ತೊಂದು ಮಗುವಿನ ಮನಸ್ಸಿನ ಭಾವನೆ, ಜೀವ, ಉಸಿರು ಇದೆ ಎಂದು ಹೇಳಬಹುದು. ಏಕೆಂದರೆ, ಯುವ ಜನಾಂಗವನ್ನು ಮುಂದಿನ ಪೀಳಿಗೆಗೆ ಯಾವ ರೀತಿ ಸ್ಪಂದಿಸಬೇಕು, ಯಾವ ರೀತಿ ಬೆರೆಯಬೇಕು, ಹೇಗೆ ಸಮಾಜವನ್ನು ನಿರ್ಮಿಸಬೇಕು ಎಂಬ ನಿಟ್ಟಿನಲ್ಲಿ ಹತ್ತು ಹಲವು ರೀತಿಯ ಯೋಚನೆಗಳನ್ನು ಮತ್ತು ಯುವಶಕ್ತಿಯನ್ನು ರಚನಾತ್ಮಕವಾದ ಕಾರ್ಯಗಳಲ್ಲಿ ತೊಡಗಿಸುವಂತಹ ಕಾರ್ಯಕ್ರಮಗಳಲ್ಲಿ ಮತ್ತು ಸಂಘಟನೆಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಪ್ರೇರಕರಾಗಿದ್ದಾರೆ. ಯುವ ಜನಾಂಗದ ಶ್ರೇಯೋಽಭಿವೃದ್ಧಿಗಾಗಿ ಯೂತ್‌ಹಾಸ್ಟೆಲ್ ಅಸೋಸಿಯೇಶನ್ ಆಫ್ ಇಂಡಿಯಾ ಎಂಬ ಸಂಸ್ಥೆಯ ಬೆಂಗಳೂರು ದಕ್ಷಿಣ ಘಟಕದ ಅಧ್ಯಕ್ಷರಾಗಿ ಹಿಮಾಲಯ ಟ್ರೆಕ್ಕಿಂಗ್ (ಚಾರಣ), ಸೈಕ್ಲಿಂಗ್ ರೇಸ್, ಕಠಿಣವಾದ ಪ್ರದೇಶಗಳ ಸಂದರ್ಶನ ಹೀಗೆ ಹತ್ತು ಹಲವು ರೀತಿಯಲ್ಲಿ ಯುವ ಜನಾಂಗದವರು ಬದುಕಿನಲ್ಲಿ ಸದೃಢವಾಗಲು ನಾನಾ ರೀತಿಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಅಡ್ವೆಂಚರ್ ಕ್ಲಬ್‌ಗಳನ್ನು ರೂಪಿಸುವಲ್ಲಿ ಹೆಚ್ಚಿನ ಶ್ರಮವನ್ನು ವಹಿಸುತ್ತಿದ್ದಾರೆ. ಮತ್ತು ಹೆಚ್ಚಿನ ಸಮಯವನ್ನು ಸಹ ಮೀಸಲಿಟ್ಟಿರುತ್ತಾರೆ.

ಹಾಗೆಯೇ ವೂಡೇ ಪಿ. ಕೃಷ್ಣರವರು ನವಜೀವನ ಫಿಸಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟ್‌ನ ಉಪಾಧ್ಯಕ್ಷರಾಗಿ ಈ ಸಂಸ್ಥೆಯ ಯುವಕರಿಗಾಗಿ ಉಚಿತ

ವ್ಯಾಯಾಮಶಾಲೆ, ವಿದ್ಯಾರ್ಥಿ ನಿಲಯ ಮತ್ತು ಒಂದು ಚಿಕಿತ್ಸಾಲಯವನ್ನು ತಮ್ಮ ನೇತೃತ್ವದಲ್ಲಿ ನಡೆಸುತ್ತಿದ್ದಾರೆ. 1863ರಲ್ಲಿ ಪ್ರಾರಂಭಗೊಂಡ ಒಂದು ಸೇವಾ ಸಂಸ್ಥೆ 'ಶ್ರೀನಿವಾಸ್ ಮಂದಿರಮ್ ಧರ್ಮಸಂಸ್ಥೆ' ಈ ಸಂಸ್ಥೆಗೆ ವೂಡೇ ಪಿ ಕೃಷ್ಣರವರನ್ನು ಸರ್ಕಾರದವರು ನಾಮ ನಿರ್ದೇಶನ ಮಾಡಿ ಸದಸ್ಯರನ್ನಾಗಿ ಮಾಡಿರುವುದರಿಂದ ಅಲ್ಲಿಯೂ ಸಹ ಉತ್ತಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಯುವ ಜನ ಸೇವಾ ಕ್ಷೇತ್ರಕ್ಕೆ ಇವರು ತುಂಬು ಹೃದಯದಿಂದ ಸಲ್ಲಿಸುತ್ತಿರುವ ಅನುಪಮ ಸೇವೆಯನ್ನು ಗುರ್ತಿಸಿ ಕರ್ನಾಟಕ ರಾಜ್ಯ ಸರ್ಕಾರವು 1992ರಲ್ಲಿ ವೂಡೇ ಪಿ ಕೃಷ್ಣರವರಿಗೆ 'ರಾಜ್ಯ ಯುವ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಅನೇಕ ಸ್ನೇಹಿತರು ಆತ್ಮೀಯರು ವೂಡೇ ಪಿ. ಕೃಷ್ಣರವರನ್ನು ಕೇಳುತ್ತಾರೆ. ಏಕೆ ತಾವುಗಳು ರಾಜಕಾರಣಕ್ಕೆ ಹೋಗಬಾರದು ಎಂದು. ಅದಕ್ಕೆ ವೂಡೇ ಪಿ. ಕೃಷ್ಣರವರು ಈ ರೀತಿ ಹೇಳುತ್ತಾರೆ "ಹೇಳಿ ಕೇಳಿ ರಾಜಕೀಯ ಕ್ಷೇತ್ರ ನನ್ನಂತಹವನಿಗೆ ಸರಿ ಹೊಂದುವುದಿಲ್ಲ. ನನ್ನ ಜೀವನದಲ್ಲಿ ನಾನು ಮಹಾತ್ಮ ಗಾಂಧಿಯವರ ಆಚಾರ ವಿಚಾರಗಳನ್ನು ಅವರ ಆದರ್ಶಗಳನ್ನು ಅಲ್ಪ ಸ್ವಲ್ಪವಾದರೂ ನನ್ನ ಜೀವನ ಬದುಕಿನಲ್ಲಿ ಅಳವಡಿಸಿಕೊಂಡಿದ್ದೇನೆ, ಯಾರೂ ಏನೇ ಹೇಳಲಿ ನಾನು ನನ್ನ ಸಮಾಜ ಸೇವೆ, ದೀನ ದಲಿತರ ಸೇವೆ, ದೀನ ದಲಿತರಿಗೆ ಶಿಕ್ಷಣದತ್ತ ಕೊಂಡೊಯ್ಯುವುದು ಅವರನ್ನು ಜಾಗೃತಿಗೊಳಿಸುವುದು ಹೀಗೆ ಹತ್ತು ಹಲವು ರೀತಿಯ ಕೆಲಸಗಳನ್ನು ಮಾಡಿದರೆ ಅದೇ ನನ್ನ ಆಸೆ. ಇಷ್ಟೆಲ್ಲಾ ಕೆಲಸ ಕಾರ್ಯಗಳ ಮಧ್ಯೆ ನಾನು ರಾಜಕೀಯದ ಕ್ಷೇತ್ರವನ್ನು ಹೇಗೆ ತಾನೇ ಆಯ್ಕೆ ಮಾಡಿಕೊಳ್ಳಲಿ" ಎಂದು ಉತ್ತರ ಕೊಡುತ್ತಾರೆ.

ಈ ಮೇಲಿನ ಅವರ ಮನದಾಳದ ಮಾತುಗಳನ್ನು ನಾವು ಕೇಳಿದಾಗ ಓದಿದಾಗ ಅವರೊಂದಿಗೆ ಮಾತನಾಡಿದಾಗ ಮಹಾತ್ಮ ಗಾಂಧೀಜಿಯವರ ಬಗ್ಗೆ ಅವರ ವಿಚಾರ ಧಾರೆಗಳ ಬಗ್ಗೆ ಎಷ್ಟೊಂದು ತಲ್ಲೀನರಾಗಿದ್ದಾರೆಂದರೆ ಎಲ್ಲಿಯಾದರೂ ಯಾವುದೇ ಸಭೆ ಸಮಾರಂಭಗಳಾದರೂ ಮಹಾತ್ಮ ಗಾಂಧೀಜಿ ಯವರ ವಿಚಾರಧಾರೆಗಳ ಬಗ್ಗೆ ನಿರರ್ಗಳವಾಗಿ ಕೇಳುಗರ ಕುಳಿತಿರುವವರ ಕೇಳುಗರಿಗಿಷ್ಟವಾಗುವಂತೆ ಮಾತನಾಡುತ್ತಾರೆ, ಹತ್ತು ಹಲವು ಸಂಘ ಸಂಸ್ಥೆಗಳಿಗೆ ವಿವಿಧ ರೀತಿಯಲ್ಲಿ ಪದಾಧಿಕಾರಿಗಳಾಗಿರುವ ವೂಡೇ ಪಿ. ಕೃಷ್ಣರವರದ್ದು ಬಹುಮುಖ ಪ್ರತಿಭೆ ಅನ್ನುವುದಕ್ಕಿಂತ 'ಶತಮುಖ ಪ್ರತಿಭೆ' ಎಂದು ಹೇಳಿದರೆ ಅದು ಅವರಿಗೆ ಮಾತ್ರ ಸರಿಹೋದಿತು.

ಸಾಮಾನ್ಯವಾಗಿ ಜಯನಗರ, ರಾಜಾಜಿನಗರ, ಡಾಲರ್ಸ್ ಕಾಲೋನಿ, ಆರ್. ಟಿ. ನಗರ, ಇಂದಿರಾನಗರ, ಸದಾಶಿವನಗರ ಇಂಥ ಪ್ರದೇಶಗಳಲ್ಲಿ ವಾಸಿಸುವವರು ಆಗರ್ಭ ಶ್ರೀಮಂತರು, ಗಣ್ಯ ವ್ಯಕ್ತಿಗಳು ದೊಡ್ಡ ದೊಡ್ಡ ಮನೆತನದವರು ದೀನದಲಿತರನ್ನು ಮಾತನಾಡಿಸುವುದಿಲ್ಲ, ಹತ್ತಿರಕ್ಕೂ ಸೇರಿಸಿಕೊಳ್ಳುವುದಿಲ್ಲ, ಎಂಬ ಮಾತು ಸಾಮಾನ್ಯ ಜನರಲ್ಲಿ ಮನೆ ಮಾಡಿದೆ. ಹೌದು ವೂಡೇ ಪಿ. ಕೃಷ್ಣರವರು ಸರ್ವ ರೀತಿಯಲ್ಲಿಯೂ ಬಳ್ಳಿಯ ಮನತೆತನದವರು, ಶ್ರೀಮಂತ ಕುಟುಂಬದವರು, ಅವರ ತಂದೆ ತಾಯಿ, ಅಜ್ಜ-ಅಜ್ಜಿಯ ಆಶಯವಾದ ಮಾನದಂಡ ಎಲ್ಲವೂ ಇದ್ದರೂ ವೂಡೇ ಪಿ. ಕೃಷ್ಣರವರು ಮಾತ್ರ ಸದಾಶಿವನಗರದಲ್ಲೇ ವಾಸಿಸುತ್ತಾ ಅಲ್ಲಿಯ ಜನರ ಹೃದಯ ಭಾಗದಲ್ಲೇ ಇದ್ದುಕೊಂಡು ರಚನಾತ್ಮಕ ಕಾರ್ಯಗಳಲ್ಲಿ ವೈಯಕ್ತಿಕವಾಗಿ ತೊಡಗಿಸಿಕೊಂಡಿರುವುದರ ಜೊತೆಗೆ ವೂಡೇ ಪ್ರತಿಷ್ಠಾನದ ಮುಖಾಂತರ ಹತ್ತು ಹಲವು ರೀತಿಯ ಕೆಲಸ ಕಾರ್ಯಗಳನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದಾರೆ. ಹಾಗೆಯೇ ಸದಾಶಿವ ನಗರದ ಯುವಕ ಸಂಘದ ಸಂಸ್ಥಾಪಕ ಸದಸ್ಯರಾಗಿ ಹಲವಾರು ವರ್ಷಗಳಿಂದ ದುಡಿಯುತ್ತಾ ಬರುತ್ತಿದ್ದಾರೆ. ಅದರ ಅವಿಭಾಜ್ಯ ಅಂಗವಾಗಿ ದುಡಿಯುವ ಅವರಿಗೆ ನಾವು ಎಷ್ಟೇ ಪ್ರಶಂಸಿದರೂ ಕಮ್ಮಿಯೇ ಸರಿ. ಒಟ್ಟಾರೆ ಅವರ ಸೇವೆ ಸದಾ ಅನನ್ಯವಾದುದು.

ವೃತ್ತಿಯಲ್ಲಿ ಇಂಜಿನಿಯರ್ ಆದರೂ ಮನೆಯಲ್ಲಿಯೇ ಕುಳಿತು ಎಲ್ಲ ಸೌಲಭ್ಯಗಳಿದ್ದರೂ ಜನ ಸಾಮಾನ್ಯರಿಗಾಗಿ ಸ್ಪಂದಿಸುತ್ತಾರಲ್ಲ ಅದೇ ವೂಡೇ ವಂಶದ ಹೆಗ್ಗಳಿಕೆ ಮತ್ತು ವಿಶ್ವಾಸವೆಂದು ಹೇಳಬಹುದು. ಇವರ ಇಡೀ ಮನೆತನವೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಮುಂದಿನ ಪೀಳಿಗೆಗೆ ಜನಾನುರಾಗಿಯಾಗಿ ಸೇವೆ ಮಾಡಲು ರಾಜಮಾರ್ಗವನ್ನು ಹಾಕಿಕೊಟ್ಟಿದೆ ವೂಡೇ ಪಿ. ರವರ ಮನೆತನ.

ಇಂತಹ ಹೊತ್ತಿನಲ್ಲಿ ವೂಡೇ ಪಿ. ಕೃಷ್ಣರವರಿಗೆ ನಮ್ಮ 'ಆದಿಜಾಂಬವ ಜಾಗೃತಿ ಪತ್ರಿಕೆ' ಮತ್ತು ಬಳಗವು ಅವರ ಹುಟ್ಟುಹಬ್ಬದ ಶುಭಾಶಯವನ್ನು ಕೋರುತ್ತಾ ಅವರಿಗೆ ಆರೋಗ್ಯ, ಸುಖ ಸಂತೋಷ ನೀಡಲಿ. ಅವರು ಸದಾ ನಮ್ಮೊಂದಿಗೆ ಹೀಗೆ ಇರಲಿ ಎಂದು ನಾನು ಆಶಿಸುತ್ತೇನೆ.

ಓದುಗರೇ ಫೆಬ್ರವರಿ 1ನೆಯ ತಾರೀಖು ವೂಡೇ ಪಿ. ಕೃಷ್ಣರವರ ಹುಟ್ಟಿದ ದಿನ ನೀವೂ ಶುಭಾಶಯವನ್ನು ಹೇಳಿ ಬಿಡಿ.



ಅವರಿವರು ಕಂಡಂತೆ ವೂಡೇ ಪಿ.

ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಸಮಾಜದಲ್ಲಿ ಎಷ್ಟೇ ಒಳ್ಳೆಯ ವ್ಯಕ್ತಿಯಾಗಿರಲೀ ಉನ್ನತ ಸ್ಥಾನದ ವ್ಯಕ್ತಿಯಾಗಿರಲೀ, ಆಗರ್ಭ ಶ್ರೀಮಂತ ವ್ಯಕ್ತಿಯಾಗಿರಲೀ, ಸುಸಂಸ್ಕೃತ ಕುಟುಂಬದ ಹಿನ್ನೆಲೆಯುಳ್ಳ ವ್ಯಕ್ತಿಯಾಗಿರಲೀ ಸಾಮಾನ್ಯವಾಗಿ ಇಂತಹ ವ್ಯಕ್ತಿಗಳನ್ನು ಸಾರಾಸಗಟಾಗಿ ಎಲ್ಲರೂ ಪ್ರೀತಿಸುವುದಾಗಲೀ, ಅವರ ಕೆಲಸ ಕಾರ್ಯಗಳನ್ನು ಹೊಗಳಬೇಕೆಂದೇನಿಲ್ಲ. ಯವುದಾದರೂ ಸಣ್ಣ ಪುಟ್ಟ ತಪ್ಪು ಒಪ್ಪುಗಳನ್ನು ಗಮನಿಸಿ, ಟೀಕೆ ಟಿಪ್ಪಣಿ ಮಾಡುವುದು ಸಾಮಾನ್ಯ, ಈ ಟೀಕೆ ಮಾಡುವುದು ಹೊಗಳುವುದು ನಿಂದಿಸುವುದು ಯಾರನ್ನೂ ಬಿಟ್ಟಿಲ್ಲ, ಆದರೆ, ನಾನು ಬಹಳ ದೂರದಿಂದ ಇವರ ಬಗ್ಗೆ, ಇವರ ಕಾರ್ಯ ವೈಖರಿಯ ಬಗ್ಗೆ ಗಮನಿಸುತ್ತಾ ಹತ್ತಿರ ಹತ್ತಿರ ಹೋಗಿ ಈಗ

ಸಂಪೂರ್ಣವಾಗಿ ಬಹಳ ಹತ್ತಿರದಿಂದ ವೂಡೇಪಿ ಕೃಷ್ಣರವರೆಂದರೆ ಏನು? ಅವರ ವ್ಯಕ್ತಿತ್ವ ಎಂತಹುದು? ಅವರ ಮನಸ್ಸು ಅವರ ನಡೆ ನುಡಿ ಎಂತಹುದು ಎಂದು ಇತ್ತೀಚಿನ ದಿನಗಳಲ್ಲಿ ತುಂಬಾ ಪ್ರೀತಿಯಿಂದ ಆತ್ಮೀಯತೆಯಿಂದ ನೋಡುತ್ತಿದ್ದೇನೆ, ಕಳೆದ ಒಂದೂವರೆ ವರ್ಷದಿಂದ ನಮ್ಮ 'ಆದಿಜಾಂಬವ ಜಾಗೃತಿ ಪತ್ರಿಕೆ'ಯಲ್ಲಿ ವೂಡೇಪಿ ಕೃಷ್ಣರವರ ಕುರಿತಾದ "ಆಡು ಮುಟ್ಟದ ಸೊಪ್ಪಿಲ್ಲ ವೂಡೇಪಿ ಕೃಷ್ಣ ಎಂಬ ಅಂಕಣವು ಬರುತ್ತಿದ್ದು, ರಾಜ್ಯ, ದೇಶ, ವಿದೇಶದಲ್ಲಿರುವ ಅನೇಕರು ವೂಡೇಪಿ ಕೃಷ್ಣರವರ ಅಂಕಣವನ್ನು ಓದಿ ಅನೇಕರು ತಮ್ಮ ತಮ್ಮ ಅಭಿಪ್ರಾಯಗಳನ್ನು ನನ್ನೊಂದಿಗೆ ಹಂಚಿಕೊಳ್ಳುತ್ತಾರೆ. ಈ ರೀತಿ ಹಂಚಿಕೊಳ್ಳುವುದರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ರಾಜ್ಯ ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿರುವ ಕೆಲವು ಉನ್ನತ ವರ್ಗದ ಅಧಿಕಾರಿಗಳು, ಸಾಹಿತಿಗಳು, ಬರೆಹಗಾರರು, ಲೇಖಕರುಗಳು, ಸಂಘ ಸಂಸ್ಥೆಗಳ ಮುಖಂಡರುಗಳು, ಅದರಲ್ಲೂ ದಲಿತ ಸಮುದಾಯದ ಅನೇಕ ಓದುಗರು ಮತ್ತು ನನ್ನ ವೃತ್ತಿ ಬಂಧುಗಳಾದ ಪತ್ರಕರ್ತರು ವೂಡೇಪಿ ಕೃಷ್ಣರವರ ಅಂಕಣವನ್ನು ತುಂಬು ಹೃದಯದಿಂದ ಒಪ್ಪುತ್ತಾರೆ ಮತ್ತು ಸಂತೋಷಪಡುತ್ತಾರೆ.

ಕಳೆದ ಒಂದೂವರೆ ವರ್ಷಗಳಿಂದ ವೂಡೇಪಿ ಕೃಷ್ಣರವರ ಅಂಕಣವನ್ನು ಅನೇಕರು ಓದುತ್ತಿದ್ದು ಅವರು ಓದಿದ ನಂತರ ನನ್ನೊಂದಿಗೆ ಅಂಕಣವನ್ನು ಕುರಿತು ಅವರ ಮನದಾಳದ ಅಂತರಾಳದ ಮಾತುಗಳನ್ನು ಹಂಚಿಕೊಳ್ಳುವಾಗ ಅಥವಾ ಹೇಳಿಕೊಳ್ಳುವಾಗ ಪ್ರತಿಯೊಬ್ಬರು ವೂಡೇ ಪಿ. ಕೃಷ್ಣರವರ ಅಂಕಣದ ಬಗ್ಗೆ ಸಕಾರಾತ್ಮಕವಾಗಿಯೇ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ, ಚೆನ್ನಾಗಿ ಬರೆಯುತ್ತೀರ, ಇಂತಹ ಒಬ್ಬ ಅಸಾಮಾನ್ಯ ವ್ಯಕ್ತಿ, ಸಾಮಾನ್ಯ ವ್ಯಕ್ತಿಯಂತೆ ಇಂದಿಗೂ ಸಮಾಜದಲ್ಲಿ, ನಮ್ಮ ನಡುವೆ ಇದ್ದಾರೆ. ಇಂತಹ ವ್ಯಕ್ತಿ ಪ್ರಸ್ತುತ ಈ ಸಮಾಜಕ್ಕೆ ಬೇಕೆ ಬೇಕು, ಕೃಷ್ಣರವರ ಆದರ್ಶಗಳನ್ನು ಅವರ ಸಾಮಾಜಿಕ ಕೆಲಸ ಕಾರ್ಯಗಳನ್ನು ಕಂಡು ನೋಡಿ ಮುಂದಿನ ಪೀಳಿಗೆಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು, ಇಂತಹ ಕೃಷ್ಣರವರಂತಹವರು ಐದಾರು ಮಂದಿ ಇದ್ದರೆ ಎಲ್ಲಾ ವರ್ಗದವರಿಗೂ ಶಿಕ್ಷಣ ಸಿಗಬಹುದೇನೋ. ಹೀಗೆ, ಅವರವರ ಮನದಾಳದ ಪ್ರೀತಿಯ ಮಾತುಗಳನ್ನು ನನ್ನೊಂದಿಗೆ ಹೇಳಿಕೊಳ್ಳುತ್ತಾರೆ. ಇಂತಹವರು ಕೃಷ್ಣರವರ ಬಗ್ಗೆ ಅವರವರ ಅನಿಸಿಕೆ ಹೇಳಿದಾಗ, ಈ ಹೊಗಳಿಕೆಯ ಪದಗಳಿಗೆ, ಮಾತುಗಳಿಗೆ ನಾನು ಸೂಕ್ತವ್ಯಕ್ತಿಯೇ ಎಂದು ಅನೇಕ ಬಾರಿ ಯೋಚಿಸಿದ್ದೂ ಇದೆ. ಸಂತೋಷಪಟ್ಟಿದ್ದೂ ಇದೆ, ಭಾವುಕನಾಗಿ ಕಣ್ಣಲ್ಲಿ ಹನಿ ನೀರು ಬಂದಿದ್ದು ಉಂಟು.

ಏಕೆಂದರೆ ಒಬ್ಬ ಅಸಾಮಾನ್ಯ, ಒಬ್ಬ ಅಪರೂಪದ, ಒಬ್ಬ ಸಾಮಾಜಿಕ ಚಿಂತನೆಯ ಹರಿಕಾರರ ಕುರಿತು ನನಗೆ ತಿಳಿದ ಮಟ್ಟಿಗೆ ತೋಚಿದ್ದನ್ನು ಪ್ರತಿ ಸಂಚಿಕೆಯಲ್ಲೂ ಬರೆದು ಓದುಗರು ಸ್ವತಃ ವೂಡೇ ಪೀ ಕೃಷ್ಣರವರೆ ನನ್ನ ಬರವಣಿಗೆ ಯನ್ನು ಓದಿ ಚೆನ್ನಾಗಿದೆ ಎಂದು ಹೇಳಿದಾಗ, ಅವರ ಮಾತನ್ನು ಕೇಳಿದಾಗ ನಾನು ಧನ್ಯನಾದ್ದೇನೆ. ಸಾಕು ಇಷ್ಟು ಹೊಗಳಿಕೆ, ಸಾರ್ಥಕವಾಯಿತು, ನನ್ನಂತಹವನ ಬರವಣಿಗೆಯನ್ನು ನಾನು ಬರೆಯುವ ತಪ್ಪು ಒಪ್ಪುಗಳನ್ನು ಈ ಮಹನೀಯರೆಲ್ಲ ಒಪ್ಪಿ ನನ್ನನ್ನು ಪ್ರೋತ್ಸಾಹಿಸುತ್ತಿದ್ದಾರೆಂದರೆ ಇದೇನು ಸಾಮಾನ್ಯ ವಿಷಯವಲ್ಲ!

ಈ ಸಂಚಿಕೆಯಲ್ಲಿ ಮತ್ತೊಂದಷ್ಟು ವೂಡೇಪಿ ಕೃಷ್ಣರವರನ್ನು ಕುರಿತು ಅವರ ಮನದಾಳದ ಅನಿಸಿಕೆಗಳನ್ನು ಯಾವ ರೀತಿ ಹೇಳಿದ್ದಾರೆ ಹಂಚಿಕೊಂಡಿದ್ದಾರೆ ಎಂಬುದನ್ನು ನೋಡೋಣ ಬನ್ನಿ:

ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಹಿನ್ನೆಲೆಯಿಂದ ಬಂದ ಶ್ರೀಯುತರ ರಕ್ತದಲ್ಲಿ ರಾಷ್ಟ್ರಭಕ್ತಿ, ಸಾಮಾಜಿಕ ಬದ್ಧತೆ, ಪರೋಪಕಾರ ಇವೇ ಮೊದಲಾದವು ಮೈದಾಳಿವೆ. ರಾಷ್ಟ್ರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾದ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಇವರ ಸೇವೆ, ಸುಧಾರಣೆಗಳು ಅದ್ವಿತೀಯ. ಕೃಷ್ಣರವರು ನಕಾರಾತ್ಮಕ ಅಭಿಪ್ರಾಯಗಳಿಗೆ ಅಂಜದೆ, ಸಕಾರಾತ್ಮಕ ಚಿಂತನೆಗಳಿಂದ ನಿರ್ವಹಿಸುವಲ್ಲಿ ಯಶಸ್ವಿಯಾಗಿದ್ದಾರೆ.

– ಡಾ. ಸ್ವಾಮಿ ವೀರೇಶಾನಂದ ಸರಸ್ವತಿ

ಡಬ್ಲ್ಯೂ.ಪಿ.ಕೆ. ಅಪರೂಪದ ವ್ಯಕ್ತಿಯಾಗಿ ಕಂಗೊಳಿಸುತ್ತಾ ಇದ್ದಾರೆ. ಇವರ ಮಾರ್ಗದರ್ಶದಿಂದ ಎಲ್ಲ ಕ್ಷೇತ್ರಗಳಲ್ಲೂ ಒಳ್ಳೆಯ ಕಾರ್ಯ ಸುಗಮವಾಗಿ ಸಾಗುತ್ತಾ ಅಭಿವೃದ್ಧಿ ಹೊಂದುತ್ತಿದೆ. **– ಸ್ವಾಮಿ ಜಗದಾತ್ಮಾನಂದ**

ರಾಷ್ಟ್ರಪತಿಗಳಿಂದ ಚಿನ್ನದ ಪದಕ, ರಾಜ್ಯೋತ್ಸವ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿಗಳಿಂದ ಹಿಡಿದು ಹತ್ತಾರು ಪ್ರತಿಷ್ಠಿತ ಗೌರವ, ಅಭಿಮಾನ, ಸನ್ಮಾನ. ಈ ಎಲ್ಲಾ ಕೀರ್ತಿ ತೆಗೆದುಕೊಂಡಿದ್ದು ವೂಡೇ ಪಿ. ಕೃಷ್ಣ ವ್ಯಕ್ತಿಯಾದರೆ, ಹಂಚಿದ್ದು ಮಾತ್ರ ಇಡೀ ರಾಜ್ಯಕ್ಕೆ, ರಾಷ್ಟ್ರಕ್ಕೆ. **– ಡಾ. ಸಿ. ಸೋಮಶೇಖರ್**

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳು ಗುಣಾತ್ಮಕತೆ, ಬೃಹತ್ತತೆ ಎರಡನ್ನೂ ಸಾಧಿಸಿವೆ. ಇದಕ್ಕೆ ನೇರವಾದ ಕಾರಣ ಕೃಷ್ಣರವರ ಅದ್ಭುತ ಕಾರ್ಯದಕ್ಷತೆ ಎಲ್ಲಕ್ಕೂ ಕಳಸವಿಟ್ಟಂತಿರುವುದು ಇವರ ನಮ್ರತೆ, ಸೌಜನ್ಯ, ವಿನಯ.

– ಸ್ವಾಮಿ ನಿರ್ಭಯಾನಂದ

ಇವರು ಸರಳರು, ಬಟ್ಟೆ, ಮಾತು ಎಲ್ಲವೂ ಸರಳವೇ. ಭಾರತೀಯ ಇಂಜಿನಿಯರಿಂಗ್ ಕಾಂಗ್ರೆಸ್ ನಡೆಯುವಾಗ ಏಕೆ ಸೂಟಿನಲ್ಲಿ ಬರಲಿಲ್ಲ ಎಂದೆ ಅದಕ್ಕೆ ಇವರು ಬಟ್ಟೆಯಿಂದ ಇಂಜಿನಿಯರ್ ಆಗುವುದಿಲ್ಲ ಎಂದರು. ಇದು ಇವರ ಕಾರ್ಯದಕ್ಷತೆ, ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ. ಕೃಷ್ಣ ಅತ್ಯಂತ ಪ್ರಾಜ್ಞರು, ದಕ್ಷ ಆಡಳಿತಗಾರರು, ಯುವಜನರ ಆಶಾಕಿರಣ ಹಾಗೂ ಸಂಭಾವಿತರಲ್ಲಿ ಅತ್ಯಂತ ಸಂಭಾವಿತರು.

– ಡಾ. ಹೊ. ಶ್ರೀನಿವಾಸಯ್ಯ

ಕೃಷ್ಣರವರೇ ಬಂದು 'ನನ್ನ ಆತ್ಮಕಥೆ' ಪುಸ್ತಕಗಳನ್ನು ತಾವೇ ಎತ್ತಿಕೊಂಡು ಹೋಗಿ ಗಾಡಿಯಲ್ಲಿ ಇಟ್ಟರು. ಇಷ್ಟು ದೊಡ್ಡ ಸ್ಥಾನದಲ್ಲಿದ್ದರೂ ಇಂತಹ ಕೆಲಸವನ್ನು ಮಾಡುವರೇ ಎಂದು ನನಗೆ ಆಶ್ಚರ್ಯವಾಯಿತು. ಯಾವ ಮನುಷ್ಯ ಸಮತ್ವವನ್ನು ಕಾಯ್ದುಕೊಂಡು ಹೋಗುತ್ತಾನೆಯೋ ಅವರ ಮನಸ್ಸು ವಿಶಾಲವಾಗಿರುತ್ತದೆ. ಇದನ್ನು ನಾನು ಕೃಷ್ಣರವರಲ್ಲಿ ಕಂಡೆ. ಇವರು ಸ್ವಚ್ಛ, ಸರಳ, ನಮ್ರತೆಯ ಸ್ವಭಾವದವರು, ನಮ್ಮ ಸಮಾಜಕ್ಕೆ ಇವರು ಇನ್ನೂ ದೀರ್ಘ ಕಾಲ ಸೇವೆ ಸಲ್ಲಿಸುತ್ತಿರಲಿ.

– ಚೆನ್ನಮ್ಮ ಹಳ್ಳಿಕೇರಿ

ನಾನು ನೋಡಿದಂದಿನಿಂದ ಇಂದಿನ ವರೆಗೂ ನಾಯಕತ್ವದ ಕಡೆಗೆ ಅವರ ತುಡಿತ–ಮಿಡಿತ, ಯೋಜನೆಗಳನ್ನು ಹಾಕಿಕೊಳ್ಳುವುದು. ಸಂಘಟನೆ ಯನ್ನು ಸಾಧಿಸುವ ಸ್ನೇಹಜೀವಿ, ಪ್ರೀತಿ ವಿಶ್ವಾಸಗಳಲ್ಲಿ ನಂಬಿಕೆ ಇಟ್ಟವರು. ಎಲ್ಲಕ್ಕಿಂತ ಮಿಗಿಲಾಗಿ ಮಾನವತಾವಾದಿ, ಮಾಡುವುದು. ಚೊಕ್ಕಟವಾಗಿ ಕಾರ್ಯನಿರ್ವಹಿಸುವುದು, ಹಿಡಿದ ಗುರಿ ತಲುಪುವುದು.

– ಡಾ. ದೊಡ್ಡರಂಗೇಗೌಡ

ಡಾ. ಕೃಷ್ಣ ಅವರದು ವೃತ್ತಿಕಾರ್ಯಗಳ ನಡುವೆ ಬಿಡುವು, ಅವು ವೈಯಕ್ತಿಕ ಕಾರ್ಯಗಳಿಗೆಲ್ಲ ಈ ಸಮಾಜಕ್ಕೆ ಮೀಸಲು.

– ಡಾ. ಎಂ. ಎಚ್. ಕೃಷ್ಣಯ್ಯ

ಡಾ. ಕೃಷ್ಣ ಅವರ ಕೃತಿಗಳು ಅವರ 'ಆಕೃತಿ'ಯನ್ನು ನಿರ್ಮಾಣಮಾಡಿವೆ. ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಂಥ 'ಆಕೃತಿ' ಸಬಲಗೊಂಡು ರಾಷ್ಟ್ರ–ಅಂತಾರಾಷ್ಟ್ರೀಯ ವ್ಯಾಪ್ತಿಗೊಳ್ಳುವಂತೆ ಅವರು ರೂಪಿಸಿದ್ದಾರೆ ಇಂಥವರು ಸಮಾಜದ ಶ್ರೇಷ್ಠ 'ಕುಂದಣ'ರೇ ಸರಿ.

– ಡಾ. ಮಲ್ಲೇಪುರಂ ಜಿ. ವೆಂಕಟೇಶ

ಕೃಷ್ಣ ಅವರು ಅಧ್ಯಯನಶೀಲರು ಮಾತ್ರವಲ್ಲದೇ ಒಳ್ಳೆಯ ವಾಗ್ಮಿಗಳು ಸರಳವಾಗಿ ಗಾಂಧೀ ವಿಚಾರಗಳನ್ನು ಯುವಕರಿಗೆ ಮುಟ್ಟಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

– ಡಾ. ಎಚ್.ಎಸ್. ದೊರೆಸ್ವಾಮಿ

ಕೃಷ್ಣ ಅವರು ಬಹುಶ್ರುತರು. ಕಲೆ ಮತ್ತು ವಿಜ್ಞಾನ ಎರಡೂ ಅವರಲ್ಲಿ ಮೇಳವಿಸಿವೆ. ಸಮಾಜ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಅವರವು ಅನಂತ ಬಾಹುಗಳು, ದೀನ ದಲಿತರ ಬಗೆಗೆ ವಿಶೇಷ ಕಾಳಜಿ. ಅವರ ಸೇವೆಯನ್ನು ಪಡೆಯದ ಸಂಘ–ಸಂಸ್ಥೆಗಳಿಲ್ಲ. ಅವರ ಬೆವರುಣ್ಣದ ಕ್ಷೇತ್ರಗಳಿಲ್ಲ.

– ಡಾ. ಸಾ.ಶಿ. ಮರುಳಯ್ಯ

ಕಷ್ಟ ಬಂದಿತೆಂದು ಡಾ. ವೂಡೇ ಪಿ. ಕೃಷ್ಣ ಅವರು ಕುಗ್ಗಿದವರಲ್ಲ, ಇಷ್ಟ ಕೈಗೂಡಿತೆಂದು ಹಿಗ್ಗಿದವರಲ್ಲ. ಹೆಸರಿನ ಹುಚ್ಚು ಹಚ್ಚಿಕೊಂಡವರಲ್ಲ. ಆದರೆ ಮೈಮನಗಳಲ್ಲಿ ಸದಾ ಎಚ್ಚರ ಇಟ್ಟುಕೊಂಡಿರುವ ವ್ಯಕ್ತಿ. ಕೈಗಳಲ್ಲಿ ಕಸುವಿರುವ ಡಾ. ವೂಡೇ ಪಿ. ಕೃಷ್ಣರವರ ಸಂಕ್ಷಿಪ್ತ ಜೀವನಚಿತ್ರ ವ್ಯಕ್ತಿಗಳು ಹೇಗೆ ಕ್ರಿಯಾಶೀಲರಾಗಿರಬೇಕೆಂದು ಯಾರಾದರೂ ಕೇಳಿದರೆ ನಾವು ಅತ್ತಿತ್ತ ನೋಡದೆ ಡಾ. ವೂಡೇ ಅವರ ಕಡೆ ಕೈತೋರಿಸಬಹುದು.

– ಡಾ. ಗೊ.ರು. ಚನ್ನಬಸಪ್ಪ

ನನ್ನ ಬದುಕಿನಲ್ಲಿ ನನಗೆ ಇಬ್ಬರು ಮಾದರಿ ವ್ಯಕ್ತಿಗಳಿದ್ದಾರೆ. ಅವರುಗಳೆಂದರೆ ಗಿರೀಶ್ ಕಾಸರವಳ್ಳಿ ಮತ್ತು ಡಬ್ಲ್ಯೂ ಪಿ. ಕೃಷ್ಣರವರು. ಪ್ರತಿಭೆಯಿದ್ದೂ ಸರಳತೆಯನ್ನು ಹೇಗೆ ರೂಢಿಸಿಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಕಾಸರವಳ್ಳಿಯವರು, ಶ್ರೀಮಂತಿಕೆಯಿದ್ದೂ ಸರಳತೆಯನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬುದಕ್ಕಾಗಿ ಕೃಷ್ಣರವರು ನನಗೆ ವಿಶೇಷರಾಗಿ ಕಾಣಿಸಿಕೊಳ್ಳುತ್ತಾರೆ. ಇಂಥವರ ಮೌಲ್ಯಾಧಾರಿತ ಜೀವನ ನನಗೆ ಮಾತ್ರವಲ್ಲ ಅನೇಕರಿಗೆ ಸ್ಫೂರ್ತಿಯೂ ಮಾದರಿಯೂ ಆಗುವಂಥದು.

ಬಿ.ಎಸ್. ಲಿಂಗದೇವರು, ರಾಜ್ಯ ಮತ್ತು ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕ

ವೂಡೇ ಪಿ.ಕೃಷ್ಣರವರು ಅಜಾತ ಶತ್ರು, ಜಾತ್ಯತೀತ ಮನೋಭಾವವುಳ್ಳವರು. ಸಮಾಜದ ಎಲ್ಲಾ ಜಾತಿ ಪಂಗಡದವರನ್ನೂ ಪ್ರೀತಿಯಿಂದ ಕಾಣುತ್ತಿರುವವರು. ಅವರಿಗೆ ಎಲ್ಲಾ ಪಕ್ಷದವರೂ, ಪಕ್ಷಾತೀತವಾಗಿ, ಗೌರವ ನೀಡಿ ಅವರನ್ನು ಪ್ರೀತಿಸುತ್ತಿರುವುದು ಅವರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

– ಪಿ. ಜಿ. ಆರ್. ಸಿಂಧ್ಯ, ಮಾಜಿ ಸಚಿವರು

ವಿಸ್ತಾರ ಓದಿನ ಜ್ಞಾನ, ಅದಮ್ಯ ಕ್ರಿಯಾಶಕ್ತಿ, ಅಪಾರ ಜೀವನಾನುಭವ –ಇವೆಲ್ಲ ಅವರ ವ್ಯಕ್ತಿತ್ವವನ್ನು ಈಗ ಹದಗೊಳಿಸಿವೆ. ವಿವೇಕ, ಉತ್ಸಾಹ ಎರಡೂ ಒಂದು ಹದದಲ್ಲಿ ಅವರ ವ್ಯಕ್ತಿತ್ವದಲ್ಲಿ ಸೇರಿವೆ.

– **ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ,** ನಿವೃತ್ತ ಕನ್ನಡ ಪ್ರಾಧ್ಯಾಪಕರು ಹಾಗೂ ವಿಮರ್ಶಕರು

ವೊಡೇ ಪಿ.ಕೃಷ್ಣರವರ ಸುಸಂಸ್ಕೃತ ವ್ಯಕ್ತಿತ್ವ, ಪ್ರೇರಣಾದಾಯಕ ಕಾರ್ಯಶೈಲಿ, ಅವಿಶ್ರಾಂತ ಕಾರ್ಯಶೀಲತೆ, ಸತತ ಸಮಾಜಸೇವಾ ದೃಷ್ಟಿ, ಇವೆಲ್ಲಾ ನಮಗೆ ಸದಾಕಾಲ ಲಭ್ಯವಾಗಿರಲಿ.

– **ಕೃ. ನರಹರಿ,** ಮಾಜಿ ವಿಧಾನ ಪರಿಷತ್ ಸದಸ್ಯರು

'ಸಾಧಕನಿಗೆ ಕೈಸಾವಿರ, ಕಾಲ್‌ಸಾವಿರ' ಎಂಬ ಮಾತು ಕೃಷ್ಣ ಅವರ ವಿಚಾರದಲ್ಲಿ ಅಕ್ಷರಶಃ ಸತ್ಯವಾಗಿದೆ. ಮುಗಿಲೆತ್ತರಕ್ಕೆ ಬೆಳೆದು ನಿಂತರೂ, ಬೇರುಗಳು ಈ ಭೂಮಿಯ ಮೇಲೆ ಇವೆ ಎಂಬುದು ಅವರು ಅದೆಷ್ಟು *Down to earth* ಎಂಬುದನ್ನು ನಿರೂಪಿಸುತ್ತದೆ. ಎಲ್ಲವನ್ನೂ, ಎಲ್ಲರನ್ನೂ ಒಳಗೊಳ್ಳುವ ಅವರ ಹೃದಯ ವೈಶಾಲ್ಯತೆ ಬೆರಗುಗೊಳಿಸುತ್ತದೆ. ಈ ಕಾಲದ ಎಲ್ಲ ಶ್ರೇಷ್ಠರ. ನಾಯಕಮಣಿಗಳ ಸಾಮೀಪ್ಯ, ಒಡನಾಟವಿದ್ದರೂ ಎಳ್ಳಷ್ಟೂ ಅಹಂಕಾರ ಪಡೆದ ಅವರ ನಿಗರ್ವಿ ನಡೆವಳಿಕೆ ಮಾದರಿಯಾದುದು. ಗಾಂಧೀಜಿಯ 'ತಮ್ಮ ಬದುಕೇ ಸಂದೇಶ' ಎಂಬ ಮಾತಿಗೆ ವ್ಯಾಖ್ಯಾನದಂತಿದೆ ಕೃಷ್ಣ ಅವರ ಬದುಕು.

– **ಡಾ. ಮೀರಾಸಾಬಿಹಳ್ಳಿ ಶಿವಣ್ಣ,** ಜಾನಪದ ವಿದ್ವಾಂಸರು



ಅವರಿವರ ಮನದಾಳದ ಮಾತು

ಸಂಪಾದಕರೇ, ಯಾವಾಗ ವೂಡೇಪಿ ಕೃಷ್ಣರವರನ್ನು ಕುರಿತು ಗ್ರಂಥವೊಂದನ್ನು ಲೋಕಾರ್ಪಣೆ ಮಾಡುತ್ತೀರಿ, ಗ್ರಂಥದ ಹೆಸರೇನು, ಎಲ್ಲಿ, ಯಾವ ತಿಂಗಳು, ಎಷ್ಟು ಪುಟಗಳು, ಗ್ರಂಥದ ಹೆಸರೇನು? ಹೀಗೆ ಹಲವಾರು ರೀತಿಯ ಪ್ರಶ್ನೆಗಳನ್ನು ನನಗೆ ನಿರಂತರವಾಗಿ ಬೇರೆ ಬೇರೆ ಜಿಲ್ಲೆಗಳಿಂದ ಕೇಳುತ್ತಿರುತ್ತಾರೆ, ಅವುಗಳಲ್ಲಿ ಕೆಲವು ಆಯ್ದ ವ್ಯಕ್ತಿಗಳ ಮತ್ತು ವೂಡೇಪಿ ಕೃಷ್ಣರವರ ಕುರಿತು ನನ್ನೊಂದಿಗೆ ಮಾತನಾಡಿದ ಕೆಲವು ವಿಚಾರಗಳನ್ನು ನಿಮ್ಮೊಂದಿಗೆ ಈ ಸಂಚಿಕೆಯಲ್ಲಿ ಮತ್ತಷ್ಟು ಹಂಚಿಕೊಳ್ಳುತ್ತಿದ್ದೇನೆ.

ಮೊದಲಿಗೆ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಎಂ. ರಾಮಕೃಷ್ಣ (ಜಮ್ಮು ಮತ್ತು ಕಾಶ್ಮೀರ) ಕಳೆದ ಕೆಲವು ದಿನಗಳ ಹಿಂದೆ ನಾನು ಇಂದಿರಾನಗರದಲ್ಲಿರುವ ನನ್ನ

ಸೋದರಮಾವ, ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ. ರಾಮಕೃಷ್ಣರವರನ್ನು ಭೇಟಿಯಾಗಲು ಅವರ ಮನೆಗೆ ಹೋಗಿದ್ದೆ, ಹಾಗೂ ನನ್ನ ಪುಸ್ತಕದ ಬಿಡುಗಡೆಯ ಸಮಾರಂಭಕ್ಕೆ ಆಹ್ವಾನಿಸಲು, ಅವರು ಮೊದಲು ನನ್ನೊಂದಿಗೆ ಮಾತನಾಡಿದ್ದು, "ನೋಡು ಗಂಗಾಧರ್ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ವೂಡೇ ಪಿ ಕೃಷ್ಣರವರ ಕುರಿತಾದ ಲೇಖನವು ತುಂಬಾ ಚೆನ್ನಾಗಿ ಮೂಡಿಬರುತ್ತಿದೆ, ಪ್ರತಿ ಸಂಚಿಕೆಯನ್ನು ಓದುತ್ತಿದ್ದರೆ ನನಗೆ ತುಂಬಾನೆ ಆಶ್ಚರ್ಯ, ಏಕೆಂದರೆ ವೂಡೇಪಿ ಕೃಷ್ಣರವರ ತಂದೆ ಅವರ ಕುಟುಂಬವನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ, ಆದರೆ ನೀನು ಅವರ ಕುರಿತಾಗಿ ಅಷ್ಟೊಂದು ಕಾಳಜಿವಹಿಸಿ ಅವರ ಬಗ್ಗೆ ಕಳೆದ ಎರಡು ವರ್ಷಗಳಿಂದ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬಹಳ ವಿಶೇಷವಾಗಿ ಆಡುಮುಟ್ಟದ ಸೊಪ್ಪಿಲ್ಲ–ವೂಡೇ ಪಿ ಕೃಷ್ಣ ಎಂಬ ಅಂಕಣವನ್ನು ಬರೆದು ಇಡೀ ದೇಶಕ್ಕೆ ಅದರಲ್ಲೂ ತಳಮಟ್ಟದ ಹಿಂದುಳಿದವರಿಗೆ ಪರಿಶಿಷ್ಟ ಜಾತಿಗಳವರಿಗೆ, ಪರಿಶಿಷ್ಟ ಪಂಗಡದವರಿಗೆ ಇಂತಹ ಒಬ್ಬ ಅಪರೂಪದ ವ್ಯಕ್ತಿ ನಿಃಸ್ವಾರ್ಥ ಸಮಾಜ ಸೇವಕ ಇಂದು ನಮ್ಮ ಸಮಾಜದಲ್ಲಿದ್ದಾರೆ ಎಂದು ಎಲ್ಲರಿಗೂ ತನ್ನ ಬರವಣಿಗೆಯ ಮೂಲಕ ತೋರಿಸಿಕೊಟ್ಟಿರುವುದು ನಿಜಕ್ಕೂ ತುಂಬಾ ಸಂತೋಷದ ವಿಚಾರ."

"ಈಗಾಗಲೇ ನಾನು ವೂಡೇಪಿ ಕೃಷ್ಣರವರನ್ನು ಬಹಳ ಹತ್ತಿರದಿಂದ ಕಂಡಿದ್ದರೂ ಅವರ ಕಾರ್ಯ ಸಾಧನೆ, ಅವರ ಸಮಾಜಸೇವೆ, ದೀನದಲಿತರಿಗೆ ಅವರಿಗಿರುವ ಕಾಳಜಿ, ಕಳೆದ ಕೆಲವಾರು ವರ್ಷಗಳಿಂದ ಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಮುಖ್ಯಸ್ಥರಾಗಿ ಜೊತೆಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಮುಖ್ಯಸ್ಥರಾಗಿ ಇಷ್ಟೊಂದು ಸುದೀರ್ಘ ವರ್ಷಗಳ ಕಾಲ ಸೇವೆ ಮಾಡುತ್ತಿರುವುದು. ನಾನು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಓದಿ ತಿಳಿದುಕೊಂಡೆ, ಬಹಳ ಸಂತೋಷವಾಗುತ್ತಿದೆ. ಹಾಗೆಯೇ ವೂಡೇಪಿ ಅಂತಹವರು 60 ವರ್ಷಗಳು ತುಂಬುವುದರ ಒಳಗೆ ಏನೆಲ್ಲಾ ಸಾಧನೆ ಮಾಡಿದ್ದಾರೆ, ಯಾವ ಯಾವ ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ, ಮುಂತಾದ ಮಾಹಿತಿಗಳನ್ನು ನಾನು ಓದಿ, ಆಶ್ಚರ್ಯವಾಯಿತು, ಏಕೆಂದರೆ ಇಂತಹ ಕಾಲಘಟ್ಟದಲ್ಲಿಯೂ ಸಹ ಇಂತಹ ಒಬ್ಬ ಅಪ್ಪಟ ಗಾಂಧೀವಾದಿ ನಮ್ಮಲ್ಲಿದ್ದಾರೆ ಎಂದರೆ ಅದಕ್ಕೆ ನಾವ್ಯಾರು ಬೆಲೆ ಕಟ್ಟಲು ಸಾಧ್ಯವಿಲ್ಲ."

"ಆದ್ದರಿಂದ ನೋಡು ಗಂಗಾಧರ್ ನೀನು ನಮ್ಮ ಮನೆತನದ ವ್ಯಕ್ತಿಯಾಗಿ, ನನ್ನ ಸಂಬಂಧಿಯಾಗಿ ಅಂದರೆ ಭಾಮೈದನಾಗಿ ಬಹಳ ಸುಸಂಸ್ಕೃತ ಮತ್ತು

ಸಂಸ್ಕಾರವಂತ ಕುಟುಂಬದ ಕುಡಿ ನಾಡೋಜ ಡಾ. ವೂಡೇಪಿ ಕೃಷ್ಣರವರ ಕುರಿತು ಅವರಿಗೊಂದು ಪುಸ್ತಕವನ್ನು ಬರೆದು ಲೋಕಾರ್ಪಣೆ ಮಾಡಲು ಹೆಜ್ಜೆ ಇಟ್ಟಿರುವುದು ಸಾಮಾನ್ಯವಾದ ಕೆಲಸವಲ್ಲ, ಅದರಲ್ಲೂ ಅಂತಹ ಒಬ್ಬ ಅಪರೂಪದ ವ್ಯಕ್ತಿಯ ಕುರಿತು ಒಂದು ಪುಸ್ತಕವನ್ನು ಬರೆದು ಬಿಡುಗಡೆ ಮಾಡಲು ಸಂಕಲ್ಪಿಸುತ್ತಿರುವುದಕ್ಕೆ ನನಗೆ ಎಲ್ಲಿಲ್ಲದ ಸಂತೋಷವಾಗುತ್ತಿದೆ, ಆದಷ್ಟು ಬೇಗ ವೂಡೇಪಿ ಕೃಷ್ಣರವರ ಕುರಿತಾದ ಗ್ರಂಥವು ಅತಿ ಶೀಘ್ರದಲ್ಲಿ ಲೋಕಾರ್ಪಣೆಗೊಳ್ಳಲಿ, ನಿನಗೂ ಒಳ್ಳೆಯದಾಗಲೀ, ಹಾಗೂ ವೂಡೇಪಿ ಕೃಷ್ಣರವರು ಇನ್ನೂ ಹೆಚ್ಚಾಗಿ ಶಿಕ್ಷಣ ವಂಚಿತ ಸಮುದಾಯದವರ ಮಕ್ಕಳಿಗೆ ಹೆಚ್ಚು ಹೆಚ್ಚು ಶಿಕ್ಷಣ ಕೊಟ್ಟು ದೀನ ದಲಿತರ ಮನದಲ್ಲಿ ಅವರ ಈ ಸಾಮಾಜಿಕ ಕೆಲಸ ಕಾರ್ಯಗಳು ಶಾಶ್ವತವಾಗಿರಲಿ, ನನ್ನ ಸಹಕಾರ ನಿನಗೆ ಸದಾ ಇದೆ."

ಈ ರೀತಿಯಾಗಿ ಜಸ್ಟೀಸ್ ಎಂ. ರಾಮಕೃಷ್ಣರವರು ಸರಿ ಸುಮಾರು ಒಂದು ಗಂಟೆಗಳ ಕಾಲ ವೂಡೇಪಿ ಕುರಿತು ಮಾತನಾಡಿದ್ದು ನನಗೊಂದು ರೀತಿಯಲ್ಲಿ ಹೆಮ್ಮೆ ಮತ್ತು ವೂಡೇಪಿರವರ ಬಗ್ಗೆ ನಾನೇನಾ ಬರೆಯುತ್ತಿರುವುದು ಎಂಬ ಭಾವನೆ ಮೂಡುತ್ತದೆ.

ಎರಡನೆಯ ವ್ಯಕ್ತಿ ಜಸ್ಟೀಸ್ ರಾಮಕೃಷ್ಣರವರ ಶಾಲಾ ದಿನಗಳ ಸಹಪಾಠಿ, ಚಿಂತನೆಯ ಚಿಗುರು ಪತ್ರಿಕೆಯ ರಂಗಸ್ವಾಮಿರವರು ಮುಂದುವರೆದು ನಮ್ಮ ಆದಿಜಾಂಬವ ಸಮುದಾಯದ ಹಿರಿಯ ವ್ಯಕ್ತಿ, ಚಿಂತನೆಯ ಚಿಗುರು ಪತ್ರಿಕೆಯ ಸಂಪಾದಕರು, ಪ್ರಾಸಬದ್ಧ ಕವಿಗಳು ಆದ ಆರ್. ರಂಗಸ್ವಾಮಿಯವರು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ಒಂದಕ್ಷರ ಬಿಡದೆ ಓದುವವರಲ್ಲಿ ಮೊದಲಿಗರು, ಹೇಳಿ ಕೇಳಿ ಅವರು ಒಬ್ಬ ಪತ್ರಕರ್ತರಲ್ಲವೇ? ಹೀಗಾಗಿ ಅವರು ಸಹ ವೂಡೇಪಿ ಕೃಷ್ಣರವರ ಅಂಕಣವನ್ನು ನಿರಂತರವಾಗಿ ಓದಿ ಅದರ ಬಗ್ಗೆ ಬಹಳ ಒಳ್ಳೆಯ ವಿಮರ್ಶೆಯನ್ನು ಸಹ ಮಾಡುತ್ತಿದ್ದು, ಸಂತೋಷ ಪಡುತ್ತಿದ್ದರು, ಹಾಗೆಯೇ ಅವರು ಹೇಳುತ್ತಿದ್ದ ಮಾತುಗಳು ಎಲ್ಲೋ ಒಂದು ಕಡೆ ನನಗೆ ಸ್ಫೂರ್ತಿಯಾಗಿರುತ್ತಿತ್ತು. "ವೂಡೇಪಿ ಅಂತಹವರ ಕುರಿತು ನೀವು ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬರೆಯುತ್ತಿರುವ ಅಂಕಣವು ಬಹಳ ಚೆನ್ನಾಗಿ ಮೂಡಿ ಬರುವುದರ ಜೊತೆಗೆ ಅಂತಹ ಒಬ್ಬ ಅಸಾಮಾನ್ಯ ವ್ಯಕ್ತಿಯ ಕುರಿತು ಬರೆಯುವುದು, ಅವರನ್ನು ಬರವಣಿಗೆ ಮತ್ತು ಆದಿಜಾಂಬವ ಜಾಗೃತಿ ಪತ್ರಿಕೆಯ ಮೂಲಕ ಸಮಾಜಕ್ಕೆ ಗುರ್ತಿಸುವುದು ಸಾಮಾನ್ಯ ಸಂಗತಿಯಲ್ಲ. ಅದರಲ್ಲೂ ನಮ್ಮ ಜೀವಿತ ಅವಧಿಯಲ್ಲಿ ಒಬ್ಬ ಅಪರೂಪದ ವ್ಯಕ್ತಿ ನಾಡೋಜ ವೂಡೇಪಿ ಕೃಷ್ಣರವರ ಕುರಿತು

ನೀವುಗಳು ಅವರ ಬಗ್ಗೆ ಲೇಖನವನ್ನು ಬರೆಯುತ್ತಿರುವುದು ಮತ್ತು ಅವರ ಕುರಿತು ಒಂದು ಗ್ರಂಥವನ್ನು ಅತಿ ಶೀಘ್ರದಲ್ಲಿ ಲೋಕಾರ್ಪಣೆ ಮಾಡಲು ತಯಾರು ಮಾಡುತ್ತಿರುವುದು ನಿಜವಾಗಿಯೂ ನೀವೇ ಧನ್ಯ. ವೂಡೇಪಿ ಕೃಷ್ಣರವರ ಬಗ್ಗೆ ಅವರ ಕುರಿತಾದ ಪುಸ್ತಕ ಬರೆಯಲು ನಿಮಗೆ ಮಾತ್ರ ಸಾಧ್ಯ, ಏಕೆಂದರೆ ಅವರನ್ನು ನೀವು ಭೇಟಿಯಾಗಿ, ಅವರ ಬಗ್ಗೆ ಪುಸ್ತಕ ಬರೆಯುವುದು ಬಹಳ ಅಪರೂಪ" ಎಂದು ಹೇಳಿದರು.

ಮೂರನೆಯವರು ಸುಮಂಗಲಿ ಸೇವಾಶ್ರಮದ ಅಧ್ಯಕ್ಷರಾದ ಡಾ. ಎಸ್. ಜಿ. ಸುಶೀಲಮ್ಮ ಅವರು. ಸಾಮಾನ್ಯವಾಗಿ ಅವರ ಆಶ್ರಮಕ್ಕೆ ನಾನು ವಾರಕೊಮ್ಮೆಯಾದರೂ ಹೋಗುತ್ತಿರುತ್ತೇನೆ, ಅಮ್ಮರವರೊಂದಿಗೆ ಕುಳಿತು ಉಭಯ ಕುಶಲೋಪರಿ ಆಶ್ರಮದ ವಿಚಾರಗಳನ್ನು ಮಾತನಾಡುತ್ತಿರುತ್ತೇವೆ, ಈ ನಡುವೆ ನನ್ನ ಮಗ ನಿಶಾನ್ ಜಿ.ಕೆ. ವಕೀಲನಾಗಿದ್ದು, ಈತನನ್ನು ಸುಮಂಗಲಿ ಸೇವಾಶ್ರಮದ ಸಂಸ್ಥೆಗೆ ಕಾನೂನು ಸಲಹೆಗಾರರನ್ನಾಗಿ ನೇಮಿಸಿಕೊಂಡಿರುತ್ತಾರೆ. ಹೀಗಾಗಿ, ನಾನು ಸಾಮಾನ್ಯವಾಗಿ ಅಮ್ಮನವರನ್ನು ಭೇಟಿ ಮಾಡುತ್ತಿರುತ್ತೇನೆ, ಹಾಗೆ ಮಾತನಾಡುವಾಗ ನಾನು ಅಮ್ಮನೊಂದಿಗೆ ನಾಡೋಜ ವೂಡೇಪಿ ಕೃಷ್ಣರವರ ಕುರಿತಾದ ಒಂದು ಅಂಕಣವು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಕಳೆದ ಎರಡು ವರ್ಷಗಳಿಂದ "ಆಡುಮುಟ್ಟದ ಸೊಪ್ಪಿಲ್ಲ ವೂಡೇಪಿ ಕೃಷ್ಣ" ಎಂಬ ಅವರ ಕಥೆಯು ನಮ್ಮ ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದೆ, ದೇಶ ವಿದೇಶದಲ್ಲೂ ಅವರ ಅಂಕಣವನ್ನು ಓದಿ ಮೆಚ್ಚುಗೆ ಸೂಚಿಸುತ್ತಿದ್ದಾರೆ ಎಂದು ಹೇಳಿದಾಗ, ಅವರು ಹೇಳಿದ್ದು ಒಂದೇ ಮಾತು, "ನಮ್ಮಂತಹವರ ಜೀವಿತ ಅವಧಿಯಲ್ಲಿ, ವೂಡೇಪಿ ಕೃಷ್ಣರವರಂತಹ ಅಪರೂಪದ ವ್ಯಕ್ತಿಯ ಪುಸ್ತಕವನ್ನು ನೀವು ಬರೆಯುತ್ತಿರುವುದು ನಿಜಕ್ಕೂ ನನಗೆ ಸಂತೋಷ ತಂದಿದೆ, ಏಕೆಂದರೆ ಅಂತಹ ವ್ಯಕ್ತಿ ಮಾಡದೆ ಇರುವ ಯಾವ ಕೆಲಸವೂ ಇಲ್ಲ, ಶಿಕ್ಷಣ ಕ್ಷೇತ್ರದಲ್ಲಾಗಿರಬಹುದು, ಸಾಮಾಜಿಕ ಕ್ಷೇತ್ರದಲ್ಲಾಗಿರಬಹುದು, ದೀನ ದಲಿತರ ಸೇವೆಯಾಗಿರಬಹುದು ಒಂದಲ್ಲ, ಎರಡಲ್ಲ ಹತ್ತಾರು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಬಹಳ ಅಪರೂಪದ ವ್ಯಕ್ತಿ, ಇಂತಹವರ ಕುರಿತು ನೀವು ಒಂದು ಗ್ರಂಥವನ್ನು ಬರೆದು ಲೋಕಾರ್ಪಣೆ ಮಾಡುತ್ತಿರುವುದು ನನಗೆ ಎಲ್ಲಿಲ್ಲದ ಸಂತೋಷವಾಗಿದೆ. ನಾಡೋಜ ವೂಡೇಪಿ ಕೃಷ್ಣರವರ ಗ್ರಂಥ ಲೋಕಾರ್ಪಣೆ ಆದಷ್ಟು ಬೇಗನೆ ಆಗಲಿ, ಇದೊಂದು ಇತಿಹಾಸವಾಗಲೀ, ಹಾಗೂ ಇಂತಹ ಸಾಹಸಕ್ಕೆ ನೀವು ಮನಸ್ಸು ಮಾಡಿರುವುದಕ್ಕೆ ನನಗೆ ಬಹಳ ಹೆಮ್ಮೆ ಎನ್ನಿಸುತ್ತಿದೆ, ನಿನ್ನ ಈ ಅಪರೂಪದ, ಕಷ್ಟಸಾಧ್ಯವಾದ ಕೆಲಸಕ್ಕೆ ಕೈ ಹಾಕಿರುವುದು ತುಂಬಾ ಒಳ್ಳೆಯ ಕೆಲಸ ಹಾಗೂ ನೀವು ಅನೇಕರಿಗೆ ಮಾದರಿ.

ಹಾಗೆಯೇ ವೂಡೇಪಿ ಕೃಷ್ಣರವರ ಗ್ರಂಥದ ಲೋಕಾರ್ಪಣೆಯ ಕೆಲಸ ಕಾರ್ಯಗಳಲ್ಲಿ ನನ್ನ ಸಂಪೂರ್ಣ ಸಹಕಾರ, ಪ್ರೋತ್ಸಾಹ ನಿಮಗೆ ಇದೆ ಮಗ" ಎಂದು ಸುಮಂಗಲಿ ಸೇವಾಶ್ರಮದ ಅಮ್ಮ ಹೇಳಿದ್ದಾಗ ನಾನು ಸಂತೋಷದಿಂದ ಭಾವುಕನಾದೆ.

ನಾಲ್ಕನೆಯ ವ್ಯಕ್ತಿ, ಯಾದಗಿರಿ ಜಿಲ್ಲೆಯ ವಕೀಲರು, ಆದಿಜಾಂಬವ ಜಾಗೃತಿ ಪತ್ರಿಕೆ ಬಳಗದ ಶಾಂತಪ್ಪ ಖಾನಹಳ್ಳಿರವರು

"ಸಾರ್, ಕಳೆದ ಎರಡು ವರ್ಷಗಳಿಂದ ಶೇಷಾದ್ರಿಪುರಂ ಕಾಲೇಜಿನ ಮುಖ್ಯಸ್ಥರಾದ ಡಾ. ವೂಡೇಪಿ ಕೃಷ್ಣರವರ ಬಗ್ಗೆ ತಾವು ಬರೆಯುತ್ತಿರುವುದನ್ನು ಪ್ರತಿ ಸಂಚಿಕೆಯನ್ನು ತಪ್ಪದೇ ಓದುತ್ತೇನೆ. ವೂಡೇಪಿ ಸಾಹೇಬರನ್ನು ನಾನು ಒಂದೆರೆಡು ಕಾರ್ಯಕ್ರಮದಲ್ಲಿ ಅದು ಆದಿಜಾಂಬವ ಜಾಗೃತಿ ಪತ್ರಿಕೆಯ ಸಮಾರಂಭಗಳಲ್ಲಿ ದೂರದಿಂದ ನೋಡಿದ್ದೇನೆ, ಆದರೆ ಇವರು ಇಂತಹ ಗಣ್ಯವ್ಯಕ್ತಿ, ಸಮಾಜ ಸೇವಕರು, ಶಿಕ್ಷಣ ಕ್ಷೇತ್ರದಲ್ಲಿ ಅಪರೂಪದ ಸಾಧನೆ, ದೀನ ದಲಿತರ ಬಗ್ಗೆ ಸಾಮಾಜಿಕ ಕಳಕಳಿ ಮತ್ತು ಗಾಂಧಿವಾದಿ ಎಂದು ತಾವು ಪತ್ರಿಕೆಯಲ್ಲಿ ಬರೆಯುತ್ತಿದ್ದ ಮಾಹಿತಿಗಳನ್ನು ಓದಿ ನನಗೆ ಆನಂದ, ಆಶ್ಚರ್ಯವಾಯಿತು. ಏಕೆಂದರೆ ನಮ್ಮ ಜಾಂಬವ ಎಂ. ಗಂಗಾಧರ್‌ರವರು ಹೇಳಿ ಕೇಳಿ ಒಂದು ತಳಮಟ್ಟದ ಆದಿಜಾಂಬವ ಜನಾಂಗದ ಹೆಸರಿನ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು 27 ವರ್ಷದಿಂದ ನಡೆಸಿಕೊಂಡು ಬರುತ್ತಿದ್ದಾರೆ, ಈಗಾಗಲೇ ಬೇರೆ ಬೇರೆ ಸಮುದಾಯದ ವ್ಯಕ್ತಿಗಳ ಪರಿಚಯವನ್ನು ಪತ್ರಿಕೆಯಲ್ಲಿ ಓದುಗರಿಗೆ ತಮ್ಮ ಬರವಣಿಗೆಯ ಮೂಲಕ ಮಾಡಿಕೊಟ್ಟಿರುತ್ತೀರಿ, ಆದರೆ ನನ್ನ ಅನುಭವದಲ್ಲಿ ವೂಡೇಪಿ ಕೃಷ್ಣರವರ ಕುರಿತಾದ ಅಂಕಣ, ಅವರ ಪರಿಚಯವನ್ನು ತಾವುಗಳು ಪತ್ರಿಕೆಯಲ್ಲಿ ಬರೆದು ಹಳ್ಳಿಗಾಡಿನಲ್ಲಿರುವ ನಮ್ಮಂತಹವರಿಗೆ ಅವರ ಬಗ್ಗೆ ಅಪರೂಪದ ಮಾಹಿತಿಗಳನ್ನು ಕೊಟ್ಟು ನಾವು ಅವುಗಳನ್ನು ಓದಿ, ನಾವ್ಯಾರು ವೂಡೇಪಿ ಕೃಷ್ಣರವರಂತೆ ಆಗಲು ಎಂದಿಗೂ ಯಾರಿಗೂ ಸಾಧ್ಯವಿಲ್ಲ. ಆದರೆ ಅವರ ಆಚಾರ, ವಿಚಾರ, ಸಂಸ್ಕಾರಗಳನ್ನು ನಮ್ಮ ನಮ್ಮ ಜೀವನದಲ್ಲಿ, ನಮ್ಮ ಮಕ್ಕಳಲ್ಲಿ ಹಾಗೂ ಮುಂದಿನ ಪೀಳಿಗೆಯವರು ಅಲ್ಪ ಸ್ವಲ್ಪ ಅಳವಡಿಸಿಕೊಂಡರೆ ಸಾಕು, ಅದೇ ನಾವೆಲ್ಲರೂ ವೂಡೇಪಿ ಕೃಷ್ಣರವರಿಗೆ ಕೊಡುವ ಗೌರವ ಎಂದು ಈ ಮೂಲಕ ತುಂಬು ಹೃದಯದಿಂದ ಹೇಳ ಬಯಸುತ್ತೇನೆ."

ಒಟ್ಟಾರೆ ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು ಜಾಂಬವ ಎಂ. ಗಂಗಾಧರ್ ಸಾರ್‌ರವರು ಪತ್ರಿಕೆಯ ಮೂಲಕ ಬಹಳ ಎತ್ತರವಾದ, ಗಾಂಧಿವಾದಿ

ನಾಡೋಜ, ವೂಡೇಪಿ ಕೃಷ್ಣರವರನ್ನು ಕುರಿತು ಅಂಕಣದಲ್ಲಿ ಬರೆದಿರುವ ಲೇಖನಗಳನ್ನು ಗ್ರಂಥ ರೂಪದಲ್ಲಿ ಲೋಕಾರ್ಪಣೆ ಮಾಡುತ್ತಿರುವ ಈ ಶುಭ ಸಂದರ್ಭದಲ್ಲಿ ವೂಡೇಪಿ ಕೃಷ್ಣ ಅಣ್ಣರವರಿಗೆ ಹೆಚ್ಚಿನ ಆಯುರಾರೋಗ್ಯ ಕರುಣಿಸಲಿ ಎಂದು ಸಮಸ್ತ ಓದುಗರ ಪರವಾಗಿ ಮತ್ತು ನನ್ನ ಕುಟುಂಬದ ಪರವಾಗಿ ತುಂಬು ಹೃದಯದಿಂದ ಮನದಾಳದಿಂದ ಹೇಳಬಯಸುತ್ತೇನೆ."

"ಒಳ್ಳೆಯ ಕೆಲಸ, ವೂಡೇಪಿ ಕೃಷ್ಣರವರನ್ನು ಕುರಿತ ಗ್ರಂಥವು ಮುಂದಿನ ಪೀಳಿಗೆಗೆ ಒಂದು ಇತಿಹಾಸದ ಪಠ್ಯಪುಸ್ತಕವಾಗಲೀ ಎಂದು ಆಶಿಸುತ್ತೇನೆ."

ಹೀಗೆ ಅವರವರ ಮನದಾಳದ ಮಾತುಗಳನ್ನು ಹೇಳಿದ್ದು ನನಗೆ ಎಲ್ಲೋ ಒಂದು ಕಡೆ ಅಗೆದು, ಬಗೆದು, ತೆಗೆದಾದರೂ ವೂಡೇಪಿ ಕೃಷ್ಣರವರ ಬಗ್ಗೆ ಬರೆಯಬೇಕೆನಿಸುತ್ತದೆ.



"ಜ್ಞಾನ ದೇಗುಲದ ಸತ್ಯವಂತ"

ಹೊತ್ತಿಲ್ಲದ ಹೊತ್ತಿನಲ್ಲಿ ವೂಡೇಪಿಯವರ ಕುರಿತು ಸಂಚಿಕೆಗೆ ಏನು ಬರೆಯಬೇಕು, ಯಾವ ವಿಷಯವನ್ನು ಬರೆಯಬೇಕು, ಎಲ್ಲಿಂದ ಪ್ರಾರಂಭ ಮಾಡಬೇಕು ಎಂದು ಚಡಪಡಿಸುತ್ತಾ ಇರುವಾಗ ಒಂದು ದಿನ ಸರಿ ಸುಮಾರು ಬೆಳಿಗ್ಗೆ 11.00 ಗಂಟೆಗೆ ಒಂದು ಫೋನ್ ಕಾಲ್ ಬಂದಿತು. ಆ ಕಡೆಯಿಂದ "ಸಾರ್ ನಮಸ್ಕಾರ, ನಾನು ಪಡಶೆಟ್ಟಿ ಸಾರ್, ಎಂಬ ಹಿರಿಯ ಜೀವಿ, ಹಿರಿಯ ಹಾಸ್ಯಕವಿ, ಹಾಸ್ಯದರ್ಶನ ಪತ್ರಿಕೆಯ ಸಂಪಾದಕ", ಈ ಹಿರಿಯ ಜೀವಿ ನನ್ನನ್ನು ಸಾರ್ ಎಂದು ಕರೆದಾಗ ನಿಜಕ್ಕೂ ನಾನು ಒಂದು ರೀತಿಯ ತಳಮಳಕ್ಕೆ ನನ್ನನ್ನು ನಾನು ಅಳವಡಿಸಿಕೊಂಡು

ಬಿಡುತ್ತೇನೆ. ಏಕೆಂದರೆ ನನಗಿಂತ ಅತ್ಯಂತ ಹಿರಿಯರು, ಅವರ ಒಂದು ರೀತಿಯಲ್ಲಿ ಸರ್ವಜನಾಂಗದ ಶಾಂತಿಯ ತೋಟವೆಂಬಂತೆ, 'ಸರ್ವೇಜನಾಃ ಸುಖಿನೋ ಭವಂತು' ಎನ್ನುವ ಹಾಗೆ ಅವರೆಲ್ಲಿ ನಾನೆಲ್ಲಿ ಇಂತಹವರ ಅಂದರೆ ನನ್ನ ಬಗ್ಗೆ ಅವರಿಗಿರುವ ಅಪಾರವಾದ ಪ್ರೀತಿ, ಅವರು ನನಗೆ ತೋರುವ ವಾತ್ಸಲ್ಯಕ್ಕೆ ಒಂದು ಸೇತುವೆಯಾಗಿ ಗಟ್ಟಿ ಅಡಿಪಾಯದಂತೆ ಇರುವುದು ನಮ್ಮ ವೂಡೇಪಿ ಕೃಷ್ಣ ಸಾರ್‌ರವರು, ಹೌದು ವೂಡೇಪಿ ಕೃಷ್ಣರವರು ನನ್ನ ಜೀವನದಲ್ಲಿ ಬದುಕಿನಲ್ಲಿ, ಬರೆಹದಲ್ಲಿ ಒಂದು ಗಟ್ಟಿಯಾದ ಸೇತುವೆಯಾಗಿರುವುದಕ್ಕೇನೆ ಇಂದು ಕೆಲವಾರು ಸಾಹಿತಿಗಳು, ಪತ್ರಕರ್ತರು ತಪ್ಪೋ, ಒಪ್ಪೋ ನನಗೆ ಗೊತ್ತಿರುವ, ತಿಳಿದಿರುವ ವಿಷಯಗಳನ್ನು, ವಿಚಾರಗಳನ್ನು ವೂಡೇಪಿ ಕೃಷ್ಣರವರ ಬಗ್ಗೆ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಬರೆದಾಗ ಅನೇಕರು ಓದಿ ಬರವಣಿಗೆಯ ಲೋಕದಲ್ಲಿ ಸ್ವಲ್ಪ ಸ್ವಲ್ಪವೇ ತೆವಳುತ್ತಾ ಬರೆಯುತ್ತಿರುವ ನನ್ನನ್ನು ನನ್ನ ಬರವಣಿಗೆಯನ್ನು ಅದರಲ್ಲೂ ವೂಡೇಪಿ ಕೃಷ್ಣರವರ ಅಂಕಣವನ್ನು ಓದಿ ಪ್ರೋತ್ಸಾಹಿಸುತ್ತಾ ಸಹಕರಿಸುತ್ತಾ ಚೆನ್ನಾಗಿ ಬರೆಯುತ್ತೀರಾ ಎಂದು ಹೇಳುವವರಲ್ಲಿ ಈ ಸಂಚಿಕೆಯ ಕಥಾನಾಯಕರು ನನ್ನ ಅಭಿಮಾನಿಗಳಾದ ಶ್ರೀ ಎಸ್. ಎಸ್. ಪಡಶೆಟ್ಟಿಯವರು ಒಬ್ಬರು.

ಹೀಗೆ ನಾನು ಅವರನ್ನು ಭೇಟಿಯಾದಾಗಲೆಲ್ಲಾ ಫೋನಿನಲ್ಲಿ ಮಾತನಾಡಿದಾಗಲೆಲ್ಲಾ ಅವರು ಹೇಳುತ್ತಿದ್ದರು "ಸಾರ್ ಪತ್ರಿಕೆಯಲ್ಲಿನ ಲೇಖನವನ್ನೆಲ್ಲಾ ಓದಿದೆ, ಎಲ್ಲವೂ ಅದ್ಭುತವಾಗಿ ಮೂಡಿ ಬರುತ್ತಿದೆ, ಅದರಲ್ಲೂ ತಾವು ಬರೆಯುತ್ತಿರುವ ಆಡು ಮುಟ್ಟದ ಸೊಪ್ಪಿಲ್ಲ–ವೂಡೇಪಿ ಕೃಷ್ಣರವರ ಕುರಿತಾದ ಲೇಖನವು ತುಂಬಾ ಚೆನ್ನಾಗಿ ಬರುತ್ತಿದೆ ಸಾರ್, ನಾನು ಅವರ ಕುರಿತ ಒಂದು ಸಣ್ಣ ಲೇಖನವನ್ನು ನನಗೆ ತಿಳಿದಿರುವ ಮಟ್ಟಿಗೆ ಬರೆದು ಕೊಡಲೇ ಸರ್" ಎಂದು ಕೇಳಿದಾಗ ನಿಜಕ್ಕೂ ನನಗೆ ತುಂಬಾ ಸಂತೋಷವಾಯಿತು. ಏಕೆಂದರೆ ನಾನು ಮೊದಲೇ ಹೇಳಿದ ಹಾಗೆ ನಾನು ಬರೆಯುವ ವೂಡೇಪಿ ಕೃಷ್ಣರವರ ಅಂಕಣದಿಂದ ಹೂವಿನಿಂದ ನಾರು ಸ್ವರ್ಗಕ್ಕೆ ಹೋದಂತೆ ಅನೇಕರ ಸಾಂಗತ್ಯ ಇಂದು ನನಗೆ ಸಿಕ್ಕಿದೆ ಎಂದರೆ ಅದಕ್ಕೆ ವೂಡೇಪಿ ಕೃಷ್ಣರವರು ಮತ್ತು ಅವರ ಅಂಕಣವೆಂದು ತುಂಬು ಹೃದಯದಿಂದ ಹೇಳುತ್ತೇನೆ, ಅದಕ್ಕಾಗಿಯೇ ನನಗೆ ವೂಡೇಪಿರವರು ಸದಾ ನನ್ನ ಹಿರಿಯ ಸಹೋದರರು, ಮಾರ್ಗದರ್ಶಕರು, ಚೆನ್ನಾಗಿ ಬರೆದರೂ ತಪ್ಪು ಬರೆದರೂ ಪ್ರೀತಿಸುವ, ಒಪ್ಪುವ ವೂಡೇ ಪಿ ರವರು ನನಗೆ ಒಂದು ಗಟ್ಟಿಯಾದ ಸೇತುವೆಯಾಗಿ ನಿಂತಿದ್ದಾರೆ ಎಂದು ನನ್ನ ಅಂತರಾಳದಿಂದ ಹೇಳಿದರೆ ಅದೇನು ಅತಿಶಯೋಕ್ತಿಯಾಗಲಾರದು.

ಹೀಗಾಗಿ ವೂಡೇಪಿರವರ ಅಂಕಣದಲ್ಲಿ ಈ ಬಾರಿ ಹಿರಿಯ ಹಾಸ್ಯಕವಿ, ಹಾಸ್ಯ ದರ್ಶನದ ಸಂಪಾದಕರು ಆದ ಶ್ರೀ ಎಸ್. ಎಸ್. ಪಡಶೆಟ್ಟಿಯವರು ವೂಡೇಪಿ ಕುರಿತು ಏನು ಹೇಳಿದ್ದಾರೆ, ಏನು ಬರೆದಿದ್ದಾರೆ ಎಂದು ಓದೋಣ.

ಜ್ಞಾನ ದೇಗುಲದ ಸತ್ಯವಂತ

ನಾಡೋಜ ವೂಡೇಪಿ ಕೃಷ್ಣರವರ ಭವ್ಯ ಬದುಕು, ಅಪ್ಪಟ ಗಾಂಧಿವಾದಿಗಳು, ಸ್ವಾತಂತ್ರ್ಯ ಹೋರಾಟದ ಮನೆತನದಲ್ಲಿ ಹುಟ್ಟಿ ಬೆಳೆದವರು. ವಿದ್ಯಾರ್ಥಿ ದೆಸೆಯಲ್ಲೇ ಸತ್ಯ ಅಹಿಂಸೆ, ಕರ್ತವ್ಯ ಪ್ರಜ್ಞೆಯುಳ್ಳವರು. ಅವರ ಸಮಯ ಪ್ರಜ್ಞೆ ಮೆಚ್ಚುವಂತಹದ್ದು, ಯಾವುದೇ ಕಾರ್ಯಕ್ರಮ ಒಪ್ಪಿಕೊಂಡರೂ ಅವರು ನಿಗದಿತ ಸಮಯಕ್ಕೆ ಹಾಜರಾಗುವುದು ಅವರ ಹಿರಿಯ ಗುಣ. ಗಾಂಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸಲ್ಲಿಸಿದ ಅನುಪಮ ಸೇವೆ ಮೆಚ್ಚುವಂತಹದ್ದು. ಶೇಷಾದ್ರಿಪುರಂ ಕಾಲೇಜಿನ ಸಂಸ್ಥೆಗಳಿಗೆ ಕಾರ್ಯದರ್ಶಿಗಳಾಗಿ ಸಲ್ಲಿಸಿದ ಸೇವೆ ಮರೆಯಲಾಗದು. ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸಿದಾಗ ಖಚಿತ ನೇರವಾದ ಮುತ್ತಿನಂತಹ ಮಾತುಗಳಿಂದ ಪ್ರೇಕ್ಷಕರನ್ನು ಸೆಳೆಯುವ ಮಂತ್ರಮುಗ್ಧರನ್ನಾಗಿಸುವ ಶಕ್ತಿಯುಳ್ಳವರು. ಅಪ್ಪಟ ಕನ್ನಡ ಪ್ರೇಮಿಗಳು, ಕನ್ನಡ ಸಾಹಿತಿಗಳು, ಪ್ರೋತ್ಸಾಹ ನೀಡುವ ಹಿರಿಯ ಗುಣ ಮರೆಯಲಾಗದು. ಶೇಷಾದ್ರಿಪುರಂ ಕಾಲೇಜಿನಲ್ಲಿರುವ ವೇದಿಕೆಗಳನ್ನು ಉಚಿತವಾಗಿ ನೀಡಿ, ಕಾರ್ಯಕ್ರಮ ಯಶಸ್ವಿಗೊಳಿಸಲು ಕಾರಣಕರ್ತರಾದವರು.

ನಾನು ಒಂದು ಸಲ ನನ್ನ ಪೂಜ್ಯ ಗುರುಗಳು ಬರೆದ ಎಜುಕೇಷನ್ ಸೈಕಾಲಜಿ ಪುಸ್ತಕ ಇಂಗ್ಲೀಷ್ ಆವರ್ತ ಪುಸ್ತಕಗಳನ್ನು ಕಾಲೇಜಿನ ಗ್ರಂಥಾಲಯಕ್ಕೆ ಕೊಂಡು 2000ರೂಗಳ ಚೆಕ್‌ನ್ನು ನೀಡಿ ಪ್ರೋತ್ಸಾಹಿಸಿದವರು. ಬೆಂಗಳೂರಿನ ಗಾಂಧಿನಗರ ಕ್ಷೇತ್ರದ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದಾಗ ಕನ್ನಡಕ್ಕಾಗಿ ಸಲ್ಲಿಸಿದ ಸೇವೆ ಸದಾ ನೆನಪಿನಲ್ಲಿ ಉಳಿಯುವಂತಹದ್ದು. ಸಾಹಿತ್ಯ, ಕಲೆ, ಸಂಗೀತ, ಸಂಸ್ಕೃತಿಗಳನ್ನು ಜೀವನದ ಉಸಿರಾಗಿಸಿಕೊಂಡವರು. ಅವರ ಸೇವೆಗೆ ಬಂದ ಪಶಸ್ತಿಗಳು ಲೆಕ್ಕವಿಲ್ಲದಷ್ಟು ಅವರ ಸೇವೆಯನ್ನು ಗಮನಿಸಿದ ಕನ್ನಡ ವಿಶ್ವವಿದ್ಯಾನಿಲಯವು ಅತ್ಯುನ್ನತ ಪ್ರಶಸ್ತಿ "ನಾಡೋಜ" ನೀಡಿ ಗೌರವಿಸಿದೆ. ಕನ್ನಡ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದವರು ಸಭೆ ಸಮಾರಂಭಗಳಲ್ಲಿ ನಿರರ್ಗಳವಾಗಿ ಮಾತನಾಡಿ ಸಭಿಕರನ್ನು ರಂಜಿಸಿದವರು. ನಿಸಹಾಯಕರಿಗೆ, ಬಡಬಗ್ಗರಿಗೆ, ಧಾರಾಳವಾಗಿ ಹಣ ಸಹಾಯ ಮಾಡಿದವರು ಶೇಷಾದ್ರಿಪುರಂ ಕಾಲೇಜಿನ ಕಾರ್ಯದರ್ಶಿಗಳಾದ ಮೇಲೆ ಕಾಲೇಜಿನ ಶ್ರೇಯಸ್ಸನ್ನು ಬಯಸಿದವರು. ವಿದ್ಯಾರ್ಥಿ ಶಿಕ್ಷಕ ಸಮೂಹ ಹಾಗೂ ಆಡಳಿತ ಮಂಡಳಿಯ ಸದಸ್ಯರನ್ನು ತಮ್ಮ

ಮನೆಯ ಸದಸ್ಯರಂತೆ ನೋಡಿಕೊಂಡವರು. ಶೇಷಾದ್ರಿಪುರಂ ಕಾಲೇಜುಗಳಿಗೆ ಘನತೆ, ಗೌರವ ತಂದುಕೊಟ್ಟವರು. ಅನೇಕ ಸಾಹಿತಿಗಳು, ಪತ್ರಕರ್ತರುಗಳು ತುಂಬು ಹೃದಯದಿಂದ ಸನ್ಮಾನ್ಯ ಶ್ರೀ ವೂಡೇ ಪಿ. ಕೃಷ್ಣರನ್ನು ನೆನೆಸಿಕೊಳ್ಳುತ್ತಾರೆ.

ಆ ಪತ್ರಿಕೆಯ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದವರು ಹಲವಾರು ಪತ್ರಿಕೆಗಳಿಗೆ ಸಹಾಯ ನೀಡಿದವರು, ಗಾಂಧಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಗಾಂಧೀಜಿಯವರ ತತ್ವ ಅದರ್ಶಗಳನ್ನು ಪ್ರಚಾರಮಾಡಿ ಜನಮಾನಸದಲ್ಲಿ ಆದರ್ಶ ವ್ಯಕ್ತಿಗಳಾಗಿ ಜೀವನದಲ್ಲಿ ಅಪಾರ ನೆಮ್ಮದಿ, ಸುಖ, ಶಾಂತಿ ಗಳಿಸಿದವರು. ಗಾಂಧೀಜಿಯವರ ತತ್ವ ಆದರ್ಶಗಳನ್ನು ಸ್ವತಃ ತಾವೇ ಆಚರಿಸಿಕೊಂಡು ಇನ್ನೊಬ್ಬರಿಗೆ ಮಾದರಿಯಾಗಿದ್ದಾರೆ. ಅವರ ಬದುಕು ಇನ್ನೊಬ್ಬರಿಗೆ ಸ್ಫೂರ್ತಿದಾಯಕವಾದದ್ದು.

ಅವರು ವಿದ್ಯಾರ್ಥಿ ದೆಸೆಯಲ್ಲಿಯೇ ಸರಳ ಜೀವನ ಉದಾತ್ತ ಚಿಂತನೆಗಳಿಂದ ಬದುಕನ್ನು ಸಾರ್ಥಕಪಡಿಸಿಕೊಂಡವರು, ಕಷ್ಟಪಟ್ಟು ವಿದ್ಯಾರ್ಥಿ ಜೀವನದಲ್ಲಿಯೇ ಶಿಸ್ತನ್ನು ರೂಢಿಸಿಕೊಂಡವರು, ಉದಾತ್ತ ಚಿಂತನೆಗಳಿಂದ ಅವರ ಬದುಕು ಶ್ರೀಮಂತಗೊಳಿಸಿಕೊಂಡವರು, ವಿದ್ಯಾರ್ಥಿ ದೆಸೆಯಲ್ಲಿಯೇ ಆಳವಾಗಿ ಅಧ್ಯಯನ ಮಾಡಿ ಬದುಕನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡವರು. ಬಸವಣ್ಣರವರ ವಚನದ ರೀತಿ ಬದುಕನ್ನು ಉದಾತ್ತಗೊಳಿಸಿದವರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಇದಿರ ಹಳಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಕೂಡಲಸಂಗಮ ಒಲಯುವ ಪರಿ" ಎಂಬ ವಚನದ ರೀತಿ ಸಪ್ತ ಸೂತ್ರಗಳನ್ನು ಅವರ ಜೀವನದಲ್ಲಿ ಅಳವಡಿಸಿಕೊಂಡವರು.

ಜೀವನದಲ್ಲಿ ಸತ್ಯ, ಕರ್ತವ್ಯ ಪ್ರಜ್ಞೆ, ದೇಶಾಭಿಮಾನ, ಸರಳತೆ, ಸಮಯಪ್ರಜ್ಞೆ, ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಜ್ಞಾನದೇಗುಲದ ಸತ್ಯವಂತರಾದದ್ದು ಇತಿಹಾಸ.

ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ಕಳೆದ ಎರಡು ವರ್ಷಗಳಿಂದ ನಮ್ಮ ಆತ್ಮೀಯರು, ಜಾಂಬವ ಸಾಹಿತಿಗಳು, ಮತ್ತು ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರಾದ ಜಾಂಬವ ಎಂ. ಗಂಗಾಧರ್ ಅವರು ಪತ್ರಿಕೆಯಲ್ಲಿ ವೂಡೇಪಿ ಕೃಷ್ಣರವರ ಕುರಿತಾದ ಅಂಕಣವನ್ನು ಬರೆಯುತ್ತಿದ್ದು, ಪ್ರತಿ ಸಂಚಿಕೆಯಲ್ಲಿಯೂ ಬಹಳ ವಿಶೇಷ ರೀತಿಯಲ್ಲಿದ್ದು, ತುಂಬಾ ಅದ್ಭುತವಾಗಿ ಮೂಡಿ ಬರುತ್ತಿದೆ. ನಾನು ಸಹ ಪತ್ರಿಕೆಯಲ್ಲಿನ ವೂಡೇಪಿ ಅಂಕಣವನ್ನು ಚತು ತಪ್ಪದೆ ನಿರಂತರವಾಗಿ ಓದುತ್ತಿರುತ್ತೇನೆ, ಇಲ್ಲಿ ಒಂದು ಮಾತನ್ನು ತುಂಬು ಹೃದಯದಿಂದ ಹೇಳಿದರೆ

ಅದು ತಪ್ಪಾಗಲಾರದು, ನಾಡೋಜ ವೂಡೇಪಿ ಕೃಷ್ಣರವರ ಕುರಿತಾದ ಅನೇಕರು ವಿವಿಧ ರೀತಿಯ ಪುಸ್ತಕಗಳನ್ನು ಬರೆದಿರಬಹುದು, ಆದರೆ ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ನಮ್ಮ ಜಾಂಬವ ಎಂ. ಗಂಗಾಧರ್‌ರವರು ಬರೆಯುತ್ತಿರುವ ಪ್ರತಿಯೊಂದು ಸಂಚಿಕೆಯ ಅಂಕಣವು ಒಂದಕ್ಕಿಂತ ಒಂದು ಅಂಕಣವು ಭಿನ್ನತೆಯಿಂದ ಕೂಡಿದ್ದು, ಸಂಪಾದಕರು ಬಹಳ ಸರಳವಾಗಿ ಕೆಲವೊಮ್ಮೆ ಆಡುಭಾಷೆಯಲ್ಲಿನ ಕನ್ನಡ ಪದಗಳನ್ನು ಬಳಸಿ ಓದುಗರನ್ನು ಮಂತ್ರಮುಗ್ಧರನ್ನಾಗಿಸಿ ವೂಡೇಪಿರವರ ಅಂಕಣವನನು ಮತ್ತೆ ಮತ್ತೆ ಓದಬೇಕೆನ್ನುವ ನಮ್ಮಂತಹ ಓದುಗರಿಗೆ ಸೆಳೆತವಾಗಿದ್ದು ನಿಜ, ಏಕೆಂದರೆ ಒಬ್ಬ ಮಹಾನ್ ಸಾಧಕ, ದೀನ ದಲಿತರ ಚಿಂತಕ, ಶಿಕ್ಷಣ ತಜ್ಞ ವೂಡೇಪಿ ಕೃಷ್ಣರವರು ಯಾರು ಏನೇ ಬರೆದರೂ ಅದು ಸಾಮಾನ್ಯ ಸಂಗತಿಯಲ್ಲ. ಏಕೆಂದರೆ ವೂಡೇಪಿ ಕೃಷ್ಣರವರು ಒಬ್ಬ ಅಸಾಮಾನ್ಯ ವ್ಯಕ್ತಿ, ಅಸಾಮಾನ್ಯ ಕನ್ನಡಿಗ, ಅಸಾಮಾನ್ಯ ಸಮಾಜಸೇವಕ, ಅಸಾಮಾನ್ಯ ದೀನದಲಿತರ ಸೇವಕ, ಇಂತಹವರ ಬಗ್ಗೆ ಅವರ ಕುರಿತು ಬರೆಯಬೇಕಾದರೆ ಅದು ಅಷ್ಟು ಸುಲಭದ ಮಾತಲ್ಲ. ಆದರೆ ನಮ್ಮ ಜಾಂಬವ ಎಂ. ಗಂಗಾಧರ್‌ರವರು ಅಂತಹ ಸಾಹಸಕ್ಕೆ ಕೈಹಾಕಿ ವೂಡೇಪಿ ಕೃಷ್ಣರವರ ಬಗ್ಗೆ ಪರಿಪೂರ್ಣವಾಗಿ ಬರೆದು ಅನೇಕಾನೇಕ ಓದುಗರಿಂದ ಸೈ ಎನ್ನಿಸಿಕೊಳ್ಳುತ್ತಿದ್ದಾರೆ.

ಹಲವಾರು ಸಂಘ ಸಂಸ್ಥೆಗಳಿಗೂ ಅವರ ಸೇವೆ ಮೆಚ್ಚುವಂತಹದ್ದು, ನಾಡು, ನುಡಿ ಅವರ ಸೇವೆಯನ್ನು ಸದಾ ಸ್ಮರಿಸುವಂತಹರಿದ್ದು ಅವರ ಬಗೆಗೆ ಎಷ್ಟು ವರ್ಣಿಸಿದರೂ ಸಾಲದು. ಅವರು ಮಾಡುತ್ತಿರುವ ಸೇವೆ ಇನ್ನೂ ನಮ್ಮ ನಾಡಿಗೆ ದೊರೆಯುವಂತಾಗಲಿ ಎಂದು ಮನದುಂಬಿ ಹಾರೈಸುತ್ತೇನೆ.

ಬಹುಮುಖೀ ಪ್ರಜ್ಞಾಶಾಲಿ

ಕಳೆದ ಕೆಲವು ದಿನಗಳ ಹಿಂದೆ ಸಾಹಿತಿಗಳು, ಸರಿ ಸುಮಾರು 200 ವಿವಿಧ ರೀತಿಯ ಕಥೆ, ಕಾದಂಬರಿ, ಪ್ರವಾಸ ಕಥನ, ಕವನ, ಸಣ್ಣ ಮಕ್ಕಳಿಗೆ ಸಂಬಂಧಪಟ್ಟಂತಹ ಹಿಂದಿನ ಕಾಲದ ಚಂದಮಾಮ ರೀತಿಯಲ್ಲಿ ಪುಸ್ತಕ ಗಳನ್ನು ಬರೆದಿರುವ ಶ್ರೀಮತಿ ಕೆ.ವಿ.ರಾಜೇಶ್ವರಿ, ಇವರ ಕೆಲವು ಕೃತಿಗಳು ಚಲನಚಿತ್ರಗಳಾಗಿದ್ದು ಮತ್ತು ಧಾರಾವಾಹಿ ಗಳಾಗಿವೆ. ಹತ್ತು ಹಲವು ರೀತಿಯಲ್ಲಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿದ್ದಾರೆ. ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯ ಬಹು ದೊಡ್ಡ ಅಭಿಮಾನಿಯೂ ಹೌದು. ನಮ್ಮ ಮಹಿಳಾ ಸಾಹಿತಿ ಶ್ರೀಮತಿ ರಾಜೇಶ್ವರಿ ಅವರು ನಮ್ಮ ಆದಿಜಾಂಬವ ಜಾಗೃತಿ ಪತ್ರಿಕೆಯನ್ನು ಕೆಲವಾರು ವರ್ಷಗಳಿಂದ ನಿರಂತರ ಓದುವ ಬಹು ದೊಡ್ಡ ಓದುಗರು ಎಂದು ಹೇಳಿದರೆ ಅದೇನು ತಪ್ಪಾಗಲಾರದು.

ಇಂತಹ ಸಾಹಿತಿಗಳಾದ ಶ್ರೀಮತಿ ಕೆ.ವಿ.ರಾಜೇಶ್ವರಿ ಅವರು ಇತ್ತೀಚೆಗೆ ನಮ್ಮ ಪತ್ರಿಕೆಯ ಮುದ್ರಣಾಲಯದಲ್ಲಿ ಭೇಟಿಯಾದಾಗ ಅವರು ಮೊದಲು ಹೇಳಿದ್ದು, ಕೇಳಿದ್ದು, "ರೀ, ಗಂಗಾಧರ್ ಆದಿಜಾಂಬವ ಜಾಗೃತಿ ಪತ್ರಿಕೆಯಲ್ಲಿ ವೂಡೇ ಪಿ.ಕೃಷ್ಣ ಅವರ ಕುರಿತಾದ ಅಂಕಣವು ಮತ್ತು ಲೇಖನವು ತುಂಬಾ ಅದ್ಭುತವಾಗಿ ಬರುತ್ತಿದೆ, ಜೊತೆಗೆ ತಾವು ವೂಡೇ ಪಿ. ಅವರ ಬಗ್ಗೆ ಬರೆಯುವ ಶೈಲಿ ಮತ್ತು ಬಳಸುವ ಕನ್ನಡ ಭಾಷೆಯ ಪದಗಳು ಬಹಳ ಚೆನ್ನಾಗಿ ಮೂಡಿಬರುತ್ತಿವೆ, ಹೀಗಾಗಿ ನಾನು ಸಹ ಅವರ ಬಗ್ಗೆ ಏನಾದರೂ ಬರೆಯಬೇಕು ಎಂಬ ತವಕ, ಆಸೆಯಾಗಿದೆ, ಹಾಗೆಯೇ ನಾನು ವೂಡೇ ಪಿ.ಕೃಷ್ಣರವರನ್ನು ತುಂಬಾ ಹತ್ತಿರದಿಂದ ಭೇಟಿಯಾಗಲೀ, ಒಡನಾಟವಾಗಲೀ ಹೊಂದಿಲ್ಲದಿದ್ದರೂ, ಅವರ ಬಗ್ಗೆ ಅಪಾರವಾದ ಗೌರವ, ಪ್ರೀತಿ, ವಿಶ್ವಾಸವಿದೆ, ಏಕೆಂದರೆ ಅವರ ಕಾರ್ಯಶೈಲಿ, ಅವರು ಶಿಕ್ಷಣಕ್ಕಾಗಿ, ಸರ್ಕಾರದ ಅಂಕುಡೊಂಕುಗಳನ್ನು ತಿದ್ದುವ ಅವರ ನುಡಿಗಳು ಮತ್ತು ಮಹಾತ್ಮ ಗಾಂಧೀಜಿಯವರ ಅನುಯಾಯಿಗಳು, ಹಾಗೆಯೇ ಅಂಬೇಡ್ಕರ್ ಅವರ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿರುವವರು, ಮತ್ತು ದೀನ ದಲಿತರ ಬಗ್ಗೆ ನಿರಂತರವಾಗಿ ದುಡಿಯುತ್ತಿರುವ ಬಹುಮುಖಿ ಪ್ರಜ್ಞಾಶಾಲಿ ವೂಡೇ ಪಿ.ಕೃಷ್ಣರವರು".

"ಆದ್ದರಿಂದ ಗಂಗಾಧರ್ ಅವರೇ ನಾನು ವೂಡೇ ಪಿ.ಕೃಷ್ಣ ಅವರ ಕುರಿತಾದ ಒಂದು ಲೇಖನವನ್ನು ಬರೆದುಕೊಡತ್ತೇನೆ, ತಪ್ಪು ಒಪ್ಪುಗಳು ಇದ್ದಲ್ಲಿ ಅದನ್ನು ತಮಗೆ ತೋಚುವ ರೀತಿಯಲ್ಲಿ ತಿದ್ದುಪಡಿ ಮಾಡಿ ಪತ್ರಿಕೆಯಲ್ಲಿ ಪ್ರಕಟಿಸಿ ಎಂದು ಹೇಳಿ ನಂತರ ಕೆಲವು ದಿನಗಳ ನಂತರ ಶ್ರೀಮತಿ ಕೆ.ವಿ.ರಾಜೇಶ್ವರಿ ಅವರು ಬಹಳ ಅಪರೂಪದಲ್ಲಿ ಅಪರೂಪವಾದ ವೂಡೇ ಪಿ.ಕೃಷ್ಣ ಅವರ ಕುರಿತಾದ ಒಂದು ಅದ್ಭುತವಾದ ಲೇಖನವನ್ನು ಕೊಟ್ಟಿರುತ್ತಾರೆ, ನಾನು ಒಂದು ಪತ್ರಿಕೆಯ ಸಂಪಾದಕನಾಗಿ ಆ ಹಿರಿಯ ಸಾಹಿತಿಯವರು ಕೊಟ್ಟಿರುವ ವೂಡೇ ಪಿ.ಕೃಷ್ಣ ಅವರ ಲೇಖನವನ್ನು ಯಾವುದೇ ರೀತಿಯ ತಿದ್ದುಪಡಿ ಮಾಡದೆ ಯಥಾವತ್ತಾಗಿ ಈ ಸಂಚಿಕೆಯ ವೂಡೇ ಪಿ. ಅಂಕಣದಲ್ಲಿ ಪ್ರಕಟಿಸಲು ತುಂಬಾ ಸಂತೋಷವಾಗುತ್ತದೆ. ಅವರು ಬರೆದ ಬರೆಹ ಹೀಗಿದೆ:

"ಶ್ರೀ ವೂಡೇ ಪಿ. ಕೃಷ್ಣ ಅವರನ್ನು ಕುರಿತ ಗ್ರಂಥವೊಂದನ್ನು ಹೊರತರುತ್ತಿರುವ ವಿಚಾರ ಗೊತ್ತಾಗಿ, ಪತ್ರಿಕೆಯ ಸಂಪಾದಕರೊಂದಿಗೆ ಮಾತನಾಡಿ, ಜಾಂಬವ ಗಂಗಾಧರ್‌ರವರು ಬರೆಯುತ್ತಿರುವ 'ಆಡು ಮುಟ್ಟದ ಸೊಪ್ಪಿಲ್ಲ ವೂಡೇ ಪಿ. ಕೃಷ್ಣ' ಎಂಬ ಲೇಖನಗಳ ಪುಸ್ತಕವನ್ನು ಅತೀ ಶೀಘ್ರದಲ್ಲಿ ಲೋಕಾರ್ಪಣೆಗೊಳ್ಳುತ್ತಿರುವ

ಈ ಶುಭ ಸಂದರ್ಭದಲ್ಲಿ ವೂಡೇ ಪಿ. ರವರ ಬಗ್ಗೆ ಬರೆಯುತ್ತಿರುವುದು ನನ್ನ ಜೀವನದಲ್ಲಿ ಎಂದೂ ಮರೆಯಲಾರದ ಘಟನೆ."

"ಅವರ ಬಗ್ಗೆ ಬರೆಯಬೇಕೆಂದು ಕುಳಿತುಕೊಂಡೆ, ಆದರೆ ಎಲ್ಲಿಂದ ಪ್ರಾರಂಭಿಸಬೇಕೋ ನನಗರ್ಥವಾಗಲಿಲ್ಲ. ಶೇಷಾದ್ರಿಪುರಂ ಕಾಲೇಜಿನ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿಯಾಗಿ, ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸುತ್ತಾ ಅವರು ಸಲ್ಲಿಸುತ್ತಿರುವ ಅನುಪಮ ಸೇವೆಯ ಬಗ್ಗೆ ಬರೆಯಬೇಕೋ; ಗಾಂಧಿ ಭವನದ / ಗಾಂಧಿ ಪ್ರತಿಷ್ಠಾನದ ಚುಕ್ಕಾಣಿ ಹಿಡಿದು ಗಾಂಧೀಜಿಯವರ ಮೌಲ್ಯಗಳನ್ನು ಜನತೆಯಲ್ಲಿ ಬಿತ್ತುವ ಸಾಹಸದ ಬಗ್ಗೆ ಬರೆಯಬೇಕೋ, ಅಪ್ಪಟ ಗಾಂಧಿವಾದಿಯಾಗಿಯೇ ಬದುಕುತ್ತಿರುವ ಅವರ ಬಗ್ಗೆ ಬರೆಯಬೇಕೋ, ನಮ್ಮ ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರ ಮನೆಯಲ್ಲಿ ಹುಟ್ಟಿ ಬೆಳೆದ ಬಗ್ಗೆ ಬರೆಯಬೇಕೋ, ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಗಾಂಧೀಜಿಯವರ ತತ್ವಗಳಾದ ಸತ್ಯ, ಅಹಿಂಸೆಯನ್ನು ಮೈಗೂಡಿಸಿಕೊಂಡು ಅವನ್ನೇ ಉಸಿರಾಗಿಸಿಕೊಂಡು ಬದುಕುತ್ತಿರುವ ಬಗ್ಗೆ ಬರೆಯಬೇಕೋ, ಒಬ್ಬ ಒಳ್ಳೆಯ ಸಾಹಿತಿಯಾಗಿಯೂ ಗುರ್ತಿಸಿಕೊಂಡ ಬಗ್ಗೆ ಬರೆಯಬೇಕೋ, ಕಲೆ–ಸಂಸ್ಕೃತಿ, ಸಂಗೀತ ಇವುಗಳನ್ನು ಅರಿತಿದ್ದಲ್ಲದೆ, ಅದನ್ನು ಅರಿತಂತಹ ವ್ಯಕ್ತಿಗಳಿಗೆ ಕೊಡುತ್ತಿರುವ ಪ್ರೋತ್ಸಾಹದ ಬಗ್ಗೆ ಬರೆಯಬೇಕು, ಇಲ್ಲವೇ ನಾಡು ನುಡಿಗಳಿಗೆ ಸಂಘ ಸಂಸ್ಥೆಗಳಿಗೆ ಸಲ್ಲಿಸುತ್ತಿರುವ ಸೇವೆಯ ಬಗ್ಗೆ ಬರೆಯಬೇಕೋ ಒಂದೂ ನನಗೆ ಅರ್ಥವಾಗುತ್ತಿಲ್ಲ."

"ಹೌದು, ಅವರ ವ್ಯಕ್ತಿತ್ವವೇ ಅಂತಹುದು, ಅವರೊಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿ, ಒಂದು ಮಹಾನ್ ಚೇತನ, ಸಮಾಜಪ್ರೇಮಿ, ಸಮಾಜಮುಖಿ, ಮೇಲೆ ಹೇಳಿದ ಪ್ರತಿಯೊಂದು ರಂಗದಲ್ಲಿಯೂ ಅವರು ಸಲ್ಲಿಸಿರುವ, ಸಲ್ಲಿಸುತ್ತಿರುವ ಸೇವೆ ಅನುಪಮ, ಅದ್ವಿತೀಯ ಅಸದೃಶ."

"ನಿಜಕ್ಕೂ ಯೋಚಿಸಿದರೆ ಆಶ್ಚರ್ಯವಾಗುತ್ತದೆ, ಒಬ್ಬ ವ್ಯಕ್ತಿಗೆ ಇಷ್ಟೊಂದು ಮುಖಗಳಿರಲು ಸಾಧ್ಯವೇ ಎಂದು, ಇಷ್ಟೊಂದು ಕೆಲಸವನ್ನು ಮಾಡಲು ಸಾಧ್ಯವೇ ಎಂದು. ಆದರೆ ಇದು ನಿಜ. ಆ ವ್ಯಕ್ತಿ ಆ ಶಕ್ತಿಯೇ ವೂಡೇಪಿ. ಕೃಷ್ಣ ಅವರು. ಇದು ಸಾಧ್ಯವಾಗಿರುವುದು ಚಿಕ್ಕಂದಿನಿಂದಲೂ ತಂದೆ ತಾಯಿಯರ ಬೆಂಬಲದಿಂದ ಜೀವನದಲ್ಲಿ ಮೂಡಿಸಿಕೊಂಡಿರುವ ಆದರ್ಶಗಳಿಂದ, ಕಷ್ಟಪಟ್ಟು ಕೆಲಸ ಮಾಡುತ್ತಿದ್ದರಿಂದ ಒಳ್ಳೆಯ ಜೀವನ ಮೌಲ್ಯಗಳನ್ನು ಬದುಕಿನಲ್ಲಿ ಅಳವಡಿಸಿ ಕೊಂಡಿರುವುದರಿಂದ ಮತ್ತು ಅಪಾರ ಬದುಕಿನ ಪ್ರೀತಿಯಿಂದ."

"ಶೇಷಾದ್ರಿಪುರಂ ಕಾಲೇಜಿನ ತಮ್ಮ ಆಫೀಸಿನಲ್ಲಿ ಕುಳಿತು ವೂಡೇಪಿ. ಕೃಷ್ಣ ಅವರು, ಪ್ರತಿದಿನ ಬದುಕಿನ ಅನೇಕ ರಂಗಗಳಿಂದ ಬಂದ ವ್ಯಕ್ತಿಗಳನ್ನು ಮಾತನಾಡಿಸುತ್ತಾರೆ, ಭೇಟಿ ಮಾಡುತ್ತಾರೆ. ಅಂತಹ ಉನ್ನತ ಸ್ಥಾನದಲ್ಲಿದ್ದರೂ ಒಂದಿನಿತೂ ಆಡಂಬರವಿಲ್ಲ, ಗರ್ವವಿಲ್ಲ, ಅಹಂಕಾರವಿಲ್ಲ ವಿನಯ ವಂತಿಕೆ, ಸಜ್ಜನಿಕೆಯ ಮಾತು. ಸಹಾಯ ಅರಸಿ ಬಂದವರಿಗೆ ಕೈಲಾದ ಸಹಾಯ ಮಾಡುವುದು."

"ಬಹಳ ಹೃದಯ ಶ್ರೀಮಂತಿಕೆ, ಸರಳತೆ, ಕರ್ತವ್ಯನಿಷ್ಠೆ, ಆದರ್ಶ, ಸರ್ವಮಾನವರಲ್ಲಿಯೂ ದೈವತ್ವವನ್ನು ಕಾಣುವ ಗುಣವಿರುವಂತಹ ವ್ಯಕ್ತಿಗಳಿಗೆ ಮಾತ್ರ ಈ ರೀತಿ ಇರಲು ಸಾಧ್ಯ. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ಒಬ್ಬರು ಡಾ. ವೂಡೇಪಿ ಕೃಷ್ಣ ಅವರು."

"ಅವರೊಬ್ಬ ವಾಗ್ಮಿಯೂ ಹೌದು, ಸಭೆ, ಸಮಾರಂಭಗಳಲ್ಲಿ ಅವರು ಮಾತನಾಡುವುದನ್ನು ಕೇಳುವುದೇ ಒಂದು ಸಂತೋಷ. ಧುಮ್ಮಿಕ್ಕುವ ಝುರಿಯಂತೆ ಅವರ ಮಾತು ನಿರರ್ಗಳ, ನೇರ, ದಿಟ್ಟ.. ಆದರೂ ಮಾತು ಅಷ್ಟೇ ಹಿತ, ಅಷ್ಟೇ ಮಿತ, ಅನಾವಶ್ಯಕವಾದ ಒಂದು ಪದವೂ ಇಲ್ಲ."

"ಬಡಬಗ್ಗರ, ದೀನದಲಿತರ, ಅಸಹಾಯಕರ ಬಗೆಗೆ ಅವರಿಗೆ ಗಾಂಧೀಜಿಯಂತೆಯೇ ವಿಶೇಷ ಕರುಣೆ. ಓದಲು ಇಚ್ಛಿಸುವ ಅಂತಹ ವರ್ಗದ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಸೀಟು ಕೊಡುವುದರಿಂದ ಹಿಡಿದು ಓದಿಗೂ ಧನ ಸಹಾಯ ಮಾಡುವ ಹೃದಯವಂತರು ಇವರು. ಉಪಕಾರ ಬಯಸಿ ಬಂದ ಯಾರನ್ನೂ ನಿರಾಸೆ ಮಾಡುವುದಿಲ್ಲ, ಬರಿಗೈಲಿ ಕಳಿಸುವುದಿಲ್ಲ, ಅಂತಹ ಕೊಡುಗೈಯ ದೊರೆ ಶ್ರೀ ವೂಡೇಪಿ ಕೃಷ್ಣರವರು."

"ಇವರು ಸ್ವತಃ ಸಾಹಿತಿಯಾಗಿದ್ದು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಸಾಹಿತಿಗಳನ್ನು ಕಂಡರೆ ಬಹುಪ್ರೀತಿ, ಅವರ ಪುಸ್ತಕಗಳನ್ನು ಹಣ ಕೊಟ್ಟುಕೊಂಡು ಕವಿಗಳಿಗೆ ಪ್ರೋತ್ಸಾಹ ಕೊಡುತ್ತಾರೆ. ತಮ್ಮ ಕಾಲೇಜಿನ ಸಂಘ–ಸಂಸ್ಥೆಗಳಲ್ಲಿರುವ ವೇದಿಕೆಗಳನ್ನು ಸಾಹಿತ್ಯ ಚಟುವಟಿಕೆಗಳಿಗೆ, ಕವಿಗಳ ಪುಸ್ತಕ ಬಿಡುಗಡೆಗೆ ಉಚಿತವಾಗಿ ಕೊಡುತ್ತಾರೆ. ಹಣ ಮಾಡುವುದೇ ದಂಧೆಯನ್ನಾಗಿ ಮಾಡಿಕೊಂಡು ಜನರ ಹಣ ಜಿಗಣಿಗಳ ಹಾಗೆ ಹೀರುವ ಜನರೆಲ್ಲಿ? ಇವರೆಲ್ಲಿ! ನನ್ನ ಅನೇಕ ಪುಸ್ತಕಗಳನ್ನೂ ತಮ್ಮ ಲೈಬ್ರರಿಗೆ ಹಣ ಕೊಟ್ಟುಕೊಂಡು ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಇದನ್ನು ನಾನೆಂದಿಗೂ ಮರೆಯಲಾರೆ."

"ಇವರ ಈ ಸಮಾಜ ಸೇವೆಗೆ ಅಪಾರ ಪ್ರಶಸ್ತಿಗಳು ಇವರನ್ನು ಅರಸಿ ಬಂದಿವೆ, ಅಲ್ಲ ಆ ಪ್ರಶಸ್ತಿಗಳಿಗೆ ಇವರಿಂದ ಗೌರವ ಬಂದಿದೆ ಎನ್ನಬೇಕು. ಇವರ ಸೇವೆಯನ್ನು ಪರಿಗಣಿಸಿದ ಕನ್ನಡ ವಿಶ್ವವಿದ್ಯಾನಿಲಯ ಇವರನ್ನು "ನಾಡೋಜ" ಎಂಬ ಅಭಿಧಾನ ನೀಡಿ ಗೌರವಿಸಿದೆ. ಗಾಂಧೀನಗರ ಕ್ಷೇತ್ರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು ತಮ್ಮ ಕನ್ನಡ ಸೇವೆಯಿಂದಲೇ, ಕನ್ನಡಕ್ಕಾಗಿ ಕೈ ಎತ್ತಿದ್ದರಿಂದಲೇ ಅನೇಕ ಸಂಘ-ಸಂಸ್ಥೆಗಳಲ್ಲಿಯೂ ಇದ್ದು ಅವನ್ನು ಮುಂದಕ್ಕೆ ತರಲು ಶ್ರಮಿಸಿದ್ದಾರೆ."

ಇಂತಹ ಮಹನೀಯರ ಬಗ್ಗೆ ನನಗೆ ತಿಳಿದಿರುವುದು ಅತ್ಯಲ್ಪ. ಅದನ್ನೇ ಈ ಬರವಣಿಗೆಯಲ್ಲಿ ಮೂಡಿಸಿದ್ದೇನೆ. ಭಗವಂತನು ಇಂತಹ ಮಹನೀಯರಿಗೆ ಪೂರ್ಣಾಯುಷ್ಯ ಕೊಟ್ಟು ಮತ್ತಷ್ಟು ಸಮಾಜ ಸೇವೆಯನ್ನು ನಿರಂತರವಾಗಿ ಮಾಡಲಿ ಎಂದು ಆಶಿಸುತ್ತೇನೆ.

ಗಂಗಾಧರ್ ಅವರೇ ಹೇಳಿದಂತೆ ಸರ್ವ ಜನಾಂಗದ ಅಭಿವೃದ್ಧಿಯ ಚಿಂತಕರು, ಲೇಖಕರು, ಪ್ರಗತಿಪರ ಚಿಂತಕರೂ ಆದ ಡಾ. ವೂಡೇ ಪಿ. ಕೃಷ್ಣ ಅವರ ಬಗೆಗಿನ ಗ್ರಂಥ ಬೇಗ ಬೆಳಕು ಕಾಣಲಿ ಎಂದು ಹಾರೈಸುತ್ತಾ.

ಸಂದರ್ಶನಗಳು

"ಲೋಕಮಿತ್ರರಾದ ನಮ್ಮ ಯಜಮಾನರು"

ಸಂ.: ❋ ಜಾಂಬವ ಎಂ. ಗಂಗಾಧರ್

1. ಪತಿಗೆ ತಕ್ಕ ಪತ್ನಿ, ತಮಗಿದು ಸೂಕ್ತವೇ?

ನಮ್ಮ ಯಜಮಾನರು ಒಂದು ಸಾಗರ ಇದ್ದಂತೆ. ಆ ಸಾಗರದ ಒಂದು ಬಿಂದು ನಾನು. ಅವರನ್ನು ಪತಿಯನ್ನಾಗಿ ಪಡೆದ ನಾನು ಧನ್ಯ ಅಂತ ಭಾವಿಸುತ್ತೇನೆ. ನಾನು ನನ್ನ ಯಜಮಾನರಿಗೆ ತಕ್ಕ ಪತ್ನಿ ಅಂತ ತಮಗೆ ಅನ್ನಿಸಿದರೆ ಆ ಮಾತನ್ನು ನಾನೂ ಸಹ ಒಪ್ಪುತ್ತೇನೆ.

2. ತಮ್ಮ ಪತಿಯ ಬಗ್ಗೆ, ಅವರ ಗುಣ ನಡತೆ, ಮನಸ್ಸು, ಮಾತುಗಳು ಇವುಗಳ ಬಗ್ಗೆ ನಿಮ್ಮ ಮಾತಿನಲ್ಲಿ ಹೇಳುವುದಾದರೆ...

ಅವರು ಶಿಸ್ತಿನ ಸಿಪಾಯಿ. ಸಮಯ ಪರಿಪಾಲನೆಯಲ್ಲಿ ಎತ್ತಿದ ಕೈ. ಅವರು ಎಂದಿಗೂ ಕೂಡ ಸಕಾರಾತ್ಮಕವಾಗಿ ಆಲೋಚನೆ ಮಾಡುವವರು. ಎಲ್ಲವೂ ಕೂಡ ಸರಳವಾಗಿ, ಅಚ್ಚುಕಟ್ಟಾಗಿ ಹಾಗೂ ಶುಭ್ರವಾಗಿ ಇರಬೇಕು ಎನ್ನುವ

ಮನಸ್ಥಿತಿಯವರು. ಕಳೆದ ಮೂರು ದಶಕಕ್ಕೂ ಹೆಚ್ಚಿನ ಕಾಲ ನಾನು ಅವರನ್ನು ಅತ್ಯಂತ ಹತ್ತಿರದಿಂದ ನೋಡಿದ ಹಾಗೆ, ಅವರೆಂದೂ ಸಮಯವನ್ನು ಪೋಲು ಮಾಡುವುದಿಲ್ಲ. ಪ್ರತಿ ನಿಮಿಷವನ್ನೂ ಸದುಪಯೋಗ ಪಡಿಸಿಕೊಳ್ಳುತ್ತಾರೆ. ಅದು ಅವರ ವೃತ್ತಿ ಜೀವನ ಇರಬಹುದು, ವೈಯಕ್ತಿಕ ಬದುಕು ಇರಬಹುದು, ಸಮಯಕ್ಕೆ ಅವರು ಬಹಳ ಬೆಲೆ ಕೊಡುತ್ತಾರೆ. ಇದೇ ಅವರ ಯಶಸ್ಸಿನ ಗುಟ್ಟು ಅಂತ ನನ್ನ ಭಾವನೆ.

3. **ತಮ್ಮ ಮತ್ತು ವೂಡೇ ಪಿ. ಕೃಷ್ಣ ಅವರ ಬೆಸುಗೆ ಹೇಗಾಯಿತು?**

ಕೃಷ್ಣ ಅವರು ನನ್ನ ಭಾವನವರಾದ ಸುರೇಶ್ ಚಂದ್ರ ಅವರ ದಾಯಾದಿಗಳು. ಹಾಗಾಗಿ ನಾವು ಹತ್ತಿರದ ಸಂಬಂಧಿಗಳೇ ಆಗಿದ್ದೆವು. ನಮ್ಮ ಮನೆಯ ಮಟ್ಟದಲ್ಲಿ ನಮ್ಮಿಬ್ಬರ ಮದುವೆಯ ಬಗ್ಗೆ ಮಾತುಕತೆ ಆಯಿತು. ನಂತರ ನಾವು ಒಬ್ಬರನ್ನೊಬ್ಬರು ನೋಡಿದೆವು. ಒಪ್ಪಿಗೆ ಸೂಚಿಸಿದೆವು. ಆಗಿನ ಕಾಲದಲ್ಲಿ ನಾವು ಪರಸ್ಪರ ಹೆಚ್ಚು ಮಾತನಾಡುವ ಅವಕಾಶ ಇರಲಿಲ್ಲ. ಕುಟುಂಬದವರ ನಿರ್ಣಯದಂತೆ ಮದುವೆಯಾದೆವು.

4. **ದಿನದ 24 ಗಂಟೆಯೂ ಒಂದಲ್ಲ ಒಂದು ಕೆಲಸದಲ್ಲಿ ನಿರತರಾಗಿರುವ ವೂಡೇ ಪಿ. ಕೃಷ್ಣ ಅವರು ಕುಟುಂಬದೊಂದಿಗೆ ಹೇಗೆ ಸಮಯವನ್ನು ಕಳೆಯುತ್ತಾರೆ?**

ನಾನು ಮೊದಲೇ ಹೇಳಿದಂತೆ ಕೃಷ್ಣ ಅವರು ಎಲ್ಲ ಕೆಲಸಗಳನ್ನೂ ನಿಯಮಿತವಾಗಿ, ಶಿಸ್ತುಬದ್ಧವಾಗಿ ನಿಭಾಯಿಸುತ್ತಾರೆ. ಸಮಯವನ್ನು ಪೋಲು ಮಾಡುವುದಿಲ್ಲ. ಅವರು ನನಗೆ ಸುಸ್ತಾಗಿದೆ ಎಂದು ಹೇಳಿದ್ದನ್ನು ನಾನು ಕೇಳಿಯೇ ಇಲ್ಲ. ಒಂದು ರೀತಿಯಲ್ಲಿ ದಣಿವರಿಯದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಆದ್ದರಿಂದ ಕುಟುಂಬಕ್ಕೂ ಸಹ ಸಾಕಷ್ಟು ಸಮಯ ಕೊಟ್ಟು, ಕೌಟುಂಬಿಕ ಜವಾಬ್ದಾರಿಯನ್ನೂ ಸಹ ಉತ್ತಮವಾಗಿ ನಿಭಾಯಿಸುತ್ತಾರೆ.

ಅವರು ಪ್ರತಿನಿತ್ಯ ತಮ್ಮ ದಿನಚರಿಯನ್ನು ನನ್ನೊಂದಿಗೆ ಚರ್ಚಿಸಿ, ಮನೆಯಿಂದ ಹೊರಡುವ ಹಾಗೂ ಮನೆಗೆ ಮರಳುವ ಸಮಯವನ್ನು ಮಾತ್ರ ನನಗೆ ತಿಳಿಸುತ್ತಾರೆ. ಬೆಳಿಗ್ಗೆ ಅವರು ಉಪಹಾರ ಮನೆಯಲ್ಲಿ ಮಾಡುವುದು ಖಚಿತ. ಮತ್ತೆ ರಾತ್ರಿ ನನ್ನೊಂದಿಗೆ ಊಟ ಮಾಡುವುದೂ ಖಚಿತ. ಮಧ್ಯಾಹ್ನ ಸಾಧ್ಯವಾದರೆ ಮಾತ್ರ ಊಟಕ್ಕೆ ಮನೆಗೆ ಬರುತ್ತಾರೆ.

5. **ವೂಡೇ ಪಿ. ಕೃಷ್ಣ ಅವರನ್ನು ಕೆಲವರು ಗಾಂಧೀಜಿಯವರ ಅನುಯಾಯಿಯಾಗಿ ಕಾಣುತ್ತಾರೆ. ಕೆಲವರು ಅಂಬೇಡ್ಕರ್ ಅವರ ಅನುಯಾಯಿಗಳಾಗಿ ಕಾಣುತ್ತಾರೆ.**

ಕೆಲವರು ಕನ್ನಡ ಕಟ್ಟಾಳು ಎನ್ನುವಂತೆ ಕಾಣುತ್ತಾರೆ. ಇವುಗಳನ್ನು ಹೊರತು ಪಡಿಸಿ ನೀವು ಹೇಗೆ ಅವರನ್ನು ಕಾಣುತ್ತೀರಿ?

ಇವುಗಳನ್ನು ಹೊರತುಪಡಿಸಿ ಕೃಷ್ಣ ಅವರನ್ನು ಕಲ್ಪನೆ ಮಾಡಿಕೊಳ್ಳುವುದು ಕಷ್ಟ. ಏಕೆಂದರೆ ಆ ಮಹನೀಯರ ಚಿಂತನೆಗಳಿಂದಲೇ ಕೃಷ್ಣ ಅವರು ತಮ್ಮ ಜೀವನವನ್ನು ರೂಪಿಸಿಕೊಂಡು, ಅದರಂತೆ ನಡೆಯುತ್ತಿರುವುದನ್ನು ನಾನು ಹತ್ತಿರದಿಂದ ಗಮನಿಸಿದ್ದೇನೆ. ಅವರ ಮಾತುಗಳಲ್ಲಿ ಗಾಂಧಿ, ಅಂಬೇಡ್ಕರ್ ಮತ್ತು ವಿವೇಕಾನಂದರ ಚಿಂತನೆಗಳು ಆಗ್ಗಾಗ್ಗೆ ಪ್ರಸ್ತಾಪವಾಗುತ್ತಲೇ ಇರುತ್ತವೆ. ಜೊತೆಗೆ ಕನ್ನಡತನ ಅವರ ಉಸಿರಲ್ಲೇ ಇದೆ. ಗೋಕಾಕ್ ಚಳುವಳಿಯಲ್ಲಿಯೂ ಸಹ ಅವರು ಭಾಗವಹಿಸಿದ್ದರು. ಆದ್ದರಿಂದ ಗಾಂಧಿ, ಅಂಬೇಡ್ಕರ್, ವಿವೇಕಾನಂದ ಹಾಗೂ ಕನ್ನಡತನ ಇವುಗಳನ್ನು ಹೊರತುಪಡಿಸಿ ಕೃಷ್ಣ ಅವರನ್ನು ನೋಡಲು ಸಾಧ್ಯವೇ ಇಲ್ಲ ಎನ್ನುವುದು ನನ್ನ ಭಾವನೆ.

6. **ವೂಡೇ ಪಿ. ಕೃಷ್ಣ ಅವರ ಸಾಮಾಜಿಕ ಕೆಲಸಕಾರ್ಯಗಳಿಗೆ ತಮ್ಮ ಸಹಕಾರ ಹೇಗೆ, ಯಾವ ರೀತಿ ಇದೆ?**

ವೈಯಕ್ತಿಕವಾಗಿ ನನಗೂ ಸಹ ಸಾಮಾಜಿಕ ಸೇವೆಯಲ್ಲಿ ಆಸಕ್ತಿಯಿದೆ. ನಾನು ಇಂದಿಗೂ ಸಹ ಶಾರದಾ ಮಂದಿರದ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಅಳಿಲು ಸೇವೆ ಸಲ್ಲಿಸುತ್ತಿದ್ದೇನೆ. ಅದಕ್ಕೆ ಮೂಲ ಕಾರಣ ಕೂಡ ಕೃಷ್ಣ ಅವರು. ಜೊತೆಗೆ ಅವರ ಎಲ್ಲ ಸಾಮಾಜಿಕ ಕೆಲಸಗಳಲ್ಲಿಯೂ ನಾನು ಸಾಧ್ಯವಾದಷ್ಟು ಸಹಕಾರ ನೀಡುತ್ತಾ ಬಂದಿದ್ದೇನೆ. ಸಾಮಾಜಿಕ ಕಳಕಳಿಯ ವಿಷಯದಲ್ಲಿ ನಮ್ಮಿಬ್ಬರಿಗೂ ಸಮಾನ ಆಸಕ್ತಿ ಇರುವುದು ಬಹಳ ವಿಶೇಷ.

7. **ವೂಡೇ ಪಿ. ಕೃಷ್ಣ ಅವರು ಕೋಪ ಮಾಡಿಕೊಳ್ಳುವುದಿಲ್ಲ ಎಂದು ಪ್ರತಿಯೊಬ್ಬರೂ ಹೇಳುತ್ತಾರೆ. ಹೌದೇ ಮೇಡಂ?**

ಹೌದು, ಅವರು ಎಂದಿಗೂ ಕೋಪ ಮಾಡಿಕೊಳ್ಳುವುದಿಲ್ಲ. ಆದರೆ ಆಗಾಗ ಸಾತ್ವಿಕವಾಗಿ ತಮ್ಮ ಪ್ರತಿಭಟನೆಯನ್ನು ಮಾಡುತ್ತಿರುತ್ತಾರೆ!

8. **ವೂಡೇ ಪಿ. ಕೃಷ್ಣ ಅವರ ಉಡುಗೆ, ತೊಡುಗೆ, ಊಟ, ತಿಂಡಿ ಮತ್ತು ಅವರ ಆರೋಗ್ಯದ ಗುಟ್ಟು, ಇದರ ಬಗ್ಗೆ ಹೇಳಬಹುದೇ?**

ಕೃಷ್ಣ ಅವರನ್ನು ಒಂದು ರೀತಿಯಲ್ಲಿ ತಿಂಡಿಪೋತರು ಅಂದರೂ ತಪ್ಪಾಗಲಾರದು. ಊಟ ತಿಂಡಿಯ ಬಗ್ಗೆ ಅವರಿಗೆ ಅಪಾರ ಆಸಕ್ತಿ ಇದೆ. ಆದರೆ ಯಾವುದನ್ನೂ ಹೆಚ್ಚಾಗಿ ಸೇವಿಸುವುದಿಲ್ಲ. ಓವರ್ ಈಟಿಂಗ್ ಇಲ್ಲವೇ ಇಲ್ಲ.

ಹಿತವಾದ, ಮಿತವಾದ, ರುಚಿಕರವಾದ, ಶುಚಿಕರವಾದ ಹಾಗೂ ಬಿಸಿಬಿಸಿಯಾಗಿರುವ ಆಹಾರವನ್ನು ಅವರು ಬಯಸುತ್ತಾರೆ. ಮುಖ್ಯವಾಗಿ ಅವರು ನಿಯಮಿತವಾಗಿ ಊಟ ತಿಂಡಿ ಮಾಡುತ್ತಾರೆ. ಬೆಳಿಗ್ಗೆ ಸುಮಾರು ಎಂಟು ಗಂಟೆಗೆ ಉಪಾಹಾರ ಮಾಡಿದರೆ, ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಭೋಜನ ಮಾಡುತ್ತಾರೆ. ರಾತ್ರಿ ಎಂಟು ಗಂಟೆಯ ಹೊತ್ತಿಗೆ ಊಟ ಮಾಡಿ, ಎಂಟು ಗಂಟೆಗಳ ಕಾಲ ನಿಶ್ಚಿಂತೆಯಿಂದ ನಿದ್ರೆ ಮಾಡುತ್ತಾರೆ. ದಿನವೂ ಬೆಳಿಗ್ಗೆ ಧ್ಯಾನ ಮಾಡುತ್ತಾರೆ. ಕೆಟ್ಟ ಆಲೋಚನೆಗಳು ತಮ್ಮಿಂದ ದೂರ ಇರುವಂತೆ ನೋಡಿಕೊಳ್ಳುತ್ತಾರೆ. ಇವೆಲ್ಲವೂ ಅವರ ಆರೋಗ್ಯದ ಗುಟ್ಟು ಅಂತ ನಾನು ಭಾವಿಸುತ್ತೇನೆ.

9. ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬ ಮಹಿಳೆಯ ಸಹಕಾರ ಇರುತ್ತದೆ ಎನ್ನುವುದು ಲೋಕರೂಢಿಯ ಮಾತು. ಈ ಮಾತು ತಮಗೆ ಅನ್ವಯಿಸುತ್ತದೆಯೇ?

ಕೃಷ್ಣ ಅವರ ಯಶಸ್ಸಿನ ಹಿಂದೆ ನಾನಿದ್ದೇನೆ ಎನ್ನುವುದು ತುಂಬಾ ದೊಡ್ಡ ಮಾತು. ಆ ಭಾರವನ್ನು ನಾನು ಹೊರುವುದಿಲ್ಲ. ಆದರೆ, ಅವರ ಎಲ್ಲ ಕೆಲಸ ಕಾರ್ಯಗಳಿಗೆ ನನ್ನ ಮಟ್ಟದಲ್ಲಿ ಏನೇನು ಸಹಕಾರ ಸಾಧ್ಯವೋ ಅವೆಲ್ಲವನ್ನೂ ಮಾಡಿಕೊಂಡು ಬಂದಿದ್ದೇನೆ. ಮುಂದೆಯೂ ಮಾಡುತ್ತೇನೆ. ಇಷ್ಟು ಮಾತ್ರ ನಾನು ಹೇಳಬಲ್ಲೆ.

10. ವೂಡೇ ಪಿ. ಕೃಷ್ಣ ಅವರು ಗಾಂಧೀಜಿಯವರ ಮತ್ತು ಅಂಬೇಡ್ಕರ್ ಅವರ ಬಗ್ಗೆ ಅಪಾರವಾದ ಅಭಿಮಾನವನ್ನು ಹೊಂದಿರುತ್ತಾರೆ. ಹಾಗೆಯೇ ಸ್ವಾಮಿ ವಿವೇಕಾನಂದರು. ರಾಮಕೃಷ್ಣ ಪರಮಹಂಸರುಗಳ ಬಗ್ಗೆ ಅಪಾರವಾದ ಪ್ರೀತಿ ಇದೆ. ತಮಗೂ ಅನ್ವಯಸುತ್ತದೆಯೇ?

ತಾವು ಹೇಳಿದ ಎಲ್ಲ ಮಹಾನ್ ವ್ಯಕ್ತಿಗಳೂ ಸಹ ಲೋಕ ಕಲ್ಯಾಣಕ್ಕಾಗಿ ಶ್ರಮಿಸಿದವರು. ನಾನೂ ಸಹ ಅವರ ಬಗ್ಗೆ ಸಾಕಷ್ಟು ಓದಿ ತಿಳಿದುಕೊಂಡು, ಅವರ ಸಾಧನೆಗಳಿಂದ ಪ್ರಭಾವಿತನಾಗಿದ್ದೇನೆ. ಜೊತೆಗೆ ಕೃಷ್ಣ ಅವರಿಂದ ಪ್ರೇರಣೆ ಪಡೆದು ಈ ಎಲ್ಲ ಮಹಾನ್ ವ್ಯಕ್ತಿಗಳನ್ನು ನನ್ನ ಜೀವನದ ಭಾಗವನ್ನಾಗಿ ಸಹ ಮಾಡಿಕೊಂಡಿದ್ದೇನೆ.

11. ವೂಡೇ ಪಿ. ಕೃಷ್ಣ ಅವರ ಕುರಿತಾದ "ಆಡು ಮುಟ್ಟದ ಸೊಪ್ಪಿಲ್ಲ – ವೂಡೇ ಪಿ. ಕೃಷ್ಣ" ಎಂಬ ನಾನು ಬರೆದ ಲೇಖನಗಳ ಪುಸ್ತಕ ಲೋಕಾರ್ಪಣೆಗೊಳುತ್ತಿರುವ ಈ ಸುಸಂದರ್ಭದಲ್ಲಿ ತಮ್ಮ ಮನದಾಳದ ಮಾತು.

ಕೃಷ್ಣ ಅವರು ವೃತ್ತಿಯಿಂದ ಹಿಡಿದು, ಸಾಮಾಜಿಕ ಚಟುವಟಿಕೆಯ ವರೆಗೆ ನಾನಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ. ಅವರ ಕೆಲಸವನ್ನು ಜನರೂ ಸಹ ಗುರುತಿಸುತ್ತಿರುವುದು ವೈಯಕ್ತಿಕವಾಗಿ ನನಗೂ ಕೂಡ ಸಂತೋಷವನ್ನು ತಂದಿದೆ. ಈ ಗ್ರಂಥಕ್ಕೆ ಅವರು ನಿಜಕ್ಕೂ ಅರ್ಹರು ಎಂದು ನನ್ನ ಭಾವನೆ. ಇದಕ್ಕೆ ಕಾರಣರಾದ ಎಲ್ಲರನ್ನೂ ನಾನು ವಂದಿಸುತ್ತೇನೆ.

12. ಆದಿಜಾಂಬವ ಜಾಗೃತಿ ಪತ್ರಿಕೆಯ ಬಗ್ಗೆ ಒಂದೆರಡು ಮಾತು.

ಆದಿಜಾಂಬವ ಜಾಗೃತ ಪತ್ರಿಕೆ ಪ್ರತಿ ತಿಂಗಳೂ ನಮ್ಮ ಮನೆಗೆ ಬರುತ್ತದೆ. ಕೃಷ್ಣ ಅವರು ಒಂದು ಪದವೂ ಬಿಡದಂತೆ ಇಡೀ ಪತ್ರಿಕೆಯನ್ನು ಓದುತ್ತಾರೆ. ಪತ್ರಿಕೆಯ ಸಂಪಾದಕರಾದ ಗಂಗಾಧರ ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನು ಆಡದೆ ಅವರು ಪತ್ರಿಕೆಯನ್ನು ಮಡಚಿಡುವುದೇ ಇಲ್ಲ. ಸಮುದಾಯಕ್ಕೆ ಸಂಪರ್ಕ ಸೇತುವಾಗಿ ಈ ಪತ್ರಿಕೆ ಕೆಲಸ ಮಾಡುತ್ತಿದೆ. ಈ ಪತ್ರಿಕೆಗೆ ಹಾಗೂ ಸಂಪಾದಕರಾದ ಗಂಗಾಧರ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಂಘೇಶಕ್ತಿ ಕಲೌಯುಗೇ : ವೂಡೇ ಪಿ.

ಸಂ.: ❋ ಜಾಂಬವ ಎಂ. ಗಂಗಾಧರ್

1. ನಮಸ್ತೇ ಸಾರ್, ಹೇಗಿದ್ದೀರಿ?

ಚೆನ್ನಾಗಿದ್ದೀನಿ. ನಾನು ಯಾವಾಗಲೂ ಎಲ್ಲರೂ ಚೆನ್ನಾಗಿರಬೇಕು ಅಂತ ಬಯಸುತ್ತೇನೆ. ಹಾಗೆಯೇ ನಾನೂ ಸಹ ಚೆನ್ನಾಗಿರಬೇಕು ಅಂತ ಬಯಸುತ್ತೇನೆ.

2. ನಿಮ್ಮ ದಿನಚರಿ ಬಗ್ಗೆ ತಿಳಿಯಬಹುದೇ?

ನಾನು ಸರ್.ಎಂ.ವಿಶ್ವೇಶ್ವರಯ್ಯನವರಿಂದ ಪ್ರೇರಣೆ ಪಡೆದವನು. ಅವರು 8–8–8 ಸೂತ್ರವನ್ನು ಅನುಸರಿಸುತ್ತಿದ್ದರು ಅಂತ ನಾನು ಓದಿ ತಿಳಿದುಕೊಂಡಿದ್ದೇನೆ. ಅಂದರೆ ದಿನದ 24 ಗಂಟೆಗಳಲ್ಲಿ 8 ಗಂಟೆ ನಿದ್ರೆಗೆ, 8 ಗಂಟೆ ಕಚೇರಿ ಕೆಲಸಕ್ಕೆ ಹಾಗೂ ಉಳಿದ 8 ಗಂಟೆಗಳನ್ನು ಇತರ ವೈಯಕ್ತಿಕ ಕೆಲಸಗಳಿಗಾಗಿ ವಿಂಗಡಿಸಿದ್ದರು. ನಾನೂ ಸಹ ಅವರ ಚಿಂತನೆಯಿಂದ ಪ್ರಭಾವಿತನಾಗಿ ಇದೇ ಸೂತ್ರವನ್ನು ಅನುಸರಿಸುತ್ತೇನೆ. ಎಂಟು ಗಂಟೆ ನಿದ್ರೆ, ಎಂಟು ಗಂಟೆ ಸಾಮಾಜಿಕ ಸೇವಾ ಕಾರ್ಯಗಳು

ಹಾಗೂ ಉಳಿದ ಎಂಟು ಗಂಟೆ ಕುಟುಂಬ ಹಾಗೂ ವೈಯಕ್ತಿಕ ಕಾರ್ಯಗಳಿಗೆ ವಿನಿಯೋಗಿಸುತ್ತೇನೆ.

ನನಗೆ ಪ್ರತಿನಿತ್ಯವೂ ಬೆಳಿಗ್ಗೆ 5.30ಕ್ಕೆ ಏಳುವ ಅಭ್ಯಾಸವಿದೆ. ನಂತರ ವಾಯುವಿಹಾರ, ದಿನಪತ್ರಿಕೆ ಓದು, ಪ್ರಾರ್ಥನೆ ಹಾಗೂ ಉಪಾಹಾರ ಮುಗಿಸಿ 8.30ಕ್ಕೆ ಕೆಲಸಗಳನ್ನು ಪ್ರಾರಂಭಿಸುತ್ತೇನೆ. ಬೆಳಿಗ್ಗೆ ಉಪಾಹಾರ ಮತ್ತು ರಾತ್ರಿಯ ಊಟವನ್ನು ಯಾವಾಗಲೂ ನಾನು ಮನೆಯಲ್ಲೇ ಮಾಡುತ್ತೇನೆ. ಮಧ್ಯಾಹ್ನವೂ ಸಹ ಸಾಧ್ಯವಾದಷ್ಟು ಮನೆಗೆ ಊಟಕ್ಕೆ ಹೋಗಲು ಪ್ರಯತ್ನಿಸುತ್ತೇನೆ. ಒಂದು ವೇಳೆ ಸಾಧ್ಯವಾಗದಿದ್ದರೆ ಹೊರಗಡೆ ಊಟ ಮಾಡುತ್ತೇನೆ.

ಇನ್ನೊಂದು ಪ್ರಮುಖ ವಿಷಯವೆಂದರೆ ನಾನು ಒಂದು ನಿಮಿಷ ಕೂಡ ಅನವಶ್ಯಕವಾಗಿ ಪೋಲು ಮಾಡುವುದಿಲ್ಲ. ಕೆಲಸಕ್ಕೆ ಬಾರದ ಹರಟೆ, ನಕಾರಾತ್ಮಕ ಚಿಂತನೆ ಇವುಗಳಿಗೆ ಅವಕಾಶವನ್ನೇ ಕೊಡುವುದಿಲ್ಲ.

3. ತಮ್ಮ ಆಹಾರ ಪದ್ಧತಿ ಯಾವುದು? ಸಸ್ಯಾಹಾರ/ಶಾಖಾಹಾರ

ಸಸ್ಯಾಹಾರ.

4. ನಿಮ್ಮ ಉಡುಪಿನ ವಿಶೇಷತೆ ಬಗ್ಗೆ ತಿಳಿಸುವಿರಾ?

ಗಾಂಧೀಜಿಯವರಿಂದ ನಾನು ಪ್ರೇರಣೆ ಪಡೆದ ಹಲವು ಅಂಶಗಳಲ್ಲಿ ಸ್ವಾವಲಂಬನೆಯೂ ಒಂದು. ಅವರು ಸ್ವಾತಂತ್ರಕ್ಕಾಗಿ ಹೋರಾಟ ಮಾಡುವ ಸಮಯದಲ್ಲಿ ನಾವು ಬಟ್ಟೆಯ ವಿಷಯದಲ್ಲಿ ಸ್ವಾವಲಂಬಿಗಳಾಗಬೇಕು, ಬ್ರಿಟೀಷರು ತಯಾರಿಸುವ ಮಿಲ್ ಬಟ್ಟೆಗಳನ್ನು ಬಳಸದೇ, ನಮ್ಮ ದೇಶದ ಬಟ್ಟೆಗಳನ್ನೇ ಬಳಸಬೇಕು ಎಂದು ಕರೆ ಕೊಟ್ಟರು. ಚರಕವನ್ನು ಒಂದು ಸಿಂಬಲ್ ಆಗಿ ಬಳಸಿ, ಬಹಳ ಶಕ್ತಿಯುತವಾದ ಸಂದೇಶವನ್ನು ಅವರು ಕೊಟ್ಟಿದ್ದರು. ಅದರಿಂದ ನಾನು ಬಹಳ ಪ್ರಭಾವಿತನಾಗಿದ್ದೆ. ಆದ್ದರಿಂದ ಇಂದಿಗೂ ಸಹ ನಾನು ಖಾದಿ ಬಟ್ಟೆಗಳನ್ನೇ ಬಳಸುತ್ತಿದ್ದೇನೆ.

5. ಹಿರಿಯರನ್ನು ಶಿಕ್ಷಣ ತಜ್ಞರು, ಗಾಂಧೀವಾದಿಗಳು ಎಂದು ಕರೆಯುವುದು ಸರಿ. ಆದರೆ, ನಿಮಗೆ ಚಿಕ್ಕ ವಯಸ್ಸಿನಲ್ಲಿಯೇ ಈ ಬಿರುದುಗಳು ಬಂದಿವೆಯಲ್ಲಾ?

ನಮ್ಮ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ಮತ್ತು ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷನಾಗಿ ನಾನು ಮಾಡುವ ಕೆಲಸಗಳು ಮಾಧ್ಯಮಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಆದ್ದರಿಂದ ನಾನು ಜನರಿಗೆ ಶಿಕ್ಷಣ

ತಜ್ಞನಾಗಿ, ಗಾಂಧೀವಾದಿಯಾಗಿ ಬಹುಷಃ ಹೆಚ್ಚು ಪರಿಚಿತನಾಗಿರಬಹುದು. ನಾನು ವೃತ್ತಿಯಿಂದ ಇಂಜಿನೀಯರ್ ಆದರೂ ಅದರ ಬಗ್ಗೆ ಹೆಚ್ಚು ಜನರಿಗೆ ಗೊತ್ತೇ ಇಲ್ಲ. ಎಲ್ಲರೂ ಹೆಚ್ಚಾಗಿ ನನ್ನನ್ನು ಗುರುತಿಸುವುದು ನನ್ನ ಸಾಮಾಜಿಕ ಸೇವಾ ಕಾರ್ಯಗಳಿಗಾಗಿಯೇ. ನನಗಂತೂ ವೈಯಕ್ತಿಕವಾಗಿ ಯುವಕರ ಜೊತೆ ಕೆಲಸ ಮಾಡುವುದು ಬಹಳ ಇಷ್ಟದ ಕೆಲಸ. ನಾನು ಬಹಳ ವರ್ಷಗಳಿಂದ ಶಿಕ್ಷಣ ಸಂಸ್ಥೆಯ ಮೂಲಕ ಹಾಗೂ ಗಾಂಧೀ ಭವನದ ಮೂಲಕ ಯುವಕರ ಜೊತೆ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಪರ್ಕಕ್ಕೆ ಬಂದ ಹಲವು ಯುವಕರು ನನ್ನ ಬಗ್ಗೆ ವಿಶೇಷ ಅಭಿಮಾನವನ್ನು ಇಟ್ಟುಕೊಂಡಿರುವುದು ನನಗೆ ಬಹಳ ಸಂತೋಷದ ವಿಷಯ. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡಿದ ಹಲವು ವಿದ್ಯಾರ್ಥಿಗಳು ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಿ, ಸಮಾಜಕ್ಕೆ ಬೆಳಕಾಗಿದ್ದಾರೆ. ಅವರೆಲ್ಲರೂ ನನ್ನನ್ನು ಗುರುತಿಸುವುದು ಒಬ್ಬ ಸಾಮಾಜಿಕ ಸೇವಕನಾಗಿಯೇ. ಅದು ನನಗೆ ತೃಪ್ತಿಯನ್ನು ತಂದಿದೆ.

6. ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆ ನಿಮ್ಮ ಮೇಲೆ ಯಾವ ರೀತಿ ಪರಿಣಾಮ ಬೀರಿದೆ?

ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣ ಮತ್ತು ಶೈಕ್ಷಣಿಕ ಉತ್ಕೃಷ್ಟತೆಗೆ ಹೆಸರುವಾಸಿಯಾಗಿರುವ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯ ಹಳೆಯ ವಿದ್ಯಾರ್ಥಿ ನಾನು ಎಂದು ಹೇಳಿಕೊಳ್ಳಲು ನನಗೆ ಬಹಳ ಹೆಮ್ಮೆಯಾಗುತ್ತದೆ. ನಾನು ಒಟ್ಟು ಮೂರು ವರ್ಷಗಳ ಕಾಲ ಅಂದರೆ 1975ರಿಂದ 1978ರವರೆಗೆ ರಾಮಕೃಷ್ಣ ಆಶ್ರಮದಲ್ಲಿ ಪ್ರೌಢಶಾಲಾ ವ್ಯಾಸಂಗ ಮಾಡಿದ್ದೆ ಆಶ್ರಮದ ಸಂಸ್ಕಾರಯುತ ವಾತಾವರಣ, ಶಿಸ್ತಿನ ಜೀವನ ಶೈಲಿ, ಮೌಲ್ಯಯುತ ಶಿಕ್ಷಣ ವ್ಯವಸ್ಥೆ, ಯತಿಗಳ ಒಡನಾಟ, ನೋಡಿದ ಹಾಗೂ ಅನುಭವ ಪಡೆದ ಕೆಲವು ಘಟನೆಗಳು ಇವೆಲ್ಲ ಸೇರಿ ನನ್ನಲ್ಲಿ ಆಳವಾದ ಮೌಲ್ಯಗಳನ್ನು ಬಿತ್ತಿದ್ದು ಸುಳ್ಳಲ್ಲ. ಆಶ್ರಮ ಕಲಿಸಿಕೊಟ್ಟ ಮೌಲ್ಯಗಳ ತಳಹದಿಯ ಮೇಲೆಯೇ ನಾನು ನನ್ನ ಮುಂದಿನ ಜೀವನವನ್ನು ರೂಪಿಸಿಕೊಂಡಿದ್ದೇನೆ. ನನ್ನ ಜೀವನದ ಒಂದು ಬಹುದೊಡ್ಡ ತಿರುವು ಎಂದರೆ ನಾನು ಆಶ್ರಮವನ್ನು ಸೇರಿದ್ದು ಎಂದು ಇಂದಿಗೂ ನಾನು ಅಂದುಕೊಳ್ಳುತ್ತೇನೆ.

7. ನೀವು ಶಿಕ್ಷಣ ಪಡೆದಿರುವ ರೀತಿ ನೋಡಿದರೆ, ನೀವು ಯಾವುದಾದರೂ ಉನ್ನತ ಹುದ್ದೆಗೆ ಹೋಗಬಹುದಿತ್ತು. ಇಷ್ಟೊಂದು ಉನ್ನತ ಶಿಕ್ಷಣ ಪಡೆಯುವ ಹಿಂದಿರುವ ಕಾರಣ ಅರಿಯಬಹುದೇ?

ನಾನು ಮೂಲತಃ ಇಂಜಿನೀಯರ್ ಪದವೀಧರ. ಅದಾದ ನಂತರ ಕಾನೂನು ಪದವಿಯನ್ನು ಮಾಡಿದೆ. ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ನಾವು ಮುಂದಿನ ಕೆಲಸಕಾರ್ಯಗಳನ್ನು ಚೆನ್ನಾಗಿ ಮಾಡಲು ಆಗೋದಿಲ್ಲ ಎನ್ನುವ ಭಾವನೆ ನನಗೆ ಬಂತು. ಆದ್ದರಿಂದ ಇಂಜಿನಿಯರಿಂಗ್ ಮುಗಿದಮೇಲೆ ಸಂಜೆ ಕಾಲೇಜಿನಲ್ಲಿ ಲಾ ಮಾಡಿದೆ. ಆ ನಂತರ ಎಂ.ಎಲ್. ಕೂಡ ಪಾಸ್ ಮಾಡಿದೆ. ಇವತ್ತು ನನಗೆ ಅದು ಬಹಳ ಸಹಕಾರಿ ಕೂಡ ಆಗಿದೆ. ಇವತ್ತು ನಾನು 'ಟೆಕ್ನೋ ಲೀಗಲ್ ವರ್ಕ್' ಮಾಡೋದಿಕ್ಕೆ ಇದೇ ಕಾರಣ. ಕಾನೂನಿನ ಜ್ಞಾನ ಹಾಗೂ ಇಂಜಿನಿಯರಿಂಗ್ ಜ್ಞಾನ, ಇವೆರಡೂ ಸೇರಿಕೊಂಡು ನನ್ನ ವೃತ್ತಿಯಲ್ಲೂ ನಾನು ಬೆಳೆಯಲು ಸಾಧ್ಯವಾಗಿದೆ.

8. ಯಾವ ವಯಸ್ಸಿನಲ್ಲಿ ನಿಮಗೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಯೋಚನೆ ಬಂತು?

"ಮೊದಲು ನೀವು ವಿದ್ಯಾವಂತರಾಗಬೇಕು, ಸಮರ್ಥರಾಗಬೇಕು, ನಿಮ್ಮ ಕಾಲಮೇಲೆ ನೀವು ನಿಂತುಕೊಳ್ಳಬೇಕು. ಅದಾದ ನಂತರ ಸಮಾಜಕ್ಕೆ ಏನಾದರೂ ಕೊಡುಗೆ ನೀಡಲು ಪ್ರಾರಂಭಿಸಬೇಕು" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ಅದರಂತೆ ನಾನು ನನ್ನ ಪದವಿ ಶಿಕ್ಷಣ ಮುಗಿದ ತಕ್ಷಣ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡೆ. ನನ್ನ ಇಡೀ ಕುಟುಂಬವೇ ಸಮಾಜ ಸೇವೆಯಲ್ಲಿ ಹೆಸರಾದ ಕುಟುಂಬ. ನನ್ನ ಅಜ್ಜನವರು ಗಾಂಧೀ ಮಾರ್ಗಿಯಾಗಿ, ರಾಜಕಾರಣಿಯಾಗಿ, ಸ್ವಾತಂತ್ರ ಹೋರಾಟಗಾರರಾಗಿ ಹಳೆ ಮೈಸೂರು ಭಾಗದಲ್ಲಿ ಚಿರಪರಿಚಿತರಾಗಿದ್ದರು. ಅವರು ಗಾಂಧೀಜಿಯವರ ಅನುಯಾಯಿಗಳಾಗಿದ್ದರು. ಗಾಂಧೀಜಿಯವರ ನಿರಂತರ ಸಂಪರ್ಕದಲ್ಲೂ ಇದ್ದರು. ಅದೇ ರೀತಿ ನಮ್ಮ ದೊಡ್ಡಪ್ಪನವರು ಹಾಗೂ ನಮ್ಮ ತಂದೆಯವರೂ ಸಹ ವಿದ್ಯಾರ್ಥಿಗಳಾಗಿದ್ದಾಗ ಸ್ವಾತಂತ್ರ ಹೋರಾಟದಲ್ಲಿ ಭಾಗಿಯಾಗಿದ್ದರು. ನಂತರ ಅವರು ಉದ್ಯಮಿಗಳಾದ ಮೇಲೆ ವ್ಯವಹಾರದ ಜೊತೆಜೊತೆಗೆ ಸಾಮಾಜಿಕ ಸೇವೆಯಲ್ಲಿ ತೊಡಗಿಕೊಂಡಿದ್ದರು. ಹೀಗೆ ನಮ್ಮ ಇಡೀ ಕುಟುಂಬವೇ ಸಮಾಜ ಸೇವೆಯಲ್ಲಿ ಇದ್ದ ಕಾರಣಕ್ಕೆ ನಾನೂ ಸಹ ಅದರಿಂದ ಸ್ಫೂರ್ತಿ ಪಡೆದು, ಚಿಕ್ಕ ವಯಸ್ಸಿನಲ್ಲಿಯೇ ಸಮಾಜ ಸೇವೆಯಲ್ಲಿ ತೊಡಗಿಕೊಂಡೆ.

9. ನಿಮ್ಮ ಸಾಹಿತ್ಯ ಕೃಷಿ ವಿಫುಲಾಗಿದೆ ಎಂದು ಬಲ್ಲೆವು. ಯಾವ ಯಾವ ಕೃತಿಗಳನ್ನು ಬರೆದಿರುವಿರಿ?

ಸಾಹಿತ್ಯದಲ್ಲಿ ನಾನೇನು ಅಂತಹ ಕೃಷಿಯನ್ನೇನೂ ಮಾಡಿಲ್ಲ. ನಾನು ಬರೆದ ಲೇಖನಗಳ ಸಂಕಲನವೊಂದನ್ನು ಹೊರತಂದಿದ್ದೇನೆ. ನನ್ನ ಬಿಡಿ ಭಾಷಣಗಳ ಸಂಪಾದಿತ ಕೃತಿಯೊಂದು ಇಂಗ್ಲೀಷಿನಲ್ಲಿ ಪ್ರಕಟಿತವಾಗಿದೆ. ಗಾಂಧೀ ಅವರ ಬಗೆಗಿನ ನನ್ನ ಕೆಲವು ಲೇಖನಗಳನ್ನು ಗಾಂಧೀ ಸ್ಮಾರಕ ನಿಧಿಯವರು ಪ್ರಕಟಿಸಿದ್ದಾರೆ. ಇವಿಷ್ಟನ್ನು ಬಿಟ್ಟರೆ, ಯಾವುದೇ ರೀತಿಯ ಸೃಜನಾತ್ಮಕ ಸಾಹಿತ್ಯ ಕೃಷಿಯನ್ನು ನಾನು ಇದುವರೆಗೂ ಮಾಡಿಲ್ಲ.

10. ಇನ್ನು ನಿಮ್ಮ ಕೆಲಸ ನಿರ್ವಹಣೆ ಬಗ್ಗೆ ತಿಳಿಯಬಹುದೇ? ಬಹುದೊಡ್ಡ ಶಿಕ್ಷಣ ಸಂಸ್ಥೆಯಾದ ಶೇಷಾದ್ರಿಪುರಂ, ಗಾಂಧಿ ಸ್ಮಾರಕ ನಿಧಿ ಮುಂತಾದ ಹತ್ತು ಹಲವಾರು ಸಂಘಟನೆಗಳೊಡನೆ ಸಕ್ರಿಯ ಬಾಗವಹಿಸುವಿಕೆ ಇದೆ. ಇದೆಲ್ಲಾ ಹೇಗೆ ನಿಭಾಯಿಸುತ್ತೀರಿ?

ಯಾವುದೇ ಕೆಲಸ ಮಾಡಲು ಪೂರ್ವಭಾವಿ ಶಿಕ್ಷಣ ಮತ್ತು ಸಂಸ್ಕಾರ ಅಗತ್ಯ ಅಂತ ನಂಬಿದವನು ನಾನು. ನಾನು ನನ್ನ ಪಿಎಚ್.ಡಿ.ಯನ್ನು ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ಮಾಡಿದ್ದೇನೆ. ಜೊತೆಗೆ ಭಾರತ ಸರ್ಕಾರ ಪ್ರಕಟಿಸಿದ "ಹಂಡ್ರೆಡ್ ಕಲೆಕ್ಟೆಡ್ ವರ್ಕ್ಸ್ ಆಫ್ ಗಾಂಧೀ" ಪುಸ್ತಕವನ್ನು ಚಿಕ್ಕ ವಯಸ್ಸಿನಲ್ಲಿಯೇ ಓದಿ, ಚೆನ್ನಾಗಿ ತಿಳಿದುಕೊಂಡಿದ್ದರಿಂದ ಗಾಂಧೀ ಕೆಲಸಗಳನ್ನು ಚೆನ್ನಾಗಿ ಮಾಡಲು ಸಾಧ್ಯವಾಯಿತು. ಜೊತೆಗೆ ನಾನು ಬಾಲ್ಯದಿಂದಲೇ ಸ್ವಾಮಿ ವಿವೇಕಾನಂದರ ಚಿಂತನೆಗಳಿಂದ ಪ್ರಭಾವಿತನಾದವನು. ಸಮಾಜದ ಎಲ್ಲ ಸಮಸ್ಯೆಗಳಿಗೆ ಶಿಕ್ಷಣವೊಂದೇ ಪರಿಹಾರ ಎನ್ನುವ ಮಾತನ್ನು ಅವರು ಹೇಳಿದ್ದರು. ಈ ಮಾತನ್ನು ನಾನು ಬಹಳ ಗಂಭೀರವಾಗಿ ತೆಗೆದುಕೊಂಡು, ಶಿಕ್ಷಣ ಕ್ಷೇತ್ರದಲ್ಲಿ ಏನಾದರೂ ಕೆಲಸ ಮಾಡಿದರೆ ಅದರಿಂದ ಸಮಾಜಕ್ಕೆ ಒಳ್ಳೆಯದಾಗಬಹುದು ಎನ್ನುವ ಉದ್ದೇಶದಿಂದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಜೊತೆ ಚಿಕ್ಕ ವಯಸ್ಸಿನಲ್ಲಿಯೇ ನಮ್ಮ ಕುಟುಂಬದ ಆಶೀರ್ವಾದದಿಂದ ಕೈ ಜೋಡಿಸಿದೆ. ಪ್ರತಿನಿತ್ಯ ಸುಮಾರು ಮೂರರಿಂದ ನಾಲ್ಕು ಗಂಟೆಗಳು ನಾನು ಸಂಸ್ಥೆಯ ಕೆಲಸಗಳಲ್ಲಿ ತೊಡಗಿಕೊಳ್ಳುತ್ತೇನೆ. ಪ್ರತಿನಿತ್ಯವೂ ಸಂಸ್ಥೆಗೆ ಒಮ್ಮೆಯಾದರೂ ಹಾಜರಾತಿ ಹಾಕುತ್ತೇನೆ. 1992ರಲ್ಲಿ ನಾನು ಟ್ರಸ್ಟಿಯಾಗಿ ಸೇರಿದೆ. 2001ರಲ್ಲಿ ಕಾರ್ಯದರ್ಶಿಯಾಗಿ ಜವಾಬ್ದಾರಿ ತೆಗೆದುಕೊಂಡೆ. ನಾನು ಕಾರ್ಯದರ್ಶಿಯಾದ ಸಮಯದಲ್ಲಿ ಈ ಸಂಸ್ಥೆಯ ಅಡಿಯಲ್ಲಿ 11 ವಿದ್ಯಾಸಂಸ್ಥೆಗಳು ಇದ್ದವು. ಸುಮಾರು 9,000 ವಿದ್ಯಾರ್ಥಿಗಳಿದ್ದರು. ಈಗ 2024ರಲ್ಲಿ 35 ವಿದ್ಯಾಸಂಸ್ಥೆಗಳಿವೆ. ಸುಮಾರು 26,000 ವಿದ್ಯಾರ್ಥಿಗಳಿದ್ದಾರೆ. ಸಂಸ್ಥೆಯು ಇಂದು ಉನ್ನತ ಮಟ್ಟಕ್ಕೆ ಬೆಳೆದಿದೆ. ಈ ಯಶಸ್ಸಿನಲ್ಲಿ ನನ್ನದೂ ಕೂಡ ಕೃಷಿ ಇದೆ ಎನ್ನುವ ಸಮಾಧಾನ ನನಗಿದೆ.

ಇನ್ನು ಗಾಂಧೀ ಸ್ಮಾರಕ ನಿಧಿಯ ವಿಚಾರಕ್ಕೆ ಬರುವುದಾದರೆ ಸುಮಾರು ಮೂರು ದಶಕಗಳ ಕಾಲ ಡಾ. ಹೋ. ಶ್ರೀನಿವಾಸಯ್ಯನವರು ಸಂಸ್ಥೆಯ ಅಧ್ಯಕ್ಷರಾಗಿದ್ದರು. ನಾನು ಒಬ್ಬ ಸ್ವಯಂ ಸೇವಕನಾಗಿ ಹಲವು ವರ್ಷಗಳ ಕಾಲ ಅವರ ಜೊತೆಯಲ್ಲಿ ಕೆಲಸ ಮಾಡುತ್ತಾ ಬಂದೆ. ನಂತರ ಅವರು ನನ್ನನ್ನು ಆಶೀರ್ವದಿಸಿ ಧರ್ಮದರ್ಶಿಯನ್ನಾಗಿ ಮಾಡಿದರು. ಅವರ ಕಾಲವಾದ ನಂತರ ನನ್ನ ಸನ್ಮಿತ್ರರೆಲ್ಲ ಸೇರಿ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದು ನನ್ನ ಪುಣ್ಯ ಅಂತ ನಾನು ಭಾವಿಸಿದ್ದೇನೆ. ಗಾಂಧೀ ವಿಚಾರಗಳನ್ನು ಜನರಿಗೆ, ಅದರಲ್ಲೂ ಮುಖ್ಯವಾಗಿ ಯುವಕರಿಗೆ ಮುಟ್ಟಿಸಲು ನಾವೆಲ್ಲರೂ ಒಂದು ಕುಟುಂಬವಾಗಿ ಶ್ರಮಿಸುತ್ತಿದ್ದೇವೆ.

11. ಅವಿರತ ದುಡಿಮೆಯಿಂದ ಯಾವಾಗಲಾದರೂ ಮನಃಕ್ಲೇಷವೆನಿಸಿದೆಯೇ?

ಯಾವತ್ತಿಗೂ ಇಲ್ಲ. ಏಕೆಂದರೆ ನಾನು ಏನನ್ನು ಮಾಡಿದರೂ ಪ್ರೀತಿಯಿಂದ ಮಾಡುತ್ತಿರುತ್ತೇನೆ. ಬೇರೆ ಯಾವ ಒತ್ತಡಕ್ಕೂ ತಲೆಕೆಡಿಸಿಕೊಳ್ಳದೇ ನನಗೆ ಇಷ್ಟವಾದ ಕೆಲಸಗಳನ್ನು ಮಾತ್ರ ನಾನು ಮಾಡುವುದರಿಂದ ಮನಃಕ್ಲೇಷ ಅಂತ ಯಾವಾಗಲೂ ಅನ್ನಿಸಿಲ್ಲ.

12. ಮುದ್ರಣ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳ ನಡುವೆ ಸಾಹಿತ್ಯಲೋಕದ ಅಸ್ತಿತ್ವ ಕುಂಟುತ್ತಿದೆಯೇ?

ಖಂಡಿತ ಇಲ್ಲ. ಸಾಹಿತ್ಯಕ್ಕೆ ತನ್ನದೇ ಆದ ಗಟ್ಟಿಯಾದ ನೆಲೆ ಇದೆ. ಅದನ್ನು ಯಾರೂ ಕಿತ್ತುಕೊಳ್ಳಲು ಸಾಧ್ಯವಿಲ್ಲ. ಕಾಲಮಾನಕ್ಕೆ ತಕ್ಕಂತೆ ಅದರದ್ದೇ ಸವಾಲುಗಳನ್ನು ಸಾಹಿತ್ಯಲೋಕ ಎದುರಿಸಬಹುದು. ಅದರ ಸ್ವರೂಪ ಬದಲಾಗಬಹುದು. ಆದರೆ ಸಾಹಿತ್ಯಲೋಕ ನಾಶವಾಗಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಮನುಕುಲ ಇರುತ್ತದೆಯೋ ಅಲ್ಲಿಯವರೆಗೂ ಸಾಹಿತ್ಯ ಇದ್ದೇ ಇರುತ್ತದೆ.

13. ಪ್ರಸ್ತುತ ಕರ್ನಾಟಕದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆಯೇ?

ಸಮಗ್ರ ಕರ್ನಾಟಕದಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿಲ್ಲ. ಆದರೆ ನಗರಗಳಲ್ಲಿ ಮಾತ್ರ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿರುವುದು ಸ್ವಲ್ಪ ಮಟ್ಟಿಗೆ ನಿಜ. ಅದರಲ್ಲೂ ಮುಖ್ಯವಾಗಿ ಬೆಂಗಳೂರಿನಲ್ಲಿ.

14. ಎಲ್ಲೋ ಒಂದು ಕಡೆ ಕನ್ನಡದ ಧ್ವನಿ ಕ್ಷೀಣಿಸುತ್ತಿದೆ ಎಂದು ಅನ್ನಿಸುವುದಿಲ್ಲವೇ?

ಕನ್ನಡದ ಧ್ವನಿ ಕ್ಷೀಣಿಸಿತ್ತಿದೆ ಎನ್ನುವ ಕೂಗು ಕೇಳಿ ಬರುತ್ತಿರುವುದು ಕೇವಲ ಬೆಂಗಳೂರಿನಲ್ಲಿ ಮಾತ್ರ. ಕರ್ನಾಟಕದ ಉಳಿದ ಭಾಗಗಳಲ್ಲಿ ಕನ್ನಡದ ಅಸ್ತಿತ್ವ ಹಾಗೆಯೇ ಇದೆ.

15. ನಿಮ್ಮ ಕಲ್ಪನೆಯ ಪ್ರಕಾರ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧೀಜಿಯವರು ಈ ದೇಶದಲ್ಲಿ ಹುಟ್ಟಿರದಿದ್ದರೆ, ದೇಶದ ಚಿತ್ರಣ ಯಾವ ರೀತಿ ಇರುತ್ತಿತ್ತು ?

ನವಭಾರತದ ನಿರ್ಮಾಣದಲ್ಲಿ ಗಾಂಧೀ ಮತ್ತು ಅಂಬೇಡ್ಕರ್ ಅವರ ಕೊಡುಗೆ ಮಹತ್ತರವಾದದ್ದು ಎನ್ನುವುದರಲ್ಲಿ ಸಂಶಯವಿಲ್ಲ. ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ಸ್ವಾತಂತ್ರವನ್ನು ಗಳಿಸುವ ಪ್ರಯತ್ನದಲ್ಲಿದ್ದರು. ಅಂಬೇಡ್ಕರ್ ಅವರು ಸಾವಿರಾರು ವರ್ಷಗಳಿಂದ ಶೋಷಿತವಾಗಿರುವ ಸಮುದಾಯ ವನ್ನು ಮೇಲೆತ್ತದಿದ್ದರೆ ಭಾರತ ನಿರ್ಮಾಣ ಸಾಧ್ಯವಿಲ್ಲ ಎಂದು ಭಾವಿಸಿ, ಶೋಷಿತ ಸಮುದಾಯವನ್ನು ಮುಖ್ಯ ವಾಹಿನಿಗೆ ತರುವಲ್ಲಿ ಬಹಳಷ್ಟು ಶ್ರಮ ಪಟ್ಟರು. ಇಂದು ನಾವು ನೋಡುತ್ತಿರುವ ನವಭಾರತದ ಹಿಂದೆ ಈ ಇಬ್ಬರು ಮಹನೀಯರ ಶ್ರಮ ಬಹಳಷ್ಟಿದೆ. ಆದ್ದರಿಂದ ಒಂದು ವೇಳೆ ಇವರಿಬ್ಬರು ಭಾರತದಲ್ಲಿ ಹುಟ್ಟದೇ ಹೋಗಿದ್ದರೆ ನಮ್ಮ ದೇಶ ಬ್ರಿಟೀಷರ ಕಾಲದ ದೇಶವಾಗಿಯೇ ಇರುತ್ತಿತ್ತು ಎನ್ನುವುದು ನನ್ನ ಭಾವನೆ.

16. ಜಾತಿ, ಧರ್ಮ ಮತ್ತು ದೇವರು ಇಂತಹ ವಿಚಾರಗಳಿಂದ ದೇಶದ ಅಭಿವೃದ್ಧಿಯಾಗುತ್ತದೆಯೇ? ಅಥವಾ ನಾಶವಾಗುತ್ತದೆಯೇ?

ದೇವರಲ್ಲಿ ಅಪಾರ ನಂಬಿಕೆ ಇಟ್ಟವನು ನಾನು. ದೇವರಿಲ್ಲದೇ ಏನೂ ಇಲ್ಲ ಎನ್ನುವುದು ನನ್ನ ನಂಬಿಕೆ. ದೇವರ ಮೇಲಿನ ನಂಬಿಕೆಗೂ ದೇಶದ ಅಭಿವೃದ್ಧಿಗೂ ಏನೂ ಸಂಬಂಧವಿಲ್ಲ ಎನ್ನುವುದನ್ನು ನಾನು ದೃಢವಾಗಿ ಹೇಳಬಲ್ಲೆ. ನಮ್ಮ ಪ್ರಾಚೀನ ತಿಳುವಳಿಕೆಯ ಪ್ರಕಾರ ಯಾವುದು ಒಳ್ಳೆಯದೋ ಅದೇ ಧರ್ಮ. ಧರ್ಮ ಮಾಡುವುದು ಅಂದರೆ ಒಳ್ಳೆಯದನ್ನು ಮಾಡುವುದು ಎಂಬರ್ಥದ ಮಾತುಗಳನ್ನು ನಾವು ಅನಾದಿ ಕಾಲದಿಂದಲೂ ಕೇಳುತ್ತೇವೆ. ಈ ಪರಿಕಲ್ಪನೆಯ ಧರ್ಮದಿಂದ ದೇಶಕ್ಕೆ ಯಾವುದೇ ತೊಂದರೆ ಇಲ್ಲ ಹಾಗೂ ನಾವೆಲ್ಲರೂ ಈ ಪ್ರಕಾರದ ಧರ್ಮವನ್ನೇ ಪಾಲಿಸಬೇಕು. ಇನ್ನು ಜಾತಿಯ ವಿಚಾರ. ಜಾತಿ ಎನ್ನುವುದು ವ್ಯಕ್ತಿಯ ವೈಯಕ್ತಿಕ ನೆಗಟ್ಟಿನಲ್ಲಿ ಇದ್ದರೆ ಅದರಿಂದ ಏನೂ ತೊಂದರೆ ಇಲ್ಲ. ಪ್ರತಿಯೊಬ್ಬರೂ ತಮ್ಮ ತಮ್ಮ ಜಾತಿಯ ಆಚರಣೆಗಳನ್ನು ಪಾಲಿಸಲು ಸರ್ವ ಸ್ವತಂತ್ರರು. ಆದರೆ ಯಾವಾಗ ಜಾತಿ ಎನ್ನುವುದು ಮನೆಯಿಂದ ಬೀದಿಗೆ ಬರುತ್ತದೆಯೋ, ಯಾವಾಗ ಜಾತಿ ಎನ್ನುವುದು ಸಾಮಾಜಿಕ ವಿಷಯವಾಗುತ್ತದೆಯೋ ಆಗ ಅದು ಅಪಾಯಕಾರಿ. ಆದ್ದರಿಂದ ನಮ್ಮ ನಮ್ಮ ಜಾತಿಗಳನ್ನು ನಮ್ಮ ನಮ್ಮ ಮನೆಗಳಲ್ಲಿಯೇ

ಇಟ್ಟುಕೊಂಡು, ಸಾಮಾಜಿಕವಾಗಿ ನಾವೆಲ್ಲರೂ ಭಾರತೀಯರು ಎಂದು ಭಾವಿಸಿದಾಗ ದೇಶಕ್ಕೆ ಒಳಿತಾಗುತ್ತದೆ.

17. ಪ್ರಾದೇಶಿಕ ಪಕ್ಷದಿಂದ ಕರ್ನಾಟಕದ ಭಾಷೆಗೆ ಹೆಚ್ಚಿನ ಮನ್ನಣೆ ಸಿಗುತ್ತದೆ ಎನ್ನುವ ಅಭಿಪ್ರಾಯ ಅವರಿವರದು. ತಮ್ಮ ಅಭಿಪ್ರಾಯವೇನು?

ಪ್ರಾದೇಶಿಕ ಪಕ್ಷಗಳು ಸಹ ರಾಷ್ಟ್ರೀಯ ಪಕ್ಷಗಳ ಇನ್ನೊಂದು ಸ್ವರೂಪ ಇದ್ದಂತೆ. ಅವುಗಳ ಉದ್ದೇಶ ಸಹ ಅಧಿಕಾರ ಹಿಡಿಯುವುದೇ ಆಗಿದೆ. ಆದ್ದರಿಂದ ಭಾಷೆಯ ವಿಷಯದಲ್ಲಿ ಪ್ರಾದೇಶಿಕ ಪಕ್ಷಗಳಿಂದ ಯಾವುದೇ ಉಪಕಾರ ಆಗುತ್ತದೆ ಎಂದು ನಾನು ಭಾವಿಸುವುದಿಲ್ಲ. ನಮ್ಮಲ್ಲಿ ಕನ್ನಡ ಭಾಷೆಗೆ ಮನ್ನಣೆ ಸಿಕ್ಕಿದ್ದು ಸಾಹಿತಿಗಳು, ಕವಿಗಳು, ಕಲಾವಿದರು ಹಾಗೂ ಕನ್ನಡ ಹೋರಾಟಗಾರರಿಂದ. ಎಲ್ಲಕ್ಕಿಂತ ಮುಖ್ಯವಾಗಿ ಕನ್ನಡವನ್ನೇ ಮಾತಾಡುವ ಕೋಟ್ಯಂತರ ಜನಸಾಮಾನ್ಯರಿಂದ. ಆದ್ದರಿಂದ ಯಾವುದೋ ರಾಜಕೀಯ ಪಕ್ಷ ಕನ್ನಡದ ಅಭಿವೃದ್ಧಿಗೆ ಕೆಲಸ ಮಾಡುತ್ತದೆ ಎನ್ನುವ ಭ್ರಮೆಯಲ್ಲಿ ನಾವು ಇರಬಾರದು.

18. ಅಂದಿನ ಕನ್ನಡದ ಸಾಹಿತಿಗಳು, ಬರಹಗಾರರು ಮತ್ತು ಪತ್ರಕರ್ತರಿಗೆ ಹಾಗೂ ಇಂದಿನ ಸಾಹಿತಿಗಳು, ಪತ್ರಕರ್ತರು, ಬರಹಗಾರರಿಗೆ ಏನು ವ್ಯತ್ಯಾಸ?

ಸಮಾಜದಲ್ಲಿ ಮೌಲ್ಯಗಳು ಕಾಲಕಾಲಕ್ಕೆ ಬದಲಾಗುತ್ತಾ ಇರುತ್ತವೆ. ಇದು ಅತ್ಯಂತ ಸಹಜ. ಹಿಂದಿನ ಕಾಲದಲ್ಲಿ ಬೇರೆಯದೇ ರೀತಿಯ ಮೌಲ್ಯಗಳು ಇರುತ್ತಿದ್ದವು. ಅದಕ್ಕೆ ತಕ್ಕಂತೆ ಅಂದಿನ ಕಾಲದ ಸಾಹಿತಿಗಳು, ಪತ್ರಕರ್ತರು ಹಾಗೂ ಬರಹಗಾರರು ಇದ್ದರು. ಇಂದಿನ ಕಾಲದ ಮೌಲ್ಯಗಳೇ ಬೇರೆ. ಅದಕ್ಕೆ ಹೊಂದಿಕೊಂಡಂತೆ ಇಂದಿನ ಕಾಲದ ಸಾಹಿತಿಗಳು, ಬರಹಗಾರರು, ಪತ್ರಕರ್ತರು ಇದ್ದಾರೆ. ಆದ್ದರಿಂದ ಇಲ್ಲಿ ಆ ಕಾಲದಲ್ಲಿ ಎಲ್ಲವೂ ಸರಿ ಇತ್ತು, ಈ ಕಾಲದಲ್ಲಿ ಯಾವುದೂ ಸರಿ ಇಲ್ಲ ಎನ್ನುವ ಮಾತು ಬರುವುದಿಲ್ಲ. ಏಕೆಂದರೆ ಇಡೀ ಸಮಾಜವೇ ಆಯಾ ಕಾಲದ ಮೌಲ್ಯಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ. ಆದರೆ ಮೌಲ್ಯಗಳು ಏನೇ ಇದ್ದರೂ ಸಹ ನೀತಿ, ನಿಯಮ, ಧರ್ಮ ಇವುಗಳ ವಿಚಾರದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಇದನ್ನು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಂಡಿರಬೇಕು.

19. ಶಿಕ್ಷಣಕ್ಷೇತ್ರದಲ್ಲಿ ತಮ್ಮ ಸೇವೆ ಅನನ್ಯ. ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಹಿಂದುಳಿದವರಾದ ದೀನದಲಿತರು, ಪರಿಶಿಷ್ಟ ಜಾತಿಯವರು ಶಿಕ್ಷಣ ಪಡೆಯಲು ತಮ್ಮಲ್ಲಿ ಯಾವುದಾದರೂ ಸಲಹೆ, ಸೂಚನೆ, ಸಹಕಾರ ಇದೆಯೇ?

ನಾನು ಈ ಮೊದಲೇ ಹೇಳಿದಂತೆ ಸ್ವಾಮಿ ವಿವೇಕಾನಂದರು ಒಂದು ಮಾತನ್ನು ಹೇಳಿದ್ದರು. ಸಮಾಜದ ಹಲವಾರು ಸಮಸ್ಯೆಗಳಿಗೆ ಶಿಕ್ಷಣವೇ ಮೂಲ ಪರಿಹಾರ ಎಂದು. ಯಾವುದೇ ಸಮುದಾಯ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣ ಮೂಲಭೂತವಾಗಿ ಅವಶ್ಯಕ. ಆದ್ದರಿಂದ ಎಲ್ಲ ಸಮುದಾಯದವರೂ ಸಹ ಮುಕ್ತವಾಗಿ ಶಿಕ್ಷಣ ಪಡೆಯುವಂತಹ ವಾತಾವರಣ ಎಲ್ಲ ಕಡೆ ನಿರ್ಮಾಣ ವಾಗಬೇಕು. ಇದು ನಮ್ಮ ಸಂವಿಧಾನದ ಆಶಯ ಕೂಡ ಆಗಿದೆ. ಹಿಂದುಳಿದ ವರ್ಗದವರಿಗಾಗಿ ಕೆಲಸ ಮಾಡುತ್ತಿರುವ ಸಂಘ ಸಂಸ್ಥೆಗಳೂ ಸಹ ತಮ್ಮ ಸಮುದಾಯದವರಿಗೆ ಶಿಕ್ಷಣ ಕೊಡಿಸಲು ಹೆಚ್ಚು ಶ್ರಮಿಸಬೇಕು ಎನ್ನುವುದು ನನ್ನ ಕೋರಿಕೆ.

20. ಒಂದು ತಳಮಟ್ಟದ ಆದಿಜಾಂಬವ ಜನಾಂಗದ ಇತಿಹಾಸದ ಪತ್ರಿಕೆಯು ತಮಗೊಂದು ಗ್ರಂಥವನ್ನು ಬರೆದು ಅರ್ಪಿಸಲು ಮುಂದಾಗಿದೆ. ಇದರ ಬಗ್ಗೆ ತಮ್ಮ ಮನದಾಳದ ಮಾತು.

ನಾನು ಆದಿಜಾಂಬವ ಪತ್ರಿಕೆಯ ಸಂಸ್ಥಾಪಕ ಸಂಪಾದಕರು ಹಾಗೂ ವಕೀಲರಾದ ಮಾನ್ಯ ಗಂಗಾಧರ್ ಅವರಿಗೆ ಕೃತಜ್ಞನಾಗಿದ್ದೇನೆ. ಅವರು ನನ್ನ ಆತ್ಮೀಯ ಮಿತ್ರರು. ನನ್ನ ಎಲ್ಲ ಕೆಲಸ ಕಾರ್ಯಗಳನ್ನು ಅತ್ಯಂತ ಹತ್ತಿರದಿಂದ ಗಮನಿಸಿದವರು. ಅವರು ನನ್ನ ಸಾಮಾಜಿಕ ಕಳಕಳಿಯನ್ನು ಮೆಚ್ಚಿಕೊಂಡು ಅವರು ಸಂಘಟಿಸುವ ಅನೇಕ ಕಾರ್ಯಕ್ರಮಗಳಿಗೆ ನನ್ನನ್ನು ಜೋಡಿಸುತ್ತಾ ಬಂದಿದ್ದಾರೆ. ಆದಿಜಾಂಬವ ಜನಾಂಗದ ಹಿರಿಯ ನಾಯಕರುಗಳು, ಅಧಿಕಾರಿಗಳು, ಸಮಾಜ ಸೇವಕರ ಪರಿಚಯ ಈ ಮೂಲಕ ನನಗಾಯಿತು. ಆ ಜನಾಂಗದ ಇತಿಹಾಸವನ್ನು ಪರಿಚಯ ಮಾಡಿಕೊಳ್ಳಲು ಸಹ ಸಾಧ್ಯವಾಯಿತು. ಆದಿಜಾಂಬವ ಜನಾಂಗದಿಂದ ಎಲ್ಲ ಕ್ಷೇತ್ರಗಳನ್ನೂ ಮೇರು ಪ್ರತಿಭೆಗಳು ಹೊರಹೊಮ್ಮಿದ್ದಾರೆ. ಸಮಾಜದ ಎಲ್ಲ ಸ್ಥರಗಳಲ್ಲೂ ಆದಿಜಾಂಬವ ಜನಾಂಗದ ಕೊಡುಗೆ ಸಾಕಷ್ಟಿದೆ. ಇಂತಹ ಪ್ರಬಲ ಸಮುದಾಯದ ಪತ್ರಿಕೆಯೊಂದು ನನ್ನನ್ನು ಕುರಿತ ಗ್ರಂಥ ಹೊರತರುತ್ತಿರುವುದು ನನಗೆ ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ.

21. ಈಗಲೇ ನಿಮ್ಮ ಅಭಿಮಾನಿಗಳು ನಿಮ್ಮನ್ನು ಕುರಿತು ಯಾವ ರೀತಿಯ ಕೃತಿಗಳನ್ನು ರಚಿಸಿರುತ್ತಾರೆ? ಬರವಣಿಗೆ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿರುವ ನಮ್ಮಂಥವರು ನಿಮ್ಮ ಬಗ್ಗೆ ಬರೆದಾಗ ನಿಮ್ಮ ಅನಿಸಿಕೆಯನ್ನು ಮುಕ್ತವಾಗಿ ಹಂಚಿಕೊಳ್ಳಬಹುದೇ?

ಈಗಾಗಲೇ ನನ್ನ ಬಗ್ಗೆ ಒಂದು ಅಭಿನಂದನಾ ಗ್ರಂಥ ಹಾಗೂ ಕೆಲವು ಪುಸ್ತಕಗಳನ್ನು ನನ್ನ ಸ್ನೇಹಿತರು ಹೊರತಂದಿದ್ದಾರೆ. ಶ್ರೀಯುತ ಗಂಗಾಧರ ಅವರು ನಾನು ಅತ್ಯಂತ ಗೌರವಿಸುವ ವ್ಯಕ್ತಿಗಳಲ್ಲಿ ಒಬ್ಬರಾದ ಕಾರಣ ಅವರು ನನ್ನ ಬಗ್ಗೆ ಗ್ರಂಥ ಹೊರತರುವ ವಿಷಯ ಪ್ರಸ್ತಾಪಿಸಿದಾಗ ನಾನು ಗೌರವದಿಂದ ಒಪ್ಪಿಕೊಂಡೆ. ಈ ಗ್ರಂಥ ಅತ್ಯುತ್ತಮವಾಗಿ ಮೂಡಿಬರಲಿ ಎನ್ನುವ ವಿಶ್ವಾಸ ನನಗಿದೆ.

22. ದಲಿತರಿಗೆ ರಾಜಕೀಯ ಸ್ಥಾನ-ಮಾನ ಬೇಕೆ? ಹಾಗಾದರೆ ಹೇಗೆ ಪಡೆಯುವುದು?

ದಲಿತರಿಗೆ ರಾಜಕೀಯ ಸ್ಥಾನಮಾನ ಬೇಕೇ ಎನ್ನುವ ವಿಷಯಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರೇ ನಮಗೆಲ್ಲ ಉತ್ತರ ಕೊಟ್ಟಿದ್ದಾರೆ. ನಮ್ಮ ಸಂವಿಧಾನದ ಶಕ್ತಿಯಿಂದ ದಲಿತರನ್ನು ಒಳಗೊಂಡು ಯಾರು ಬೇಕಾದರೂ ರಾಜಕೀಯ ಸ್ಥಾನಮಾನ ಪಡೆಯಲು ಸಾಧ್ಯವಿದೆ.

23. "ಆಡು ಮುಟ್ಟದ ಸೊಪ್ಪಿಲ್ಲ ವೂಡೇ ಪಿ. ಕೃಷ್ಣ" ಕೃತಿಯು ಲೋಕಾರ್ಪಣೆಗೊಳ್ಳುತ್ತಿದೆ. ಈ ಸಂತೋಷದಲ್ಲಿ ನಿಮ್ಮ ಮನದ ಒಂದೆರಡು ಮಾತು.

ಕೃತಜ್ಞತೆ ಸಲ್ಲಿಸುವುದು ಭಾರತೀಯ ಸಂಸ್ಕೃತಿ ಪರಂಪರೆಯಲ್ಲಿ ಅಡಕವಾಗಿರುವ ಬಹಳ ಉನ್ನತ ಮೌಲ್ಯ. ದೇವರು, ಗುರುಗಳು, ತಂದೆ ತಾಯಿಗಳು ಹೀಗೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸುಸುವು ನಮ್ಮ ಪರಂಪರೆ. ಇವತ್ತು ತಳಸಮುದಾಯದ ಪತ್ರಿಕೆಯೊಂದು ನನ್ನನ್ನು ಗುರುತಿಸಿ, ಗೌರವ ಸಲ್ಲಿಸುತ್ತಿದೆ ಎಂದರೆ ಅದಕ್ಕಿಂತಲೂ ಸಂತೋಷ, ಗೌರವ ಇನ್ನೇನಿದೆ? ಹಾಗಾಗಿ ನಾನು ಈ ಗ್ರಂಥ ಹೊರತರುತ್ತಿರುವುದಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇನೆ.

24. ಆದಿಜಾಂಬವ ಜಾಗೃತಿ ಪತ್ರಿಕೆಯ ಬಗ್ಗೆ, ಸಾಹಿತ್ಯ ಮತ್ತು ಪತ್ರಿಕಾ ಲೋಕದಲ್ಲಿ ಅಂಬೆಗಾಲಿಡುತ್ತಿರುವ ನನ್ನ ಬಗ್ಗೆ ನಿಮ್ಮ ಹೊಗಳಿಕೆ, ತೆಗಳಿಕೆಯ ಹಿತನುಡಿಯ ಮಾತುಗಳು.

ನಮ್ಮ ಅಡ್ವೋಕೇಟ್ ಗಂಗಾಧರ ಅವರು ಅತ್ಯಂತ ಸಜ್ಜನಿಕೆಯ, ನಿಗರ್ವಿಯಾದ ಸಂಘಟಕ. ಅವರಿಗೆ ಸಾಹಿತ್ಯ ಆಸಕ್ತಿ ಇದೆ. ಜೊತೆಗೆ ಪತ್ರಕರ್ತರಾಗಿ ಈಗಾಗಲೇ ಜನಮಾನಸದಲ್ಲಿ ಹೆಸರು ಮಾಡಿದ್ದಾರೆ. ಅನೇಕ ಕಷ್ಟ ನಷ್ಟಗಳ ನಡುವೆಯೂ ಆದಿಜಾಂಬವ ಪತ್ರಿಕೆಯನ್ನು 'ಒನ್ ಮ್ಯಾನ್ ಆರ್ಮಿ' ತರಹ ಹೊರತರುತ್ತಿದ್ದಾರೆ. ಎಲ್ಲರಿಗೂ ವೇದಿಕೆಯನ್ನು ಒದಗಿಸುವ ಅವರು ನನಗೆ ಏನೂ ಬೇಡ ಎಂದು ಹಿಂದೆ ಸರಿಯುವಂತವರು. ಹಲವಾರು ರಾಜಕೀಯ

ಹೋರಾಟಗಳಲ್ಲಿ ಭಾಗಿಯಾಗಿ ಜನರನ್ನು ಎಚ್ಚರಿಸುತ್ತ ಬಂದರೂ ಸಹ ತಮ್ಮ ವೈಯಕ್ತಿಕ ಲಾಭಕ್ಕಾಗಿ ಯಾವಾಗಲೂ ಹೋರಾಟ ಮಾಡಿದವರಲ್ಲ. ಜನಾಂಗದ ಎಲ್ಲ ಹಿರಿಯರ ಮನ್ನಣೆಯನ್ನು ಪಡೆದುಕೊಂಡಿದ್ದಾರೆ. ಅವರ ನಿಃಸ್ವಾರ್ಥ ಸೇವೆಗಾಗಿ ಎಲ್ಲರೂ ಕೂಡ ಅವರನ್ನು ಗೌರವಿಸುವುದನ್ನು ನಾನು ನೋಡಿದ್ದೇನೆ. ಅವರನ್ನು ತೆಗಳುವ ಜನರನ್ನೇ ನಾನು ನೋಡಿಲ್ಲ. ಅಷ್ಟು ಸಜ್ಜನಿಕೆ ಅವರದ್ದು.

ಆದಿಜಾಂಬವ ಪತ್ರಿಕೆ ಇನ್ನೂ ಹೆಚ್ಚು ಕಾಲ ಯಶಸ್ವಿಯಾಗಿ ಹೊರಬರಲಿ, ತಳಸಮುದಾಯದ ನಿಃಸ್ವಾರ್ಥ ಸೇವೆಯನ್ನು ಮಾಡಲಿ, ಜೊತೆಗೆ ಇಡೀ ಸಮಾಜಕ್ಕೆ ಬೆಳಕಾಗಲಿ, ಗಂಗಾಧರ ಅವರಿಗೆ ದೇವರು ಸುಖ, ನೆಮ್ಮದಿಯನ್ನು ದಯಪಾಲಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಅನುಬಂಧಗಳು

ಅನುಬಂಧ-1

ನಮ್ಮ ಕಾಲದ ಸವ್ಯಸಾಚಿ

❋ ರು. ಬಸಪ್ಪ
ಹಿರಿಯ ಪತ್ರಕರ್ತರು

1948, ಜನವರಿ 30 ಇಡೀ ಭಾರತ ಶೋಕಸಾಗರದಲ್ಲಿ ಮುಳುಗಿದ ದಿನ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಂತಕನ ಗುಂಡಿಗೆ ಬಲಿಯಾದ ದಿನ. ಅಂದು ಐನ್‌ಸ್ಟಿನ್ ಅವರು ಗಾಂಧಿಯಂತಹ ಅಪರೂಪದ ವ್ಯಕ್ತಿ ಈ ನೆಲದ ಮೇಲೆ ನಡೆದಾಡಿದ್ದನೆಂದರೆ ಮುಂದಿನ ಪೀಳಿಗೆಯವರು ನಂಬುವುದು ಕಷ್ಟ ಎಂದಿದ್ದರು. ಗಾಂಧೀಜಿ ಹುತಾತ್ಮರಾಗಿ 77 ವರ್ಷಗಳಾಗಿವೆ. ಈಗಲೂ ಅವರ ತತ್ವಾನುಯಾಯಿಗಳು ಕೆಲವರಾದರೂ ಇದ್ದಾರೆ. ಗಾಂಧೀಜಿ, ಡಾ. ಬಿ.ಆರ್.

ಅಂಬೇಡ್ಕರ್, ರಾಜಾರಾಂ ಮೋಹನರಾಯ್ ಮೊದಲಾದ ಮಹಾಮಹಿಮರ ತತ್ವಗಳನ್ನು ಮೈಗೂಡಿಸಿಕೊಂಡು ಆ ತತ್ವಗಳನ್ನು ಅಕ್ಷರಶಃ ಪಾಲಿಸುತ್ತಿರುವ ಶಿಕ್ಷಣ ತಜ್ಞ ನಾಡೋಜ ಡಾ. ವೂಡೇ ಪಿ.ಕೃಷ್ಣ ನಡೆ-ನುಡಿಗಳನ್ನೊಂದಾಗಿಸಿಕೊಂಡಿರುವ ಅಪರೂಪದ ವ್ಯಕ್ತಿ. ಇಡೀ ಸಮಾಜವೇ ತಪ್ಪು ದಾರಿಯಲ್ಲಿ ನಡೆಯುತ್ತಿದೆಯೇನೋ ಎನ್ನುವಂತಹ ವಾತಾವರಣವಿರುವ ಸಂದರ್ಭದಲ್ಲಿ ಡಾ. ವೂಡೇ ಪಿ.ಕೃಷ್ಣ ಅಂತಹ ಮಹಾನ್ ವ್ಯಕ್ತಿ ಇದ್ದರು ಎಂಬ ವಿಚಾರವನ್ನು ಮುಂದಿನ ಪೀಳಿಗೆಯವರು ನಂಬುವುದು ಕಷ್ಟ.

Born with Golden Spoon ಎನ್ನುವಂತಹ ಅಗರ್ಭ ಶ್ರೀಮಂತ ಮನೆತನದಿಂದ ಬಂದಿದ್ದರೂ ಯಾವುದೇ ಹಮ್ಮು ಬಿಮ್ಮು ಇಲ್ಲದೆ, ಇವನಾರವ ಇವನಾರವನೆಂದಿನಸದಿರಯ್ಯ, ಎಂಬ ಜಗದಣ್ಣ ಬಸವಣ್ಣನವರ ಬೋಧನೆಯಂತೆ ನಡೆಯುತ್ತಿರುವುದು ಡಾ. ಕೃಷ್ಣ ಅವರು. ವಾರಕ್ಕೆ ಕನಿಷ್ಟ ಐದು-ಆರು ಸಭೆ ಸಮಾರಂಭಗಳಲ್ಲಿ ಗಣ್ಯ ಅತಿಥಿಯಾಗಿ ಭಾಗವಹಿಸುತ್ತಿರುತ್ತಾರೆ. ಯಾವುದೇ ಸಮಾರಂಭದಲ್ಲಿ ಅವರು ಗಾಂಧೀಜಿ ಅವರನ್ನು ಕುರಿತು ಐದು ನಿಮಿಷವಾದರೂ ಮಾತನಾಡುವುದನ್ನು ಸಭಿಕರು ಗಮನಿಸಿರುತ್ತಾರೆ. ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿರುವ, ಸದಾ ನಗೆಮೊಗದ ಅಪ್ಪಟ ಖಾದಿಧಾರಿ ಡಾ. ವೂಡೇ ಪಿ.ಅವರು ಗಾಂಧಿ ವಿಚಾರಗಳನ್ನು ಯುವ ಜನರಿಗೆ ಮುಟ್ಟಿಸುವ ಕೆಲಸವನ್ನು ಪ್ರತಿನಿತ್ಯ ಮಾಡುತ್ತಾ ಬಂದಿದ್ದಾರೆ. ನುಡಿದಂತೆ ನಡೆಯುವ ಮತ್ತು ನಡೆದಂತೆ ನುಡಿಯುವ ಅವರು ಮಾನವೀಯ ಸೇವೆಯಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಗಳಿಸಿರುವ ರೆಡ್‌ಕ್ರಾಸ್ ಸಂಸ್ಥೆಯಲ್ಲಿ ಮಹತ್ತರ ಸೇವೆ ಸಲ್ಲಿಸಿರುವುದಕ್ಕಾಗಿ ರಾಷ್ಟ್ರಪತಿಗಳ ಚಿನ್ನದ ಪದಕವನ್ನು ಗಳಿಸಿರುತ್ತಾರೆ. ನೂರಾರು ಬಾರಿ ರಕ್ತದಾನ ಮಾಡಿದ್ದಾರೆ. ರಕ್ತದಾನದ ಮಹತ್ವದ ಬಗೆಗೆ ಉಪಯುಕ್ತ ಉಪನ್ಯಾಸಗಳ ಮೂಲಕ ಯುವಜನರನ್ನು ಪ್ರೇರೇಪಿಸುತ್ತಿರುತ್ತಾರೆ.

ಸದಾ ಅಧ್ಯಯನ ಶೀಲರಾದ ಡಾ. ವೂಡೇ ಪಿ.ಕೃಷ್ಣ ಸರಳತೆ, ಸಜ್ಜನಿಕೆ, ಸ್ವಚ್ಛತೆ ಮತ್ತು ನಮ್ರತೆಗಳ ಸಾಕಾರ ಮೂರ್ತಿಯಾಗಿದ್ದು, ಸಂಭಾವಿತರಲ್ಲಿ ಅತ್ಯಂತ ಸಂಭಾವಿತರು ಎಂದು ಅವರನ್ನು ಸಮೀಪದಿಂದ ಬಲ್ಲವರೆಲ್ಲರೂ ಅಭಿಪ್ರಾಯ ಪಡುತ್ತಾರೆ. ಅಜಾತಶತ್ರು-ಈ ಮಾತಿಗೆ ಪರ್ಯಾಯದಂತಿರುವ ಶೇ. 100 ಜಾತ್ಯತೀತ ಮನೋಭಾವದ ಶ್ರೀಯುತರು ಎಲ್ಲವನ್ನು ಎಲ್ಲರನ್ನು ಒಳಗೊಳ್ಳುವ ಹೃದಯ ವೈಶಾಲ್ಯತೆ ಮೈಗೂಡಿಸಿಕೊಂಡಿದ್ದಾರೆ, ಜಾತಿಭೇದ, ಮತಭೇದ ಮಾಡದೆ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಸ್ವಭಾವ ಬೆಳೆಸಿಕೊಂಡಿದ್ದಾರೆ.

ಅದರಲ್ಲೂ ದೀನ-ದಲಿತರ ಬಗೆಗೆ ವಿಶೇಷ ಕಾಳಜಿ ವಹಿಸುತ್ತಾರೆ. ಪ್ರೌಢಶಾಲಾ ವಿದ್ಯಾರ್ಥಿಯಾಗಿದ್ದಾಗಿನಿಂದಲೇ ಬದುಕನ್ನು ಸನ್ಮಾರ್ಗದಲ್ಲಿ ತೊಡಗಿಸಿಕೊಂಡಿದ್ದಾರೆ.

ಮಹಾನ್ ಸ್ವಾತಂತ್ರ್ಯ ಹೋರಾಟಗಾರರ ಮನೆತನದಿಂದ ಬಂದಿರುವ ಇವರ ಹೆಸರಿನಿಂದಾಗಿ ಬಹಳಷ್ಟು ಜನ ಕೇಳರಿಯದ ಚಳ್ಳಕೆರೆ ತಾಲ್ಲೂಕಿನ ಬೇಚರಕ್ ಗ್ರಾಮ "ವೂಡೆ" – ಈ ಗ್ರಾಮ ವಿಶ್ವಖ್ಯಾತಿ ಗಳಿಸಿದೆ. ಗಾಂಧೀಜಿ, ಡಾ. ಬಿ.ಆರ್.ಅಂಬೇಡ್ಕರ್ ಮತ್ತಿತರ ಮಹಾನ್ ವ್ಯಕ್ತಿಗಳ ತತ್ತ್ವಗಳನ್ನು ಆರಾಧಿಸುವ ಡಾ.ಕೃಷ್ಣ ಯಾವುದೇ ದೊಡ್ಡ ಸಮಸ್ಯೆ ಎದುರಾದಾಗ ಕುಗ್ಗುವವರಲ್ಲ, ಸಂಬಂಧಪಟ್ಟ ಎಲ್ಲರೊಡನೆ ಸಮಾಲೋಚಿಸಿ, ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ. ಸಮಸ್ಯೆಗಳು ಸುಲಭವಾಗಿ ಪರಿಹಾರವಾದಾಗ ಹಿಗ್ಗುವವರೂ ಅಲ್ಲ. ಇವರ ಮೌಲ್ಯಾಧಾರಿತ ಸರಳ ಬದುಕು ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗಿದೆ. ತುಂಬಿದ ಕೊಡದಂತಹ ಬದುಕು ಇವರದು.

ಎಂದಿಗೂ ಯಾರಿಗೂ ಕೇಡನ್ನು ಕನಸು-ಮನಸ್ಸಿನಲ್ಲೂ ಬಯಸದ ಡಾ. ವೂಡೇ ಅವರದು ಸದಾ ರಾಷ್ಟ್ರಭಕ್ತಿ, ಸಾಮಾಜಿಕ ಬದ್ಧತೆ, ಪರೋಪಕಾರಿ ಮನೋಭಾವನೆ. ಸರ್ವೇ ಜನಾಃ ಸುಖಿನೋ ಭವಂತು ಎಂಬುದು ಅವರ ಮಹದಾಶಯ. ಯಾವುದೇ ಸಾಹಿತ್ಯ ಕೃತಿಯ ಲೋಕಾರ್ಪಣೆ ಸಮಾರಂಭದಲ್ಲಿ ಅವರು ಅತಿಥಿಯಾಗಿ ಭಾಗವಹಿಸಿದರೆ, ಆ ಸಮಾರಂಭಕ್ಕೆ ಭೂಷಣ ಎಂದು ಸಾಹಿತಿಗಳು ಭಾವಿಸುತ್ತಾರೆ. ವಿವಿಧ ವಿಶ್ವವಿದ್ಯಾಲಯಗಳು ಅನೇಕ ಪದವಿ (ಡಿಗ್ರಿ)ಗಳನ್ನು ಗಳಿಸಿರುವುದರ ಜೊತೆಗೆ ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ಡಿಪ್ಲೋಮಾವನ್ನು ಉನ್ನತದರ್ಜೆಯಲ್ಲಿ ಗಳಿಸಿರುತ್ತಾರೆ. ತಮ್ಮ ಆರು ದಶಕಗಳ ಬದುಕಿನಲ್ಲಿ 600 ವರ್ಷಗಳ ಸಾಧನೆ ಮಾಡಿದ್ದಾರೆ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ಡಾ. ವೂಡೇ ಪಿ.ಕೃಷ್ಣ ಅನೇಕ ವಿಷಯಗಳಲ್ಲಿ ಒಂದು ಬೃಹತ್ ಆಲದ ಮರ ಎಂದು ಅನೇಕರು ಅಭಿಪ್ರಾಯಪಡುತ್ತಾರೆ.

ದೇಶ, ವಿದೇಶಗಳಲ್ಲಿ ವಿವಿಧ ವೇದಿಕೆಗಳಿಂದ ಪ್ರೌಢ ಉಪನ್ಯಾಸ ನೀಡಿರುವ ಅವರು 25 ಕ್ಕಿಂತಲೂ ಹೆಚ್ಚು ರಾಷ್ಟ್ರಗಳಿಗೆ ಭೇಟಿ ನೀಡಿದ್ದಾರೆ. ಅಮೆರಿಕಾ ಸೇರಿದಂತೆ ವಿವಿಧ ರಾಷ್ಟ್ರಗಳಲ್ಲಿ ಅವರ ಹೆಜ್ಜೆ ಗುರುತುಗಳಿವೆ. ಅನೇಕ ಭಾಷೆಗಳಲ್ಲಿ ಪ್ರಭುತ್ವವಿದ್ದರೂ ಮಾತೃಭಾಷೆ, ನಾಡಭಾಷೆ ಕನ್ನಡದ ಮಹಾನ್ ಅಭಿಮಾನಿಯಾಗಿರುವ ಅವರು 1982ರಲ್ಲಿ ಇಂಜಿನಿಯರಿಂಗ್ ವ್ಯಾಸಂಗ

ಮಾಡುತ್ತಿದ್ದಾಗಲೇ ಆಗ ನಡೆದ ಐತಿಹಾಸಿಕ ಗೋಕಾಕ್ ಚಳವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು, ಸಾಹಿತಿಯಾಗಿಯೂ ದೊಡ್ಡ ಹೆಸರು ಮಾಡಿದ್ದು, ಆಂಧ್ರದ ಗಡಿ ಭಾಗದಲ್ಲಿ (ಮಡಕಶಿರಾ) ಕೆಲವು ವರ್ಷಗಳ ಹಿಂದೆ ನಡೆದ ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಬೆಂಗಳೂರಿನ ಎಸ್.ಜೆ.ಆರ್.ಸಿ.ಸಭಾಂಗಣದಲ್ಲಿ ನಡೆದ ಗಾಂಧಿನಗರ ವಿಧಾನಸಭಾ ಕ್ಷೇತ್ರದ 2ನೆಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಶಿಕ್ಷಣ ತಜ್ಞರಾಗಿದ್ದ ಕೆ.ಎಂ.ನಂಜಪ್ಪನವರ ಖಾಸಾ ಶಿಷ್ಯರಾಗಿ ಇವರು ಅವರ ಮಾರ್ಗದರ್ಶನದಲ್ಲಿ ಎರಡು ದಶಕಗಳಿಗಿಂತ ಹೆಚ್ಚು ಕಾಲದಿಂದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯನ್ನು ಮುನ್ನಡೆಸುತ್ತಿದ್ದು ಜ್ಞಾನ ದೇಗುಲದ ಸತ್ಯವಂತ ಎನಿಸಿಕೊಂಡಿದ್ದಾರೆ. ಶಿಕ್ಷಣ ವಂಚಿತ ಸಮುದಾಯದ ಮಕ್ಕಳ ಬಗೆಗೆ ವಿಶೇಷ ಕಾಳಜಿಯನ್ನು ವಹಿಸುತ್ತಿದ್ದಾರೆ.

ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಮತ್ತಿತರ ಅತ್ಯಂತ ಕ್ರಿಯಾಶೀಲ ಹಾಗೂ ಸೇವಾ ಮನೋಭಾವದ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿಯೂ, ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿ ಆ ಸಂಸ್ಥೆಗಳ ಮುನ್ನಡೆಗೆ ನಾಂದಿ ಹಾಡಿದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರು ಪ್ರವೇಶಿಸದ ಸೇವಾಕ್ಷೇತ್ರವೇ ಇಲ್ಲ ಎನ್ನುವುದು ಉತ್ಪ್ರೇಕ್ಷೆಯ ಮಾತಲ್ಲ. ದಿನದ 12 ಗಂಟೆಗಳ ಕಾಲವನ್ನು ಸಮಾಜ ಸೇವೆಗಾಗಿಯೇ ವಿನಿಯೋಗಿಸುತ್ತಾ ಬಂದಿದ್ದಾರೆ. ಪ್ರಗತಿಪರ ಚಿಂತಕರಾಗಿ, ಸರ್ವ ಜನಾಂಗದ ಹಿತಚಿಂತನೆ ಮಾಡುವ ಇವರು "ಏನಾದರೂ ಆಗು ಮೊದಲು ಮಾನವನಾಗು" ತತ್ತ್ವವನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದು ಎಲ್ಲರಿಗೂ ಮಾದರಿಯಾಗಿದ್ದಾರೆ.

ಇವರ ಸೇವೆಗಾಗಿ ನಾಡೋಜ ಸೇರಿದಂತೆ, ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿವೆ. ಯಾವುದೇ ಪ್ರಶಸ್ತಿಗೆ ಸನ್ಮಾನ್ಯರು ಲಾಭಿ ಮಾಡಿದವರಲ್ಲ. ಪ್ರಶಸ್ತಿಗಳೇ ಇವರನ್ನರಸಿಕೊಂಡು ಬಂದು ತಮ್ಮ ಮೌಲ್ಯವನ್ನು ಹೆಚ್ಚಿಸಿಕೊಂಡಿವೆ. ಮುಂದೊಮ್ಮೆ ಭಾರತ ಸರ್ಕಾರದ 'ಪದ್ಮಭೂಷಣ' ಪ್ರಶಸ್ತಿಯೂ ಲಭಿಸಬಹುದು. ಪದ್ಮಭೂಷಣವೋ, ಪದ್ಮವಿಭೂಷಣವೋ ಲಭಿಸಲಿ ಎಂದು ನಾವು ಹಾರೈಸೋಣ.

ಪ್ರತಿ ಯಶಸ್ವೀ ಪುರುಷನ ಹಿಂದಿನಶಕ್ತಿ ಒಬ್ಬ ಮಹಿಳೆ ಎನ್ನುವುದು ಡಾ. ವೂಡೇ ಪಿ. ಅವರ ವಿಷಯದಲ್ಲಿ ಅಪ್ಪಟ ಸತ್ಯ. ಸ್ವತಃ ಸವಿತಾ ವೂಡೇ ಪಿ.ಕೃಷ್ಣ ಅವರು ಪತಿಯ ಸೇವಾ ಮನೋಭಾವದಿಂದ ಸ್ಫೂರ್ತಿಗೊಂಡು "ನಾನು ಕಿಂಚಿತ್

ಸಮಾಜ ಸೇವೆ ಮಾಡುತ್ತಿದ್ದೇನೆ" ಎಂದು ನಮ್ರರಾಗಿ ನುಡಿಯುತ್ತಾರೆ. "ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬ ವಚನಕ್ಕೆ ಅನುರೂಪ ದಂತಿದ್ದಾರೆ ಈ ದಂಪತಿಗಳು.

2025ರ ಫೆಬ್ರವರಿ 1ರಂದು ಡಾ. ವೂಡೇ ಅವರನ್ನು ರಾಜ್ಯಮಟ್ಟದ ಬೃಹತ್ ಸಮಾರಂಭದಲ್ಲಿ ಅಭಿನಂದಿಸಲು ಸಿದ್ಧತೆ ಮಾಡಿಕೊಳ್ಳುತ್ತಿರುವ ಆದಿಜಾಂಬವ ಪತ್ರಿಕೆಯ ಸಂಪಾದಕ ಜಾಂಬವ ಎಂ.ಗಂಗಾಧರ್ ಅವರು ನಮ್ಮ ಅಭಿನಂದನೆಗೆ ಅರ್ಹರು.

ಅನುಬಂಧ-2

ಅಜಾತಶತ್ರು ಡಾ|| ವೂಡೇ ಪಿ.ಕೃಷ್ಣ

※ ಮಾ.ನ. ನಾಗರತ್ನ (ನಿವೃ)
ಲೇಖಕಿ, ಅಂಕಣಗಾರ್ತಿ, ಬೆಂಗಳೂರು

ಕೆಲವು ವ್ಯಕ್ತಿಗಳ ಹೆಸರಿನಲ್ಲಿ ಹಲವಾರು ಪುಸ್ತಕಗಳು, ಲೇಖನಗಳು, ಪ್ರಶಸ್ತಿಗಳು ಪ್ರಕಟವಾಗುತ್ತಿವೆ ಎಂದರೆ ಆ ವ್ಯಕ್ತಿಯು ಜನರ ಮನಸ್ಸಿನಲ್ಲಿ ಅದೆಷ್ಟು ಅರ್ಥಪೂರ್ಣವಾಗಿ ಬೇರೂರಿರುತ್ತಾರೆ ಎಂಬುದನ್ನು ಸೂಚಿಸುತ್ತದೆ. ಕೇವಲ ಹೊಗಳಿಕೆಗೆ ಮಾತ್ರ ಆ ವ್ಯಕ್ತಿಯನ್ನು ಓಲೈಸಲಾರರು. ನಿಜವಾದ ಅಂತಃಕರಣವುಳ್ಳ ವ್ಯಕ್ತಿ ಮಾತ್ರ ಜನರ ಅಂತರಂಗದಲ್ಲೂ ಸ್ಥಾನ ಪಡೆಯುತ್ತಾರೆ. ಇಂತಹ ಗುಣವಿಶೇಷಗಳುಳ್ಳ ವ್ಯಕ್ತಿಯೆಂದರೆ ವೂಡೇಪಿ ಕೃಷ್ಣರವರು.

ಇವರ ವ್ಯಕ್ತಿತ್ವ ಜೀವಮಾನ ಸಾಧನೆಗಳ ಕುರಿತು ಸುಮಾರು ತಿಂಗಳಿಂದಲೂ 'ಆದಿ ಜಾಂಬವ ಜಾಗೃತಿ' ಪತ್ರಿಕೆಯಲ್ಲಿ ಲೇಖನಗಳು ಪ್ರಕಟವಾಗುತ್ತಿದ್ದವು. ಇವರ ವೈಯಕ್ತಿಕ ಪರಿಚಯ ನನಗೆ ಇರಲಿಲ್ಲ. ಆದರೆ ಅವರ ವ್ಯಕ್ತಿತ್ವ, ಜೀವನದ ಸಾಧನೆಗಳನ್ನು ಓದುತ್ತಾ ಹೋದಂತೆ ಆಶ್ಚರ್ಯವಾಗಿತ್ತು. ಅದೆಷ್ಟು ವಿಸ್ತಾರವಾದ, ವಿಭಿನ್ನ ವ್ಯಕ್ತಿತ್ವದ ಗಣಿಯಾಗಿದ್ದಾರೆ ವೂಡೇಪಿ. ಕೃಷ್ಣರವರು. ಇವರನ್ನು ಕಂಡು ಮನಗಂಡವರು ಉದ್ಧರಿಸುವ ಮಾತುಗಳನ್ನು ಕೇಳಿಯೇ. ಕೃಷ್ಣರವರ ಬಗ್ಗೆ ಇನ್ನಿಲ್ಲದ ಗೌರವ ಮೂಡಿತ್ತು.

ಅವರನ್ನು ಮೂಖತಃ ಭೇಟಿಯಾಗುವ ಸುಸಂದರ್ಭವೊಂದು ಒದಗಿತ್ತು. ನಮ್ಮ ನೆಚ್ಚಿನ ಆತ್ಮೀಯರು ಹಾಗೂ 'ಆದಿಜಾಂಬವ' ಪತ್ರಿಕೆಯ ಸಂಪಾದಕರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವೊಡೇಪಿ.ಕೃಷ್ಣವರು ಆಗಮಿಸಿದ್ದರು. ಸೌಮ್ಯ ಮುಖದ, ಅಚ್ಚುಕಟ್ಟಿನ ಶ್ವೇತ ವಸ್ತ್ರಧಾರಿ, ತೀಕ್ಷ್ಣವೆನಿಸಿದರೂ ಸರಳ ಹಾಗೂ ಸ್ನೇಹಭಾವದಿಂದ ಎಲ್ಲರೊಡನೆ ನಗುಮುಖದಿಂದ ಮಾತನಾಡುವ ರೀತಿ ವಿಶಿಷ್ಟವಾಗಿತ್ತು. ಪರಿಚಯಿಸಿದಾಗ ನನ್ನೊಡನೆಯೂ ಮಾತಾಡಿದರು. ನಮ್ಮ ಮನೆ ಸದಾಶಿವನಗರದಲ್ಲಿ ನಿಮ್ಮ ಮನೆಯೂ ಅಲ್ಲಿಯೇ ಅಲ್ಲವೇ? ನಿಮ್ಮ ಅತ್ತೆ ಮತ್ತು ನಮ್ಮ ತಾಯಿ ಸ್ನೇಹಿತರು. ಮನೆಯವರೆಲ್ಲ ಗೊತ್ತು, ಕುಮಾರಸ್ವಾಮಿಯವರು– ಎಂದು ಹೇಳಿದಾಗ, ಆಶ್ಚರ್ಯವಾಗಿತ್ತು. ಹೌದು, ನಮ್ಮ ಮನೆಯ ಮುಂದೆ ಆಗಾಗ ಕೃಷ್ಣರವರ ತಂದೆ – ತಾಯಿಗಳು ಹಾದು ಹೋಗುವಾಗ ಅತ್ತೆಯೊಡನೆ ಮಾತಾಡುತ್ತಿದ್ದ ಅಸ್ಪಷ್ಟ ನೆನಪುಗಳು ಈಗ ನಿಚ್ಚಳವಾಯಿತು. ಆಗ ನನಗೆ ತುಂಬಾ ಖುಷಿಯಾಯಿತು. ಇನ್ನೊಂದು ಸಂದರ್ಭ, ಗಾಂಧೀ ಭವನದಲ್ಲಿ ಶ್ರೀ ಗಂಗಾಧರ ಅವರ ಪುಸ್ತಕ ಬಿಡುಗಡೆ 'ಆದಿಜಾಂಬವರ ಆ ಮುಖ ಈ ಮುಖ' ಸಮಾರಂಭದಲ್ಲಿ, ಆಗ ಅವರು ಮಾಡಿದ ಭಾಷಣದಲ್ಲಿ ಸಮಾಜದಲ್ಲಿ 'ಸಮಾನತೆ'ಯ ಕುರಿತು ಆಡಿದ ಮಾತುಗಳು ಸಹಜ ಹಾಗೂ ಸ್ಪಷ್ಟವಾದ ಅಭಿಪ್ರಾಯಗಳು ಅಲ್ಲಿ ವ್ಯಕ್ತವಾಗಿದ್ದವು.

ಕೆಲವು ಗಣ್ಯ ವ್ಯಕ್ತಿಗಳು 'ಸಮಾನತೆ' ಜಾತೀಯತೆ ಅಥವಾ ಶೂದ್ರ, ದಲಿತರ ಮೇಲಿನ ಸವರ್ಣೀಯರ ಅಭಿಪ್ರಾಯಗಳಿರಲಿ ಈ ಬಗ್ಗೆ ಖಚಿತ ಅಭಿಪ್ರಾಯಗಳನ್ನು ಹೊಂದಿರುವುದಿಲ್ಲ. ನಿಜವಾದ ಅಭಿಮಾನ, ಕಾಳಜಿಯೂ ಇರುವುದಿಲ್ಲ. ಕೇವಲ ಸಭೆಗಾಗಿ ವಿಷಯಗಳೆಂಬಂತೆ ಅತಿರೇಕದ ಭಾಷಣ ಮಾಡುತ್ತಾರೆ. ಆದರೆ, ವೂಡೇಪಿ. ಕೃಷ್ಣರವರ ಮಾತುಗಳನ್ನು ಕೇಳಿದಾಗ ತೀರಾ ಸಹಜವಾಗಿ ಅಷ್ಟೇ ಕಾಳಜಿ, ಅಂತಃಕರಣದಿಂದ "ಜಾತಿ ಎಂಬ ಪಿಡುಗು" ನಮ್ಮ ಸಮಾಜದಲ್ಲಿ ಮೆಟ್ಟಿಲುಗಳೇ

ಇಲ್ಲದ ಬಹುಮಹಡಿ ಕಟ್ಟಡದಲ್ಲಿ ಸಿಲುಕಿಕೊಂಡಂತೆ ಕೆಳಗಿಳಿಯಲಾಗದೆ ಅಲ್ಲೇ ಕೊಳೆಯುತ್ತಿದೆ", ಈ ಮಾತನ್ನು 'ಅಂಬೇಡ್ಕರ್ ಅವರು ಹೇಳಿದ್ದು ಎಂದು ಅವರ ಅಪರೂಪದ ಮಾತನ್ನು ಉಲ್ಲೇಖಿಸಿದರು. ಒಂದೆರಡು ಮಾತುಗಳೊಂದಿಗೆ ಗಾಂಧಿ – ಅಂಬೇಡ್ಕರ್ ಅವರ ಅನುಸಂಧಾನವನ್ನು ಸಜ್ಜನರಿಗೆ ಮನವರಿಕೆ ಮಾಡಿದ್ದು ಕೃಷ್ಣರವರ ಅಧ್ಯಯನ ಎಷ್ಟು ಬೌದ್ಧಿಕವಾಗಿದೆ ಎಂಬುದಲ್ಲದೆ ಅವರ ಉನ್ನತ ವ್ಯಕ್ತಿತ್ವಕ್ಕೂ ಸಾಕ್ಷಿಯಾಗಿತ್ತು. ಹಾಗೆಯೇ ಇಂತಹ ಆಳವಾದ ಅರಿವು ಹಾಗೂ ನಿಷ್ಕಳಂಕ ಮನಸ್ಸು, ಭಾವನೆಗಳು ಕೃಷ್ಣರವರಿಗೆ ಹಿರಿಯರು ಮತ್ತು ಮಹಾನ್ ವ್ಯಕ್ತಿಗಳ ಮಾರ್ಗದರ್ಶನದಿಂದ ಬಂದಂತಹ ಅಪರೂಪದ ಗುಣಗಳೆಂದರೆ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ಇವರ ಬಾಲ್ಯ ಜೀವನದಿಂದ ಸಾಗಿ ಬಂದ ನಡೆಗಳು, ಅವಿರತ ಪ್ರಯತ್ನ, ಶ್ರಮಗಳಿಂದ ದೊರೆತ ಫಲಶೃತಿಗಳು, ಸಾಧನೆಗಳು, ಅಚ್ಚರಿಯನ್ನು ತರಿಸುತ್ತವೆ. ಇವರ ಆದರ್ಶಯುತವಾದ ಜೀವನ, ನಮ್ಮ ನಾಡು ನುಡಿ ಸಂಸ್ಕೃತಿ ಹಾಗೂ ಪರಂಪರೆ, ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗಳು ಇಂದಿನ ಯುವ ಜನಾಂಗಕ್ಕೆ ಮಾತ್ರವಲ್ಲದೆ ಎಲ್ಲರಿಗೂ ಮಾದರಿಯಾಗಿರುವಂತಹ ಅಮೂಲ್ಯ ವಿಷಯಗಳಾಗಿವೆ.

ವೂಡೇ ಪಿ. ಕೃಷ್ಣರವರು ದಿನಾಂಕ: 1-2-1963ರಲ್ಲಿ ಬೆಂಗಳೂರಿನಲ್ಲಿ ತಂದೆ ಡಬ್ಲ್ಯು.ಎಚ್.ಪುಟ್ಟಯ್ಯ ಮತ್ತು ತಾಯಿ ದೊಡ್ಡಮ್ಮಯ್ಯ ದಂಪತಿಗಳಿಗೆ ಜನಿಸಿದರು. ತಮ್ಮ ಪೂರ್ವಿಕರು ಇದ್ದಂತಹ ಚಿತ್ರದುರ್ಗಕ್ಕೆ ಸೇರಿದ್ದ 'ವೂಡೇ' ಎಂಬ ಗ್ರಾಮದ ಹೆಸರನ್ನು ತಮ್ಮ ಹೆಸರಿನ ಜೊತೆ ಬೆಸೆದುಕೊಂಡಿರುವುದು ಅವರ ತಾತ, ಮುತ್ತಾತರು ಹಾಗೂ ತಂದೆ, ದೊಡ್ಡಪ್ಪನವರ ಪ್ರಭಾವ ಇವರ ಮೇಲೆ ಸಾಕಷ್ಟಿದೆ ಎಂದು ವ್ಯಕ್ತವಾಗುತ್ತದೆ. ಏಕೆಂದರೆ ಇವರೆಲ್ಲರೂ ಶ್ರೀಮಂತ ಮನೆತನದವರಾದರೂ ವಿದ್ಯಾವಂತರು ಮಾತ್ರವಲ್ಲದೆ ಸಮಾಜ ಸುಧಾರಣೆಗೆ ತಮ್ಮನ್ನು ತಾವು ಅರ್ಪಿಸಿಕೊಂಡು ಗಾಂಧೀಜಿ, ವಿವೇಕಾನಂದರು. ರಾಜಾರಾಮ ಮೋಹನ ರಾಯ್ ಇವರ ಆದರ್ಶ, ತತ್ವಗಳಿಗೆ ಬದ್ಧರಾಗಿದ್ದರು. ಇವರ ದಾರಿಯಲ್ಲೇ ಮುನ್ನಡೆವ ವೂಡೇ ಪಿ.ಕೃಷ್ಣರವರು ಪ್ರೌಢಶಾಲಾ ಶಿಕ್ಷಣಕ್ಕಾಗಿ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮ ಸೇರಿದ ಮೇಲೆ ಇನ್ನಷ್ಟು ಶಿಸ್ತು, ಸಂಯಮ, ಚುರುಕು, ವ್ಯಕ್ತಿತ್ವವನ್ನು ಬೆಳೆಸಿಕೊಂಡರು. ಅಚ್ಚರಿಯ ವಿಷಯವೆಂದರೆ, ಕೃಷ್ಣರವರ ತಾತ ಡಬ್ಲ್ಯು.ಎಚ್. ಹನುಮಂತಪ್ಪ (ಸೀನಿಯರ್)ರು ವಿರಳವೆಂಬಂತೆ ಸಮಾಜ ಸುಧಾರಕ ರಾಜಾರಾಮ ಮೋಹನ ರಾಯರ ಸಿದ್ಧಾಂತಗಳಿಗೆ ಮಾರು ಹೋಗಿದ್ದರು. ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ಸತೀಪದ್ಧತಿ, ಮುಂತಾದ ಮೌಢ್ಯಗಳಿಗೆ

ಬಲಿಯಾಗುತ್ತಿದ್ದ ಸ್ತ್ರೀಯರು, ಜನರನ್ನು ರಕ್ಷಿಸಲು ಅರಿವೂ ಮೂಡಿಸುವ ಮೂಲಕ 'ಬ್ರಹ್ಮ ಸಮಾಜ'ದ ಸ್ಥಾಪನೆಗೆ ಕಾರಣರಾದರು. ಇವರ ಪ್ರತಿಮೆಯನ್ನು ಡಬ್ಲ್ಯು.ಹೆಚ್. ಹನುಮಂತಪ್ಪನವರು ಕೆಂಗಲ್ ಹನುಮಂತಯ್ಯ ರಸ್ತೆಯಲ್ಲಿ ಸ್ಥಾಪಿಸಿ ಸಾರ್ವಜನಿಕ ಗ್ರಂಥಾಲಯವನ್ನು ತೆರೆದರು.

ಇದು ಅಪರೂಪದಲ್ಲಿ ಅಪರೂಪದ ಕೆಲಸವಾಗಿತ್ತು, ಇಂದಿಗೂ ವೂಡೇಪಿ. ಕೃಷ್ಣರವರ ಕುಟುಂಬ ರಾಜಾರಾಮ್ ಮೋಹನ್ ರಾಯರ ಕುರಿತು ವಿಚಾರ ಗೋಷ್ಠಿಗಳು, ಸಾಧನೆಗಳ ಬಗ್ಗೆ ಸಮಾರಂಭಗಳನ್ನು ಏರ್ಪಡಿಸಿ ಅವರ ಬಗ್ಗೆ ಜನರಿಗೆ ಅರಿವು ಮೂಡಿಸುವ ಮೂಲಕ ಸಾಮಾಜಿಕ ಸೇವೆಯನ್ನು ನಡೆಸುತ್ತಿದ್ದಾರೆ.

ಅಧ್ಯಯನಶೀಲರಾದ ವೂಡೇ ಪಿ. ಕೃಷ್ಣರವರು ಸಮಾಜದಲ್ಲಿ ಇರುವ ನ್ಯೂನ್ಯತೆಗಳನ್ನು ಸೂಕ್ಷ್ಮವಾಗಿ ತಿಳಿಯುತ್ತಾ ಮಹಾನ್ ವ್ಯಕ್ತಿಗಳ ಚಿಂತನೆಯ ಹಾದಿಯಲ್ಲೇ ವೈಚಾರಿಕತೆಯನ್ನು ಬೆಳೆಸಿಕೊಂಡರು. ಅವರು ಇದರ ಪರಿಹಾರೋಪಾಯಗಳಿಗಾಗಿ ಸುಧಾರಣೆಯ ಮೂಲ ಅಂಶವಾದ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಶಿಕ್ಷಣಕ್ಷೇತ್ರದಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ಶ್ಲಾಘನೀಯ ವ್ಯಕ್ತಿಯಾಗಿ ಎಲ್ಲರಿಗೂ ಮಾದರಿಯಾಗಿದ್ದಾರೆ. ವೂಡೇ ಪಿ.ಕೃಷ್ಣವರು 'ಉನ್ನತ ಶಿಕ್ಷಣ'ದ ಬಗ್ಗೆ ಹೀಗೆ ಹೇಳುತ್ತಾರೆ. ಪುರಾತನ ಕಾಲದಿಂದಲೂ ಉನ್ನತ ಶಿಕ್ಷಣ ಚಾಲ್ತಿಯಲ್ಲಿದ್ದು ಪುಸ್ತಕಗಳು ಲಭ್ಯವಿರದಿದ್ದ ಕಾಲದಲ್ಲೂ ತಕ್ಷಶಿಲಾ, ನಳಂದ, ವಿಕ್ರಮಶಿಲಾದಂತಹ ವಿಶ್ವವಿದ್ಯಾಲಯಗಳು ಸರಳವಾಗಿ ಉನ್ನತ ಶಿಕ್ಷಣವನ್ನು, ದೇಶ ವಿದೇಶಗಳ ವಿದ್ವಾಂಸರನ್ನು ಭೇಟಿಯಾಗಿ, ಜ್ಞಾನಗೋಷ್ಠಿಗಳಲ್ಲಿ ಭಾಗವಹಿಸುವುದು. ಕೇಳಿ ತಿಳಿಯುವುದು, 'ಬಹುಶ್ರುತ'ರೆಂದು ಮಾನ್ಯತೆ ಪಡೆಯುವುದಾಗಿತ್ತು.

ಈ ಉನ್ನತ ಶಿಕ್ಷಣ ಆಗ ಕೇವಲ ಮೇಲ್ವರ್ಗದವರಿಗೆ ಮಾತ್ರ ಮೀಸಲಿತ್ತು. ಮಹಿಳೆಯರಿಗಂತೂ ಶಿಕ್ಷಣದ ಅವಕಾಶವಿರಲಿಲ್ಲ. ಶೂದ್ರರಿಗಂತೂ ನಿಷಿದ್ಧವೇ ಆಗಿತ್ತು. ಇದನ್ನೆಲ್ಲ ಕೃಷ್ಣರವರು ಅಭ್ಯಸಿಸಿದ್ದರು.

ಆಧುನಿಕ ಶಿಕ್ಷಣವನ್ನು ತಮ್ಮದೇ ಆದ ರೀತಿಯಲ್ಲಿ ತರ್ಕಿಸುತ್ತ ಪುರಾತನ ಕಾಲದ ಸವಲತ್ತಿನ ಉನ್ನತ ಶಿಕ್ಷಣ ನಂತರದ ದಿನಗಳಲ್ಲಿ ಕೈಗಾರಿಕಾ ಕ್ರಾಂತಿಯಾದ ಮೇಲೆ 'ವ್ಯವಹಾರದ ಉನ್ನತ ಶಿಕ್ಷಣ' ಹಣ ಸಂಪಾದನೆಯ ಮೂಲವಾಯಿತು. ಬದಲಾದ ಪರಿಸ್ಥಿತಿಗಳಿಂದ ಉನ್ನತ ಶಿಕ್ಷಣವು ಇಂದಿನ ದಿನಗಳಲ್ಲಿ ಯುವ ಜನತೆಯು ವೃತ್ತಿ ಜೀವನವನ್ನು ಗಮನದಲ್ಲಿಡುವುದು. ಉನ್ನತ ಶಿಕ್ಷಣಕ್ಕೆ ಬಂಡವಾಳ ಹೂಡಿ ಅತ್ಯುನ್ನತ ಹುದ್ದೆಯನ್ನು ಹೊಂದುವುದರ ಉದ್ದೇಶವಾಗಿದೆ. ಆದ್ದರಿಂದ ಉನ್ನತ ಶಿಕ್ಷಣದಲ್ಲೂ ತಾರತಮ್ಯ ತೋರದೆ ಇದರ ಗುಣಮಟ್ಟವನ್ನು ಬೋಧನೆಯ

ಸಾಮರ್ಥ್ಯ, ಕಲಿಕಾ ಕುಶಲತೆಗಳನ್ನು ಅಳವಡಿಸಿಕೊಂಡು ಎಲ್ಲರಿಗೂ ಉನ್ನತ ಶಿಕ್ಷಣ ದೊರೆತು ಪ್ರತಿಯೋರ್ವರ ಸರ್ವತೋಮುಖ ಅಭಿವೃದ್ಧಿಯಾಗುವಂತೆ ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರಬೇಕು ಎಂದು ವಿಶ್ಲೇಷಿಸುತ್ತಾರೆ. ಇವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗದು.

ವೂಡೇ ಪಿ.ಕೃಷ್ಣರವರ ಧರ್ಮಪತ್ನಿ ಡಾ॥ಜಿ.ಸವಿತಾರವರು ಪತಿಯ ಬಗ್ಗೆ ತುಂಬ ಅಭಿಮಾನ, ಗೌರವಗಳನ್ನು ಹೊಂದಿದ್ದು, ತಾವೂ ಅಷ್ಟೇ ಗುಣಶಾಲಿಯಾಗಿದ್ದು ಅವರಂತೆ ಸಮಾಜಮುಖಿಯಾಗಿ ಒಂದೇ ನಾಣ್ಯವಾಗಿ ಬೆರೆತಿರುವುದು ತುಂಬಾ ಮೆಚ್ಚುಗೆಯ ಸಂಗತಿಯಾಗಿದೆ. ಬಹುಮುಖೀ ಮತ್ತು ಮೇರುವ್ಯಕ್ತಿತ್ವದ ಭಾಗವಾಗಿ ವೂಡೇಪಿ ಕೃಷ್ಣರವರು ಹಲವಾರು ಕ್ಷೇತ್ರಗಳಲ್ಲಿ ಸೇವಾಕ್ಷೇತ್ರಗಳಲ್ಲೂ ತೊಡಗಿಸಿಕೊಂಡು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಉನ್ನತ ಶಿಕ್ಷಣ, ಭಾಷೆ, ಕಲೆ, ಕ್ರೀಡೆ ಬರವಣಿಗೆಯಲ್ಲಿ ಲೇಖನಗಳು, ಪುಸ್ತಕಗಳ ಪ್ರಕಟಣೆಗಳಲ್ಲದೆ ರೆಡ್‌ಕ್ರಾಸ್ ಸಂಸ್ಥೆ, ಸೇವಾದಳದಂತಹ ರಾಷ್ಟ್ರಮಾನ್ಯ ಸೇವೆಗಳಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ಒಂದೇ ಮಾತಲ್ಲೇ ಹೇಳುವುದಾದರೆ ಎಲ್ಲಾ ಪ್ರಜ್ಞಾವಂತ ಗಣ್ಯವ್ಯಕ್ತಿಗಳು ಕೊಂಡಾಡಿರುವಂತೆ "ಆಡುಮುಟ್ಟದ ಸೊಪ್ಪಿಲ್ಲ" ಎಂಬಂತೆ ಎಲ್ಲ ವರ್ಗದ ಜನರಿಗೆ, ಯುವ ಜನಾಂಗಕ್ಕೆ ಸ್ಫೂರ್ತಿಯ ಸೆಲೆಯಾಗಿರುವ ವೂಡೇ ಪಿ.ಕೃಷ್ಣರವರ ಸಾರ್ಥಕ ಜೀವನ ನಮ್ಮೆಲ್ಲರ ಜಡತ್ವವನ್ನು ನೀಗಲಿ ಎಂದು ಆಶಿಸುವೆ. ಅವರಿಗೆ ನನ್ನ ಹೃತ್ಪೂರ್ವಕ ನಮನಗಳು ಹಾಗೂ ಅರುವತ್ಮೂರರ ಜನ್ಮಸಂಭ್ರಮದ ಸವಿನೆನಪಿಗಾಗಿ ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು, ಜಾಂಬವ ಎಂ. ಗಂಗಾಧರ್‌ರವರು ನಾಡೋಜ ಡಾ. ವೂಡೇ ಪಿ. ಕೃಷ್ಣರವರ ಕುರಿತಾದ ಲೇಖನಗಳ ಪುಸ್ತಕವನ್ನು ಲೋಕಾರ್ಪಣೆ ಮಾಡುತ್ತಿರುವ ಈ ಶುಭಸಂದರ್ಭದಲ್ಲಿ ಜಾಂಬವ ಎಂ. ಗಂಗಾಧರ್‌ರವರನ್ನು ನಾನು ಅಭಿನಂದಿಸುತ್ತೇನೆ.

ಅನುಬಂಧ-3

ವಿದ್ವತ್ತಿನ ಶಿಖರ – ವಿನಯ ಸಾಗರ

❋ ಬಿ.ಎಸ್. ದಿವಾಕರ, ವಿ.ಸಿ. ವಿಷ್ಣು ಪ್ರಸಾದ
ಹಳೆ ವಿದ್ಯಾರ್ಥಿಗಳು, ಶ್ರೀರಾಮ ಕೃಷ್ಣವಿದ್ಯಾಶಾಲೆ, ಮೈಸೂರು

ಆತ್ಮೀಯ ಗೆಳೆಯ ಕೃಷ್ಣ ಮತ್ತು ನಮ್ಮ ಒಡನಾಟ ಇಂದಿಗೆ ಅರ್ಧ ಶತಮಾನದಷ್ಟು ಹಿಂದಿನದು ಎಂದು ನಮಗೇ ನಂಬಲು ಸಾಧ್ಯವಾಗುತ್ತಿಲ್ಲ. ಮನೆ ಬಿಟ್ಟು, ಹನ್ನೆರಡನೇ ವಯಸ್ಸಿಗೆ ಮೈಸೂರಿನಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಮಡಿಲಿಗೆ 1975 ರಲ್ಲಿ ಸೇರಿದವರು ನಾವು, ಯಾವುದೇ ಚಡಪಡಿಕೆ ಹಿಂಜರಿಕೆ ಇಲ್ಲದೇ ಶಾಲೆಯ ಸಂಸ್ಕಾರ, ಸುಸಂಸ್ಕೃತ ಮತ್ತು ಶಿಸ್ತಿನ ದಿನಚರಿಗೆ ಸಂತೋಷದಿಂದ ಹೊಂದಿಕೊಂಡಿದ್ದು, ಆಟ ಪಾಠ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸತ್ತಾ, ದೇಹ ಬುದ್ಧಿ ಮನೋವಿಕಾಸದ ಪ್ರಕ್ರಿಯೆ ಸಾಗುತ್ತಾ ಹೋಯಿತು.

ಓದಿನಲ್ಲಿ ಮುಂದಾಗಿ, ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ ಶಹಬ್ಬಾಸ್ ಎಂದು ಬೆನ್ನು ತಟ್ಟಿಸಿಕೊಳ್ಳುವ ಸಂತೋಷ, ಆಟೋಟದಲ್ಲಿ ಬಹುಮಾನ ಪಡೆಯುವ ಹುಮ್ಮಸ್ಸು ಆ ಹದಿ ಹರೆಯದಲ್ಲಿ ನಮಗೆ ಸಹಜವಾಗಿತ್ತು.

ಆದರೆ ಹಿಂದಿರುಗಿ ನೋಡಿದಾಗ, ಕೃಷ್ಣರ ಮನೋಭಾವ ಆ ಎಳೆಯ ವಯಸ್ಸಿನಲ್ಲಿಯೇ ಸ್ಪರ್ಧೆಗಿಂತ ಹೆಚ್ಚಾಗಿ ಸ್ನೇಹಿತರೊಂದಿಗಿನ ಅವರ ಒಡನಾಟ ಸಹಕಾರವೇ ಪ್ರಧಾನ ಲಕ್ಷಣವಾಗಿತ್ತು ಎಂದು ಈಗ ಅರ್ಥವಾಗುತ್ತಿದೆ. ಮಾನವೀಯ ಅಂತಃಕರಣದ, ಸಹಜೀವಿಗಳಿಗೆ ಸ್ಪಂದಿಸುವ ಉದಾತ್ತ ಗುಣಾದರ್ಶಗಳ ವ್ಯಕ್ತಿತ್ವ ಅಂದೇ ಅರಳಲು ಆರಂಭಿಸಿತ್ತು ಎಂಬುದು ಸ್ಪಷ್ಟವಾಗುತ್ತದೆ.

ಮೂರು ವರ್ಷ ಪ್ರೌಢ ಶಾಲೆಯ ಶಿಕ್ಷಣ ಮುಗಿಸಿ ವಿದ್ಯಾ ಶಾಲೆಯಿಂದ ಹೊರಬಂದ ಮೇಲೆ ಸ್ವಲ್ಪ ಅಪರೂಪವೇ ಆಗಿತ್ತು ನಮ್ಮ ಅವರ ಸ್ನೇಹ ಸಂಬಂಧ. ಕಾಲ ಚಕ್ರ ಬಲು ವೇಗವಾಗಿ ಉರುಳುತ್ತಾ ಉರುಳುತ್ತಾ ಜೀವನದ ನಮ್ಮ ನಮ್ಮ ಪರೀಕ್ಷೆಗಳನ್ನು ಎದುರಿಸುತ್ತಾ ವೈಯಕ್ತಿಕ ದಾರಿಯಲ್ಲಿ ಬಹು ದೂರ ಬಂದಿದ್ದೆವು. ಇಂಜಿನಿಯರಿಂಗ್ ಪದವಿಯ ಜೊತೆ ಜೊತೆಗೆ ಹಲವು ವಿದ್ಯಾಧಾರೆಗಳಲ್ಲಿ ಕೃಷ್ಣ ಪಾರಂಗತರಾದರು. ತಮ್ಮ ಪೂಜ್ಯ ತಂದೆ ಹಾಗೂ ಪೂರ್ವಜರ ಸಾರ್ವಜನಿಕ ಬದುಕಿನ ಘನತೆಗೆ ಚ್ಯುತಿ ಬಾರದಂತೆ, ಅದಕ್ಕಿನ್ನೂ ಹೊಳಪು ಹೆಚ್ಚುವಂತೆ ಮಾಡುತ್ತಾ ನಿರಂತರವಾಗಿ ಪ್ರವರ್ಧಮಾನಕ್ಕೆ ಕೃಷ್ಣ ಬಂದರು.

ಸಮುದಾಯ, ಸಮಾಜದ ಸೇವೆಯಲ್ಲಿ ಅವರ ಅಪೂರ್ವ ಕೊಡುಗೆ ಜನಜನಿತವಾಗಿದೆ ಮತ್ತು ತಮಗೆಲ್ಲರಿಗೂ ತಿಳಿದ ವಿಷಯವೇ. ದೂರ ದೃಷ್ಟಿ, ಕರ್ತೃತ್ವ ಶಕ್ತಿ, ಕನಸು ಕಾಣುವ ಕವಿ ಹೃದಯ ಹಾಗೂ ಅದನ್ನು ಸಾಧಿಸುವ ಛಲ ಅನನ್ಯವಾಗಿದೆ. ಅವರ ಜೀವನ ಸಂಗಾತಿ ಶ್ರೀಮತಿ ಸವಿತಾ ಅವರು ಹೆಸರಿಗೆ ತಕ್ಕಂತೆ ಕೃಷ್ಣ ಅವರ ಬದುಕಿಗೆ ಸವಿಯ ಜೊತೆಗೆ ಸಂತಸವನ್ನು ನೀಡಿದವರು. ಪ್ರತಿಷ್ಠೆ, ಅಂತಸ್ತು, ಐಷಾರಾಮಿ ಜೀವನದ ಗತ್ತು ಎಲ್ಲದರಿಂದ ಇವರು ದೂರ. ಲೆಕ್ಕ ಇಲ್ಲದಷ್ಟು ಸಂಘ ಸಂಸ್ಥೆಗಳು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿರುವ ನಲವತ್ತು ಸಾವಿರ ವಿದ್ಯಾರ್ಥಿಗಳು, ಐದು ಸಾವಿರ ಅಧ್ಯಾಪಕರ ಸಮೂಹ ಮತ್ತು ಅಷ್ಟೇ ಪ್ರಮಾಣದ ಬೋಧಕೇತರ ಸಿಬ್ಬಂದಿಯ ನಿರ್ವಹಣಾ ಜವಾಬ್ದಾರಿ ಇದ್ದರೂ ಮನೆಯ ದಿನನಿತ್ಯದ ಕೆಲಸ ಕಾರ್ಯಗಳನ್ನು ಈ ದಂಪತಿಗಳು ಮನೆಯ ಕೆಲಸದವರನ್ನು ನೇಮಿಸದೆ ತಾವೇ ಸ್ವತಃ ದೈನಂದಿನ ಕೆಲಸ ಮಾಡುವುದು ಹೆಮ್ಮೆಯ ಮತ್ತು ಅಚ್ಚರಿಯ ಸಂಗತಿ. ಕಾಯಕದ ಘನತೆ ಇವರಿಬ್ಬರ ಮಹಾನ್ ಆಸ್ತಿ. ಹಲವು ಹತ್ತು ವಿದೇಶಗಳ ಪ್ರವಾಸ ಮಾಡಿ, ಅಲ್ಲಿನ ಅನುಭವಗಳನ್ನು, ಅದರ

ಪಾಠಗಳನ್ನು ತಮ್ಮ ದಿನನಿತ್ಯದ ಕಾರ್ಯ ಯೋಜನೆಗೆ ಅಳವಡಿಸಿಕೊಂಡ ದಕ್ಷ ಆಡಳಿತಗಾರರಾಗಿದ್ದಾರೆ.

ಶ್ರೀ ರಾಮಕೃಷ್ಣ ಆಶ್ರಮದ ಯತಿಗಳ ಜೊತೆ ಜೊತೆಗೆ ನಾಡಿನ ಹಲವು ಮಹಾತ್ಮರು, ಸಂತರ ಒಡನಾಟ ಹಾಗೂ ಗಾಂಧಿ ತತ್ವಗಳನ್ನೇ ಉಸಿರಾಗಿ ಸೇರಿಕೊಂಡ ನೂರಾರು ಸಜ್ಜನರ ಸಮರ್ಥ್ ಪಡೆಯ ಸೇನಾನಿ ಡಾ. ವೂಡೇ ಪಿ. ಕೃಷ್ಣ.

ಆದಷ್ಟು ಬೇಗ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜವಾಬ್ದಾರಿ ಹೊತ್ತು, ನಾಡಿಗೆ ತಮ್ಮ ಸೇವೆಯನ್ನು ನೀಡಲಿ ಎಂಬುದೇ ಗೆಳೆಯರೆಲ್ಲರ ಆಶಯ. ಏಕೆಂದರೆ ಕೃಷ್ಣ ಅವರು ದಂತ ಗೋಪುರದ ಆಮಿಷಗಳನ್ನು ತಿರಸ್ಕರಿಸಿ, ಸಮಾಜದ ದಮನಿತರ, ಬಲಹೀನರ, ದೀನ ದಲಿತರ ಹಾಗೂ ಗ್ರಾಮೀಣ ಪ್ರದೇಶದ ಯುವ ಸಮೂಹದ ಜೊತೆಗಿದ್ದು ಅವರ ಅಭಿವೃದ್ಧಿಗಾಗಿ ಕಾಯಾ ವಾಚಾ ಮನಸಾ ಕಾರ್ಯ ಪ್ರವೃತ್ತರಾಗಿದ್ದಾರೆ. ಈ ದೇಶದ ಉನ್ನತ ಆದರ್ಶಗಳನ್ನು ಯುವಕ ಯುವತಿಯರು ಛಲದಿಂದ ಮೈಗೂಡಿಸಿಕೊಂಡು ಸಮರ್ಥ ಭಾರತದ ನಿರ್ಮಾಣಕ್ಕೆ ಭದ್ರ ಬುನಾದಿ ಆಗಬೇಕು ಎಂಬ ಸದಾಶಯವನ್ನು ಅವರು ಹೊಂದಿದ್ದಾರೆ. ಮಹಾತ್ಮ ಗಾಂಧೀಜಿ ಎಂಬ ಮಾನವೀಯ ನಂದಾದೀಪ ಸದಾ ಬೆಳಗುತ್ತಾ ನಮ್ಮ ಮನಸ್ಸಿನ ಕತ್ತಲನ್ನು ನಿವಾರಿಸುವ ಅಪರಿಮಿತ ಶ್ರದ್ಧೆ ಅವರದಾಗಿದೆ. ಸೌಮ್ಯ ಮುಗುಳ್ನಗೆಯ ಹಿಂದಿನ ಕೆಡುಕಿಲ್ಲದ ನಿಷ್ಠುರತೆ, ಸೌಜನ್ಯದ ಜೊತೆಗೆ ಕಠೋರ ಪರಿಸ್ಥಿತಿ ಎದುರಿಸುವ ಧೈರ್ಯ, ಸಹಾಯಕ್ಕಾಗಿ ಕೈ ಚಾಚಿದವರ ಕೈಹಿಡಿದು ಮುನ್ನೆಡೆಸುವ ವಿಶಾಲ ಮನೋಭಾವದ ಕೃಷ್ಣ ಅವರು ನಮ್ಮ ಕಾಲದ ತಲ್ಲಣಗಳನ್ನು ಎದುರಿಸಿ ನಮ್ಮೆಲ್ಲರನ್ನೂ ಮುನ್ನಡೆಸುವ ಧೀಮಂತ ನಾಯಕ, ಅಸಾಮಾನ್ಯ ವ್ಯಕ್ತಿ ನಮ್ಮ ವೂಡೇಪಿ.

ಇಂತಹ ಈ ಶುಭಸಂದರ್ಭದಲ್ಲಿ ಆದಿಜಾಂಬವ ಜಾಗೃತಿ ಪತ್ರಿಕೆಯ ಸಂಪಾದಕರು, ಸಾಹಿತಿಗಳು ಆದ ಶ್ರೀ ಜಾಂಬವ ಎಂ. ಗಂಗಾಧರ್ ಅವರು ಬಹಳ ವಿಶೇಷವಾಗಿ ನಮ್ಮ ವೂಡೇ ಪಿ ಕೃಷ್ಣ ಅವರ ಕುರಿತು 'ಆಡು ಮುಟ್ಟದ ಸೊಪ್ಪಿಲ್ಲ- ವೂಡೇ ಪಿ ಕೃಷ್ಣ' ಎಂಬ ಲೇಖನಗಳ ಗ್ರಂಥವನ್ನು ಬರೆದು ಲೋಕಾರ್ಪಣೆಗೊಳಿಸಲು ಅಣಿಯಾಗುತ್ತಿರುವ ಈ ಶುಭ ಸಂದರ್ಭದಲ್ಲಿ ಶ್ರೀ ಜಾಂಬವ ಎಂ. ಗಂಗಾಧರ್‌ರವರಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು ಹಾಗೂ ಒಂದು ತಳಮಟ್ಟದ ಸಮುದಾಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಆ ಸಮುದಾಯದ ಹೆಸರಿನಲ್ಲಿ ಒಂದು ಐತಿಹಾಸಿಕ ಆದಿಜಾಂಬವ ಜಾಗೃತಿ

ಪತ್ರಿಕೆಯನ್ನು ಕಳೆದ ಮೂವತ್ತು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವುದು ಸಂಪಾದಕರ ಒಂದು ಅಪರೂಪದ ಸಾಧನೆಯೇ ಸರಿ.

ತೀರ ಇತ್ತೀಚೆಗೆ ನನಗೆ ಮತ್ತು ನನ್ನ ಗೆಳೆಯ ವಿ.ಸಿ. ವಿಷ್ಣುಪ್ರಸಾದ್‌ರವರಿಗೆ ಪರಿಚಯವಾಗಿದ್ದರೂ ಅದು ಎಷ್ಟೋ ಕಾಲದ ಪರಿಚಯ, ಒಡನಾಟ ಇರುವ ಭಾವನೆ ನಮ್ಮಿಬ್ಬರಿಗೆ ಬಂದಿದೆ.

ಇಂತಹ ನಮ್ಮ ಆತ್ಮೀಯ ಗೆಳೆಯ ವೂಡೇ ಪಿ. ಕೃಷ್ಣರವರ ಕುರಿತಾದ ಕೃತಿಯು ಲೋಕಾರ್ಪಣೆಗೊಳ್ಳುತ್ತಿರುವುದು ನಮಗೆ ಹೆಚ್ಚಿನ ಸಂತಸ ತಂದಿರುವುದರ ಜೊತೆಗೆ ನಾಡಿನ ಸಾಧಕರ ಹಾಗೂ ವಿದ್ವಜ್ಜನರನ್ನು ಪರಿಚಯಿಸುವ ಅಮೂಲ್ಯ ಗ್ರಂಥಗಳ ಸಾಲಿನಲ್ಲಿ ಪ್ರಮುಖ ಸ್ಥಾನ ಪಡೆಯಲಿರುವ ಈ ಗ್ರಂಥದಲ್ಲಿ ನಮಗೆ ಕೃಷ್ಣರವರನ್ನು ಕುರಿತು ಬರೆಯಲು ಅವಕಾಶ ಕಲ್ಪಿಸಿದ ಶ್ರೀ ಜಾಂಬವ ಎಂ. ಗಂಗಾಧರ್‌ರವರಿಗೆ ಸಪ್ರೇಮ ವಂದನೆಗಳು.

ಆತ್ಮೀಯ ಗೆಳೆಯ ಶ್ರೀ ಕೃಷ್ಣ ಶುಭವಾಗಲಿ...

ನಡೆ ಮುಂದೆ ನಡೆ ಮುಂದೆ
ನುಗ್ಗಿ ನಡೆ ಮುಂದೆ....

ಮಹಾಭಾರತದ ಕೃಷ್ಣನ ಸ್ಫೂರ್ತಿ ಆಧುನಿಕ ಭಾರತದ ನಮ್ಮ ಕೃಷ್ಣ ಅವರ ಕೀರ್ತಿ.

ಅನುಬಂಧ-4

ಸರಳತೆಯ ಮಹಾರೂಪಕ

※ ಡಾ. ಸತ್ಯಮಂಗಲ ಮಹಾದೇವ
ಪ್ರಾಧ್ಯಾಪಕರು, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು

ಯಾರು ತಾನು ಬದುಕಿರುವಾಗ ಇತರರೂ ತನ್ನಂತೆಯೇ ಬದುಕಲು ಪ್ರೇರೇಪಿಸುತ್ತಾರೋ, ಆತ ನಿಜವಾದ ಮನುಷ್ಯ : ಎಂದು ಛಾಂದೋಗ್ಯೋಪನಿಷತ್ ಹೇಳುತ್ತದೆ. ಸ್ವಾತಂತ್ರ್ಯ ಹೋರಾಟಗಾರ ಮನೆತನದಿಂದ ಬಂದ ನಾಡೋಜ ಡಾ.ವೂಡೇ ಪಿ ಕೃಷ್ಣ ಅವರು ತಮ್ಮ ಸೇವಾಮನೋಭಾವ, ಸರಳತೆ, ನ್ಯಾಯಪರತೆ ಮತ್ತು ಜೀವನ ಮೌಲ್ಯಗಳ ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ತಾನು ಬದುಕಿರುವಾಗ ಇತರರೂ ತನ್ನಂತೇ ಬದುಕಬೇಕು ಎಂಬ ಸೇವಾ ಮನೋಭಾವದಲ್ಲಿ ಬದುಕುತ್ತಾ, ತನ್ನ ಸಂಪರ್ಕಕ್ಕೆ

ಬಂದವರನ್ನು ಉತ್ತಮ ಮಾರ್ಗದಲ್ಲಿ ಬದುಕಲು ಪ್ರೇರೇಪಿಸುತ್ತಾ, ಜೀವಂತ ದಂತಕತೆಯಾಗಿ ಬದುಕುತ್ತಿದ್ದಾರೆ. ಉಪನಿಷತ್ ವಾಕ್ಯದಲ್ಲಿ ಹೇಳಿದಂತೆಯೇ ನಿಜವಾದ ಮನುಷ್ಯನಾಗಿ, ಆಗರ್ಭ ಶ್ರೀಮಂತರಾದರೂ ಶ್ರೀಮಂತಿಕೆಯ ಸೋಂಕಿಲ್ಲದೆ, ಮಹಾತ್ಮಾ ಗಾಂಧೀಜಿಯವರ ಆದರ್ಶಗಳನ್ನು ಅನುಸರಿಸುತ್ತಾ, ಸರಳತೆಯ ಮಹಾ ರೂಪಕವಾಗಿ ಜನಸಾಮಾನ್ಯರ ನಡುವೆ ಸಂತನಂತೆ ಜೀವಿಸುತ್ತಿದ್ದಾರೆ.

ಪ್ರಸ್ತುತ ನಾಡೋಜ ಡಾ ವೂಡೇ ಪಿ. ಕೃಷ್ಣ ಅವರು ಒಬ್ಬ ಭಾರತೀಯ ಶಿಕ್ಷಣತಜ್ಞ, ತಂತ್ರಜ್ಞ ಮತ್ತು ಸಾಮಾಜಿಕ ಕಾರ್ಯಕರ್ತರಾಗಿ, ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿಯಾಗಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ, ಮಾಜಿ ಅಧ್ಯಕ್ಷ ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಮಾಜಿ ಅಧ್ಯಕ್ಷರು, ಇಂಜಿನಿಯರ್ಸ್ (ಭಾರತ), ಕರ್ನಾಟಕ ರಾಜ್ಯ ಕೇಂದ್ರ . ಅವರು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ, ರಾಜ್ಯ ಸಚಿವರ ಶ್ರೇಣಿಯಲ್ಲಿ, ರಾಜ್ಯದಲ್ಲಿ ಯಾವುದೇ ವಿಪತ್ತುಗಳಿಗೆ ಪೂರ್ವಭಾವಿ ತಗ್ಗಿಸುವ ತಂತ್ರಗಳನ್ನು ಅಭಿವೃದ್ಧಿಪಡಿಸಲು ಸೇವೆ ಸಲ್ಲಿಸಿದ್ದಾರೆ.

ಕೃಷ್ಣ ಅವರು ರಾಷ್ಟ್ರಪತಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದಾರೆ, 2012 ರಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳಿಂದ ರೆಡ್‌ಕ್ರಾಸ್ ಮಾನವೀಯ ಕಾರ್ಯಗಳಿಗಾಗಿ ನೀಡಲಾದ ಅತ್ಯುನ್ನತ ರಾಷ್ಟ್ರೀಯ ಪ್ರಶಸ್ತಿ ಮತ್ತು 2004 ರಲ್ಲಿ ಕರ್ನಾಟಕ ಸರ್ಕಾರದಿಂದ ಸಾಮಾಜಿಕ ಕಾರ್ಯಗಳಿಗಾಗಿ ಪ್ರತಿಷ್ಠಿತ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ. ಅವರು ಫೆಲೋ, ವರ್ಲ್ಡ್ ಅಕಾಡೆಮಿ ಆಫ್ ಪ್ರೊಡಕ್ಟಿವಿಟಿ ಸೈನ್ಸ್, ಕೆನಡಾದಲ್ಲಿ ಮಾನವೀಯ ಸೇವೆಗಳ ವಿತರಣೆಯಲ್ಲಿ ಉತ್ಪಾದಕತೆಯ ಸುಧಾರಣೆಗೆ ನೀಡಿದ ಕೊಡುಗೆಗಳನ್ನು ಗುರುತಿಸಿ ಆಯ್ಕೆಯಾಗಿದ್ದಾರೆ . 2020 ರಲ್ಲಿ ಅವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಗೌರವ ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್.) ಗೆ ಸಮಾನವಾದ ಪ್ರತಿಷ್ಠಿತ ನಾಡೋಜ ಪ್ರಶಸ್ತಿಯನ್ನು ನೀಡಲಾಗಿದೆ.

ಕೃಷ್ಣ ಅವರು 1963 ರಲ್ಲಿ ಕರ್ನಾಟಕದ ಬೆಂಗಳೂರಿನಲ್ಲಿ ಜನಿಸಿದರು, ತಂದೆ ಲೇಟ್ ಡಬ್ಲ್ಯು. ಪುಟ್ಟಯ್ಯ, ವ್ಯಾಪಾರಿ ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು ಮತ್ತು ತಾಯಿ ದಿವಂಗತ ದೊಡ್ಡಮ್ಮಯ್ಯ. ಡಾ.ಜಿ.ಸವಿತಾ ಅವರನ್ನು ವಿವಾಹವಾಗಿದ್ದಾರೆ. ಕೃಷ್ಣ ಅವರು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ವ್ಯಾಸಂಗ ಮಾಡಿದರು; ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಡಾಕ್ಟರೇಟ್ (ಪಿಎಚ್‌ಡಿ)

ಮತ್ತು ಎಂಜಿನಿಯರಿಂಗ್, ಕಾನೂನು, ಸಮಾಜಶಾಸ್ತ್ರ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ಶಾಲೆಯಲ್ಲಿ ಅವರು ಸ್ವಾಮಿ ವಿವೇಕಾನಂದರ ತತ್ವಗಳಿಂದ ಪ್ರಭಾವಿತರಾದರು ಮತ್ತು ನಂತರ ರಾಜಾ ರಾಮಮೋಹನ್ ರಾಯ್ ಅವರಿಂದ ಪ್ರಭಾವಿತರಾದರು

ಕೃಷ್ಣ ಅವರು ಸುಪ್ರಸಿದ್ಧ ಮತ್ತು ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಶಿಕ್ಷಣತಜ್ಞರು. ಬೆಂಗಳೂರು, ಮೈಸೂರು, ತುಮಕೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಹರಡಿರುವ 34 ಶಿಕ್ಷಣ ಸಂಸ್ಥೆಗಳನ್ನು ಒಳಗೊಂಡಿರುವ ಶೇಷಾದ್ರಿಪುರಂ ಎಜುಕೇಷನಲ್ ಟ್ರಸ್ಟ್ (ಎಸ್‌ಇಟಿ)ಗೆ ಅವರು ನಾಯಕತ್ವವನ್ನು ಒದಗಿಸಿದ್ದಾರೆ ಮತ್ತು 1930 ರಲ್ಲಿ ಮಹಿಳೆಯರ ಗುಂಪಿನಿಂದ ಶೇಷಾದ್ರಿಪುರಂ ಸ್ತ್ರೀ ಸಮಾಜ ಎಂಬ ಪ್ರಾಥಮಿಕ ಶಾಲೆಯಾಗಿ ಸ್ಥಾಪಿಸಲಾಯಿತು. ಅವರು ಭಾರತೀಯ ರೆಡ್ ಕ್ರಾಸ್ ಸೊಸೈಟಿ, ದಿ ಟ್ಯೂಬರ್ಕ್ಯುಲೋಸಿಸ್ ಅಸೋಸಿಯೇಷನ್ ಆಫ್ ಇಂಡಿಯಾ, ಗಾಂಧಿ ಪೀಸ್ ಫೌಂಡೇಶನ್, ಮತ್ತು ದಿ ಇನ್‌ಸ್ಟಿಟ್ಯೂಶನ್ ಆಫ್ ಇಂಜಿನಿಯರ್ಸ್ (ಭಾರತ) ರಾಷ್ಟ್ರೀಯ ಮಟ್ಟದಲ್ಲಿ ತೊಡಗಿಸಿಕೊಂಡಿದ್ದಾರೆ ಮೂರು ದಶಕಗಳಿಗೂ ಹೆಚ್ಚು ಕಾಲ ನಿಂತಿರುವ ಚಾರ್ಟರ್ಡ್ ಇಂಜಿನಿಯರ್, ಅವರು ಪ್ರಸಿದ್ಧ ತಾಂತ್ರಿಕ ಮಧ್ಯಸ್ಥಗಾರರೂ ಹೌದು. ಕೃಷ್ಣ ಅವರು ಸರ್ ಎಂ ವಿಶ್ವೇಶ್ವರಯ್ಯ ಜೀವನ ಸಾಧನೆ ಎಂಬ ಪುಸ್ತಕವನ್ನು ಬರೆದಿದ್ದಾರೆ, ಇದನ್ನು 2009 ರಲ್ಲಿ ರಾಷ್ಟ್ರೀಯ ವಿಜ್ಞಾನ ದಿನದಂದು ಬಿಡುಗಡೆ ಮಾಡಲಾಯಿತು. 2002 – ಶಿಕ್ಷಣಕ್ಕಾಗಿ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ, 2004 – ಕರ್ನಾಟಕ ಸರ್ಕಾರದಿಂದ ರಾಜ್ಯ ರಾಜ್ಯೋತ್ಸವ ಪ್ರಶಸ್ತಿ – ಸಾಮಾಜಿಕ ಕಾರ್ಯಗಳಿಗಾಗಿ, 2005 – ಗೌರವಾನ್ವಿತ ಕರ್ನಾಟಕ ರಾಜ್ಯಪಾಲರಿಂದ ರೆಡ್ ಕ್ರಾಸ್ ಪ್ರಶಸ್ತಿ – ಮಾನವೀಯ ಸೇವೆಗಳಿಗಾಗಿ, 2011 – ಇಂಜಿನಿಯರ್‌ಗಳ ಸಂಸ್ಥೆಯಿಂದ ಎಮಿನೆಂಟ್ ಇಂಜಿನಿಯರ್ ಪ್ರಶಸ್ತಿ – ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಕೊಡುಗೆಗಾಗಿ, 2012 – ರೆಡ್ ಕ್ರಾಸ್ ಮಾನವೀಯ ಕೆಲಸಕ್ಕಾಗಿ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಂದ ರಾಷ್ಟ್ರಪತಿಗಳ ಚಿನ್ನದ ಪದಕ, 2014 – ಯುನೈಟೆಡ್ ಕಿಂಗ್‌ಡಂನ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆಯ ಫೆಲೋಶಿಪ್, 2017 – ಶಿಕ್ಷಣವನ್ನು ಒಳಗೊಳ್ಳಲು ಮತ್ತು ಕರ್ನಾಟಕದ ಶಿಕ್ಷಣದ ಭೂದೃಶ್ಯವನ್ನು ಬದಲಾಯಿಸಲು ಅವರ ಆದರ್ಶಪ್ರಾಯ ಕೊಡುಗೆಯನ್ನು ಗುರುತಿಸಿ ಹಿಂದೂ ಗ್ರೂಪ್‌ನಿಂದ ಡೋಯೆನ್ಸ್ ಪ್ರಶಸ್ತಿ

2020 – ಕನ್ನಡ ವಿಶ್ವವಿದ್ಯಾಲಯ, ಹಂಪಿಯಿಂದ ನಾಡೋಜ ಗೌರವ ಪದವಿ. ಕರ್ನಾಟಕ ರಾಜ್ಯಪಾಲರು ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಘನತೆವೆತ್ತ ಶ್ರೀ ವಜುಭಾಯಿ ರೂಡಾಭಾಯಿ ವಾಲಾ ಅವರು ಗೌರವ ಪದವಿಯನ್ನು ಪ್ರದಾನ ಮಾಡಿದರು. 2023 – ಸಮಾಜಕ್ಕೆ ಅಸಾಧಾರಣ ಸೇವೆಗಾಗಿ ಬೆಂಗಳೂರು ಸಿಟಿ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಲೆಟರ್ಸ್ (ಡಿ. ಲಿಟ್.) ಗೌರವ ಪದವಿ.

ಇಷ್ಟೆಲ್ಲಾ ಗೌರವ ಮಾನ್ಯತೆಗಳನ್ನು ಪಡೆದರೂ ಸರಳತೆಯನ್ನು ತಮ್ಮ ನಿತ್ಯ ಧರ್ಮವನಾಗಿ ಪಾಲಿಸುತ್ತಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ ನಾನು ಕಂಡ ಒಂದು ಘಟನೆಯನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ತತ್ವ ಕಥನ ಎಂಬ ಕೃತಿ ಶಾಸ್ತ್ರ ಚೂಡಾಮಣಿ ಪ್ರೊ.ಮಲ್ಲೇಪುರಂ ಜಿ ವೆಂಕಟೇಶ ಅವರ ಕೃತಿ, ಈ ಕೃತಿ ಲೋಕಾರ್ಪಣ ಸಮಾರಂಭವು ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಏರ್ಪಾಟಾಗಿತ್ತು ಅಂದಿನ ದಿನದ ಕಾರ್ಯಕ್ರಮದ ನಿರೂಪಣೆ ನನ್ನ ಪಾಲಿಗೆ ಬಂದಿತ್ತು. ಅಂದು ನಾಡೋಜ ಡಾ. ವೂಡೇ ಪಿ ಕೃಷ್ಣ ಅವರು ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮದಲ್ಲಿ ಹಾಜರಿದ್ದರು. ಪ್ರೇಕ್ಷಕರ ಸಾಲಿನಲ್ಲಿ ಸಾಮಾನ್ಯರಂತೆ ಕುಳಿತಿದ್ದರು. ವಿಶೇಷ ಆಹ್ವಾನಿತರಿಗೆ ಪುಸ್ತಕ ಗೌರವಕ್ಕಾಗಿ ವೇದಿಕೆಗೆ ಹೆಸರುಗಳನ್ನು ಓದುತ್ತಲಿದ್ದೆ. ಆಗ ಕೃಷ್ಣ ಸರ್ ಅವರ ಹತ್ತಿರ ಪಕ್ಕದಲ್ಲೇ ಕುಳಿತಿದ್ದ ಒಬ್ಬ ವ್ಯಕ್ತಿ ಕೃಷ್ಣ ಸರ್ ಅವರಿಗೆ ‘ಒಂದು ಫೋಟೊ ತೆಗೆದು ಕೊಡಿ ನಾನು ಪುಸ್ತಕ ತೆಗೆದುಕೊಳ್ಳಲು ವೇದಿಕೆಯ ಮೇಲೆ ತೆರಳುತ್ತೇನೆ’ ಎಂದು ಹೇಳಿದ ಅದಕ್ಕೆ ಕೃಷ್ಣ ಸರ್ ಅವರು “ಆಗಲಿ ಹೋಗಿ” ಎಂದು ಅವರ ಮೊಬೈಲ್ ಪಡೆದು ಸಾಮಾನ್ಯರಂತೆ ಫೋಟೊ ಕ್ಲಿಕ್ಕಿಸಿ ಮುಗುಳುನಗುತ್ತಾ ಮೊಬೈಲ್‌ನ್ನು ಆತನಿಗೆ ಹಿಂತಿರುಗಿಸಿದರು. ಈ ಘಟನೆ ಸಾಮಾನ್ಯವಾಗಿದೆ ಮತ್ತು ಎಲ್ಲರಿಗೂ ಸಾಮಾನ್ಯವಾಗಿ ಕಾಣುತ್ತದೆ. ಆದರೆ ನಾನು ಆ ಘಟನೆಗೆ ಸಾಕ್ಷಿಯಾದಾಗ ಅನ್ನಿಸಿದ್ದು 22 ಸಾವಿರದ 600 ಜನ ವಿದ್ಯಾರ್ಥಿಗಳು ಓದುತ್ತಿರುವ 32 ಸಂಸ್ಥೆಗಳನ್ನು ಮುನ್ನಡೆಸುವ ಶಿಕ್ಷಣತಜ್ಞರು, ರಾಷ್ಟ್ರಪತಿಗಳ ಚಿನ್ನದ ಪದಕ ಪಡೆದವರು, ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರು ಹೀಗೆ ಅನೇಕ ಸೇವಾ ಕ್ಷೇತ್ರಗಳಲ್ಲಿ ದಂತಕತೆಯಾಗಿರುವ ಕೃಷ್ಣ ಸರ್ ಅವರ ಫೋಟೋ ತೆಗೆಯಲು ಹಾಗೂ ಸಂದರ್ಶನಕ್ಕೆ ಹಲವಾರು ಕ್ಯಾಮರಾಗಳು ಕಾಯುವಾಗ, ಯಾರೋ ಒಬ್ಬ ಫೊಟೊ ತೆಗೆಯಲು ಹೇಳಿದಾಗ ಸಾಮಾನ್ಯರಂತೆ ನಿರಹಂಕಾರದಿಂದ ಮಮತೆಯಿಂದ ಫೊಟೋ ತೆಗೆದುಕೊಡುವ ಅವರ ವ್ಯಕ್ತಿತ್ವ ಎಷ್ಟುಜನ ದೊಡ್ಡವರು ಎನಿಸಿಕೊಂಡವರಿಗೆ ಇದೆ ಹೇಳಿ. ಯಾವುದಾದರೂ

ಗ್ರಾಮಪಂಚಾಯ್ತಿ ಸದಸ್ಯನಾದರೆ ಸಾಕು ಅವರನ್ನು ಮಾತನಾಡಿಸುವುದೇ ಕಷ್ಟವಾಗಿರುವ ಈ ಸಮಾಜದಲ್ಲಿ ವೂಡೇ ಪಿ ಕೃಷ್ಣ ಅವರು ನನಗೆ ಈ ಕಾರಣಕ್ಕೆ ಸರಳತೆಯ ಮಹಾ ರೂಪಕದಂತೆ ಕಾಣಿಸುತ್ತಾರೆ. ಮತ್ತು ನೈತಿಕತೆಯ ಕನ್ನಡಿಯಂತೆ ಸದ ಶುಭ್ರವಾದ ಬಿಳಿಯ ವಸ್ತ್ರಧರಿಸಿ, ನಿಜ ಗಾಂಧೀವಾದವನ್ನು ಬದುಕಿ ತೋರಿಸುತ್ತಿದ್ದಾರೆ. ಅವರ ಕೈಯಲ್ಲಿ ಇರುವ ದಿನಚರಿ ಪುಸ್ತಕವನ್ನು ಗಮನಿಸಬೇಕು ನೀವು, ಎಷ್ಟೋವರ್ಷ ಹಳೆಯ ಹಳೆಯ ಡೈರಿ ಅದರಲ್ಲಿ ಪ್ರತೀವರ್ಷ ಹಾಳೆಗಳನ್ನು ಮಾತ್ರ ಬದಲಿಸುತ್ತಾರೆ. ಕಾರಣ ಗಾಂಧೀಜಿಯವರು ಹೇಳಿದ ಮಿತಬಳಕೆ ತತ್ವ ಮತ್ತು ಅವರ ಉಡುಪಿನಲ್ಲಿ

ಬದಲಾವಣೆಯಿಲ್ಲ ಕಲರ್ ಬಟ್ಟೆಗಳನ್ನು ಅವರು ಧರಿಸಲೇ ಇಲ್ಲ, ಗಾಂಧೀ ಭವನವಾಗಿರಲಿ, ಶೆಷಾದ್ರಿಪುರಂ ಶಿಕ್ಷಣದತ್ತಿ ಆವರಣವಾಗಿರಲಿ ಸ್ವಚ್ಚತೆಗೆ ಮೊದಲ ಆದ್ಯತೆ. ಎಲ್ಲಾದರೂ ಒಂದು ಸಣ್ಣ ಪೇಪರ್ ಬಿದ್ದಿರುವುದು ಕಾಣಿಸಿದರೆ ತಾವೇ ಸ್ವತಃ ಕೈಯಾರೆ ಆಯ್ದುಕೊಂಡು ಕಸದ ಡಬ್ಬಿಗೆ ಹಾಕುತ್ತಾರೆ, ತಮ್ಮ ಚಾಲಕನಿಗಾಗಲಿ, ಇತರರಿಗಾಗಲಿ ಇದು ಎತ್ತಿ ಎಂದು ಹೇಳುವುದಿಲ್ಲ ಮತ್ತು ತಮ್ಮ ಬಳಿ ಬಂದವರಿಗೆ ಕೋಪದಿಂದ ಹೇಳುವುದಿಲ್ಲ 'ಮಾತಿಗಿಂತ ಕೃತಿಲೇಸು' ಎಂದು ನಂಬಿದ ಕೃಷ್ಣ ಅವರ ನಡತೆ ಅಪರೂಪದ ಗಾಂಧೀ ತತ್ವವನ್ನು ನಮಗೆ ದರ್ಶನಮಾಡಿಸುತ್ತದೆ. ಯಾರಾದರೂ ನೀವು ಸರಳತೆಯ ಶ್ರೇಷ್ಟತೆಯ ರೂಪಕ ಎಂದು ಅವರಿಗೆ ಹೇಳಿದರೆ ಅಷ್ಟೇ ವಿನಮ್ರತೆಯಿಂದ ಅವರು ಮನುಷ್ಯ ಬದುಕಬೇಕಾಅಗಿರುವುದು ಹೀಗೆ ಅಲ್ಲವೇ ಎಂದು ಹೇಳುತ್ತಾರೆ.

ಯಾವುದೇ ವ್ಯಕ್ತಿ ಸಮಾಜವನ್ನು ಬದಲಿಸಲು ರಾಜಕೀಯ ಕ್ಷೇತ್ರವಾಗಲಿ, ಸಾಮಾಜಿಕ ಕ್ಷೇತ್ರವಾಗಲಿ ಇತರರು ಸರಿ ಇಲ್ಲ ಎಂದು ದೂರುತ್ತಾರೆ. ಆದರೆ ಕೃಷ್ಣ ಅವರು ಮೊದಲು ನಮ್ಮಲ್ಲಿ ಪರಿವರ್ತನೆ ಆಗದ ಹೊರತು ಸಮಾಜ ಪರಿವರ್ತನೆ ಆಗುವುದಿಲ್ಲ ಎಂದು ನಿರೂಪಿಸುತ್ತಾರೆ. ಯಾವುದೇ ಸಾಧಕ ಅಥವಾ ಸಮರ್ಥ ನಾಯಕನ ವ್ಯಕ್ತಿತ್ವ ಇದು. ಮೊದಲು ನನ್ನಲ್ಲಿ ಬದಲಾವಣೆ ತರುವುದು ನಂತರ ಸಮಾಜದಲ್ಲಿ ಎನ್ನುವುದು ಕೃತಿ ರೂಪಕದ ನಡೆಯಲ್ಲವೇ. ಹೀಗೆ ಹೇಳುತ್ತಾ ಹೋದರೆ ಅವರ ವ್ಯಕ್ತಿತ್ವ ಆಡಳಿತಕ್ಕೆ ಸಮರ್ಥನಾಯಕರಾಗಿ, ಶಿಕ್ಷಣ ಕ್ಷೇತ್ರಕ್ಕೆ ತಜ್ಞರಾಗಿ, ಇಂಜಿನಿಯರಿಂಗ್ ಕ್ಷೇತ್ರಕ್ಕೆ ಅತ್ಯುತ್ತಮ ಅಭಿಯಂತರರಾಗಿ ಸೇವೆಯ ಕ್ಷೇತ್ರಕ್ಕೆ ಅತ್ಯುತ್ತಮ ಮಾನವೀಯ ಸೇವೆಯ ಸ್ವಯಂ ಸೇವಕರಾಗಿ, ಧಾರ್ಮಿಕವಾದ ನೆಲೆಯಲ್ಲಿ ನಿಜದ ದಾರ್ಶನಿಕನಾಗಿ. ಕನ್ನಡವನ್ನು ಕಟ್ಟಿ ಬೆಳೆಸುವ ನಿಟ್ಟಿನಲ್ಲಿ ಒಬ್ಬ ಕನ್ನಡದ ಕಟ್ಟಾಳುವಾಗಿ ಹೋರಾಟ ಮತ್ತು ಕನ್ನಡದ ಏಳ್ಗೆಗೆ ಬೇಕಾದ ಕಟ್ಟುಪಾಡು

ಮತ್ತು ಸೇವೆಯ ಗಮ್ಯತೆಯನ್ನು ಪೋಷಿಸುವ ಘನ ವ್ಯಕ್ತಿತ್ವ ಕೃಷ್ಣ ಅವರದಾಗಿದೆ. ಆದ್ದರಿಂದಲೇ ಗಾಂಧೀನಗರ ವಿಧಾನಸಭಾ ಕ್ಷೇತ್ರದ ಮೊದಲ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಅವರನ್ನು ಕನ್ನಡದ ಮನಸ್ಸುಗಳು ಮೆರೆಸಿದ್ದು ಅದು ಒಂದು ಸಾಕ್ಷಿ. ಇಂತಹ ಬಹುಮುಖೀ ವ್ಯಕ್ತಿತ್ವದ ಸಾಧಕ ಕೃಷ್ಣ ಅವರ ವ್ಯಕ್ತಿತ್ವ ಸರಳತೆಯ ಜೀವನಕ್ಕೆ ಬರೆದ ಭಾಷ್ಯದಂತಿದೆ ಹಾಗೂ ನಾಡೋಜ ಡಾ. ವೂಡೇ ಪಿ ಕೃಷ್ಣ ಅವರ ವ್ಯಕ್ತಿತ್ವ ಗಾಂಧೀತತ್ವಕ್ಕೆ ತೊಡಿಸಿದ ಸುವರ್ಣದ ಚೌಕಟ್ಟು ಎಂದರೆ ತಪ್ಪಾಗಲಾರದು.*

ಸೌಜನ್ಯ : 'ಸುಗತ', ಸೆಪ್ಟೆಂಬರ್ 2024, ಸಂ: 1, ಸಂಚಿಕೆ:3ರಲ್ಲಿ ಪ್ರಕಟಿತ ಲೇಖನ.

ಅನುಬಂಧ-5

ಜೀವನ ವಿವರ

1963 : ಫೆಬ್ರವರಿ 1 ರಂದು ಜನನ, ಬೆಂಗಳೂರು

1975 : ಮೈಸೂರಿನ ಶ್ರೀರಾಮಕೃಷ್ಣ ವಿದ್ಯಾಶಾಲಾ ಪ್ರವೇಶ

1981 : ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ ಕನ್ನಡ ಸಂಘದ ಸ್ಥಾಪನೆ, ಅಧ್ಯಕ್ಷರಾಗಿ ಆಯ್ಕೆ

1982 : ಗೋಕಾಕ್ ಚಳವಳಿಯಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ನಾಯಕತ್ವ

1984 : ರೆಡ್‌ಕ್ರಾಸ್ ಸದಸ್ಯರಾಗಿ ದಾಖಲು
ಬೆಂಗಳೂರು ಯೂತ್ ಹಾಸ್ಟೆಲ್ ಗೌ. ಕೋಶಾಧಿಕಾರಿಯಾಗಿ ಆಯ್ಕೆ

1986 : ಬಿ.ಇ. ಪದವಿ

- ನೆಹರೂನಗರ ಸಹಕಾರಿ ಬ್ಯಾಂಕ್‌ನ ಗೌ. ವ್ಯವಸ್ಥಾಪಕ ನಿರ್ದೇಶಕರಾಗಿ ಆಯ್ಕೆ

1987 : ಬಿ. ಎಂ. ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರ್ಪಡೆ

1988 : ಪತ್ರಿಕೋದ್ಯಮ ಡಿಪ್ಲೋಮಾ

1989 : ಬ್ರಹ್ಮವಾಣಿ' ಮಾಸಪತ್ರಿಕೆ ಸಂಪಾದಕರಾಗಿ ಸೇವೆ

• 'ಬಿ. ಕೆ. ಅಸೋಸಿಯೇಟ್ಸ್' ಮೂಲಕ ಸ್ವತಂತ್ರ ವೃತ್ತಿಜೀವನ ಪ್ರಾರಂಭ

1990 : ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ

1991 : ಕಾನೂನು ಪದವಿ

• ಶ್ರೀಮತಿ ಸವಿತಾರೊಂದಿಗೆ ವಿವಾಹ

1992 : ಕರ್ನಾಟಕ ಸರ್ಕಾರದಿಂದ ಸಮುದಾಯ ಸೇವೆಗಾಗಿ 'ರಾಜ್ಯ ಯುವ ಪ್ರಶಸ್ತಿ'.

• ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಆಜೀವ ಧರ್ಮದರ್ಶಿಯಾಗಿ ಸೇರ್ಪಡೆ.

1994 : ಕೈಗಾರಿಕಾ ಇಂಜಿನಿಯರಿಂಗ್ ಮತ್ತು ನಿರ್ವಹಣೆಯಲ್ಲಿ ಸ್ನಾತಕೋತ್ತರ ಪದವಿ.

1995 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌ. ಸಹಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ.

1997 : ಭಾರತೀಯ ಇಂಜಿನಿಯರುಗಳ ಸಂಸ್ಥೆಯ ಸದಸ್ಯತ್ವ

1999 : ಭಾರತ ಸರ್ಕಾರದ ಅನುಮೋದಿತ ಮೌಲ್ಯಮಾಪಕರಾಗಿ ನೋಂದಣಿ

2000 : ಭಾರತ-ಶ್ರೀಲಂಕಾ ಯುವ ವಿನಿಮಯ ಕಾರ್ಯಕ್ರಮದಲ್ಲಿ ಭಾರತ ನಿಯೋಗದ ಮುಖಂಡರಾಗಿ ಶ್ರೀಲಂಕಾಕ್ಕೆ ಭೇಟಿ.

2001 : ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌ, ಪ್ರಧಾನ ಕಾರ್ಯದರ್ಶಿಯಾಗಿ ಅವಿರೋಧ ಆಯ್ಕೆ.

• ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಕಾರಿಣಿ ಸದಸ್ಯತ್ವಕ್ಕೆ ಆಯ್ಕೆ

2002 : ಭಾರತ ಸೇವಾದಳ ಕೇಂದ್ರಸಮಿತಿ ಸದಸ್ಯರಾಗಿ ನೇಮಕ

• ಬೆಂಗಳೂರು ಮಹಾನಗರ ಪಾಲಿಕೆಯಿಂದ ಶೈಕ್ಷಣಿಕ ಸೇವೆಗಾಗಿ **'ಕೆಂಪೇಗೌಡ ಪ್ರಶಸ್ತಿ'**.

2003 : ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಸ್ಥಾಪನೆ, ಕಾರ್ಯದರ್ಶಿಯಾಗಿ ಸೇವೆ.

• ರಾಜ್ಯ ರೆಡ್‌ಕ್ರಾಸ್ ಸಂಸ್ಥೆಯ ಗೌ. ಕೋಶಾಧ್ಯಕ್ಷರಾಗಿ ಅವಿರೋಧ ಆಯ್ಕೆ

2004 : ಕರ್ನಾಟಕ ಸರ್ಕಾರದಿಂದ ಸಮಾಜ ಸೇವೆಗಾಗಿ ಕನ್ನಡ ರಾಜ್ಯೋತ್ಸವ ದಂದು **'ರಾಜ್ಯ ಪ್ರಶಸ್ತಿ'**.

- ಮೈಸೂರ್ ಸ್ಟೋನ್‌ವೇರ್ ಪೈಪ್ಸ್ ಅಂಡ್ ಪಾಟರೀಸ್ ಲಿಮಿಟೆಡ್‌ನ ನಿರ್ದೇಶಕರಾಗಿ ನೇಮಕ.

2005 : ರಾಜ್ಯಪಾಲರಿಂದ 'ರೆಡ್‌ಕ್ರಾಸ್ ಸೇವಾ ಪ್ರಶಸ್ತಿ' ಸಮಾಜ ಸೇವೆಗಾಗಿ **'ಡಿ.ವಿ.ಜಿ. ಪುರಸ್ಕಾರ'**.

2006 : ನಿರ್ವಹಣಾ ಶಾಸ್ತ್ರದಲ್ಲಿ **ಪಿಎಚ್.ಡಿ.** ಪದವಿ

- ಭಾರತೀಯ ನಿಯೋಗದ ಸದಸ್ಯರಾಗಿ ಸೌಹಾರ್ದಯುತ ಚೀನಾ ಪ್ರವಾಸ.
- ಹೈದರಾಬಾದಿನಲ್ಲಿ ನಡೆದ ಅಖಿಲಭಾರತ ಬ್ರಹ್ಮಸಮಾಜ ಸಮ್ಮೇಳನದ ಅಧ್ಯಕ್ಷ ಗೌರವ.
- ರೆಡ್‌ಕ್ರಾಸ್ ರಾಷ್ಟ್ರೀಯ ಕಾರಕಾರಿಣಿ ಸದಸ್ಯರಾಗಿ ಆಯ್ಕೆ

2007 : ನ್ಯೂಜಿಲ್ಯಾಂಡ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಎರಡನೆಯ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ.

- ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯಶಾಖೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆ.

2008 : ಕರ್ನಾಟಕ ಸರ್ಕಾರದಿಂದ **'ವಿಕಲಚೇತನರ ಕಲ್ಯಾಣಾಭಿವೃದ್ಧಿ ರಾಜ್ಯಪ್ರಶಸ್ತಿ'**.

- ಭಾರತೀಯ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಪರಿಷತ್ತಿಗೆ ಆಯ್ಕೆ.
- ನ್ಯೂಯಾರ್ಕ್ ನಗರದ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಸನ್ಮಾನ
- ಕತಾರ್‌ನಲ್ಲಿ ನಡೆದ 5ನೆಯ ವಿಶ್ವಕನ್ನಡ ಸಾಂಸ್ಕೃತಿಕ ಸಮ್ಮೇಳನದಲ್ಲಿ ಸನ್ಮಾನ.

2009 : ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ ನೇಮಕ.

- ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಆಡಳಿತ ಮಂಡಳಿ ಸದಸ್ಯತ್ವ
- 'ಗಾಂಧಿ ಶಾಂತಿ ಪ್ರತಿಷ್ಠಾನ' ಬೆಂಗಳೂರು ಕೇಂದ್ರದ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

- ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆ ಕೇಂದ್ರ ಸಮಿತಿ ಸದಸ್ಯರಾಗಿ ನೇಮಕ.

2010 : ನಾಸಿಕ್‌ನಲ್ಲಿ ನಡೆದ 28ನೆಯ ಮೆಕಾನಿಕಲ್ ಇಂಜಿನಿಯರುಗಳ ರಾಷ್ಟ್ರೀಯ ಅಧಿವೇಶನದ ಅಧ್ಯಕ್ಷತೆ.

- ಕೇರಳದ ಡಿ. ಸಿ. ನಿರ್ವಹಣಾ ಶಾಲೆಯ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ.
- ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಮಿತಿಯ ಆಹ್ವಾನದ ಮೇರೆಗೆ ನೇಪಾಳದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ವಿಶೇಷ ತರಬೇತಿ ಕಾರಾಗಾರದಲ್ಲಿ ಭಾಗಿ.
- ಭಾರತೀಯ ಆರ್ಬಿಟ್ರೇಶನ್ ಪರಿಷತ್ತಿನ **'ಫೆಲೊ'** ಆಗಿ ಆಯ್ಕೆ

2011 : ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ **'ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ'**.

- ಕಾನೂನು ಸ್ನಾತಕೋತ್ತರ ಪದವಿ
- ಬೆಂಗಳೂರಿನಲ್ಲಿ ನಡೆದ ಪ್ರತಿಷ್ಠಿತ ,26ನೆಯ ಇಂಜಿನಿಯರಿಂಗ್ ಕಾಂಗ್ರೆಸ್‌ನ ಸಂಚಾಲಕತ್ವ
- ಮಲೇಶ್ಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಮೂರನೆಯ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ.

2012 : ವಿಶ್ವನೀಡಂ ಟ್ರಸ್ಟ್‌ನ ವ್ಯವಸ್ಥಾಪಕ ಧರ್ಮದರ್ಶಿಯಾಗಿ ನೇಮಕ

- ಇಂಗ್ಲೆಂಡಿನ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಸಂಸ್ಥೆಯ ಪ್ರತಿಷ್ಠಿತ **'ಫೆಲೊ'** ಗೌರವ.
- ಭಾರತೀಯ ಇಂಜಿನಿಯರುಗಳ ಸಂಸ್ಥೆ ಕರ್ನಾಟಕ ರಾಜ್ಯ ಕೇಂದ್ರ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.
- ರೆಡ್‌ಕ್ರಾಸ್ ಮಾನವೀಯ ಸೇವೆಗಾಗಿ ನೀಡಲ್ಪಡುವ ಅತ್ಯುನ್ನತ ರಾಷ್ಟ್ರಪ್ರಶಸ್ತಿಯಾದ **'ರಾಷ್ಟ್ರಪತಿಗಳ ಚಿನ್ನದ ಪದಕ'**.
- 'ಕರ್ನಾಟಕ ಗಾಂಧಿ ಸ್ಮಾರಕ ನಿಧಿ' ಉಪಾಧ್ಯಕ್ಷರಾಗಿ ನೇಮಕ
- ರೋಟರಿ ಸಂಸ್ಥೆಯ ಗೌರವ ಸದಸ್ಯತ್ವ ಹಾಗೂ **ಪಾಲ್ ಹ್ಯಾರಿಸ್ ಫೆಲೊ ಗೌರವ**.

- ರಾಯದುರ್ಗದಲ್ಲಿ ನಡೆದ 4ನೆಯ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೌರವ.
- 'ಸರ್. ಎಂ. ವಿಶ್ವೇಶ್ವರಯ್ಯ: ಜೀವನ ಸಾಧನೆ' ಪುಸ್ತಕ ಪ್ರಕಟಣೆ
- ಎಸ್. ವ್ಯಾಸ ವಿಶ್ವವಿದ್ಯಾಲಯದ ದಶಮಾನೋತ್ಸವದಲ್ಲಿ ಸನ್ಮಾನ

2013 : 50ನೆಯ ವರ್ಷದ ಹುಟ್ಟುಹಬ್ಬ

- ಶ್ರೀರಾಮಕೃಷ್ಣ ವಿದ್ಯಾಶಾಲಾ ಹಳೆಯ ವಿದ್ಯಾರ್ಥಿಗಳಿಂದ ಸನ್ಮಾನ

2014 : ಮಡಿಕೇರಿಯಲ್ಲಿ ನಡೆದ 80ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ.

- ಶೇಷಾದ್ರಿಪುರಂ ಶ್ರೀರಾಮಸೇವಾ ಸಮಿತಿ ಉಪಾಧ್ಯಕ್ಷರಾಗಿ ಆಯ್ಕೆ

2015 : ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.

- ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ಸ್ ಸಂಸ್ಥೆಯ ಉತ್ಪಾದನಾ ಇಂಜಿನಿಯರಿಂಗ್ ಪರಿಷತ್ತಿನ ಸದಸ್ಯತ್ವ
- ಭಾರತ–ರಷ್ಯಾ ತಾಂತ್ರಿಕ ವಿನಿಮಯ ನಿಯೋಗದ ಸದಸ್ಯರಾಗಿ ರಷ್ಯಾ ಪ್ರವಾಸ.
- 'ನದಿಯಂತೆ ನೆನಪು', 'ಬೆಳ್ಳಕ್ಕಿ ಸಾಲು' ಹಾಗೂ '*Beyond the Boundaries*' ಕೃತಿಗಳ ಪ್ರಕಟಣೆ.
- 'ಕೃಷ್ಣಸಿರಿ' ಐವತ್ತರ ಅಭಿನಂದನ ಗ್ರಂಥ ಸಮರ್ಪಣೆ
- ಸಿಂಗಪುರದಲ್ಲಿ ನಡೆದ ವಿಶ್ವ ಇಂಜಿನಿಯರುಗಳ ಶೃಂಗಸಭೆಯಲ್ಲಿ ಭಾರತದ ಪ್ರತಿನಿಧಿ.
- ಕರ್ನಾಟಕ ರಾಜಭವನದಲ್ಲಿ ಭಾರತದ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರೊಂದಿಗೆ ಸೌಹಾರ್ದಯುತ ಭೇಟಿ.
- ಕರ್ನಾಟಕ ಸರ್ಕಾರದಿಂದ ನೇಮಿಸಲ್ಪಟ್ಟ 2015ರ ಗಾಂಧಿ ಸೇವಾಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯತ್ವ.
- ಬ್ರಿಕ್ಸ್ ಇಂಜಿನಿಯರಿಂಗ್ ಸಂಸ್ಥೆಗಳ ಫೆಡರೇಷನ್ನಿನ ಆಡಳಿತ ಮಂಡಳಿ ಸದಸ್ಯತ್ವ

2016 : ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಪ್ರತಿಷ್ಠಿತ **ಫೆಲೊ ಗೌರವ.**

- ರಾಜಾರಾಮ ಮೋಹನರಾಯ್ ಸ್ಥಾಪಿತ ಬ್ರಹ್ಮಸಮಾಜದ ಕೇಂದ್ರ ಪರಿಷತ್ತಿನ ಅಧ್ಯಕ್ಷರಾಗಿ ಅವಿರೋಧ ಆಯ್ಕೆ.
- ಭಾರತೀಯ ತಾಂತ್ರಿಕ ಆರ್ಬಿಟ್ರೇಟರ್‌ಗಳ ಸಂಸ್ಥೆಯ ಕರ್ನಾಟಕ ರಾಜ್ಯ ಕೇಂದ್ರದ ಅಧ್ಯಕ್ಷರಾಗಿ ನೇಮಕ.
- ಕರ್ನಾಟಕ ರಾಜ್ಯದ ಎಲ್ಲ 30 ಜಿಲ್ಲೆಗಳಲ್ಲಿ ಗಾಂಧೀ ಭವನ ನಿರ್ಮಾಣ ಯೋಜನೆಯಡಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯ ಉನ್ನತ ಸಮಿತಿ ಸದಸ್ಯರಾಗಿ ಕರ್ನಾಟಕ ಸರ್ಕಾರದಿಂದ ನೇಮಕ.
- ವಿಶ್ವ ಇಂಜಿನಿಯರುಗಳ ಅಕಾಡೆಮಿಯ **ಫೆಲೊ ಗೌರವ**

2017 : **ಗಾಂಧೀವಾದಿ ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ**, ಮಂಡ್ಯ

- 'ದಿ ಹಿಂದೂ' ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ **'ಡಾಯಸ್ ಪ್ರಶಸ್ತಿ'**.
- ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಅವಿರೋಧ ಆಯ್ಕೆ
- ಪಟೇಲ್ ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ನೇಮಕ
- ಭಾರತೀಯ ಮಾಂಟೆಸ್ಸರಿ ಕೇಂದ್ರದ ಉಪಾಧ್ಯಕ್ಷರಾಗಿ ನೇಮಕ
- ಕರ್ನಾಟಕ ಖಾಸಗಿ ಸ್ನಾತಕೋತ್ತರ ಕಾಲೇಜುಗಳ ಸಂಘದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆ.
- ಬ್ರಿಕ್ಸ್ ಇಂಜಿನಿಯರಿಂಗ್ ಸಂಸ್ಥೆಗಳ ಫೆಡರೇಷನ್ನಿನ ತಾಂತ್ರಿಕ ನಿಯೋಗದ ಸದಸ್ಯರಾಗಿ ಜರ್ಮನಿ, ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳ ಪ್ರವಾಸ.
- ಬೆಂಗಳೂರು ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಗೌರವ.

2018 : ನವದೆಹಲಿಯ ಭಾರತೀಯ ಕ್ಷಯರೋಗ ಸಂಸ್ಥೆಯ ರಾಷ್ಟ್ರೀಯ ಕಾರ್ಯಕಾರಿಣಿಗೆ ಪುನರಾಯ್ಕೆ.

- ಬೆಂಗಳೂರು ನಗರ ಜಿಲ್ಲಾ ಸಂಸ್ಕೃತ ಸಮ್ಮೇಳನ ಅಧ್ಯಕ್ಷೀಯ ಗೌರವ
- ಬೆಂಗಳೂರು ನಗರ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಗೌರವ.

- ಕರ್ನಾಟಕ ಸರ್ಕಾರದಿಂದ ರಾಜ್ಯ ಎನ್.ಎಸ್.ಎಸ್. (ರಾಷ್ಟ್ರೀಯ ಸೇವಾ ಯೋಜನೆ) ಸಲಹಾ ಸಮಿತಿ ಸದಸ್ಯರಾಗಿ ನೇಮಕ.
- ಪತ್ರಕರ್ತರು, ಸಾಹಿತಿಗಳಾದ ಜಾಣಗೆರೆ ವೆಂಕಟರಾಮಯ್ಯನವರು ತಮ್ಮ ಕಾದಂಬರಿ 'ಜೀವಜಲ' ಕೃತಿಯನ್ನು ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಿಸಿದ್ದಾರೆ.
- ಗಾಂಧಿ ಶಾಂತಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಗೆ ಕರ್ನಾಟಕ ಸರ್ಕಾರದಿಂದ ಸದಸ್ಯರಾಗಿ ನೇಮಕ.
- ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾಗಿ ಸರ್ವಾನುಮತದಿಂದ ಪುನರಾಯ್ಕೆ.
- ಬೆಂಗಳೂರಿನ ನ್ಯೂ ಹೊರೈಜನ್ ಇಂಜಿನಿಯರಿಂಗ್ (ಸ್ವಾಯುತ್ತ ಸಂಸ್ಥೆ) ಕಾಲೇಜಿನ **'ಎಮೆರಿಟಸ್ ಪ್ರೊಫೆಸರ್'** ಗೌರವ.

2019 : ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ ಕಾರ್ಯಕಾರಿಣಿಗೆ ನೇಮಕ.

- ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಸಾಮಾಜಿಕ ಸೇವೆಗಾಗಿ ಗೌರವ ಪುರಸ್ಕಾರ.
- ಬೆಂಗಳೂರಿನ ಮಲ್ಲೇಶ್ವರದ ಹೆಸರಾಂತ ಗಾಂಧಿ ಸಾಹಿತ್ಯ ಸಂಘದ ವಜ್ರಮಹೋತ್ಸವ ಗೌರವ.
- ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯ ವತಿಯಿಂದ ಡಾ. ವೂಡೇ ಪಿ. ಕೃಷ್ಣ ಕುರಿತಾದ ವ್ಯಕ್ತಿಚಿತ್ರದ ಸಾಕ್ಷ್ಯಚಿತ್ರ ತಯಾರಿಕೆ.

2020 : ಸಮಾಜ ಸೇವೆಗಾಗಿ ಮಂಡ್ಯದ **ಡಾ. ಜಿ. ಮಾದೇಗೌಡ ಪ್ರತಿಷ್ಠಾನ ಪ್ರಶಸ್ತಿ** ಗೌರವ.

- ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಮಹಾತ್ಮಗಾಂಧಿ ಸುಸ್ಥಿರ ಅಭಿವೃದ್ಧಿ ಕೇಂದ್ರದ ಸಲಹಾ ಸಮಿತಿ ಸದಸ್ಯತ್ವ.
- ಶಿಕ್ಷಣ ಕ್ಷೇತ್ರದ ಅನುಪಮ ಸೇವೆಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.ಗೆ ತತ್ಸಮಾನವಾದ ಪ್ರತಿಷ್ಠಿತ **ನಾಡೋಜ ಗೌರವ ಪದವಿ.**
- ಬೆಂಗಳೂರಿನ ಪ್ರತಿಷ್ಠಿತ ಸಮಾಜ ಸೇವಾ ಸಂಸ್ಥೆ ಉದಯಭಾನು ಕಲಾ ಸಂಘದ ಅತ್ಯುನ್ನತ ಗೌರವವಾದ **'ಆಜೀವ ಗೌರವ ಸದಸ್ಯತ್ವ'**.

- ದಿ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ (ಇಂಡಿಯಾ) ಸಂಸ್ಥೆಯಿಂದ ಶತಮಾನೋತ್ಸವ ಸಂದರ್ಭದಲ್ಲಿ ನೀಡಿದ **'ಸ್ಕ್ರಾಲ್ ಆಫ್ ಹಾನರ್'** (*Scroll of Honour*).

2021 : ಕಸ್ತೂರ್ ಬಾ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಕರ್ನಾಟಕ ರಾಜ್ಯ ಮಟ್ಟದ ಸಲಹಾ ಸಮಿತಿ ಸದಸ್ಯರಾಗಿ ನೇಮಕ.

- ಬೆಂಗಳೂರಿನ ನಾಗಾರ್ಜುನ ಇಂಜಿನಿಯರಿಂಗ್ ಕಾಲೇಜು (ಅಟಾನಮಸ್) ಇದರ ರಾಷ್ಟ್ರೀಯ ಸಲಹಾ ಸಮಿತಿ ಸದಸ್ಯರಾಗಿ ನೇಮಕ.
- ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜುಗಳ ಶುಲ್ಕ ನಿಗದಿ ಸಮಿತಿ ಸದಸ್ಯರಾಗಿ ಕರ್ನಾಟಕ ಸರ್ಕಾರದಿಂದ ನೇಮಕ.
- ಕವಿ ಡಾ. ಸತ್ಯಮಂಗಲ ಮಹಾದೇವ ತಮ್ಮ 'ರೆಕ್ಕೆಗಳೊಡೆದಾವೋ ಮುಗಿಲಿಗೆ' ಕೃತಿಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಣೆ.
- ಬೆಂಗಳೂರು ನಗರ ಜಿಲ್ಲಾ ವೇಟ್‌ಲಿಫ್ಟಿಂಗ್ ಸಂಸ್ಥೆ ಅಧ್ಯಕ್ಷರಾಗಿ ಆಯ್ಕೆ
- ಆದಿಚುಂಚನಗಿರಿ ವಿಶ್ವವಿದ್ಯಾಲಯದ ಯೋಜನಾ, ನಿಯಂತ್ರಣ ಮತ್ತು ಮೌಲ್ಯಮಾಪನಾ ಮಂಡಳಿ ಸದಸ್ಯರಾಗಿ ನೇಮಕ.
- ವೈ. ಜಯಚಂದ್ರಶೇಖರ್‌ರವರು ತಮ್ಮ 'ಬೇರು ಬೆಳಕು' ಚೊಚ್ಚಲ ಕೃತಿಯನ್ನು ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಣೆ.
- ಹೈದರಾಬಾದಿನ ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾದ ಹಣಕಾಸು ಸಮಿತಿ ಅಧ್ಯಕ್ಷರಾಗಿ ನೇಮಕ.
- ನಾಡೋಜ ಡಾ. ಗೊ.ರು.ಚ. ಸ್ಥಾಪಿತ ಗ್ರಾಮಭಾರತ ಪ್ರತಿಷ್ಠಾನದ ಸಲಹಾ ಸಮಿತಿ ಸದಸ್ಯರಾಗಿ ನೇಮಕ.
- ಕಲ್ಕತ್ತಾದ ಭಾರತೀಯ ಇಂಜಿನಿಯರುಗಳ ಸಂಸ್ಥೆ ಚುನಾವಣಾ ಕುಂದುಕೊರತೆಗಳ ಸಮಿತಿ ಸದಸ್ಯರಾಗಿ ನೇಮಕ.
- ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ವತಿಯಿಂದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಗಾಗಿ **'ಕಾಯಕಯೋಗಿ ಡಾ. ಶಿವಕುಮಾರ ಸ್ವಾಮೀಜಿ ಪ್ರಶಸ್ತಿ'**.

2022 : ಕವಿ ಸಿದ್ದೇಶ್ ದುಗ್ಗೇನಹಳ್ಳಿ ತಮ್ಮ 'ದೇಸಿ ಕಥನಗಳು' ಕೃತಿಯ ಅರ್ಪಣೆ

- ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್ ವತಿಯಿಂದ ಪ್ರತಿಷ್ಠಿತ 2022ನೆಯ ಸಾಲಿನ **'ವರ್ಷದ ಶಿಕ್ಷಣ ತಜ್ಞ ಪ್ರಶಸ್ತಿ'**.
- ಖ್ಯಾತ ವಿದ್ವಾಂಸರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರು ತಮ್ಮ 'ತತ್ತ್ವ ಕಥನ' ಕೃತಿಯನ್ನು ಡಾ. ವೂಡೇ ಪಿ. ಕೃಷ್ಣ ಅವರಿಗೆ ಅರ್ಪಣೆ.
- ಕರ್ನಾಟಕ ರಾಜ್ಯ ಸಂಯಮ ಮಂಡಳಿ ವತಿಯಿಂದ ಕೊಡಮಾಡುವ ರಾಜ್ಯ ಸಂಯಮ ಪ್ರಶಸ್ತಿಯ ಆಯ್ಕೆ ಸಮಿತಿ ಅಧ್ಯಕ್ಷರಾಗಿ ನೇಮಕ.
- ಭಾರತೀಯ ಇಂಜಿನಿಯರುಗಳ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ ರಚಿಸಿದ ಕೈಗಾರಿಕಾ ಅಭಿವೃದ್ಧಿ ತಜ್ಞರ ಸಮಿತಿಗೆ ನೇಮಕ.
- ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಸಾಹಿತಿ ಲಕ್ಕೂರು ಆನಂದ್‌ರವರ ಅನುವಾದಿತ 'ಮುತ್ತು' ಕೃತಿಯ ಅರ್ಪಣೆ.
- ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯಿಂದ 2022ನೆಯ ಸಾಲಿನ ಪ್ರತಿಷ್ಠಿತ **'ಡಾ. ಎಂ.ಸಿ. ಮೋದಿ ಮಾನವೀಯ ಪ್ರಶಸ್ತಿ'**.
- ಭಾರತೀಯ ಇಂಜಿನಿಯರುಗಳ ಸಂಸ್ಥೆಯಿಂದ **'ಶ್ರೇಷ್ಠ ಮೆಕಾನಿಕಲ್ ಇಂಜಿನಿಯರ್ ರಾಷ್ಟ್ರ ಪ್ರಶಸ್ತಿ.'**
- ಯಶೋಧರಮ್ಮ ದಾಸಪ್ಪ ಸ್ಥಾಪಿತ ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ವತಿಯಿಂದ **'ಸೇವಾ ಪ್ರಶಸ್ತಿ'**.
- ಜೀವಮಾನ ಸಾಧನೆಗಾಗಿ ವ್ಯಾಲ್ಯುವರ್ಸ್ ಸಂಸ್ಥೆಯಿಂದ 2022ನೆಯ ಸಾಲಿನ **'ಶ್ರೇಷ್ಠ ವ್ಯಾಲ್ಯುವರ್ ಪ್ರಶಸ್ತಿ'**.
- ಪದ್ಮಶ್ರೀ ಪುರಸ್ಕೃತ ಕವಿ ಡಾ. ದೊಡ್ಡರಂಗೇಗೌಡರ ಕನ್ನಡದಿಂದ ಅನುವಾದಿಸಿದ '*Middleman*' ಇಂಗ್ಲಿಷ್ ಕೃತಿಯ ಅರ್ಪಣೆ.

2023 : ಸಾಮಾಜಿಕ ಸೇವೆಗಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದಿಂದ **ಡಾಕ್ಟರ್ ಆಫ್ ಲೆಟರ್ಸ್ (*D.Lit.*) ಗೌರವ ಪದವಿ.**

- ಗುರೂಜಿ ವಿನಯ್ ವಿನೇಕರ್ ಸ್ಥಾಪಿಸಿದ ಸೇವಕ ಸಂಸ್ಥೆಯಿಂದ ಸಾಮಾಜಿಕ ಸೇವೆಯಲ್ಲಿ ಜೀವಮಾನ ಸಾಧನೆಗಾಗಿ **2023ರ ವರ್ಷದ ಸೇವಕ ಪ್ರಶಸ್ತಿ.**
- ಬೆಂಗಳೂರಿನ ಪರಿಮಳ ಗೆಳೆಯರ ಬಳಗದಿಂದ ಶೈಕ್ಷಣಿಕ ಸೇವೆಗಾಗಿ **2023ರ ಪರಿಮಳ ಪ್ರಶಸ್ತಿ.**

- ದಿ ಟೈಮ್ಸ್ ಗ್ರೂಪ್ ವತಿಯಿಂದ ಶೈಕ್ಷಣಿಕ ಸೇವೆಗಾಗಿ **ವಿಜಯ ಕರ್ನಾಟಕ ಬೆಂಗಳೂರು ಸಾಧಕರ ಪ್ರಶಸ್ತಿ.**
- ಮಲ್ಲೇಶ್ವರಂನ ಹಿಮಾಂಶು ಜ್ಯೋತಿಕಲಾ ಪೀಠ ವಿದ್ಯಾಸಂಸ್ಥೆಗಳ ಗವರ್ನಿಂಗ್ ಕೌನ್ಸಿಲ್ ಸದಸ್ಯರಾಗಿ ನೇಮಕ.
- ಮೈಸೂರು ಜಿಲ್ಲೆ ಸುತ್ತೂರು ಶ್ರೀಕ್ಷೇತ್ರದ ಗೌರವ.

2024 : ಕರ್ನಾಟಕ ಅನುದಾನರಹಿತ ಖಾಸಗಿ ಪದವಿಪೂರ್ವ ಕಾಲೇಜುಗಳ ಸಂಘದ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಗೌರವಾಧ್ಯಕ್ಷ.

- ಬೆಂಗಳೂರು ವಿಶ್ವವಿದ್ಯಾಲಯ ಹಿರಿಯ ವಿದ್ಯಾರ್ಥಿಗಳ ಸಂಘದ ಸ್ಥಾಪಕ ಸದಸ್ಯ.
- ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಗೌರವ ಸದಸ್ಯತ್ವ.
- ಕರ್ನಾಟಕ ಸರ್ಕಾರ ಕೊಡಮಾಡುವ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಗಾಂಧಿಭವನದ ಅಧ್ಯಕ್ಷರಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಂದ ಸ್ವೀಕಾರ.
- ಕರ್ನಾಟಕ ವಚನ ಸಾಹಿತ್ಯ ಪರಿಷತ್ತಿನ ವತಿಯಿಂದ **ಶಿಕ್ಷಣ ತಜ್ಞ ಪ್ರಶಸ್ತಿ.**
- ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ ವತಿಯಿಂದ **ಚಾಣಕ್ಯ ಪ್ರಶಸ್ತಿ.**
- ಮಹಾತ್ಮ ಗಾಂಧಿ ಅಧ್ಯಕ್ಷತೆ ವಹಿಸಿದ ಬೆಳಗಾವಿ ಕಾಂಗ್ರೆಸ್ ಅಧಿವೇಶನ ಶತಮಾನೋತ್ಸವ ಸಮಿತಿಗೆ ಕರ್ನಾಟಕ ಸರ್ಕಾರದಿಂದ ಸದಸ್ಯರಾಗಿ ನೇಮಕ.
- ರೋಟರಿ ಅಂತಾರಾಷ್ಟ್ರೀಯ ಸಂಸ್ಥೆಯಿಂದ ಜೀವಮಾನ ಸಾಧನಾ ಪ್ರಶಸ್ತಿ.
- ಕರ್ನಾಟಕ ರಾಜ್ಯ ಕಾಲೇಜು ಅಧ್ಯಾಪಕ ನಿವೃತ್ತಿ ವೇತನದಾರರ ಸಂಘದ ವತಿಯಿಂದ ಶೈಕ್ಷಣಿಕ ಹಾಗೂ ಸಾಹಿತ್ಯದ ಸೇವೆಗಾಗಿ **ಓಜಶ್ರೀ ಪ್ರಶಸ್ತಿ.**
- ಎಜುಕೇಷನ್ ಟುಡೇ ಪತ್ರಿಕೆಯ ವತಿಯಿಂದ **ಶಿಕ್ಷಣ ದಿಗ್ಗಜ ಪ್ರಶಸ್ತಿ** (2024)

2025 : ಚಿತ್ರದುರ್ಗದಲ್ಲಿ ನಡೆದ 13ನೆಯ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನದ ವಿಶೇಷ ಗೌರವ.





ಅದು ಮುಟ್ಟದ ಸೊಪ್ಪಿಲ್ಲ

ನಾಡೋಜ ಡಾ. ವೂಡೇ ಪಿ. ಕೃಷ್ಣ

ಸ್ವಾಮಿ ವಿವೇಕಾನಂದರ ಧೀರತೆ, ಮಹಾತ್ಮಗಾಂಧೀಜಿಯವರ ಸತ್ಯನಿಷ್ಠುರತೆ, ಅಂಬೇಡ್ಕರರ ಸಮಾನತಾ ದೃಷ್ಟಿವಿಶದತೆ ಈ ಎಲ್ಲಾ ಗುಣಗಣಗಳ ಮುಪ್ಪುರಿ ವ್ಯಕ್ತಿತ್ವವನ್ನು ನಾವು ಕಾಣುವುದಾದರೆ, ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರಲ್ಲಿ ನಾವು ಕಾಣಬಹುದು. ಅವರಿಗೀಗ ಅರುವತ್ತು ವರ್ಷ ಮುಗಿದು, ಮೇಲೆ ಮೂರುವರ್ಷಗಳು ಕಳೆದಿವೆ. ಅವರ ಸಾಮಾಜಿಕ ಜೀವನಕ್ಕೆ ಇದೀಗ ಭರ್ತಿ ನಾಲ್ವತ್ತು ವರ್ಷಗಳು. ನಮ್ಮ ನಾಡಿನ ಉನ್ನತ ಸಾಧಕರಾದ ಡಾ.ವೂಡೇ ಪಿ. ಕೃಷ್ಣ ಅವರು ಮುಟ್ಟದ ಕ್ಷೇತ್ರಗಳಿಲ್ಲ. ಕಾನೂನು, ಸಾಹಿತ್ಯ, ಅನುವಾದ, ತತ್ತ್ವದರ್ಶನ, ಶಿಕ್ಷಣ, ಕಲೆ ಮುಂತಾದ ಕ್ಷೇತ್ರಗಳ ರಕ್ಷಕರಾಗಿ, ಸಂರಕ್ಷಕರಾಗಿ ನೆಲೆನಿಂತಿದ್ದಾರೆ. ಜಾತಿ–ವರ್ಣ–ವರ್ಗ–ಮೇಲು–ಕೀಳು ಮುಂತಾದ ಯಾವುದೇ ಅನಿಷ್ಠ ಭಾವನೆಗಳಿಗೆ ವೂಡೇ ಪಿ ಅವರ ಬದುಕಿನಲ್ಲಿ ಸುತಾರಾಂ ಜಾಗವಿಲ್ಲ. ಅವುಗಳನ್ನು ಯೋಜನದೂರ ಇಟ್ಟಿದ್ದಾರೆ! ನಮ್ಮ ನಡುವಿನ ಗುಣಗಣಗಳ ಅಪರಿಮಿತ ವ್ಯಕ್ತಿಮತ್ವವನ್ನು ಅವರು ಹೊಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ.

ಜಾಂಬವ ಎಂ. ಗಂಗಾಧರ್, ತಮ್ಮ 'ಆದಿಜಾಂಬವ ದಿನಪತ್ರಿಕೆ' ಯಲ್ಲಿ ಬರೆದ ಲೇಖನಗಳ ಸಮುಚ್ಚಯ 'ಅದು ಮುಟ್ಟದ ಸೊಪ್ಪಿಲ್ಲ' ಎಂಬೀ ಗ್ರಂಥ ನಿಮ್ಮ ಮುಂದಿದೆ. ಇಲ್ಲಿಯ ಲೇಖನಗಳಲ್ಲಿ ಡಾ. ವೂಡೇ ಪಿ. ಕೃಷ್ಣ ಅವರ ವ್ಯಕ್ತಿತ್ವ, ಸ್ವಭಾವ, ರೀತಿ–ನೀತಿ, ಸಾಂಸಾರಿಕ ನೆಲೆ, ಸ್ನೇಹಸಂಪನ್ನತೆ–ಇವೆಲ್ಲಕ್ಕೂ ಮಿಗಿಲಾಗಿ 'ಸಾಮಾಜಿಕ ಆದರ್ಶ' ಗಳನ್ನು ಓದುಗರು ಕಾಣಬಹುದು! ಎಂ. ಗಂಗಾಧರ ಅವರು ತಮ್ಮ ಬರೆಹದಲ್ಲಿ ವ್ಯಕ್ತಿವಿಶಿಷ್ಟತೆಯನ್ನು ವೈಭವೀಕರಿಸದೆ; ಅವರ ಸಾದಾಸೀದ ವ್ಯಕ್ತಿತ್ವವನ್ನು ಮನಂಬುಗುವಂತೆ ಕಂಡರಿಸಿದ್ದಾರೆ. ನಮ್ಮ ಕಾಲದಲ್ಲಿ ಇಂಥ 'ಆದರ್ಶಪುರುಷೋತ್ತಮ'ರು ನಮ್ಮ ನಡುವೆ ಇದ್ದಾರಲ್ಲ ಎಂಬ ಹೆಮ್ಮೆಯೂ ಮೆಚ್ಚುಗೆಯೂ ಸಂತತ ನಮಗೆ ಉಂಟಾಗುತ್ತದೆ !

– ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ವಿಶ್ರಾಂತ ಕುಲಪತಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಪ್ರಕಾಶಕರು

ಆದಿಜಾಂಬವ ಜಾಗೃತಿ

'ಕೌಸಲ್ಯ ಶಿರಡಿ ನಿವಾಸ'
೪ನೆಯ ಮುಖ್ಯರಸ್ತೆ, ಸರ್ ಎಂ.ವಿ. ನಗರ,
ರಾಮಮೂರ್ತಿನಗರ, ಬೆಂಗಳೂರು ೫೬೦೦೧೬

ಬೆಲೆ ರೂ. ೨೦೦/-